ಮತ್ತು ಎಲ್ಲ ವಸ್ತುಗಳಲ್ಲ ಅತ್ಯಂತ ಹೆಚ್ಚಿನ ಭೀತಿಯನ್ನುಂಟುಮಾಡುವುದೇ ಮರಣವು. ಮರಣಕ್ಕೆ ಪಕ್ಷಪಾತವೇ ಇಲ್ಲ. ಅದು ಸಮದೃಷ್ಟಿಯುಳ್ಳದ್ದು. ರಾಯನಾಗಲಿ ರಂಕನಾಗಲಿ, ಪಂಡಿತನಾಗಲಿ ಪಾಮರನಾಗಲಿ, ಮಗುವಾಗಲಿ ಮುದುಕನಾಗಲಿ ಯಾರನ್ನೂ ಅದು ತನ್ನ ದವಡೆಯೊಳಗಿಂದ ಜಾರಿಹೋಗಗೊಡುವುದಿಲ್ಲ. ಮನುಷ್ಯನಲ್ಲಿ ಅದೊಂದು ಅತ್ಯಂತ ವಿಚಿತ್ರ ಸಂಗತಿ. ಮರಣವೆಂದರೆ ಅವನು ಹೆದರಿ ಮಾರುದೂರ ಜೀಳುತ್ತಾನೆ. ಹಾಗೂ ಜೀನವು ಸಕ್ಕರೆಗಿಂತ ಸಿಹಿ ಎಂದು ಹೇಳಿ ಅದಕ್ಕೇ ಜೋತುಬೀಳುತ್ತಾನೆ. ತಾನು ಯಾವಾಗಲೂ ಇರುವವನು, ಚಿರಂಜೀವಿಯು ಎಂದು ತಿಳಿದೇ ಮನುಷ್ಯನು ಕಾಲ ಕಳೆಯುತ್ತಾನೆ. ಸಾವಿನ ವಿಚಾರವನ್ನು ಅವನು ಆದಷ್ಟು ತಪ್ಪಿಸುತ್ತಿರುತ್ತಾನೆ. ಈ ಬಗ್ಗೆ ಮಹಾಭಾರತದ ವನಪರ್ವದೊಳಗಿನ ಒಂದು ಕಥೆಯು ನೆನಪಾಗುತ್ತದೆ. ಒಬ್ಬ ಯಕ್ಷನು ತಾನು ಕೇಳಿದ ಎಲ್ಲ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಕೊಟ್ಟರೆ ನಿನ್ನ ತಮ್ಮಂದಿರು ಸಾವಿನಿಂದ ಉಳಿಯುವ ಬಗೆಯನ್ನು ತಿಳಿಸುವೆನು ಎಂದು ಧರ್ಮರಾಯನಿಗೆ ಹೇಳಿದನು. ಧರ್ಮರಾಯನು ಅವನ ಎಲ್ಲ ಪ್ರಶ್ನೆಗಳಿಗೂ ಉತ್ತರವಿತ್ತನು. ಯಕ್ಷನು ''ಈ ಜಗತ್ತಿನಲ್ಲಿ ಅತ್ಯಂತ ಆಶ್ಚರ್ಯಕರವಾದ ಸಂಗತಿ ಯಾವುದು?'' ಎಂದು ಕೇಳಿದನು. ಅದಕ್ಕೆ ಯುಧಿಷ್ಠಿರನು ''ಮನುಷ್ಯರು ಪ್ರತಿ ನಿತ್ಯವೂ ತಮ್ಮ ಬಂಧು ಬಾಂಧವರೂ ನೆರೆ ಹೊರೆಯವರೂ ಸಾಯುತ್ತಿರುವುದನ್ನು ಕಣ್ಣಾರೆ ಕಾಣುತ್ತಾರೆ. ಆದರೂ ತಮಗೂ ಆ ಕಾಲವು ಒಂದಾನೊಂದು ದಿನ ಬರುವುದೆಂಬುದನ್ನು ತಿಳಿಯುವುದೇ ಇಲ್ಲ. ತಾವು ಚಿರಂಜೀವಿಗಳೆಂಬ ಭ್ರಾಂತಿಯಿಂದಲೇ ಬಾಳುವೆಯನ್ನು ಮಾಡುತ್ತಿರುತ್ತಾರೆ. ಇದೇ ಅದ್ಭುತವಾದ ಆಶ್ಚರ್ಯದ ಸಂಗತಿ'' ಎಂದನು. ಈ ಭ್ರಾಂತಿಯೇ ಮನುಷ್ಯನಿಗಿರುವ ಮರಣ ಭೀತಿಯ ದೊಡ್ಡ ನಿದರ್ಶನವು.

ಒಬ್ಬ ಮನುಷ್ಯನ ಉಸಿರಾಡುವುದು ಬಂದಾಗುತ್ತಬಂದು, ಕೈಕಾಲುಗಳು ತಣ್ಣಗಾಗಿ ಸೆಟೆದುಹೋಗಿ ಅವನು ಸಾಯುವುದನ್ನು ನೋಡಿದರೆ, ಮತ್ತೊಬ್ಬನ ಮನಸ್ಸಿನಲ್ಲಿ ಉದ್ವೇಗಕರವಾದ ವಿಚಾರಗಳು ಹುಟ್ಟಿ ಅಂತಃಕರಣದಲ್ಲಿ ಭೀತಿಯು ಪ್ರವೇಶಮಾಡುತ್ತದೆ. ಅವನಿಗೆ ವಿಲಕ್ಷಣವಾದ

ಆಶ್ಚರ್ಯವುಂಟಾಗುತ್ತದೆ. ''ಆರೇ! ಈಗೊಂದೇ ಕ್ಷಣದ ಮುಂಚೆ ನನ್ನಂತೆ ಓಡಾಡಿ ನಗುತ್ತ ಕೆಲೆಯುತ್ತ ತನ್ನ ಭಾವನೆಗಳನ್ನೂ ವಿಚಾರಗಳನ್ನೂ ನನಗೆ ತಿಳಿಸುತ್ತ ಜೊತ್ತಾಗಿದ್ದವನು ಇಷ್ಟರಲ್ಲಿಯೇ ಒಂದು ಮರದ ತುಂಡಿನಂತೆ ನಿಶ್ಚೇಷ್ಟಿತನಾಗಿ ಬಿದ್ದಿರುವನಲ್ಲಾ! ಇದೆಂಥ ಅದ್ಭುತ ಸಂಗತಿ!'' ಎಂದು ಅವನು ತಳಮಳದಿಂದ ಅಚ್ಚರಿಗೊಳ್ಳುತ್ತಾನೆ. ಆಹಾ ಅವನಿಗೆ ಇನ್ನು ಮುಂದೆ ಸಂಜೆ ಮುಂಜಾವುಗಳ ಮಂದಮಾರುತನ ಸುಖವನ್ನುಣ್ಣುವುದು ಆಗುವುದಿಲ್ಲ. ಸೂರ್ಯನ ಬೆಳಕಿನಲ್ಲಿ ಓಡಾಡಿ ಆನಂದಪಡುವುದು ಮುಗಿಯಿತು. ನಿರಭ್ರವಾದ ನೀಲ ಆಕಾಶವೂ ಹಸುರಾಗಿ ಕುಸುರಿದ ಗದ್ದೆಗಳೂ ಹೂ ಹುಲ್ಲುಗಳ ಪ್ರದೇಶಗಳೂ ಅವನಿಗೆ ಮರೆಯಾದವು! ಹಕ್ಕಿಗಳ ಇಂಚರದ ಸೊಂಪಾದ ಗಾನವೂ ಸೃಷ್ಟಿಯ ಇತರ ಸೊಬಗುಗಳೂ ಸೊಗಸುಗಳೂ ಅವನ ಪಾಲಿಗೆ ಶೂನ್ಯ. ಮಿತ್ರ ಪುತ್ರರ ಅಥವಾ ಬಂಧು ಬಾಂಧವರ ಆಪ್ತ ವಚನಗಳಲ್ಲಿಯೂ ಸ್ನೇಹ ಸಲಿಗೆಗಳಲ್ಲಿಯೂ ಅವನಿಗೆ ಎಡೆಯಿಲ್ಲ! ನನ್ನ ಚಿತ್ರಕ್ಕೂ ಅವನ ಈ ಚಿತ್ರಕ್ಕೂ ಎಷ್ಟು ಅಂತರ! ಎಂಥ ವಿಚಿತ್ರ!—ಇವೇ ಮೊದಲಾದ ವಿಚಾರಗಳು ಅವನ ಮನವೆಂಬ ಮುಗಿಲಲ್ಲಿ ಕ್ಷಣದೊಳಗೆ ಒಂದರ ಹಿಂದೊಂದು ಏಳುತ್ತಿ ಅಗಾಧವಾದ ಪರಿಣಾಮವನ್ನುಂಟುಮಾಡುತ್ತವೆ. ಹೆಣದ ಹಾಸಿಗೆಯ ಹತ್ತಿರ ನಿಂತರೆ ಧಾರ್ಮಿಕ ತತ್ವಗಳ ಮತ್ತು ಜೀವ ಮರಣಗಳ ವಿಚಾರಗಳ ಪರಿಚಯವಿಲ್ಲದ ಮನುಷ್ಯರಿಗೆ ಇಂಥ ವಿಚಾರಗಳು ಒರುವುದು ತೀರ ಸಹಜ. ಪರಕ್ಷಣದಲ್ಲಿಯೇ ಇಂಥ ಮನುಷ್ಯನ ಮೈಯಲ್ಲಿ ನಡುಗು ಹುಟ್ಟುತ್ತದೆ. ಎಲ್ಲರಿಗೂ ಸಾಮಾನ್ಯವಾದ ಈ ಅವಸ್ಥೆಯು ನನ್ನನ್ನೂ ಒಂದು ದಿನ ಆವರಿಸುವುದು. ಆಗ ನಾನೂ ಜೀವನದ ಸರ್ವಸ್ವಕ್ಕೂ ಎರವಾಗುವೆನು. ಸುಖ ಸಂತೋಷಗಳೆಲ್ಲ ಮಾಯವಾಗಿ ಸಾವೆಂಬ ಬೇವು ನನ್ನನ್ನೂ ಮುತ್ತಿಕೊಳ್ಳುವುದು. ಆಗ ಎಲ್ಲವೂ ಅಂಧ ತಮಸ್ಸಾಗುವುದು. ಈ ಆಲೋಚನೆಗಳಿಂದ ಅವನು ಹತಾಶನಾಗಿ ಕೈಕಾಲು ಬಿಡುತ್ತಾನೆ.

ಆದರೆ ಅದೇ ಮನುಷ್ಯನಿಗೆ ವೇದಾಂತ ತತ್ವಗಳ ಜ್ಞಾನವು ಸ್ವಲ್ಪವಾದರೂ ಲಭಿಸಿದರೆ ಸೂರ್ಯನ ಬೆಳಕಿನ ಮುಂದೆ ಮಂಜು ಮಾಯವಾದಂತೆ ಅವನ ಬೆದರಿಕೆಯು ಕಿತ್ತುಹೋಗುವುದು. ಆಗ ಅವನಿಗೆ ಭೀಕರ ಸ್ವರೂಪವಾದ ನಿಧನ ಚಿತ್ರದಲ್ಲಿ ಇಷ್ಟೇ ತೋರುವುದು. ಮರಣವು ಇಹಕ್ಕೂ ಪರಕ್ಕೂ ಮಧ್ಯದಲ್ಲಿರುವ ಕಾಡಿಗೆಯಂತೆ ಕಪ್ಪಾದ ಒಂದು ತೆರೆಯು ಮಾತ್ರ; ಜನನ ಮರಣಗಳು ಇವೆರಡೂ ಲೋಕಗಳ ಎರಡು ಹೆಬ್ಬಾಗಿಲುಗಳು ಅಷ್ಟೇ. ಹುಟ್ಟಿ ಇಲ್ಲಿಗೆ ಬಂದೆನು, ಸತ್ತು ಅಲ್ಲಿಗೆ ಹೋಗುವೆನು ಇದಕ್ಕಿಂತಲೂ ಹೆಚ್ಚಿಗೇನೂ ಆಗಲಾರದು ಎಂದು ಅವನು ಬುದ್ಧಿಯಿಂದ ಖಂಡಿತವಾಗಿ ತಿಳಿಯುವನು.

ಮನುಷ್ಯನ ನೈಜಕ್ಕೆ ಸಾವಿಲ್ಲ, ಮಾನವನ ಆತ್ಮವು ಅಮರವಾದದ್ದು ಎಂಬುದಾಗಿ ವೇದಾಂತವು ಬೋಧಿಸುತ್ತದೆ.

ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ।
ನಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ ॥

(ಗೀತಾ.)

''ಶಸ್ತ್ರಗಳು ಆತ್ಮವನ್ನು ಛೇದಿಸಲಾರವು; ಅಗ್ನಿಯು ಸುಡಲಾರದ ನೀರು ತೋಯಿಸಿ ಒದ್ದೆ ಮಾಡಲಾರದು ಅಥವಾ ಕರಗಿಸಲಾರದು; ಹಾಗೂ ಗಾಳಿಯು ಅದನ್ನು ಒಣಗಿಸಲಾರದು.''

ಸನಾತನ ಜ್ಯೋತಿರ್ನಿಧಿಯು ಒಂದು ತರಂಗದಂತಿದ್ದ ಮಾನವನ ಆತ್ಮದ ಅಂತ್ಯವನ್ನು ಮಾಡುವುದು ಭೂಮಿಯ ಮೇಲಿರುವ ಎಂಥ ಪ್ರಚಂಡ ಶಕ್ತಿಗೂ ಸಾಧ್ಯವಿಲ್ಲ. ಆದ್ದರಿಂದ ಮನುಷ್ಯನು ಸಾವಿಗೇಕೆ ಸೊಪ್ಪು ಹಾಕಬೇಕು? ಜೀವನದ ಒಂದು ನೂತನ ಭೂಮಿಕೆಯಲ್ಲಿ ಪ್ರವೇಶಿಸಲಿಕ್ಕೆ ಮರಣವು ಒಂದು ಬದಲಾಯಿಸುವುದೇ ಮಾತ್ರ; ಒಂದು ಮನೆಯನ್ನು ಬಿಟ್ಟು ಇನ್ನೊಂದು ಮನೆಯಲ್ಲಿ ಹೋಗಿ ವಾಸಿಸುವುದು ಅಷ್ಟೇ. ತನ್ನ ಆತ್ಮನು ಅಮರನು, ತಾನು ನಿಜವಾಗಿಯೂ ಭಗವದಂಶನೇ ಸರಿ ಎಂಬ ಭಾವನೆಯನ್ನು ಮನಸ್ಸಿನಲ್ಲಿ ಬೇರೂರಿಸಿದರೆ ಮರಣದ ಚಿಂತೆಯು ಅವನನ್ನು ಎಷ್ಟು ಮಾತ್ರಕ್ಕೂ ಅವರಿಸದು. ಮನುಷ್ಯನು ತನ್ನ ನಿಜಸ್ವರೂಪವನ್ನು ಮರೆತಿರುವುದರಿಂದಲೇ ಮರಣವೆಂದರೆ ಅವನಿಗೆ ಅಷ್ಟೊಂದು ಎದೆಗುಕ್ಕು. ಆದ್ದರಿಂದಲೇ ಅವನ ಹೃದಯು ದೌರ್ಬಲ್ಯದಿಂದ ನಡುಗುವುದು.

ತನ್ನ ಸತ್ಯ ಸ್ವರೂಪದ ಅರಿವು ಉಂಟಾದರೆ ಮನುಷ್ಯನು ಮೃತ್ಯು ಭಯವಿಂದ ದೂರವಾಗುತ್ತಾನೆ. ಮತ್ತು ಎಂಥ ಭಯಂಕರವಾದ ಗಂಡಾಂತರಗಳನ್ನೂ ಅವನು ಲೆಕ್ಕಿಸುವುದಿಲ್ಲ. ಯಾವುದಾದರೊಂದು ಭೀಕರ ಗಂಡಾಂತರವು ಪ್ರಾಪ್ತವಾಗಿ ಅವನನ್ನು ಬಗ್ಗಿಸಿ ನೆಲಕ್ಕುಂಟಿಸಲು ಹವಣಿಸಿದರೆ ತಾನು ಬಲವಂತನೂ ಭದ್ರನೂ ಆಗಿದ್ದು ಜೀವಾಳದಲ್ಲಿ ಪರಮಾತ್ಮನಿಂದ ಭಿನ್ನನಾಗಿಲ್ಲ, ಪ್ರಪಂಚದಲ್ಲಿರುವ ಯಾವ ಶಕ್ತಿಯೂ ತನ್ನನ್ನು ಸದೆಬಡಿಯಲಾರದು ಎಂಬ ನಿಶ್ಚಯವಾದ ನಂಬಿಗೆಯನ್ನಿಟ್ಟರೆ ತೀರಿತು. ಅವನಿಗಾ ಆಮೇಲೆ ಯಾವ ಹೆದರಿಕೆಯೂ ಉಳಿಯುವುದಿಲ್ಲ. ಇಂಥ ಗಂಡಾಂತರಗಳನ್ನು ಗಂಡುಗಲಿಯಂತೆ ಅವನು ಧೈರ್ಯದಿಂದ ಎದುರಾಗುವನು.

ವಿಷ್ಣು ಪುರಾಣದಲ್ಲಿ ನಮಗೆ ಈ ಸಂಗತಿಯು ತಿಳಿದುಬರುತ್ತದೆ. ಗೋಕುಲದ ಹುಡುಗರು ಒಂದು ಅರಣ್ಯದ ಸಮೀಪದಲ್ಲಿದ್ದ ವಿಶಾಲವಾದ ಮೈದಾನದಲ್ಲಿ ಸಂತೋಷದಿಂದ ಆಟವಾಡುತ್ತಿದ್ದರು. ಆಗ ಪ್ರಲಂಬನೆಂಬ

ಒಬ್ಬ ದೊಡ್ಡ ರಾಕ್ಷಸನು ಬಂದನು. ಆ ಹುಡುಗರಲ್ಲಿ ಒಬ್ಬನನ್ನಾದರೂ ಕೊಂದುಬಿಡಬೇಕೆಂದು ಅವನು ನಿಶ್ಚಯಿಸಿದನು. ರಾಕ್ಷಸರು ಕಾಮರೂಪರೆಂದು ಹೇಳುತ್ತಾರಲ್ಲವೇ? ಆ ರಾಕ್ಷಸನು ಒಬ್ಬ ಹುಡುಗನ ರೂಪವನ್ನು ಧರಿಸಿಕೊಂಡು ಅಲ್ಲಿಗೆ ಬಂದು ಅವರೊಡನೆ ಆಟದಲ್ಲಿ ಕೂಡಿದನು. ಆ ಹುಡುಗ ರಾಡುವ ಆಟವು ರಾಕ್ಷಸನ ನೀಚೋದ್ದೇಶಕ್ಕೆ ಸಹಾಯವಾಗುವಂಥಾದ್ದೇ ಆಗಿತ್ತು. ಇಬ್ಬರೇ ಬಂದು ಸಲ ಕೆಲವೊಂದು ಅಂತರವನ್ನು ಓಡಬೇಕು. ಆ ಓಟದಲ್ಲಿ ಹಿಂದೆಬಿದ್ದವನು ಗೆದ್ದವನನ್ನು ತನ್ನ ಹೆಗಲಮೇಲೆ ಹೊತ್ತು ಕೊಂಡು ಓಟದ ಸ್ಥಳದ ಒಂದು ಕೊನೆಯಿಂದ ಮತ್ತೊಂದು ಕೊನೆಗೆ ಹೋಗಿ ಪುನಃ ಮೊದಲಿದ್ದಲ್ಲಿಗೇ ತಂದುಬಿಡಬೇಕೆಂಬ ನಿರ್ಣಯದ ಕರಾರು ಇತ್ತು. ರಾಕ್ಷಸನು ಒಂದಕೂಡಲೆ ಆಟದಲ್ಲಿ ರಾಕ್ಷಸನು ಬಲರಾಮನೊಡನೆ ಓಡುವ ಸರ್ತಿ ಬಂದಿತು. ಓಟದಲ್ಲಿ ಬೇಕೆಂತ ಕಾಲುಗಳನ್ನು ಮೆಲ್ಲಗೆ ಒಗೆದು ಬಲರಾಮನಿಗಿಂತ ಹಿಂದೆ ಉಳಿದನು. ಬಲರಾಮನು ಗೆದ್ದಂತಾಯಿತು. ಆಟದ ಕರಾರಿನ ಮೇರೆಗೆ ಪ್ರಲಂಬನು ಬಲರಾಮನನ್ನು ತನ್ನ ಹೆಗಲಮೇಲೆ ಹೊತ್ತುಕೊಂಡು ಹುಡುಗರು ನಿಂತಲ್ಲಿಂದ ಮತ್ತೊಂದು ಕೊನೆಗೆ ಹೋದನು. ನ್ಯಾಯ ಪ್ರಕಾರವಾಗಿ ಅವನು ಅಲ್ಲಿಂದ ಮರಳಿ ಪುನಃ ಮೊದಲಿದ್ದಲ್ಲಿಗೇ ಬರಬೇಕಿತ್ತು. ಆದರೆ ಪ್ರಲಂಬನು ಹಾಗೆ ಮಾಡಲಿಲ್ಲ. ತಿರುಗಿ ಬರುವುದನ್ನು ಬಿಟ್ಟು ಮೆಲ್ಲಗ ಅಡವಿಯ ಕಡೆ ಸಾಗಹತ್ತಿದನು. ಅಲ್ಲಿಗೆ ಕೊಂಡು ಹೋಗಿ ಬಲರಾಮನನ್ನು ಕೊಂದುಬಿಡಬೇಕೆಂದು ಅವನ ಆಲೋಚನೆ. ಬಲರಾಮನು ಒಮ್ಮೆಯೇ ಅಲ್ಲ ಅನೇಕ ಸಲ ಪ್ರಲಂಬನಿಗೆ—ತಿರುಗು, ಮತ್ತೆ ಹುಡುಗರಿದ್ದಲ್ಲಿಗೆ ನೀನು ಹೋಗಬೇಕಾದ್ದು, ನೀನೆತ್ತ ನಡೆಯುತ್ತಿದ್ದೀ ಎಂದು ಕೇಳಿದನು. ಆದರೆ ಪ್ರಲಂಬನು ಅವನ ಮಾತುಗಳನ್ನು ಕೇಳಲೇ ಇಲ್ಲ. ಅಷ್ಟೇಯಲ್ಲ; ಅವನು ಭಯಂಕರವಾದ ತನ್ನ ನಿಜರೂಪವನ್ನು ಕೈಕೊಂಡು ಉದ್ದಕಾಲುಗಳನ್ನು ಹಾಕುತ್ತ ಲಗುಬಗೆಯಿಂದ ಕಾನನದ ಏಕಾಂತ ಸ್ಥಳದ ಕಡೆಗೆ ನಡೆಯಹತ್ತಿದನು. ಬಲರಾಮನಿಗೆ ಗುಟ್ಟುಗೊತ್ತಾಗಿ ಭಯವಾಯಿತು. ತನ್ನ ಇತಿಶ್ರೀಯಾಯಿತೆಂದು ಅವನು ಆಲೋಚಿಸಿದನು. ಆದ್ದರಿಂದ ತನ್ನ ಸಹಾಯಕ್ಕೋಸ್ಕರ ತಮ್ಮನಾದ ಕೃಷ್ಣನನ್ನು ಬೊಬ್ಬೆಯಿಟ್ಟು ಕೂಗಿದನು. "ಏ ಕೃಷ್ಣಾ....ಬೇಗ ಬಾರೋ! ನನ್ನನ್ನು ಈ ಆಪತ್ತಿನಿಂದ ಉಳಿಸೋ!" ಎಂದು ಗಂಟಲು ಒಡೆಯುವಂತೆ ಒದರಿದನು. "ಎಲ್ಲಿ ನೋಡುತ್ತೀಯೊ! ಬರುವುದಿಲ್ಲೇನೋ, ನಾನು ಸಾಯುತ್ತೇನೋ! ನನ್ನ ಕೂಡ ಓಡಿದವನು ಹುಡುಗನಲ್ಲೋ, ಅವನೊಬ್ಬ ರಾಕ್ಷಸ, ಅವನು ನನಗೆ ಕೊಲ್ಲದೆ ಬಿಡುವುದಿಲ್ಲ! ಆದ್ದರಿಂದ ಬೇಗಬಾರೋ" ಎಂದು ಮತ್ತೊಮ್ಮೆ ಕಾತರಪಟ್ಟು ಗಾಬರಿಯಾಗಿ ಕೂಗಿದನು. ಕೃಷ್ಣನಿಗೆ ಅಣ್ಣನ ಕೂಗು ಕೇಳ

ಬಂದಿತ್ತು. ಅವನ ಸ್ಥಿತಿಯನ್ನು ಚೆನ್ನಾಗಿ ಅರಿತುಕೊಂಡನು. ಆದರೆ ಅವನ
ಸಹಾಯಕ್ಕೆ ಗಡಬಡಿಯಿಂದ ಓಡುವುದನ್ನು ಬಿಟ್ಟು ''ಅಣ್ಣಾ, ನೀನು
ಯಾರೆಂಬುದು ನಿನಗೆ ಗೊತ್ತಿಲ್ಲವೋ? ಎಲ್ಲವನ್ನೂ ಮರೆತು ಬಿಟ್ಟಿಯಾ
ವಿಶ್ವವನ್ನೇ ಹೊತ್ತುಕೊಂಡ ಅನಂತದೇವನು ನೀನಲ್ಲವೋ? ನೀನು ಅನಂತ
ಶಕ್ತಿಯು ಆಗರವೆಂಬುದನ್ನು ನೆನಪಿಗೆ ತಾ. ನಿನ್ನ ಕೈಯಾರಿಹೋದದ್ದು
ಯಾವುದು? ನಿನಗೆ ಎದುರಾಗುವ ಗಂಡಾಂತರವೆಲ್ಲಿದೆ? ನಿನ್ನ ನಿಜ ಸ್ವರೂಪ
ವನ್ನರಿತು ಮಾಡಬೇಕಾದ್ದನ್ನು ಮಾಡಿಬಿಡು'' ಎಂದು ಉದ್ಗೋಷಿಸಿದನು

ಕೃಷ್ಣನ ಮಾತುಗಳಿಂದ ಬಲರಾಮನ ಮರೆವು ಮರೆಯಾಯಿತು
ಅರಿವಿನ ಅರುಣೋದಯವಾಯಿತು. ಅವನ ಆ ಸನಾತನ ಶಕ್ತಿಯು ಆತನಲ್ಲಿ
ಎದ್ದು ಉಕ್ಕಿಬಂದಿತು. ಕೊನೆಗೆ ಪ್ರಳಯಕಾಲದ ಕರಾಳ ರೂಪದಿಂದ ರಾಕ್ಷಸ
ನನ್ನು ಗುದ್ದಿಗುದ್ದಿ ಹಣ್ಣುಮಾಡಿ ಯಮ ಸದನಕ್ಕಟ್ಟಿದನು. ಪ್ರಾಣಾ
ಹಾರಮಾಡುವ ಪ್ರಭೂತ ಗಂಡಾಂತರದ ಗಂಟಲಲ್ಲಿ ಸಿಕ್ಕುಬಿದ್ದೆನಲ್ಲಾ ಎಂದ
ನಡುಗುತ್ತಿದ್ದ ಬಲರಾಮನು ಸ್ವಸ್ವರೂಪದ ನಿಜ ಜ್ಞಾನವಾದೊಡನೆ ಸವ
ಶಕ್ತಿಯಿಂದ ಬಾಹು ಬಲ ಸ್ಫುರಣಹೊಂದಿ ಆಪತ್ತನ್ನು ಅಣಕಿಸಿಬಿಟ್ಟನು
ಆದ್ದರಿಂದ ಮರೆವೇ ಮಾಯೆ. 'ತನ್ನ ತಾನರಿದೊಡೆ ತನ್ನರಿವೇ ಗುರು' ಎಂ
ಮಾತು ತೀರ ಸತ್ಯವಾದದ್ದು.

ಈ ಕಥೆಯಿಂದ ನಾವು ತಿಳಿದು ಕಲಿತುಕೊಳ್ಳಬೇಕಾದ ನೀತಿಯ
ಸುಸ್ಪಷ್ಟವಾಗಿಯೇ ಇದೆ. ಬಲರಾಮನಂತೆ ನಮಗೆ ಪ್ರಲಂಬನ ಭಯ
ಏಲ್ಲೆಂಬ ಮಾತು ನಿಜವಿರಬಹುದಾದರೂ ಅಪಾಯಗಳೇ ಒಂದು ವೇಳೆ ನಮ
ಪ್ರಾಪ್ತವಾಗಿ ಬೆದರಿಸತೊಡಗಿದರೆ ಏನು ಮಾಡಬೇಕೆಂಬುದೇ ಪ್ರಸ್ತುತ
ವಿಚಾರ. ಗಂಡಾಂತರವು ತನ್ನ ಹೃದಯ ವಿದಾರಕ ಭೀಕರ ಸ್ವರೂಪದಿಂ
ನಮ್ಮೆದುರಿಗೆ ಬಂದು ನೃತ್ಯವಾಡಿ, ಹೆದರಿಕೆಯನ್ನು ಹುಟ್ಟಿಸಿ, ನಮ್ಮ ಬುದ್ಧಿ
ಯನ್ನು ಭ್ರಮೆಗೊಳಿಸಬಹುದು, ಉಲ್ಲಾಸವನ್ನು ಖಲಾಸ (ಮುಗಿಸು
ಮಾಡಬಹುದು; ಎಂಥ ಸ್ಥಿರವಾದ ಮನಸ್ಸನ್ನು ಸಹ ಚಂಚಲಿಸುವ ದೊಡ್ಡ
ಮೋಹವು ನಮ್ಮನ್ನು ಮುಗ್ಧರನ್ನಾಗಿ ಮಾಡಲೆಳಿಸಬಹುದು; ಏವೇ
ವಿಚಾರಗಳಿಂದ ಮಾಡುತ್ತಿರುವ ಧರ್ಮ ಕೆಲಸಗಳಲ್ಲಿ ಒಮ್ಮೆಲೇ ಅನುಮಾ
ಮತ್ತು ಸಂಶಯ ಎಂಬ ಎರಡು ಪಿಶಾಚಿಗಳು ಬಂದು ನಮ್ಮನ್ನು ಕಲ
ಬಿಡಬಹುದು; ನಮಗೆ ಇನ್ನೂ ಬೇರೆ ವಿಧದ ವಿಪತ್ತುಗಳು ಬಂದೊದ
ಬಹುದು. ಆಗ ನಾವು ಏನಾನ ಮೇಷ ಮಾಡುತ್ತ ಬೆದರಿ ಬೆಪ್ಪಾಗಿ ಕೈಯೂ
ಕೂಡಬಾರದು. ಆದರೆ ಕೃಷ್ಣನ ಮಾತೆಂಬ ಸಂಜೀವನ ಶಕ್ತಿಯಿಂದ ಜಾಗ್ರ
ನಾಗಿ ತನ್ನ ಕುತ್ತಿಗೆಯನ್ನು ಸುತ್ತುಹಾಕಿದ್ದ ಪ್ರಾಣ ಸಂಕಟವನ

ಎಲರಾಮನು ಹೇಗೆ ಕೂಡಲೆ ತಳ್ಳಿ ಯಶಸ್ವಿಯಾಗಿ ಶಡ್ಡುಹೊಡೆದನೋ, ಏಕೋ, ಹಾಗೆಯೇ ನಾವೂ ಮಾಡಬೇಕಾದುದು.

ಕಿಂ ನಾಮ ರೋದಿಷಿ ಸಖೇತ್ಯಯಿ ಸರ್ವ ಶಕ್ತೇಃ।
ಆಮಂತ್ರಯಸ್ವ ಭಗವನ್ ಭಗವತ್ಸ್ವರೂಪಮ್ ॥
ಕೈಲೋಕ್ಯಮೇತದಖಿಲಂ ತವ ಪಾದಮೂಲೇ।
ಆತ್ಮಪ್ರಭವತೇ ನ ಜಡಃ ಕದಾಚಿತ್ ॥

''ಸಖಿ, ಏಕೆ ಅಳುತ್ತೀ? ನೀನು ಸರ್ವ ಶಕ್ತಿಯ ಸಾಗರವೇ ಆಗಿರುವೆ; ನಿನ್ನ ಭಗವತ್ ಸ್ವರೂಪವನ್ನು ಆಮಂತ್ರಿಸು, ಮೂರು ಲೋಕಗಳೆಲ್ಲ ನಿನ್ನ ಕಾಲಕೆಳಗಿರುವವು, ಆತ್ಮಕ್ಕೇ ಪ್ರಭಾವವಲ್ಲದೆ ಜಡಕ್ಕೆಂದೂ ಜಯವಿಲ್ಲ.''

ಗಂಡಾಂತರಗಳು ಬಂದೊಡನೆ ತಣ್ಣಗಾಗಿ ಕೈಕಾಲು ಬಿಡಬಾರದು. ನಮ್ಮ ನಿಜ ಸ್ವರೂಪವನ್ನರಿತುಕೊಳ್ಳಬೇಕು. ಅನಂತ ಶಕ್ತಿಯ ಆಗರವೇ ನಾನು ಎಂಬುದನ್ನು ಮರೆಯಬಾರದು. ತನ್ನೊಳಗಿರುವ ಹುರುಪನ್ನು ಹೊಡೆ ಎಬ್ಬಿಸಿ ಮುಂದೆ ಬಂದಿರುವ ಅಪಾಯಗಳನ್ನು ಹಿಡಿದು ಹಿಂಡಿಬಿಡಬೇಕು. ಮುಖ್ಯವಾಗಿ ನಾನು ಬಲವಂತನೂ ಭದ್ರನೂ ಎಂಬ ಭಾವನೆಯನ್ನು ಬಿಡಬಾರದು. ಸ್ವತ್ವವನ್ನು ತಿಳಿದುಕೊಂಡರೆ ಬರುವಷ್ಟು ಬಲವೂ ಉತ್ಸಾಹವೂ ಮತ್ತೇತರಿಂದಲೂ ಬಾರವು. ಅದರಿಂದ ಎದೆಯು ಎದೆಗಾರಿಕೆಯಿಂದ ಉಬ್ಬಿ ಎಂಥ ಎಡರುಗಳನ್ನು ಎದುರಾಗಲೂ ಸಿದ್ಧವಾಗುತ್ತದೆ. ನಿಜವಾದ ಸ್ವಾವಲಂಬನ ಮತ್ತು ಶೌರ್ಯಗಳಿಗೆ ತನ್ನ ಸತ್ಯ ಸ್ವರೂಪದ ತಿಳುವಳಿಕೆಯೇ ಕಾಯಿ. ತನ್ನ ತಾನರಿದಡೆ ಧೈರ್ಯ ಔದಾರ್ಯಗಳು ತಾವೇ ಹೊರಬೀಳುತ್ತವೆ. ಆದ್ದರಿಂದ ನಾವು ನಮ್ಮ 'ಆ' ನೈಜದ ನೆನಪುಮಾಡಿಕೊಳ್ಳಬೇಕು. ಆದ್ದರಿಂದಲೇ ಶ್ರೀ ಕೃಷ್ಣನು ಗೀತೆಯಲ್ಲಿ ಅರ್ಜುನನಿಗೆ ಕೊನೆಗೆ ''ಮಾಮನುಸ್ಮರ ಯುಧ್ಯಚ'' ಎಂದು ಒತ್ತಿ ಒತ್ತಿ ಹೇಳಿದನು. ಆಹಾ! ಆತ್ಮ ಜ್ಞಾನವು ಎಷ್ಟು ಅಗಾಧವಾದುದು, ಅದ್ಭುತವಾದುದು! ನರನೇ—''ನಿನ್ನ ವಸ್ತುವಂ ನೋಡು, ಮಮತೆಯ ಮಾಡು, ಸಲೆ ಕಾಪಾಡು, ಅದು ನಿನ್ನ ಕೀರ್ತಿಯ ಕಾಡು, ಸುಖದ ಬೀಡು.''

ತಾಯಂದಿರಿಗೆ

ಅಮ್ಮಾ,

ಸ್ವಚ್ಛತೆಯ ವಿಷಯ ನಿಮಗೆ ಈ ಮೊದಲು ಬರೆದ ಒಂದು ಪತ್ರದಲ್ಲಿ
ಕೆಲವು ವಿಷಯಗಳನ್ನು ಹೇಳಿಯೇ ಇದ್ದೇನೆ. ಆದರೆ ಅದನ್ನು ಒಹಳ ಚಿಕ್ಕ
ಮಕ್ಕಳನ್ನು ಕುರಿತು ಬರೆದದ್ದಾಯಿತು. ಅಷ್ಟೇ ಅಲ್ಲದೆ ಸ್ವಚ್ಛತೆಯಿಂದ
ಮಕ್ಕಳಿಗೆ ಮುಂದೆ ಜೀವಿತದಲ್ಲೆಲ್ಲಾ ಜಗತಕ್ಕೆ ಲಾಭವನ್ನೂ ಅಸ್ವಚ್ಛತೆ
ಯಿಂದಾಗತಕ್ಕ ಹಾನಿಯನ್ನೂ ಅಲ್ಲಿ ಚರ್ಚಿಸಲಿಲ್ಲ. ಈ ಅಂಶವನ್ನು ಚೆನ್ನಾಗಿ
ತಿಳಿದುಕೊಳ್ಳಬೇಕು.

ಮನುಷ್ಯನು ಸಾಮಾಜಿಕ ಜೀವಿಯೆಂಬದು ನಿನಗೆ ಗೊತ್ತೇ ಇರಬೇಕು
ಅವನು ಸಂಘವನ್ನು ಬಿಟ್ಟು ಕಾಡಿನಲ್ಲಿ ವಾಸಮಾಡುವದಿಲ್ಲ. ಅವನಿಗೆ ಬಂಧು
ಬಾಂಧವರು ಬೇಕು, ಇಷ್ಟಮಿತ್ರರು ಬೇಕು. ಸಾರಾಂಶ—ಇತರ ಮನುಷ್ಯರ
ಸಹವಾಸಬೇಕು. ಸಹವಾಸವು ಅತನಿಗೆ ಎಷ್ಟು ಬಲವಾಗಿಯೂ ವಿಶಾಲವಾ
ಗಿಯೂ ಇರುತ್ತದೋ ಅಷ್ಟೇ ಅವನಿಗೆ ಸುಖವೂ ಇರುತ್ತದೆ. ಮನುಷ್ಯನ
ಸಾಮಾನ್ಯವಾಗಿ ಮಾಡುವ ಪ್ರಯತ್ನಗಳೆಲ್ಲವೂ ಸುಖಕ್ಕಾಗಿಯೇ ಅಲ್ಲವೆ
''ತನ್ನ ಸಹವಾಸವನ್ನು ಮಗನು ಮುಂದಕ್ಕೆ ಬಲಪಡಿಸಿಯಾನು. ಈಗ್ಯಾಕೆ
ಆ ತೊಂದರೆ'' ಎಂದು ಚಿಕ್ಕಂದಿನಲ್ಲಿ ತಾತ್ಸಾರ ಮಾಡಿದರೆ ಅವನು ಮುಂದೆ
ಶುದ್ಧ ಪಶುವಿನಂತೆಯೇ ಆಗುವನು. ಯಾವಾಗಲೂ ಔಡಲೆಣ್ಣೆ ಕುಡಿದವನ
ಮೋರೆಯಂತೆ ತಮ್ಮ ಮೋರೆಯನ್ನು ಇಟ್ಟುಕೊಂಡು ಬದುಕಿರುವ ಕೆಲವ
ಪ್ರಾಣಿಗಳನ್ನು ನೀವು ನೋಡಿದ್ದೀರೊ ಇಲ್ಲವೋ? ಅಂಥವರು ನಗುವದ
ಅಪರೂಪ, ನಕ್ಕರೂ ಆ ಗಾಂಭೀರ್ಯ ಅತ್ತಹಾಗೇ. ಮನುಷ್ಯನನ್ನು ಕಂಡ
ಆಗುವದಿಲ್ಲ, ಆದರೆ ಹುಣಸೇ ಮೋರೆಗಳೇ ಆಗಬೇಕಾದ್ದು. ಹೊಟ್ಟೇಪಾಡಿಗೆ
ನಾದರೂ ಕೆಲಸ ಮಾಡಿದರೆ ಮಾಡಬೇಕು, ಹೊರಗೆ ಹೋದರೆ ಅಷ್ಟಕ್ಕೆ
ಇಲ್ಲವಾದರೆ ತಾವಾಯಿತು, ತಮ್ಮ ಸುಖವಾಯಿತು. '' ಊರ ಮೇಲೆ ಊರ
ಬಿದ್ದರೆ ಶಾಸುಭಾಗರ ಗಂಟೇನು ಹೋಯಿತು'' ಎಂಬತೆ ಇಂಥವರ ಮನೋ
ಗತಿ. ತಮಗೆ ಅನುಕೂಲವಾಗಿದ್ದರೇನೇ ಏನಾದರೂ ಕೆಲಸ ಮಾ
ಬೇಕೆವರು. ಇಲ್ಲವಾದರೆ ಬಂತು ಹುಬ್ಬಿಗೆ ಗಂಟು. ಮನೆಗೆ ಅತಿಥಿ ಅಭ್ಯಾಗತರ
ಬಂದರೆ ಅವರ ಆದರ ಸತ್ಕಾರಗಳನ್ನು ಮಾಡುವದು ಹಾಗಿರಲಿ ಅವರನ್ನ
ಕಂಡರೇನೇ ಬಲು ಬೇಸರ! ತಮ್ಮ ಊಟ ಮೊದಲು ಮುಗಿದುಬಿಟ್ಟ
ಪ್ರಪಂಚದ ಹೊಟ್ಟೆಯೇ ತುಂಬಿಹೋಯಿತು ಎಂದು ಭಾವಿಸುವರು.
ಸಾಮಾಜಿಕ ಪ್ರಾಣಿಯಾದ ಮನುಷ್ಯನಿಗೆ ಬೇಕಾದ ಪ್ರೇಮ, ಆದರ, ಸತ್ಕಾರ

ಉಪಕಾರ ಮುಂತಾದ ಸಾಮಾನ್ಯ ಗುಣಗಳೂ ಇವರಲ್ಲಿಲ್ಲವೇ ಇಲ್ಲ—ತ್ಯಾಗ ಕಷ್ಟ ಸಹನ ಮುಂತಾದ ದೊಡ್ಡ ಗುಣಗಳು ಹಾಗಿರಲಿ. ಅವರು ಈ ಸ್ಥಿತಿಗೆ ಬರಲಿಕ್ಕೇನು ಕಾರಣವಿರಬಹುದು? ಅಂತಹ ಅಮಾನುಷ ಗುಣಗಳು ಅವರಿಗೇಕೆ ಬರಬೇಕು? ಅಂತಹ ಪ್ರಾಣಿಯೊಂದು ನಿಮ್ಮ ಮನೆಯಲ್ಲಿಯೇ ಇದ್ದರೆ ನಿಮ್ಮ ಮನಸ್ಸು ಏನೆಂದೀತು? ಎಷ್ಟು ಸುಖಪಟ್ಟೀತು? ನೀವು ಬಬ್ಬರ ಮನೆಗೆ ಹೋದಾಗ ನಿಮಗೆ ಸ್ವಾಗತವನ್ನು ಕೊಡಲಿಕ್ಕೆ ಅಂತಹ ಒಂದು ದ್ವಿಪಾದಿಯೇ ಅಲ್ಲಿದಿರಾದರೆ ನಿಮಗೆ ಎಷ್ಟು ಆನಂದವಾದೀತು? ಅಮ್ಮಾ ಈ ವಿಷಯಗಳನ್ನೆಲ್ಲಾ ನೀವೇ ಆಲೋಚಿಸಿ ನೋಡಿರಿ.

ಚೆನ್ನಾಗಿ ಪರೀಕ್ಷೆಮಾಡಿ ನೋಡಿದರೆ ಇಂತಹ ಪ್ರಾಣಿಗಳಲ್ಲನೇಕರು ಚಿಕ್ಕಂದಿನಿಂದ ತಾಯಿಯ ತೊಡೆಯಮೇಲೆ ಆಡುತ್ತಿದ್ದ ಕಾಲದಿಂದ ತಂದೆಯ ಕೈಹಿಡಿದು ತಿರುಗುತ್ತಿರುವ ಕಾಲದಿಂದ ಹೀಗೆಯೇ. ಸಹಜವಾಗಿ ಸಹವಾಸ ಪ್ರಿಯನು ಮನುಷ್ಯನಾಗಿರುತ್ತಾನಾದರೂ ಇತರ ಅನೇಕ ವಿಷಯಗಳನ್ನು ಕಲಿಸಿದಂತೆಯೇ ಸಹವಾಸವನ್ನು ಮಾಡಿಕೊಳ್ಳುವದನ್ನೂ ಮುಖ್ಯವಾಗಿ ಚಿಕ್ಕಂದಿನಿಂದಲೇ ಕಲಿಸಬೇಕು. ಆದರೆ ಸಹವಾಸ ಮಾಡಿಕೊಳ್ಳಬೇಕೆಂದು ಬಬ್ಬರ ಮೇಲೆ ಬಿದ್ದರೆ ಅವರು ಅಪ್ಪಿಕೊಳ್ಳುವರೋ? ಇಲ್ಲ. **ಸಹವಾಸಕ್ಕೆ ಆಕರ್ಷಣವು ಬೇಕು.** ಆ ಆಕರ್ಷಣವನ್ನುಂಟುಮಾಡುವದು ಹೇಗೆ? ಮೈ ಬಟ್ಟೆಗಳನ್ನು ಚೊಕ್ಕಟವಾಗಿಟ್ಟುಕೊಳ್ಳುವುದರಿಂದ. ಮುಂದೆ ಗುಣ ಗಳಿಂದ. ಆದರೂ ಗುಣವನ್ನು ಪ್ರೀತಿಸುವವರು ಹೆಚ್ಚು ಮಂದಿ ಇಲ್ಲ. ಇದ್ದರೂ ಅವರನ್ನು ಮೊದಲು ಆಕರ್ಷಿಸುವಂಥಾದ್ದು ಸೊಗಸೇ, ಸ್ವಚ್ಛತೆಯೇ. ಹೂವಿನಲ್ಲಿ ಸುಂದರವಾದ ಬಣ್ಣವೂ ಇದೆ, ಸವಿಯಾದ ಜೇನೂ ಇದೆ. ಆದರೆ ದೂರದಿಂದ ಝೇಂಕರಿಸಿ ಹಾರುತ್ತಿರುವ ನೊಣಗಳನ್ನು ಮೊದಲು ಆಕರ್ಷಿಸುವದು ಯಾವದು? ಅದು ಹೂವಿನ ಮೇಲೆಯೇ ಬಹು ದೂರದಿಂದಲೇ ತೋರುವ ಬಣ್ಣ–ಅಲ್ಲದೆ ಅದರೊಳಗಣ ಜೇನಲ್ಲ. ನೊಣವು ಹೂವಿನ ಹತ್ತಿರ ಬಂದ ಮೇಲೆಯೇ ಅದಕ್ಕೆ ಅದರ ಸಿಹಿಯು ಹತ್ತುವದು. ಅದನ್ನು ಆ ಸಿಹಿಯ ಸುಖವನ್ನು ಪಡುವದಕ್ಕೂ ಅದರ ಬೆಲೆಯನ್ನರಿತ ಭ್ರಮರ ಜಾತಿಯೇ ಬೇಕು. ಅಲ್ಲದೆ ಸೊಳ್ಳೆ ಚಿಕ್ಕಾಡುಗಳಿಗದರಿಂದಾಗುವದೇನು? ಹಾಗೆಯೇ ಮನುಷ್ಯ ನಲ್ಲಿಯೂ ಮೊದಲು ಒಡೆದುಕಾಣುವ ಸ್ವಚ್ಛತೆ ಮತ್ತು ಸೊಗಸೇ ಆಕರ್ಷಣದ ಮೂಲ. ಗುಣವು ಜೇನಿನಂತೆ. ಅದನ್ನರಿಯುವದಕ್ಕೆ ಜೇನುನೊಣದ ಜಾತಿಯೇ ಬೇಕು. ಅದೂ ಹತ್ತಿರ ಬಂದ ಮೇಲೆಯೇ ಆ ರಸವನ್ನು ಭೋಗಿಸ ಬೇಕು. ನೋಡಿದಿರಾ, ತಾಯಿಯಾ ಸೊಗಸು ಸ್ವಚ್ಛತೆಗಳ ಪ್ರಭಾವ!

ನಿಮ್ಮ ಮಗುವು ಚೊಕ್ಕಟವಾಗಿದ್ದರೆ ಎಲ್ಲರೂ ಅದನ್ನು ಹತ್ತಿರಕ್ಕೆ ಕರೆಯುವರು. ಮಕ್ಕಳನ್ನು ಎತ್ತಿಕೊಂಡು ಆಡುವದು ಆಡಿಸುವದು

ಮನುಷ್ಯನಾಗಿರುವವನಿಗೆ ಮುದ್ದಾದ ವಿಷಯವೇ. ಆದರೂ ಮೋರೆ ತುಂಬ
ಹುಳ ಹುಪ್ಪಟೆಗಳು ಚಲಿಸಿದಂತೆ ಕಣ್ಣೀರು, ಕೆಸರು ಮುಂತಾದರ ಬರೆಗಳೇ
ತುಂಬಿದ್ದು ಬಾಯಿ ಜೊಲ್ಲಿನ ಬುಗ್ಗೆಯಾಗಿಯೂ, ಮೂಗು ಸಿಂಬಳದ
ಕಾರ್ಖಾನೆಯಾಗಿಯೂ ಇದ್ದರೆ ಅಂತಹ ಕೂಸಿಗೆ ಮುದ್ದಿಡುವದಕ್ಕೂ ತಪಸ್ಸು
ಬೇಕು. ಅಷ್ಟೇಕೆ, ಹಿರಿಯವರ ದಾಕ್ಷಿಣ್ಯಕ್ಕಾಗಿಯೇ, ಅವರನ್ನು ಮೆಚ್ಚಿ
ಸುವದಕ್ಕಾಗಿಯೇ ಆದನ್ನು ಹತ್ತಿರ ಕರೆದರೆ ಒಳಗೆ ಮನಸ್ಸು ಏನನ್ನುತ್ತಿರು
ತ್ತದೋ ಊಹಿಸಿ ತಿಳಿದುಕೊಳ್ಳಬಹುದು. ಅನೇಕ ತಾಯಂದಿರು ಕೊಳೆಯನ್ನು
ತೆಗೆದು ಸ್ವಚ್ಛಗೊಳಿಸುವ ಬದಲಾಗಿ ಏನೋ ಬಹಳ ಪ್ರೀತಿಯನ್ನು ತೋರಿಸು
ವವರಂತೆ—"ಹೌದು, ನಮ್ಮ ಮಗು ನರಕವೇ, ಆದರೆ ಹೆತ್ತವಳಿಗೆ ಹೆಗ್ಗಣ
ಮುದ್ದು" ಎಂದೆನುತ್ತಾರೆ. ಇದು ಬರೇ ಗಾದೆ, ಹೆಗ್ಗಣವೇ ಎಲ್ಲಿಯಾದರೂ
ಹೆತ್ತುಬಿಟ್ಟಿದ್ದಾದರೆ, ಈ ತಾಯಂದಿರು ಅದು ಮುದ್ದು, ಬಹಳ ಮುದ್ದು
ಎಂದು ಆದರ ತುಪ್ಪಟವನ್ನು ಸವರಿಸಿಕೊಳ್ಳುತ್ತ ಆದರ ಅಡಿಯುದ್ದ ಬಾಲ
ವನ್ನು ಹಾರದಂತೆ ಕತ್ತಿಗೆ ಸುತ್ತಿಕೊಂಡು ಮುದ್ದಿಟ್ಟುಕೊಳ್ಳುತ್ತಿದ್ದರೊ
ಏನೋ! ಸ್ವಚ್ಛತೆಯನ್ನೇ ತಿರಸ್ಕರಿಸಿ ಆಲಸ್ಯದಿಂದ ಹಾಳು ಹರಟೆಗಳನ್ನು
ಹಚ್ಚಿ ಕೂತುಕೊಳ್ಳುವ ತಾಯಂದಿರು ತಾಯಂದಿರಲ್ಲ, ಮಹಾಮಾರಿಗಳು.

ಸ್ವಚ್ಛವಾಗಿರುವ ಮಕ್ಕಳನ್ನು ಎಲ್ಲರೂ ಕರೆಯುತ್ತಾರೆ. ಅವರಲ್ಲಿರುವ
ಆಕರ್ಷಣವು ಮಕ್ಕಳ ಸನ್ನಿಧಿಯನ್ನು ಪ್ರೀತಿಸುವ ಮಾನವ ಗುಣವನ್ನು
ಬಲಪಡಿಸಿ, ಹಿರಿಯರನ್ನು ಆ ಮುದ್ದು ಮಕ್ಕಳನ್ನು ಹುಡುಕಿ ಹಿಡಿದೆತ್ತಿ
ಮುದ್ದಾಡುವಂತೆಯೇ ಮಾಡುತ್ತದೆ. ಹೀಗೆಯೇ ಜೊಕ್ಕುಟವಾದ ಮಗುವು
ಅನೇಕರೊಡನೆ ಆಟವಾಡುತ್ತಿದ್ದು ಮಾತನಾಡುತ್ತಿದ್ದು ಸಹವಾಸವನ್ನು
ಬೆಳೆಸುವದೇ ಮಾತ್ರವಲ್ಲದೆ ಚುರುಕು ಬುದ್ಧಿಯುಳ್ಳದ್ದಾಗುತ್ತದೆ, ಧೈರ್ಯ
ಉಳ್ಳದ್ದಾಗುತ್ತದೆ, ಹಸನ್ಮುಖವುಳ್ಳದ್ದಾಗುತ್ತದೆ. ಮುಂದೆ ಸುಖಿಯಾ
ಬಾಳುವದಕ್ಕೆ ಸೌಂದರ್ಯೋಪಾಸಕಳಾದ ತಾಯಿಯ ಕೃಪೆಯಿಂದ ಚಿಕ್ಕಂ
ನಿಂದಲೇ ಲಭಿಸಿದ ಈ ಸುಗುಣಗಳು ಸಾಧಾರಣವಾದ ಸೊತ್ತೇ? ಧನ್ಯಳ
ಅಂತಹ ತಾಯಿ. ಯಾವ ತಾಯಿಯ ಸ್ವಚ್ಛತೆಯಿಂದ ಮಗುವಿಗೆ ಅಮೌ
ವಾದ ಧನವು ದೊರಕಿ ಜೀವಯಾತ್ರೆಯೇ ಸಾರ್ಥಕವಾಗುತ್ತಿದೆಯೊ
ಅಂತಹ ತಾಯಿಯೇ ಯೋಗ್ಯ ಮಾತೆ, ಅಂತಹ ತಾಯಿಯೇ ಜಗನ್ಮಾತೆಯ
ಪ್ರತಿಬಿಂಬ, ಅಂತಹ ತಾಯಿಯೇ ಧರ್ಮಪತ್ನಿ, ಅವಳೇ ದೇಶಭಗಿನಿ, ಅಂತ
ತಾಯಿಗೆ ಅನಂತ ಧನ್ಯವಾದಗಳು. ಸಂಘಕ್ಕೆ ಯೋಗ್ಯವಾದ ಯುವ
ಯುವತಿಯರ ಸಂತಾನವನ್ನು ಒದಗಿಸಿಕೊಟ್ಟ ತಾಯಿಯು ಕಾರ್ಯ
ಅತ್ಯುಚ್ಚ ಧರ್ಮೋಪಾಸನೆ! ಅದೇ ಬಹು ಯೋಗ್ಯವಾದ ಯೋಗ!

ಸಹವಾಸದಿಂದ ವಿವಿಧಾನುಭವವೂ ಹುಟ್ಟುವದು. ಮಾನವನು ಹುಟ್ಟಿರುವದು ಯೋಗ್ಯ ಅನುಭವಗಳನ್ನು ಮಾಡಿಕೊಳ್ಳುವದಕ್ಕಾಗಿಯೇ ಅಲ್ಲವೇ? ಬಹುಜನ ಸಹವಾಸದಲ್ಲಿ ಬೆಳೆದ ನಿಮ್ಮ ಹುಡುಗನಲ್ಲಿ ಯೌವನವು ಮೂಡುವದಕ್ಕೆ ಮೊದಲೇ ಜನರ ಗುಣವನ್ನು ಪರೀಕ್ಷಿಸಲಿಕ್ಕೆ ಬೇಕಾದ ಸ್ವಯಬುದ್ಧಿಯು ಸಹಜವಾಗಿಯೇ ಹುಟ್ಟುವದು. ಬಾಲ್ಯದಲ್ಲಿ ಯಾವಾಗಲೂ ಮನೆಯಲ್ಲಿಯೇ ಇದ್ದ ಮಕ್ಕಳು ಯೌವನದಲ್ಲಿ ಹೊರಬಿದ್ದರೆ ಅವರಿಗೆ ಯುಕ್ತಾಯುಕ್ತ ಪರಿಜ್ಞಾನವೇ ಇಲ್ಲದೆ ಹಾಳು ಹಾದಿಯನ್ನೇ ತುಳಿದು ಕೆಡುವರು. ''ನಮ್ಮ ಹುಡುಗನು ಎಲ್ಲಿಯಾದರೂ ಹೋದರೆ ಕೆಡುವನೋ ಏನೋ'' ಎಂದುಕೊಂಡು ಅವನನ್ನು ಮನೆಯಲ್ಲಿಯೇ ಇಟ್ಟುಕೊಂಡರೆ ಅವನ ಮುಂದಾಗುವ ಗತಿ ಪಶುವನ್ನು ಪಂಜರದಿಂದ ಬಿಟ್ಟಹಾಗೆಯೇ. ಅದಿಲ್ಲದೇ ಚಿಕ್ಕಂದಿನ ಗುಣವು ಹಾಗೆಯೇ ಇದ್ದು, ಹೊರಗೆ ಹೋಗಲಿಕ್ಕೇ ಅವನು ಭಯಗೊಂಡರೆ ಅವನು ಮೇಲೆ ವರ್ಣಿಸಿದ ತಂತ್ರಾಣಿ ಮುಖನೇ ಆಗುವನು. ಅಂತಹ ಅಮ್ಮುವದನರ ಆದಿಗುರುಗಳು ತಾಯಂದಿರೇ ಮತ್ತು ಅಂತಹ ತಾಯಂದಿರೇ ದೇಶ ಧರ್ಮಗಳ ವೈರಿಗಳು.

ಇದನ್ನೆಲ್ಲಾ ಆರಿತುಕೊಂಡು ಮಕ್ಕಳನ್ನು ಈಗ ಸಾಕಬೇಕಾದರೆ ದೃಷ್ಟಿಯು ಅವರು ಮುಂದೆ ಆಗಬೇಕಾದ್ದೇನು ಎಂಬದರ ಕಡೆಗೂ ಇರಬೇಕು. ಈಗಿನದೀಗ, ಮುಂದಿನದು ಮುಂದೆ ಎನ್ನುವವರು ಮೂರ್ಖರು, ದೇಶ ದೇವ ದ್ರೋಹಿಗಳು. ಯಾಕಂದರೆ ಮುಂದಿನದು ಇಂದಿನದನ್ನು ಬಿಟ್ಟು ಇಲ್ಲ. ಒಂದರ ಫಲವೇ ಇನ್ನೊಂದು. ಮುಂದಿನ ಫಲದ ಬೀಜವನ್ನು ಸುಲಭವಾಗಿ ಹಿಂದೆ ನೋಡಿ ಕಂಡುಹಿಡಿಯಬಹುದು. ಅಮ್ಮಾ, ಮಕ್ಕಳಿಗಾಗಿ ನೀವು ಮಾಡುವ ಪ್ರತಿಯೊಂದು ಸೇವೆಯಲ್ಲಿಯೂ ಅವರ ಮುಂದಿನ ಜೀವನದ ಬೀಜವಿದೆ ಯೆಂಬದನ್ನು ಮರೆಯಬೇಡಿರಿ. ನಿಮ್ಮ ತೊಡೆಯಲ್ಲಿನ ಮಕ್ಕಳು ಗಾಂಧಿಗಳೂ ಆಗಬಹುದು, ಹಂದಿಗಳೂ ಆಗಬಹುದು. ಇದೆಲ್ಲ ನಿಮ್ಮ ದೃಷ್ಟಿ, ಯೋಗ್ಯತೆ, ಸಾಹಸಗಳನ್ನವಲಂಬಿಸಿಯೇ ಇದೆ. ಜಗತಿಯು ನಿಮಗೆ ಯೋಗ್ಯತೆಯನ್ನು ದಯಪಾಲಿಸಲಿ!

ನಿಮ್ಮ ಮಗ,

ತಾರಾನಾಥ.

THE FOURTH
MYSORE STATE JOURNALISTS' CONFERENCE
HASSAN

ಜನ್ಮಭೂಮಿ

ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ

ಸಂಪಾದಕರು- ಎಚ್. ಆಯ್. ನಾರಾಯಣರಾವ

ಸಂಪುಟ ೧೦ ಹುಬ್ಬಳ್ಳಿ ರವಿವಾರ ತಾ. ೨೭-೨-೧೯೨೦ ಸಂಚಿಕೆ ೧೭

ಜನ್ಮಭೂಮಿ.

ಹುಬ್ಬಳ್ಳಿಯ ಮ್ಯುನಿಸಿಪಾಲಿಟಿಯೂ ರಾಷ್ಟ್ರಧ್ವಜವೂ

ರಾಷ್ಟ್ರಸ್ವಜನ ಜೀವಂತ ರಾಷ್ಟ್ರದ ಲಕ್ಷಣವೆನ್ನುವದಕ್ಕಿಂತ ರಾಷ್ಟ್ರದ ಜೀವವೆನ್ನುವದು ಹೆಚ್ಚು ಸಯುಕ್ತಿಕವೆಂದು ಪ್ರತಿಯೊಬ್ಬನೂ ಒಪ್ಪುತಕ್ಕ ಸ್ವಗತಿಯು ಇವನ್ನರಿತೇ ಹಿಂಸಾಸ್ತಾನಕ್ಕೊಂದು ಧ್ವಜವು ಮನ್ನಿತವಾಗಿದೆ ಇಂಥ ಧ್ವಜವನ್ನೆ ಇಂದು ಹುಬ್ಬಳ್ಳಿಯ ನಾಗರಿಕರು ತಮ್ಮ ನಗರ ಮಂದಿರದ ಮೇಲೆ ಅತಿ ಉಲ್ಲಾಸದಿಂದ ಅಪ್ಪೈಯ್ಯದಿಂದ ನಿಲಿಸುವರಿದ್ದಾರೆಂಬ ಸಿಹಿ ಕೇಳಿ ನೋಡಿ ಪ್ರತಿಯೊಬ್ಬನೂ ಆನಂದಭರಿತನಾಗುತ್ತು ನಹಜವೆಯಂತು ಪ್ರಾವೆಷ್ಟಿಯರೂ ಒಪ್ಪಕ್ಕನಾತು.

ಅಭ್ಯುದ್ಯಾಪೋತ್ಸವ ನಮಾರಂಭವಂತೂ ಪೂರ್ಣವಾಗುವದರಲ್ಲಿ ಸಂಶಯವಿಲ್ಲ ಹುಬ್ಬಳ್ಳಿಯ ನಾಗರಿಕರು ಎಷ್ಟು ಉತ್ಸಾಹದಿಂದ ರಾಷ್ಟ್ರಧ್ವಜವನ್ನು ಏರಿಸುವರೋ ಅಷ್ಟೇ ಉತ್ಸಾಹದಿಂದ ಸುತ್ತುಧ್ಯೆರ್ಯದಿಂದ ಅದನ್ನು ಕಾಪಾಡುವದು ಪ್ರತಿಯೊಬ್ಬ ಆದ್ಯ ಕರ್ತವ್ಯವೆಂದು ತಿಳಿಯುತಕ್ಕದ್ದು ಎಷ್ಟೇ ಎಡರುಗಳು ಬಂದರೂ ಎದೆಗುಂದದೆ ಈ ಕಾರ್ಯವನ್ನು ಪ್ರತಿಯೊಬ್ಬನು ಮಾಡಲೇಬೇಕು ಇಲ್ಲವಾದರೆ ರಾಷ್ಟ್ರಧ್ವಜದ ಅಪಮಾನ ಮಾಡಿದಂತಾಗುವದು ರಾಷ್ಟ್ರಧ್ವಜದ ಅಪಮಾನವೆಂದರೆ ಖಡೀ ರಾಷ್ಟ್ರದ ಅಪಮಾನವಾದಂತಾಗುವದು

ಆದರಿ ಹುಬ್ಬಳ್ಳಿಯ ನಾಗರಿಕರು ಮುಂದೆ ಬರುವ ಸಂಕಟಗಳನ್ನು ಪೂರ್ಣವಾಗಿ ವಿಚಾರಮಾಡಿ ಈ ಕರಿಣತಮವಾದ ಚಿತ ರಾಷ್ಟ್ರದ ಅಂತಿಮಸಾಧ್ಯವಾದ ಈ ಕಾರ್ಯವನ್ನು ಕೈಕೊಂಡಿದ್ದಾರೆಂದ ಬಳಿಕ ಇದನ್ನು ಕಾಪಾಡುವಕಾರ್ಯದಲ್ಲಿ ಸಂಶಯ ತೆಗೆದುಕೊಳ್ಳುವದಕ್ಕೆ ಅಸ್ಪದವೇ ಉಳಿಯುವದಿಲ್ಲ

ಶ್ರೀ ಕರಗುದರಿಯವರ ಭಾಷಣವು

ನಿನ್ನೆ ರಾತ್ರಿ ೧೦ ಘಂಗೆ ಗಾಂಧಿ ಜಾಕಿನಲ್ಲಿ ರಾಷ್ಟ್ರಧ್ವಜಾರೋಹಣವ ನಮುವಾಗಿ ಹುಬ್ಬಳ್ಳಿ ನಾಗರಿಕರು ಒಂದು ಕ್ರಕಂಡ ಜಾಹೀರ ನಭೆಯು ಕಾಡಿತ್ತು ಈ ನಭೆಯಲ್ಲಿ ಶ್ರೀಯುತ ಕರಗುದರಿಯವರು ತಮ್ಮ ಭಾಷಣದಲ್ಲಿ:- ಎಂಥ ಸಂದರ್ಭದಲ್ಲಿ ಬಂದರೂ, ನಾವು ಏಳು ಜನರು ರಾಷ್ಟ್ರಧ್ವಜಾರೋಹಣದ ಕಾರ್ಯವನ್ನು ಮಾಡೇತೀರುವೆವು ಇದರಲ್ಲಿ ನಮಗೆ ಪ್ರಾಣ ಹೋದರೂ ನಾವು ಎಲ್ಲಕ್ಕೂ ಸಿದ್ಧರಾಗಿದ್ದೇವೆ ನೀವು (ನಾಗರಿಕರು) ಮಾತ್ರ ನನಗೆ ಬೆಂಬಲವಾಗಿರಬೇಕು ನಾಳೆ ೧೦ ಘಂಟೆಯೊಳಗೆ ನಮಗೆ ಮೇಲೆ ಇಂಥ ಪ್ರಸಂಗವೇ ನಾವರೂ ಬಂದಲ್ಲಿ ನೀವು ಹಿಂದೆಗೆಯುವಾರೆಂದು ನಂಬಿತ್ತಾನ್ನೋದೇನೆಯು ನಮಗೆ ಧೈರ್ಯ ಕೊಡುತ್ತ ಯಾವಪ್ರಕಾರವಾಗಿ ನಮ್ಮ ಮೇಲೆ ನಂಪೂರ್ಣವಾಗಿ ನಂಬಿಗೆಯಿಟ್ಟಿರುವಿರೋ ಅದರಂತೆ ನಾವಾದರೋ ನಿಮ್ಮ ಮೇಲೆ ಸಂಪೂರ್ಣವಾಗಿ ನಂಬಿಗೆಯನ್ನು ಇಟ್ಟಿದ್ದೇವೆ ಬೆಳಗಾಗುವದರೊಳಗಾಗಿ ಅಥವಾ ನಾವು ನಗರುವಂದಿಸ್ಥಿಕ್ಕೆ ಹೋಗುವದರೊಳಗಾಗಿ ಹಿಂದೂಸ್ತಾನದಿಂದ ಮನ್ನಿತವಾದ ಅತಿವುನೀತವಾದ ನಮ್ಮ ರಾಷ್ಟ್ರಧ್ವಜವು ನಗರ ಮಂದಿರದ ಮೇಲೆ ಸ್ವತಂತ್ರ ವಾತಾವರಣದಲ್ಲಿ ಹಾರಾಡುವದು ನಮ್ಮ ಕಣ್ಣಿಗೆ ಬಿದ್ದರೆ ನಾವೆಲ್ಲರೂ ಅನನ್ಯಭಕ್ತಿಯಿಂದ ನಮಸ್ಕರಿಸಿ ನಾವು ತಿರುಗಿ ಮನೆಗೆ ಇಲ್ಲವಾದರೆ ನಮ್ಮ ಹೆಣಗಳಿಂದಲೇ ತ್ರಿವರ್ಣ – ಯುಕ್ತ ರಾಷ್ಟ್ರಧ್ವಜವನ್ನು ಇಲ್ಲಿ ನೆಲಿಸುವೆವೆಂದು ಬಹಳ ಆವೇಶದಿಂದ ನೇಕ ನಹಸ್ರ ಜನರನ್ನು ಮಂಗಿಸಿದರು.

ಸುರತದಲ್ಲಿ ಸರ್ದಾರ ವಲ್ಲಭಭಾಯಿ ಪಟೇಲರ ಭಾಷಣವು

ವಲ್ಲಭಭಾಯಿಯವರ ಅಪೂರ್ವ ಸ್ವಾಗತವು.

— * —

ಸುರತ ತಾ|| ೨೪-೭ ಶುಕ್ರವಾರ ಸಾಯಂಕಾಲಕ್ಕೆ ಮುಂಬಯಿಯಿಂದ ಹೊರಟ ಫ್ರಾಂಟಿಯರ್ ಮೇಲಿನಿಂದ ಸರ್ದಾರರು ಸುರತ ಸ್ಟೇಶನ್ನಿನ ಮೇಲೆ ಕಾಲಿಟ್ಟೊಡನೆಯೇ ನಾಗರಿಕರು ಅತ್ಯಂತ ಉತ್ಸಾಹದಿಂದ ಸ್ವಾಗತವನ್ನಿತ್ತರು. ನಗರವನ್ನೆಲ್ಲ ರಾಷ್ಟ್ರಧ್ವಜಗಳಿಂದ ಶೃಂಗರಿಸಿದ್ದರು. ನಾಗರಿಕರ ಪರವಾಗಿ ಡಾ. **ಎಮ್. ಕೆ ದೀಕ್ಷಿತ** ಇವರು ಪುಷ್ಪಹಾರವನ್ನು ಅರ್ಪಿಸಿದರು. ನಂತರ ಮಳೆಯು ಒಂದೇ ಸವನೆ ಸುರಿಯುತ್ತಿದ್ದರೂ, ಭವ್ಯವಾದ ಮೆರವಣಿಗೆ ಹೊರಟು ತಾಪೀನದಿಯ ಧಡದವರೆಗೆ ಹೋಗಿ ಅಲ್ಲಿ ಪ್ರಚಂಡ ಸಭೆಯು ಕೂಡಿತು.

ಸುರತ ನಗರದಲ್ಲಿ ಸರ್ದಾರ ವಲ್ಲಭಭಾಯವರು

— * —

ಸರದಾರವಲ್ಲಭ ಭಾಯಿಯವರು ಮುಂಬಯಿಯಲ್ಲಿಯ ತಮ್ಮ ಕಾರ್ಯವನ್ನು ತೀರಿಸಿಕೊಂಡು ಸೋಮವಾರ ಮಂಗಳವಾರ ಸಾಯಂಕಾಲಕ್ಕೆ ಸುರತಕ್ಕೆ ಬಂದು ಮುಟ್ಟಿದರು ವಾಡಿಕೆಯಂತೆ ವ್ಯಾಪಕವಾದ ಸ್ವಾಗತವನ್ನು ಸ್ವೀಕರಿಸಿದ ನಂತರ ನೆರೆದ ೪೦-೪೫ ಸಾವಿರ ಸ್ತ್ರೀ ಪುರುಷರ ಸಮುದಾಯದ ಮುಂದೆ ಅತ್ಯಂತ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ನೆರೆದವರನ್ನುದ್ದೇಶಿಸಿ ಅವರು ಹೇಳಿದ ಮುಖ್ಯ ಆಶಯವೆಂದರೆ:— " ಕಾಂಗ್ರೆಸಿನ ಸಭ್ಯರಾಗಿ ಅದರ ಸಾಮರ್ಥ್ಯವನ್ನು ಹೆಚ್ಚಿಸಿರಿ; ಅದರ ಶಿಸ್ತನ್ನು ಪಾಲಿಸಿರಿ, ನೆರೆಮನೆಗಳು ತುಂಬಿ ತುಳುಕಿಹೋಗುವಂತೆ ಮಾಡಿರಿ. ಜಯಪ್ರಾಪ್ತಿಯಾಗುವವರೆಗೂ ವ್ಯಾಹತವಾಗಿ ಹೋರಾಡಿರಿ ಒಪ್ಪಂದ ಇನ್ನು ತಕ್ಕ ಸಮಯವಲ್ಲ.

ಅಸಂಖ್ಯ ಸ್ತ್ರೀ ಪುರುಷರು ಕಾರಾಗೃಹದಲ್ಲಿ ಬಿದ್ದು ತಳವಳಿಸುತ್ತಿರುವಾಗ ಸ್ವಾಗತ, ಮೆರವಣಿಗೆಗಳಿಗೆ ಅವಕಾಶವೇ ಉಳಿದಿರುವದಿಲ್ಲ ಮಹಾತ್ಮಾ ಗಾಂಧಿಯವರು ಗುಜರಾಥದ ಜನರುಗಳಮೇಲೆ ತಮ್ಮ ಪೂರ್ಣ ವಿಶ್ವಾಸವನ್ನು ಇಟ್ಟಿರುವರು. ಅದೇ ಮೇರೆಗೆ ಜನರಾದರೂ ಮಹಾತ್ಮರ ಅಪ್ಪಣೆಯಂತೆ ನಡೆಯು ಭಾರತದ ಭಾವೀ ಇತಿಹಾಸವನ್ನು ತನ್ನು ಕೈತಿಗಳಿಂದಲೇ ಬರೆಯುತ್ತಿರುವರು. ಸಮಾಧಿ-ನತಿಗಳು ಒಂದರಹಿಂದೊಂದು ಅರ್ಡಿನನ್ಸಗಳನ್ನು ಹೊರತೆಗೆಯಹತ್ತಿರುವಾಗ, ಒಕ್ಕಲಿಗರಿಗೆ ಹೊಲ ಮಾಡುವದಕ್ಕಾಗಲೀ ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡುವದಕ್ಕಾಗಲೀ ವ್ಯಾಪಾರಿಗಳಿಗೆ ವ್ಯಾಪಾರ ಮಾಡುವದಕ್ಕಾಗಲೀ ಈಗ ಸಮಯವಿಲ್ಲ ಎಲ್ಲರೂ ಐಕಮತ್ಯದಿಂದ ಕಾರ್ಯಮಾಡಿ ನಮ್ಮ ಸಲುವಾಗಿ ನೆರೆಮನೆಗೆ ಹೋಗಿರುವ ಸ್ತ್ರೀ-ಪುರುಷ-ಬಾಲ-ವೃದ್ಧರನ್ನು ಬಿಡುಗಡೆ ಮಾಡಲು ಯತ್ನಿಸಬೇಕು ಈ ಕಾಲಕ್ಕೆ ಹಿಂಜರಿದು ಉಪಯೋಗವಿಲ್ಲ. ದೇಶದೊಳಗಿನ ಮುಖಂಡರು ನೆರೆಮನೆಗೆ ಹೋದರೆ ಹಿಂದುಳಿದ ಬಾಲ-ಬಾಲಿಕೆಯರು ಚಳವಳಿಯನ್ನು ಕೈಯಲ್ಲಿ ತೆಗೆದುಕೊಂಡು ಅವರ ಸ್ಥಳವನ್ನು ತುಂಬಬೇಕು. ಎಲ್ಲ ವಯಸ್ಕರೂ, ಅನ್ಯಾಯದ ಹಾಗು ಜುಲುಮೆಯ ಕಟ್ಟಳೆಗಳನ್ನು ಮುರಿಯಬೇಕು.

ವರದೇಶೀ ಅರಿವೆಗಳ ಬಹಿಷ್ಕಾರವೂ ಮದ್ಯಪಾನ ಪ್ರತಿಬಂಧದ ಕಾರ್ಯವೂ ಪಿಕೆಟಿಂಗ್ ಒತ್ತಾರದಿಂದ ಸಾಗಬೇಕು ಈಗ ಸ್ವಯಂಸೇವಕರು ಸ್ವಲ್ಪಹೆಚ್ಚು ಧೈರ್ಯವನ್ನು ತೋರಿಸಿದರೆ ಅಲ್ಪಾವಧಿಯಲ್ಲಿಯೇ ಸ್ವರಾಜ್ಯವು ಹಸ್ತಗತವಾಗುವದು ನಿಶ್ಚಿತವು ಎಲ್ಲಿಯವರೆಗೆ ಈ ಸರಕಾರವು ಅಸ್ತಿತ್ವ ನಲ್ಲಿ ಎನದೆಂ ಅಲ್ಲಿಯವರೆಗೆ ಯಾವತ್ಕಾರ್ಯ, ಉತ್ಸಾಹವು ನುಶ್ಚಿರವಾಗಿ ನಡೆಯುತ್ತಿರದು ನಮ್ಮೆಲ್ಲರ ಕರ್ತವ್ಯಕ್ಕಾಗಿ ಹಗಲಿರುಳು ತಳವಳಿಸುವ ಮಹಾತ್ಮಾಜಿಯವನ್ನು ನಾವೆಲ್ಲರೂ ಬಂದು ಮುಕ್ತರನ್ನಾಗಿ ಮಾಡುವೆ ಇದ್ದರೆ ಅವರ ವಿಚಾರಧಾರೆಯಂತಾಗುವದು ಆದಕಾರಣ ಅವರ ಬಂಧನದ ಕ್ಷಣಕ್ಕಾಗಿ ಎಲ್ಲರೂ ಪ್ರಯತ್ನಿಸಿರಿ. ಅದಕ್ಕಾಗಿ ಸರಕಾರದವರಿಂದ ಉಡುಗರೆಯಾಗಿ ದೊರೆಯುವ ಎಲ್ಲ ಬಿರುದು ಬಾವಲಿ, ಕಾರಾಗೃಹವಾಸ-ಭೂದಂಡ ದಿಗಳನ್ನು ಲೆಕ್ಕಿಸದೆ ಉತ್ಸಾಹದಿಂದ ನುಗ್ಗಿರಿರು ಕಾರ್ಯಮಾಡಿರಿ ಹಿಂದುಸ್ತಾನದ ರಾಜ್ಯವು ಹಿಂದೀಯರ ವಶವಾಗದೆಹೋದರೆ ದೆಹಲಿಯಲ್ಲಿ ಶಾಂತತೆಯು ಸ್ಥಾಪಿತವಾಗಲಾರದೆಂಬದು ಕಾರಣಕ್ಕೆ ಸುನಿಶ್ಚಿತೆಯಾಗಲಿ. ಎಲ್ಲರ ಒಮ್ಮನಸ್ಸಿನ ಕಾರ್ಯಪ್ರಭಾವದಿಂದ ಕಾರಾಗೃಹಗಳ ವಿಸರ್ಜನ ತಾವಾಗಿಯೇ ಕೆರೆಯಲ್ಪಡುವವು

ತಮ್ಮ ಭಾಷಣದ ಉಪಸಂಹಾರದಲ್ಲಿ ಸರದಾರರವರು " ಸರಕಾರೀ ಅಧಿಕಾರಿಗಳು ತಮ್ಮ ವೇತನದ ಸಾಮಾಜಿಕ ಬಹಿಷ್ಕಾರದಮೂಲ ತಮ್ಮ ಕೆಲಸಗಳಿಗೆ ಶರಣು ಹೇಡೆಮು ಉದಾಸದಿಂದ ಸಾಯುತ್ತಿರುವರೆಂಬದನ್ನು ಕಂಡುಬಂದರೆ ಅಂಥವರಿಗಾಗಿ ನಾನೊಂದು ವಸತಿಗೃಹವನ್ನು ಏರ್ಪಾಡು ಮಾಡುವೆನು. " ಎಂದು ಹೇಳಿ ಭಾಷಣವನ್ನು ಮುಗಿಸಿದರು

ಸಪ್ರೂ-ಜಯಕರರ ಶಿಷ್ಟಾಯಿ

—*—

ಯುಕ್ತಗ ಹಾಗು ನಪ್ರು ಇವರು ತಾ ೨೪ ನೇ ಇವ ಎರ್ಡಾ ಚೇಲಿನಲ್ಲಿ ಮಹಾತ್ಮಾಜಿಯನ್ನು ಕಂಡು ಒಂದೊಡನೆ ನಾಲ್ಕು ತಾಸಗಳ ವರೆಗೆ ವಿಚಾರ-ವಿನಿಮಯ ಮಾಡಿದರು. ತ್ರಿವರ್ಗದವರ ನಡುವೆ ಆದ ನಿರ್ಣಯವಾಗಲಿ ವಿಷಯವಾಗಲಿ ಇನ್ನೂ ಹೊರಬಿದ್ದಿಲ್ಲ. ಆದರೂ ಮಿ. ಸೆಂಪ್ರೂ ಕರವರಿಗೆ ಭೆಟ್ಟಿಕೊಟ್ಟಾಗ ಒಪ್ಪಿದ ನಾಲ್ಕು ಕಾರಣಗಳನ್ನೇ ಅವರು ಈಗಲೂ ವಿವರಿಸುತ್ತಿರುವರಾಗಿ ಅನುಮಾನ ಹೊರಡುತ್ತಿದೆ ಈ ಸಂಬಂಧದಲ್ಲಿ ಪಂಡಿತ ಮೋತೀಲಾಲ ಹಾಗು ಜವಾಹರಲಾಲರವರ ಅಭಿಪ್ರಾಯವನ್ನು ಪಡೆದು ಅವರು ಈಗ ನಾಲ್ಕು ತತ್ವಗಳಲ್ಲಿ ಯಾವುದಾದರೊಂದನ್ನು ಕಡಿಮೆಮಾಡುವುದಾಗಲೀ ಅಥವಾ ಹೆಚ್ಚಿನ ಕರಾರುಗಳನ್ನು ಸೇರಿಸುವುದಾಗಲೀ ಅವರ ಮನೋದಯವಿದ್ದರೆ ಅದನ್ನು ತಿಳಿದು ಪುನಃ ವಿಚಾರಮಾಡುವೆವೆಂದು ಮಹಾತ್ಮಾಜಿಯವರು ವ್ಯಕ್ತಪಡಿಸಿದರೆಂದೂ ಅದೇ ಅಭಿಪ್ರಾಯದ ಪತ್ರ ಒಂದನ್ನು ಪಂಡಿತಜಿಯವರಿಗೆ ಕೊಟ್ಟಿರುವರೆಂದೂ ಇನ್ನೊಂದು ಅನುಮಾನವು ಜಯಕರ ನಪ್ರು ಇವರು ಅಲಾಹಾಬಾದಿಗೆ ಹೋಗುವದಕ್ಕಾಗಿ ನಾಳೆ ಬೆಳಿಗ್ಗೆ ಮುಂಬಯಿಗೆ ಬರುವರು

ವಿವಿಧವಾರ್ತೆಗಳು

ಇಂಗ್ಲಂಡಕ್ಕೆ ಬಹಿಷ್ಕಾರದ ಬೆಂಕಿಯು ಹತ್ತಿತು

ತಾ|| ೨೪-೭-೩೦ನೇ ದಿವಸ ಕಾಮನ್ಸರ ಸಭೆಯಲ್ಲಿ ಮಿ. ಫ್ರೀಮನ್ನರು ಬಹಿಷ್ಕಾರದ ವಿಷಯಕ್ಕೆ ಕೇಳಿದ ಪ್ರಶ್ನೆಗೆ ಭಾರತಮಂತ್ರಿ ಮಿ. ಜೆನ್ ಇವರು ೧೯೨೯ ಜೂನ ತಿಂಗಳಿಗಿಂತ ೧೯೩೦ ನೇ ಜೂನ ತಿಂಗಳಲ್ಲಿ ೧೦೦ ಕ್ಕೆ ೩೦ ರಂತೆ ವ್ಯಾಪಾರದಲ್ಲಿ ಕುಡಿನೆಯಾಗಿದೆಯಂದು ತಿಳಿಸಿದ್ದಾರೆ.

ವಿಚಿತ್ರತರದ ಆತ್ಮಹತ್ಯೆಯು

—(೦)—

ಗಣಪತಿ ಪಾರಂತಿ ಶಿಂಧೆ ಎಂಬ ಒಬ್ಬ ತರುಣನು ತನ್ನ ತಾಯಿಂದ ದೇಶನೆ ಪಡೆಯಾಗುವದು ಶಕ್ಯವಿಲ್ಲ ಎಂದಾಗಿ ಬಳಿಯೂ ಡು ಆಯುಷ್ಯು ತಿಂದು ಸಂರಣ ಹೊಂದಿದನು ಇನ್ನೆ ಆತನು ಅಂಗಿಯಲ್ಲಿ ತನ್ನ ಬಳಿಯುಗೆ ಬಂದು ಪತ್ರವನ್ನು ಬರೆದಿದ್ದನು. ಅದರಲ್ಲಿ "ನಾನು ಅಧಿಕ ದೃಷ್ಟಿಯಿಂದ ಪತಿತನಿದ್ದೇನೆ ತಿದ್ದಲಿಂದ ಈ ದುಷ್ಟಜಗತ್ತಿಗೆ ನಾನು ಶರಣು ಹೊಡೆದಿದ್ದೇನೆ ನನ್ನಿಂದ ಯಾವದೇ ತರದ ದೇಶಸಂತಪ ಕಾರ್ಯವು ಆಗಲೆಲ್ಲಿಂದು ನನಗೆ ದುಃಖವಾಗುತ್ತದೆ ನನ್ನಲ್ಲಿ ಧನಸಂಪತ್ತು ಇದ್ದದ್ದಾಗಿದ್ದರೆ ಅದನ್ನು ಕಾಂಗ್ರೆಸ್ಸಿನ ಕಾರ್ಯವಾದ ಸ್ವಾತಂತ್ರ್ಯ ಯುದ್ಧಕ್ಕೆ ನೀಡುತ್ತಿದ್ದೆ ನನ್ನ ಮಾತೃಭೂಮಿಯ ಸೇವೆಮಾಡುವದಕ್ಕೆ ಇದೇ ಸಾರದಲ್ಲಿ ನನಗೆ ಪುನರ್ಜನ್ಮವನ್ನು ಕೊಡೆಂದೂ ಪರಮಾತ್ಮನಲ್ಲಿ ನನ್ನದು ಕೊನೆಯ ಪ್ರಾರ್ಥನೆಯು " ಎಂದು ಬರೆದಿದ್ದಿತು

—(೦)—

ರಾಷ್ಟ್ರಧ್ವಜಕ್ಕೆ ಪರವಾನಿಗೆ ಶಿಗಲಿಲ್ಲ. ವಿದ್ಯಾರ್ಥಿಗಳ ಸತ್ಯಾಗ್ರಹವು.

—[*]—

ಮುಂಬಯಿಯಲ್ಲಿ ಬಹಿಷ್ಕಾರ ನಪ್ತಾಹದ ಕಾರ್ಯಕ್ರಮಗಳಲ್ಲಿ ಒಂದಾದ ರಾಷ್ಟ್ರಧ್ವಜದ ಕಾರ್ಯವನ್ನು ದಾದರ ಹಾಯಸ್ಕೂಲಿನ ವಿದ್ಯಾರ್ಥಿಗಳು ತಮ್ಮ ಶಾಲೆಯಲ್ಲಿ ಪ್ರಾರಂಭಮಾಡಲು ಶಾಲಾಧಿಕಾರಿಗಳು ಆಪತ್ತಿಗೆ ವಿರೋಧಿಸಿದರು. ವಿದ್ಯಾರ್ಥಿಗಳು ೩ ದಿವಸಗಳವರೆಗೆ ಸತ್ಯಾಗ್ರಹ ವ್ರತವನ್ನು ಬಳಿಕೆಯಲ್ಲಿ ತಂದ ತರುವಾಯ ಶಾಲೆಯ ಅಧಿಕಾರಿಗಳು ಸತ್ಯಾಗ್ರಹಿಗಳ ಮುಂದೆ ಕೈಯ್ಯೂರಿದರು ಆಮೇಲೆ ವಿದ್ಯಾರ್ಥಿಗಳು ಶುತ್ಸಹಭರಿತರಾಗಿ ಶಾಲಾಮಂದಿರದಮೇಲೆ ನಿಶಾನೆಯನ್ನು ನಿಲ್ಲಿಸಿದರು. ಬುಧವಾರದ ವರೆಗೆ ಪತಾಕೆಯು ಸ್ವತಂತ್ರವಾತಾವರಣದಲ್ಲಿ ಹಾರಾಡುತ್ತಿದ್ದದ್ದು ಅಧಿಕಾರಿಗಳ ಕಂಣಿನೆಲ್ಲಿ ಒತ್ತಹತ್ತಿದ್ದರಿಂದ ಅದನ್ನು ಕಿತ್ತಿಒಗೆದರು. ಇದನ್ನು ಕಂಡು ವಿದ್ಯಾರ್ಥಿಗಳು ಅಸಂತೋಷಹೊಂದಿ ಪತಾಕೆಯು ಪುನಃ ಸ್ಥಾಪಿತವಾಗುವ ವರೆಗೆ ತಾವು ಶಾಲೆಗೆ ಬರುವದಿಲ್ಲೆಂದು ಶಪಥಹೊಡೆದಿದ್ದಾರೆ. ಈ ವಿದ್ಯಾರ್ಥಿಗಳ ಕಾರ್ಯಕ್ಕೆ ಬೆಂಬಲಕೊಡಲೆಕೆಂದು ಇನ್ನುಳಿದ ಶಾಲೆಯ ವಿದ್ಯಾರ್ಥಿಗಳೂ ಸಂಪೂರ್ಣಸಹಾನುಭೂತಿಯನ್ನಿದ್ದಾರೆಂದು ತಿಳಿಸಿಬಂದಿತ್ತು

ಮುಂಬಯಿಯಲ್ಲಿ ಪಬ್ಲಾಳಿಕೆ. ಇರಾಣಿಯುವನು ಗಾಯಪ್ರಹಿಯಾದನು

—[ ]—

ಮುಂಬಯಿ ಪ್ರೊ ರ್ತಿನಲ್ಲಿ ತಾ|| ೨೫ನೇ ದಿನದ ವಿದೇಶಿ ವಸ್ತ್ರಗಳ ಬಂಡಿಯು ಬರುವದೆಂದು ಪಿಕೆಟಿಂಗ ಮಾಡುವಂತಿಳ ಜನ ಸ್ವಯಂಸೇವಕರನ್ನು ಕೈಸೆದೆ ಮಾಡುವದರಲ್ಲಿ ಬಂದಿತ ಈ ಸೈನಿಯರಲ್ಲಿ ಒಬ್ಬ ಇರಾಣಿಯು ಇದ್ದಾನೆ.

§ § § § §

ಸರಕಾರವು ಸ್ವಯಂಸೇವಿಕೆಯರಿಗೆ ಊಟಹಾಕಿತು.

—(೦)—

ಬಾಂದ್ರಾ ತಹಸೀಲೇದಾರರ ಕಚೇರಿಯಲ್ಲಿ ಗಡಂಗಗಳ ಲಿಲಾವು ಇದ್ದದರಿಂದ ಸ್ವಯಂಸೇವಿಕೆಯರು ಅಲ್ಲಿಗೆ ಹೋಗಿದ್ದರು. ಇವರನ್ನು ನೋಡಿ ಪೊಲೀಸರು ಕಚೇರಿಯ ಸುತ್ತಲೂ ನಿಂತುಕೊಂಡು ಪಿಕಟರ್ಸರಿಗೆ ಅಡ್ಡೀಕಂದರು. ಸ್ವಯಂಸೇವಿಕೆಯರನ್ನು ಧಿಃಕರಿಸಿ ಕಾರ್ಯದಲ್ಲಿ ಪ್ರವೃತ್ತರಾಗಲು ಪೋಲೀಸರು ಒಬ್ಬೊಬ್ಬರನ್ನೇ ಹಿಡಿಯಹತ್ತಿದರು. ಈ ಸೆರೆಯಾಳುಗಳಲ್ಲಿ ಒಬ್ಬ ೧೦ ವರ್ಷದ ಬಾಲಿಕೆಯೊಬ್ಬಳಿದ್ದಳು. ಈ ಎಲ್ಲ ಸ್ವಯಂಸೇವಿಕೆಯರು ತಮ್ಮ ಮನೆಗಳಿಂದ ಬಂದ ಊಟವನ್ನು ನಿರಾಕರಿಸಿ ತಮಗೆ ಸರಕಾರದವರಿಂದ ಊಟದೊರೆಯಬೇಕೆಂಬದಾಗಿ ಹೇಳಿದರು. ಆಗ್ಗೆ ಪೊಲೀಸ ಸಬ್ ಇನ್ಸಪೆಕ್ಟರರು ಹಾಲು ಹಣ್ಣು ಮೊದಲಾದ ಫಲಹಾರವನ್ನು ತಂದುಕೊಟ್ಟರು ಉಪಹಾರ ತೀರಿದ ನಂತರ ಸರಕಾರವು ಎಲ್ಲರನ್ನೂ ಬಿಟ್ಟುಬಿಟ್ಟಿತು. ಅಂತೂ ಗಡಂಗದ ಲಿಲಾವು ಅಂತ್ಯದಲ್ಲಿ ಹಾಲು ಹಣ್ಣಿನಂತೆ ವರಿಣಮಿಸಿತು.



राष्ट्रीय ध्वज गीत.

वंदे मातरम् ।

सुजलां सुफल मलयज शीतलाम् ।
सस्यश्यामलां मातरम् ॥ वंदे ॥
शुभ्रज्योत्स्ना पुलकितयामिनीम्
फुल्लकुसुमितद्रुमदलशोभिनीम्
सुहासिनीं सुमधुरभाषिणीम्
सुखदां वरदां मातरम् ॥ वंदे ॥

पद २.

विजयी विश्वतिरंगा प्यारा ।
झेंडा ऊंचा रहे हमारा ॥

सदा शक्ति बरसानेवाला । प्रेमसुधा सरसानेवाला ।
वीरोंको हरषानेवाला । मातृभूमिका तनमन सारा ॥ १ ॥
स्वतंत्रताके भीषण रणमें । लखकर बढे जोष क्षणक्षणमें ।
कांपे शत्रु देखकर मनमें । मिटजावे भय संकट सारा ॥ २ ॥
इस झेंडेके नीचे निर्भय । ले स्वराज्य यह अविचल निश्चय ।
बोलो भारतमाताकी जय । स्वतंत्रताही ध्येय हमारा ॥ ३ ॥
आवो प्यारे वीरो आवो । देशधर्मपर बलिबलिजावो ।
एकपाथ सब मिलकर गावो । प्यारा भारत देश हमारा ॥ ४ ॥
इसकी शान न जाने पाये । चाहे जान भले ही जाये ।
विश्वविजय करके दिखलाये । तब होवे पण पूर्ण हमारा ॥५॥

ಈ ಪತ್ರಿಕೆಯನ್ನು ಭೀಮಾಜಿ ಶಂಕರ ಪಾಟೀಲ ಇವರು ಜಯಮುದ್ರಣಾಲಯ ಕಿಲ್ಲೆ ಹುಬ್ಬಳ್ಳಿಯಲ್ಲಿ ಮುದ್ರಿಸಿ ತಮ್ಮ ಆಫೀಸಿನಲ್ಲಿ ಪ್ರಸಿದ್ಧಿಸಿದರು.

ಸರಿಯೆನಿಪ ಪಾವನವು ಧರೆಯೊಳ್ಳಿಲ್ಲ ವಿದ್ಯಾವರ್ಧಕ ಸಂಘ
ಪರಿದು ಮತ್ತೊಂದಿಲ್ಲ ನೋಡಾ ಜ್ಞಾನಸಿದ್ಧಿಯನೂ ॥

ಕನ್ನಡ ಭಗವದ್ಗೀತಾ.

ಜೈನಾಂಜನ.

ವರುಷ ೧ } ಜೂನ ೧೯೦೯ { ಸಂಚಿಕೆ ೬.

ವಿಷಯಾನುಕ್ರಮಣಿಕೆಯು

೧ ಸಂಪಾದಕರ ಸಾಮ್ರಾಜ್ಯ.
೨ ಬ್ರಾಹ್ಮಣರೂ ಅವರ ಅವನತಿಯೂ.
೩ ಹಿರಣ್ಮಯಿ (ಸಾಮಾಜಿಕ ಜಾಲೂ ಕಾದಂಬರಿ
೪ ಸತೀಧರ್ಮ

ಸಂಪಾದಕರು

ಶಾಮಾಜಿ ಶಿದ್ಧೇಶ್ವರ ಪೇಟಕರ
ಬಳವಂತ ಅನಂತ ಕಿತ್ತೂರ ಬಿ.ಎ

ವಾರ್ಷಿಕ ಚಂದಾ ೨ ರೂ. (ಅಂಚೆಪಟ್ಟಿ ಕೂಡಿ)
ಪೋಷಕರಿಗೆ ರೂ. ೫

ಸೂಚನೆ.

೧ ಲೇಖಗಳನ್ನೂ ಗ್ರಂಥ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು 'ಸಂಪಾದಕ ಜ್ಞಾನಾಂಜನ ಬೆಳಗಾಂವಿ' ಇವರ ವಿಳಾಸಕ್ಕೆ ಕಳುಹಿಸಬೇಕು.

೨ ಲೇಖಗಳನ್ನೂ ಕಾಗದದ ಒಂದೇ ಮಗ್ಗುಲಿಗೆ ಸುವಾಚ್ಯ ಅಕ್ಷರಗಳಲ್ಲಿ ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಬೇಕು.

೩ ಮುದ್ರಿಸದೇ ಇದ್ದ ಲೇಖಗಳನ್ನು ಹಿಂದಿರುಗಿ ಕಳುಹಿಸಲಾರೆವು. ಪತ್ರಿಕೆಯ ಮಾದರಿ ಸಂಚಿಕೆ ಬೇಕಾದಲ್ಲಿ ೦–೪–೦ ಯ ಸ್ಟ್ಯಾಂಪನ್ನೂ, ಉತ್ತರೇಚ್ಛೆಯಿದ್ದವರು ಜೋಡು ಕಾರ್ಡನ್ನೂ ಕಳುಹಬೇಕು.

೪ ಈಗಲೂ ಕಾಗದದ ಬೆಲೆ ಕಡಿಮೆಯಾಗದ ಮೂಲಕ ಇನ್ನು ಮೇಲೆ ರಫ್ ಪೇಸರವನ್ನು ಉಪಯೋಗಿಸುವೆವು.

೫ ಉಳಿದ ಪತ್ರವ್ಯವಹಾರವನ್ನು ಮ್ಯಾನೇಜರ 'ಜ್ಞಾನಾಂಜನ' ಬೆಳಗಾಂವ ಇವರ ಕಡಿಗೆ ಮಾಡಬೇಕು ಜಾಹೀರಾತಿನ ದರವನ್ನು ಪತ್ರದ್ವಾರ ತಿಳಿದು ಕೊಳ್ಳಬಹುದು.

ಕರ್ನಾಟಕ ಹಿತೈಷಿಣೀ ಗ್ರಂಥಮಾಲೆ.

ಉದಾತ್ತವಾದ ನೀತಿಯು ತತ್ವಗಳನ್ನು ಸುಲಭವಾದ ಐತಿಹಾಸಿಕ ಹಾಗು ಪೌರಾಣಿಕ ಕಥೆಗಳ ರೂಪದಿಂದ ಬರೆದು ೪, ೫ ಚಿತ್ರಗಳನ್ನು ಸೇರಿಸಿ ಸರ್ವಾಂಗಸುಂದರವಾದ ಗ್ರಂಥಗಳನ್ನು ಪ್ರಕಟಿಸುವದೇ ಈ ಗ್ರಂಥಮಾಲೆಯ ಉದ್ದೇಶವು. ಪ್ರತಿವರ್ಷ ಒಂದ ಐತಿಹಾಸಿಕ ಒಂದು ಪೌರಾಣಿಕ ಹೀಗೆ ಎರಡು ಗ್ರಂಥಗಳು ಪ್ರ. ಟಿಸಲ್ಪಡುವವು.

೧	ಸಾವಿತ್ರೀ ಸತ್ಯವಾನ	ಬೆಲೆ ೧೫ ಆಣೆ.
೨	ಪದ್ಮಿನಿ	,, ೧೫ ಆಣೆ
೩	ದಾಕ್ಷಾಯಿಣಿ	,, ೮ ಆಣೆ.
೪	ಮಹಾರಾಣಿ ಲಕ್ಷ್ಮೀಬಾಯಿ	,, ೧೫ ಆಣೆ.
೫	ಪಾರ್ವತಿ. (ಅಚ್ಚಾಗುತ್ತಲಿದೆ)	,,

ಎರಡಾಣೆ ಪ್ರವೇಶಫೀಯನ್ನು ತುಂಬಿ ಮಾಲೆಯೊಳಗಿನ ಪ್ರತಿಯೊಂದು ಗ್ರಂಥವನ್ನು ಕೊಳ್ಳಲೊಪ್ಪಿ ಕಾಯಂ ವರ್ಗಣೀದಾರರಾಗುವಂಥ ಮಹನೀಯರಿಗೆ ಈ ಗ್ರಂಥಗಳನ್ನು ಮುಕ್ಕಾಲು ಬೆಲೆಗೆ ಕೊಡುವೆವು.

ವ್ಯವಸ್ಥಾಪಕ— ಶ್ರೀಸರಸ್ವತೀಸುಂದರ,
ಧಾರವಾಡ.

ಜ್ಞಾನಾಂಜನ.

ಎಂಬ

ಮಾಸ ಪತ್ರಿಕೆಯು.

ವರ್ಷ೧. | ಜೂನ ೧೯೧೯. | ಸಂಚಿಕೆ ೬.

ಸಂಪಾದಕರ ಸಾಮ್ರಾಜ್ಯ.

೧ ಸುಹೃದಯರಾದ ಕನ್ನಡ ಭಾಷಾಭಿಮಾನಿಗಳೇ! ಈ ೫-೬ ತಿಂಗಳ ಹಿಂದೆ ಒಂಬೇಸವನೇ ಭಾಷಾಸೇವೆಯನ್ನು ಮಾಡಬೇಕೆಂಬ ಉತ್ಕಟೇಚ್ಛೆಯು **'ಜ್ಞಾನಾಂಜನ'** ದ ಸ್ವರೂಪದಿಂದ ಪ್ರತ್ಯಕ್ಷ ಕಾರ್ಯಕ್ಕೆ ನಮ್ಮನ್ನು ತೊಡಗಿಸಿತು. ಆದಷ್ಟು ಶ್ರಮಬಟ್ಟು ಹೊಸ ಮಾದರಿಯಿಂದಲೂ ನಿಯಮಿತತನದಿಂದಲೂ, ವಿದ್ವಾನ್. ಲೇಖಕರ ಲೇಖನಗಳಿಂದ ಜಳುಪಿಸುವಂತೆಯೂ ಜನವರಿಯ ೨೫ ನೇ ತಾರೀಖಿನ ದಿವಸ ಬಹುತರವಾಗಿ ಸದ್ಯಕ್ಕೆ ಭಾಷಾಭಿಮಾನಿಗಳೆಂದು ಪ್ರಸಿದ್ಧ ಹೊಂದಿದ ಎಲ್ಲರ ಮನಸೇವೆಗೆ ಸಾದರದಿಂದ ಒಪ್ಪಿಸಿದೆವು. ೨ ನೇ ಸಂಚಿಕೆಯನ್ನು ಮೊದಲಿನಷ್ಟೇ ನಿಯಮಿತತನದಿಂದಲೂ, ಸರ್ವಾಂಗ ಸುಂದರವಾಗಿಯೂ, ಹೊರಡಿಸಿದೆವು. ಎರಡೂ ಸಂಚಿಕೆಗಳನ್ನು ಪಡೆದ ನಿರ್ಮಲಾಂತಃಕರುಣದ ಕೆಲ ಸದ್ಗೃಹಸ್ಥರು ತಮ್ಮ ಪ್ರೇಮವನ್ನೂ ಜ್ಞಾನಾಂಜನಕ್ಕೆ ಆಯುರಾರೋಗ್ಯವನ್ನೂ ಚಿಂತಿಸಿದರೆಂದು ಹೇಳಲು ನಾವು ಆನಂದಪಡುತ್ತೇವೆ.

\+ + + +

ಆದರೆ ಇಂಥವರ ಸಂಖೆಯು ಮಾತ್ರ ತೀರ ಕಡಿಮೆಯಂದು ಹೇಳಲು ಅಸಹ್ಯತರವಾವ ದುಃಖವೆನಿಸುತ್ತದೆ. ಆದರೆ ಇದ್ದ ಪರಿಸ್ಥಿತಿಯನ್ನು ಸುಹೃದಯರ ಮುಂದೆ ಹೇಳಿದರೆ ಅವರಲ್ಲಿ ತಪ್ಪೇನು? ಮೊದಲಿನ ಎರಡೂ ಸಂಚಿಕೆಗಳನ್ನು ಬೇಕಂತಲೇ ಯಾರಿಗೂ ವ್ಹಿ. ಪಿ. ಯಿಂದ ಕಳಿಸಿದ್ದಿಲ್ಲ. ಕನ್ನಡಿಗರು ನಮ್ಮ ಕಾರ್ಯವನ್ನು ನೋಡಿ ಸಂತೋಷಪಟ್ಟವೇಲೆಯಾದರೂ ನಮ್ಮ ಕಾರ್ಯದಲ್ಲಿ ಸಹಾಯ ಮಾಡದೆ ಇರಲಿಕ್ಕಿಲ್ಲೆಂಬದೇ ಇದರ ಉದ್ದೇಶ. ಮೂರನೇ ಸಂಚಿಕೆಯನ್ನು ವ್ಹಿ. ಪಿ. ಯಿಂದ ಕಳಿಸಬೇಕೆಂದು ಮನದಲ್ಲಿಯೇ

ನಾವು ನಿಶ್ಚಯಿಸಿದೆವು. ನಿಯಮಿತತನದಿಂದ ಸಂಚಿಕೆಗಾಗಿ ಬಂದ ವಿದ್ವಾನ್ ಲೇಖಕ' ಬರಹಗಳನ್ನು ಟಪಾಲಿಗೆ ಹಾಕಿದೆವು. ಸರಿಯಾಗಿ ೨೫ ನೇ ತಾರೀಖಿನ ವಳಗಾಗಿ ಮುದ್ರಿ ಕೊಡತಕ್ಕದ್ದೆಂದು ಬೇಡಿಕೊಂಡೆವು. ಆದರೆ ಛಾಪಖಾನೆಯವರ ನಿಯಮಿತತನವು ಉ ಯಲಿಲ್ಲ.

\+ + + +

ಹೇಗೆ ಉಳಿಯಬೇಕು? ಬೆಳಗಾಂವಿಯಲ್ಲಿ ನಾವು ಇರುವವರು. ಬೆಳಗಾಂವಿಯ ಲ್ಲಿಯೇ ಇದ್ದ ಛಾಪಖಾನೆಗಳಿಗೆ ಛಾಪಿಸಿ ಕೊಡಲು ಕೇಳಿದರೆ ಅವರಿಗೆ ಸಾಕಷ್ಟ ಕೆಲಸವುಂಟು. ಮುಂದೆ ಧಾರವಾಡಕ್ಕೆ ಹೋಗಬೇಕಾಗಿದ್ದರಿಂದ ಒಮ್ಮೆ ಹೋಗಿ ಎ ಕರಾರುಗಳನ್ನು ಗೊತ್ತು ಮಾಡಿಕೊಂಡು ಮ್ಯಾಟರ [ವಿಷಯ] ವನ್ನಷ್ಟು ಮಾತ್ರ ಕಳಿಸ ತ್ತ ಹೋಗುತ್ತೇವೆ. ನಾವು ಪ್ರತಿ ಸಾರೆ ೧೦–೧೧ ದಿವಸ ಅಲ್ಲಿ ಬಂದು ಕೂಡಲಾರೆವ ನೀವು ಸರಿಯಾಗಿ ನಿಯಮಿತ ವೇಳೆಗೆ ಛಾಪಿಸಿ ಕೊಡಬೇಕೆಂದು ಹೇಳಿ ನಿಶ್ಚಯವಾಗಿದ್ದ ರೂ ೩ ನೇ ತಿಂಗಳಿಗೆ ಪ್ರಿಂಟರರ ನಿಯಮಿತತನವು ಉಳಿಯಲಿಲ್ಲ. ಹೇಗೆ ಉಳಿಯಬೇಕು ಎಲ್ಲರೂ ಹೋಗಿ ಜತಾರರಾಯರ ಕೊರಳಿಗೇ ಬಿದ್ದರೆ ಜುಲುಮೆಗಾಗಿ 'ಹು' ಅನ್ನದೆ ಅವರಿಗೆ ನಿರ್ವಾಹವೇ ಉಳಿಯುವದಿಲ್ಲ. ಹೀಗಾದಮೇಲೆ ಅವರಾದರೂ ಹೇಗೆ ನಿಯಮಿ ತನವನ್ನು ನಡಿಸಿಕೊಡಬೇಕು?

\+ + + +

೩–೪ ಸಂಚಿಕೆಗಳ ಸಂಯುಕ್ತ ಅಂಕನ್ನು ಹೊರಡಿಸುವದು ನಿಶ್ಚಯಿಸಿದೆವು. ಆದ ಇನ್ನು ಪ್ರೇಸ್ಸಿನಲ್ಲಿಯ ಗದ್ದಲವು ಕಡಿಮೆಯಾಗಿ ನಮ್ಮ **'ಜ್ಞಾನಾಂಜನ'** ದ ಪಾಳಿಯ ಬರಬೇಕಾದರೆ ಇನ್ನೂ ಒಂದು ತಿಂಗಳು ಹೆಚ್ಚು ಹಿಡಿಯಿತು.

\+ + + +

ಕಡೆಗೆ ೩–೪–೫ ಸಂಚಿಕೆಗಳ ಸಂಯುಕ್ತ ಅಂಕನ್ನು ಹೊರಡಿಸಿದೆವು. ಈ ಸಾ ಮಾತ್ರ ನಮಗೆ ಕನ್ನಡ ಸದ್ಗೃಹಸ್ಥರಿಗೆ ಹಾಗೇ ಕಳಿಸುವ ಅವಸಾನವು ಉಳಿಯಲಿಲ್ಲ ಆದ್ದರಿಂದ ವ್ಹಿ. ಪಿ. ಯಿಂದ ಕಳುಹಿಸಿದೆವು. ಸಾಧಾರಣವಾಗಿ ಎಲ್ಲ ವ್ಹಿ. ಪಿ. ಗಳು ತಿರ ಗಿ ಬಿಡಲ್ಪಟ್ಟವು. ಇನ್ನು ಇಲ್ಲೆನ್ನಲಿಕ್ಕೆ ೧೫–೨೦ ಜನರು ಮಾತ್ರ ವ್ಹಿ. ಪಿ. ಯನ್ನು ಸ್ವೀಕ ರಿಸಿದರು. ಹೀಗಾಗಿ ಈಗ ಸದ್ಯಕ್ಕೆ ಒಟ್ಟಿಗೆ 'ಜ್ಞಾನಾಂಜನ' ದ ವರ್ಗಣಿದಾರರ ಸಂಖ್ಯೆ ಯು ೧೦೦ ಕ್ಕೆ ಮೀರಿಲ್ಲೆಂದು ಹೇಳಲು ನಾವು ನಾಚಿಕೊಳ್ಳುತ್ತೇವೆ.

\+ + + +

ಅದೇಕೆ? ನಾವು ನಾಚಿಕೊಳ್ಳುವ ಕಾರಣವೇನು? 'ಕರ್ಮಣ್ಯೇವಾಧಿಕಾರಸ್ತೆ' ಎಂಬ ಶ್ರೀಕೃಷ್ಣನ ಉಕ್ತಿಯಂತೆ ನಾವು ಕಾರ್ಯಕ್ಕೆ ಪ್ರವರ್ತರಾಗಿದ್ದರೂ ಇನ್ನು ಕನ್ನಡಾಭಿಮಾನಿಗಳು ಮಾತ್ರ 'ಜ್ಞಾನಾಂಜನ' ಕ್ಕೆ ತಾವು ಮಾಡುವ ಕರ್ತವ್ಯದಿಂದ ಸದ್ಯಕ್ಕಂತೂ ಪರಾಙ್ಮುಖರಾಗಿದ್ದರೂ ಅದೇ ಭಗವಂತನ "ಮಾಘಲೇಷುಕದಾಚನ"ದ ದಾರಿಯಿಂದಲೇ ನಮಗೆ ಇದರಲ್ಲಿ ಶ್ರೇಯದ ಆಶೆಯು ಇಲ್ಲದಿದ್ದರೂ ಕನ್ನಡಿಗರಿಗೂ ದುಡ್ಡಿನ ಸಹಾಯ ಮಾಡದಿದ್ದರೆ ನಮ್ಮ ಈ ವೇದಾಂತ ವಾಕ್ಯಗಳೆಲ್ಲ ಅಡವೀ ಪಾಲಾಗದೇ ಇರಲಾರವೆಂದು ನಾವು ಸ್ಪಷ್ಟೋಕ್ತಿಗೆಯ್ಯುತ್ತೇವೆ. ಈಗಿನಂತಹ ದಿವಸಗಳಲ್ಲಿ ದುಡ್ಡಿನ ಸಹಾಯವು ಕೇವಲ ಅಪರಿಹಾರ್ಯವು. ಅದಿಲ್ಲದಿದ್ದರೆ ತೀರೀತು! ನಮ್ಮ 'ಜ್ಞಾನಾಂಜನ'ವು ಅಲ್ಲಿಯೇ [ಧಾರವಾಡ ಪ್ರೆಸ್ಸಿನಲ್ಲಿ]. ನಾವು ಇಲ್ಲಿಯೇ [ಬೆಳಗಾಂವಿಯಲ್ಲಿ]. ಹೀಗಾಗುವ ವೇಳೆಯನ್ನು ಕನ್ನಡಿಗರು ತರಲಾರರೆಂದು ನೆರೆನಂಬಿದ್ದೇವೆ.

\+ + + + .

ಇನ್ನು ಹೇಳುವದೇನಂಪರೆ, ಜ್ಞಾನಾಂಜನವನ್ನು ಕಂಡು ಅದರ ಇರುವಿಕೆಗಾಗಿ ಕಳಕಳಿಯನ್ನು ಹೊಂದುತ್ತಿರುವ ಸದ್ಗೃಹಸ್ಥರು ತೀವ್ರವೇ ಚಂದಾದಾರರನ್ನು ಕೂಡಿಸಿಕೊಡಬೇಕೆಂಬದೇ ಆಗ್ರಹದ ಸೂಚನೆ. ಇದೇ ಅವರಿಗೆ ನಮ್ಮ ಬೇಡಿಕೆ! ಇನ್ನು 'ಜ್ಞಾನಾಂಜನ'ವು ವೇಳೆ ವೇಳೆಗೆ ಹೊರಡುವದೂ ಅದರಲ್ಲಿ ವಿದ್ವಾನ್ ಲೇಖಕರ ಉಪಯುಕ್ತ ವಿಷಯಗಳ ಮೇಲೆಯೇ ಲೇಖಗಳನ್ನು ಬರೆಯಿಸುವದೂ ಮುಂತಾದ ಎಲ್ಲ ಮಾತಿನಿಂದಲೂ 'ಜ್ಞಾನಾಂಜನ' ವು ಅವರನ್ನು ಸಂತೋಷಗೊಳಿಸುವಂತೆ ಮಾಡುವದು ನಮ್ಮ ಕರ್ತವ್ಯವು. ಇದನ್ನು ಮಾಡಲು ನಾವು ಸಿದ್ಧರಿದ್ದೇವೆ. ಕನ್ನಡಿಗರು ಮಾಡತಕ್ಕ ಕಾರ್ಯವು ಮಾತ್ರ ಮೇಲೆ ಹೇಳಿದಂತೆ ಹಾಗೇಯೇ ಉಳಿದಿದೆ.

---

೨ ಕರ್ನಾಟಕ ಎಜ್ಯುಕೇಶನ್ನ ಸೊಸಾಯಿಟಿ (ಧಾರವಾಡ) ಇವರು ಶಿಕ್ಷಕ ಪ್ರಸಾರದ ಕಾರ್ಯವನ್ನು ಒಳ್ಳೇ ಭರದಿಂದ ಸಾಗಿಸಿದ್ದು ಕರ್ನಾಟಕದಲ್ಲೆಲ್ಲ ಪ್ರಾಥಮಿಕ ಹಾಗು ಹಾಯಸ್ಕೂಲ ಶಿಕ್ಷಣ ಪ್ರಸಾರವನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡು ಅದಕ್ಕಾಗಿ ಅಲ್ಲಲ್ಲಿ ಹಾಯಸ್ಕೂಲಗಳನ್ನೂ, ಶಾಲೆಗಳನ್ನೂ ತೆಗೆಯಲಾರಂಭಿಸಿದ್ದಾರೆ. ಮೊನ್ನೆ ಮೊನ್ನೆ ಇವರು ಧಾರವಾಡದಲ್ಲಿಯೇ ಉಚ್ಚ ಶಿಕ್ಷಣಕ್ಕಾಗಿ ಒಂದು ಕಾಲೇಜನ್ನು ತೆಗೆಯಬೇಕೆಂದುಪಕ್ರಮಿಸಿ ಅದಕ್ಕಾಗಿ ಎಲ್ಲ ಕಡೆಗೂ ಫಂಡ ಕೂಡಿಸುವದಕ್ಕಾಗಿ ವಿನಂತಿ ಪತ್ರಗಳನ್ನು ಹಂಚಿದ್ದು ನಮ್ಮ ಕಡೆಗೆ ಕನ್ನಡ ಹಾಗು ಇಂಗ್ಲೀಷ ಭಾಷೆಗಳಲ್ಲಿ ಛಾಪಿಸಿದ ಎರಡು ವಿನಂತೀ ಪತ್ರಕಗಳು ಬಂದಿರುತ್ತವೆ.

ಇಂಥ ಅಭಿನಂದನೀಯ ಹಾಗು ಅವಶ್ಯಕ ಕಾರ್ಯವನ್ನು ಕೈಕೊಂಡದ್ದಕ್ಕಾಗಿ ನಾರ್ಟಕ ಎಜ್ಯುಕೇಶನ್ನ ಸೊಸಾಯಿಟಿ' ಯನ್ನು ಅಭಿನಂದಿಸಿ ಸರ್ವ ಸಮರ್ಥನಾದ ಶ್ರೀ ರಾಮನು ಅವರು ಕೈಕೊಂಡ ಕಾರ್ಯದಲ್ಲಿ ಅಖಂಡ ಯಶಸ್ಸನ್ನು ದಯಪಾಲಿಸಲೆಂದು ಆತನನ್ನು ಅನನ್ಯ ಭಾವದಿಂದ ಬೇಡಿಕೊಳ್ಳುತ್ತೇವೆ. ಜ್ಞಾನಾಂಜನದ ವಾಚಕರೂ ತಮ್ಮ ಕೈಲಾದಮಟ್ಟಿಗೆ ಸರಸ್ವತೀ ದೇವಿಗೆ ತಾವು ಕೊಡಬಹುದಾದ ತೆರಿಗೆಯನ್ನು ಈ 'ಸೊಸಾಯಿಟಿ' ಯ ಮುಖಾಂತರವಾಗಿ ಒಪ್ಪಿಸಬೇಕೆಂದು ಆಗ್ರಹದಿಂದ ತಿಳಿಸುತ್ತೇವೆ.

\+ + + +

೩ 'ಜ್ಞಾನಾಂಜನ' ಕಾರ್ಯಾಲಯಕ್ಕೆ ವಿಮರ್ಶೆಗಾಗಿಯೂ, ಪ್ರತ್ಯುಪಕಾರಾರ್ಥವಾಗಿಯೂ ಎಷ್ಟೋ ಪುಸ್ತಕಗಳೂ ವೃತ್ತಪತ್ರಗಳೂ ಮಾಸಿಕಗಳೂ ಬಂದಿವೆ. ನಾವು ಆ ಎಲ್ಲ ಸಂಪಾದಕರ ಉಪಕಾರವನ್ನು ಸ್ಮರಿಸುತ್ತೇವೆ. ವೇಳೆ ಹಾಗು ಸ್ಥಳದ ಅನುಕೂಲತೆಯು ಆದಹಾಗೆ ನಮ್ಮ ಅಭಿಪ್ರಾಯವನ್ನು ಕೊಡುತ್ತಹೋಗುತ್ತೇವೆ.

ಬ್ರಾಹ್ಮಣರೂ ಅವರ ಅವನತಿಯೂ.

ಲೇಖಕ:— ಶ್ರೀ ಶ್ರೀನಿವಾಸ ಪಾಂಡುರಂಗ ಕೋಟೆ.

[೦]

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು.)

೫. ಪ್ರೌಢತ್ವ ಬರುವ ಪೂರ್ವದಲ್ಲಿಯೇ ವಿವಾಹವಾದಪ್ಪಕ್ಕೆ ಅದು ದೋಷಾರ್ಹವಾಗುವದಿಲ್ಲ. ಆದರೆ ಸ್ತ್ರೀ ಪುರುಷರ ಬೆಳವಣಿಗೆಯು ಪೂರ್ಣವಾಗುವದಕ್ಕೆ ಮುಂಚಿತವಾಗಿ ಅವರ ಸಂಯೋಗವಾದಲ್ಲಿ ಮಾತ್ರ ಅದು ಗರ್ಹ್ಯವು. ಗಂಡಸಿನ ಬೆಳವಣಿಗೆಯು ಏಂನೇ ವರ್ಷಕ್ಕೆ ಸರ್ವಸಾಧಾರಣವಾಗಿ ಮುಗಿಯುತ್ತದೆ; ಆದರೆ ಸ್ನಾಯುಗಳು ಸಂಪೂರ್ಣವಾಗಿ ಬಲವುಳ್ಳವುಗಳಾಗಲಿಕ್ಕೆ ಮುಂದೆ ಮತ್ತೆ ೪–೫ ವರ್ಷಗಳು ಬೇಕು. ಹೆಂಗಸರ ಬೆಳವಣಿಗೆಯು ೧೬ನೇ ವರ್ಷಕ್ಕೆ ಮುಗಿಯುವದುಂಟು; ಆದರೆ ಎಲ್ಲ ಸ್ನಾಯುಗಳೂ, ಅವಯವಗಳೂ ಪೂರ್ಣಾವಸ್ಥೆ ಹೊಂದಬೇಕಾದರೆ ಮುಂದೆ ಮತ್ತೂ ೩–೪ ವರ್ಷಗಳು ಬೇಕು. ಈ ಪ್ರಕಾರ ಪೂರ್ಣ ಬೆಳವಣಿಗೆ ಹೊಂದಿದ ಸ್ತ್ರೀಪುರುಷರ ಸಮಾಗಮವು ಹಿತಕರವೂ ಉತ್ತಮ ಸಂತತಿಗೆ ಕಾರಣೀಭೂತವೂ ಆಗುತ್ತದೆಂದು ಬಾಲವಿವಾಹ ನಿಷೇಧಕರ ಮತಿತಾರ್ಥವಿದ್ದು ಅದು ಸತ್ಯವೂ ನಿರಪವಾದವೂ ಎಂಬುವದರಲ್ಲಿ

ಸಂದೇಹವಿಲ್ಲ. ಆದರೆ ಬಾಲವಿವಾಹದ ಪ್ರತಿಷ್ಠೆಯಿಂದ ಈ ಉದ್ದಿಷ್ಟ ಹೇತುವು ಎಷ್ಟರ ಮಟ್ಟಿಗೆ ಸಾಧ್ಯವಾಗುತ್ತದೆಂಬದು ಮಾತ್ರ ಸಂಶಯಾತ್ಮಕವದೆ.

ಬಾಲವಿವಾಹದ ರೂಢಿಯಿಂದ ಬ್ರಾಹ್ಮಣ ವರ್ಗದ ಹಿಂದಿನ ಪೀಳಿಗೆಗಳಲ್ಲಿ ಎಷ್ಟು ಅವನತಿಯು ಕಾಣಬೇಕಿತ್ತೋ ಅದರ ದಶಾಂಶ ಸಹ ಕೊಂಡು ಬರುವಲ್ಲೆಂಬ ಸಂಗತಿಯನ್ನು ಒಪ್ಪಿಕೊಳ್ಳದಿರುವದಕ್ಕೆ ಮಾರ್ಗವಿಲ್ಲ. ಇದರ ಕಾರಣಗಳನ್ನು ಶೋಧಿಸಿ ನೋಡಲಾಗಿ ಮುಖ್ಯವಾಗಿ ಎರಡು ಸಂಗತಿಗಳ ಮನವರಿಕೆಯಾಗುವದು. (೧) ಶರೀರದ ಬೆಳವಣಿಗೆಗೆ ಅನುಕೂಲವಾದ ಶ್ರಮದ ಕೆಲಸಗಳು ಈಗಿನಗಿಂತ ಮೊದಲಿನ ಹೆಂಗಸರಿಗೆ ಹೆಚ್ಚು ಮಾಡಬೇಕಾಗುತ್ತಿತ್ತು. ಸರ್ವಸಾಧಾರಣ ಕುಟುಂಬಗಳಲ್ಲಿ ಬೀಸುವದು ಕುಟ್ಟುವದು, ನೀರು ಹೊರುವದು, ವಸ್ತ್ರಗಳನ್ನು ವಗೆಯುವದು ಇವೇ ಮೊದಲಾದ ಕೆಲಸಗಳನ್ನು ಹೆಂಗಸರು ವಿಶೇಷತಃ ಸೊಸೆಂದಿರು ಮಾಡಬೇಕಾಗಿತ್ತು. ಸದ್ಯಕ್ಕೆ ಕೂಲಿಯವರಿಂದ ಮಾಡಿಸುವ ಕೆಲಸಗಳನ್ನು ಮುಂಚೆ ಮಡಿ ಮೈಲಿಗೆಯ ವಿಶೇಷ ಪ್ರಾಬಲ್ಯದ ಮೂಲಕ ಶ್ರೀಮಂತರ ಹೆಂಗಸರು ಕೂಡ ತಮ್ಮಷ್ಟಕ್ಕೆ ತಾವೇ ಮಾಡುತ್ತಿದ್ದರು. ೫೦-೬೦ ವರ್ಷಗಳ ಆಚೆಗೆ ಮೈಮೇಲೆ ಸರಿಗಿ ವಂಕೆ, ಗೋಟು ಪಾಟಲಿಗಳನ್ನು ಹಾಕಿಕೊಂಡ ಅನೇಕ ಬ್ರಾಹ್ಮಣ ಸ್ತ್ರೀಯರು ಸಂಜೆ ಮುಂಜಾನೆ ನೀರಿನ ಕೊಡಗಳನ್ನು ಹೊತ್ತುಕೊಂಡು ಹೋಗಿಬರುವದನ್ನು ಎಷ್ಟೋ ಜನರು ನೋಡಿರಬಹುದು. ದೊಡ್ಡ ದೊಡ್ಡ ಪ್ರಸ್ಥ ಪ್ರಯೋಜನಗಳಲ್ಲಿ ಹೆಂಗಸರು ಉಲ್ಲಾಸದಿಂದ ಅಡಿಗೆ ಮಾಡಿ ಬಡಿಸುವ ಕೆಲಸಗಳನ್ನು ಮಾಡುತ್ತಿದ್ದರು. ಅಲ್ಪವಯಸ್ಕ ಸ್ತ್ರೀಯರ ಆಟಗಳು ಸಹ ಕುಣಿದಾಟದವೇ (ಅಂದರೆ ವ್ಯಾಯಾಮದವೇ) ಆಗಿದ್ದವು. (೨) ವೃದ್ಧರ ದಕ್ಷತೆಯಿಂದಲೂ ಸ್ತ್ರೀಯರ ಅಜ್ಞಾನದಿಂದಲೂ ಅವರ ಮನಸ್ಸು ಪ್ರೌಢ ವಯಸ್ಸಿನವರೆಗೆ ವಿಕಾರ ರಹಿತವಾಗಿ ಶುದ್ಧತೆಯಿಂದಿರುತ್ತಿದ್ದವು. ಅಲ್ಪವಯಸ್ಕ ಸ್ತ್ರೀ ಪುರುಷರು ಒಬ್ಬರ ಕಣ್ಣಿಗೊಬ್ಬರು ಬೀಳುವದು ಸಹ ವೃದ್ಧರಿಗೆ ಶೇರುತ್ತಿದ್ದಿಲ್ಲ. ಅತ್ತೆಯು ಹಿಂಬದಿಗೆ ಕೆಳಗೆ ಗೋಣು ಹಾಕಿಕೊಂಡು ನಡೆಯುವದು, ಅವಳ ಸಹವಾಸವಲ್ಲಿಯೇ ಕೂಡ್ರುವದು, ಮಲಗುವದು, ಇವೇ ಮೊದಲಾದ ಅನೇಕ ನಿರ್ಬಂಧಗಳಿದ್ದದರಿಂದ ಹುಡಿಗೆಯರು ನಿರಾತಂಕವಾಗಿ ಬೆಳೆಯುತ್ತಿದ್ದರು. ಇದರಿಂದ ರಜೋದರ್ಶನವಾದರೂ ಪ್ರೌಢವಯಸ್ಸಿನಲ್ಲಿಯೇ ಉಂಟಾಗುತ್ತಿತ್ತು. ಗಂಡಸರಿಗಾದರೂ ಆ ಕಾಲದಲ್ಲಿ ಇದೇ ತರನ ಅನೇಕ ನಿರ್ಬಂಧಗಳಿದ್ದವು.

ಇನ್ನು ಸಾಂಪ್ರತದ ಸ್ಥಿತಿನೋಡಿರಿ. ಅತ್ತೆಮನೆಯ ನಿರ್ಬಂಧದ ನಡತೆಗಳು ಲೋಪ ಹೊಂದಿ ಅತ್ತೆಮನೆಯಲ್ಲಿಯೂ ತವರಮನೆಯಲ್ಲಿಯೂ ಭೇದ ವಿಲ್ಲದಂತಾಗಿದೆ.

ತೀರ ಅಲ್ಪಪ್ರಾಪ್ತಿಯು ಕುಟುಂಬಗಳಲ್ಲಿ ಸಹ ಬೀಸುವದು, ಕುಟ್ಟುವದು, ಮುಸುರೆ ತಿಕ್ಕುವದು, ಮುಂತಾದ ಕೆಲಸಗಳೆಲ್ಲ ಕೂಲೀ ಹಚ್ಚಿ ಮಾಡಿಸಲ್ಪಡುತ್ತವೆ. ನೀರು ತುಂಬುವದು ಹಾಗು ವಸ್ತ್ರಗಳನ್ನು ಒಗೆಯುವದು ಮಾತ್ರ ಬಡ ಕುಟುಂಬಗಳಲ್ಲಿ ಇನ್ನೂ ಹೆಂಗಸರೇ ಮಾಡುತ್ತಾರೆ. ಉದ್ಯೋಗ ಧಂದೆ, ನೌಕರಿ ಇವುಗಳ ಮೂಲಕ ಅವಿಭಕ್ತ ಕುಟುಂಬ ಪದ್ಧತಿಯು ಲಯಹೊಂದಿ ಗಂಡ ಹೆಂಡರಿಬ್ಬರೇ ಬೇರೆ ಇರಬೇಕಾದ್ದರಿಂದ ಅವರ ಮೇಲೆ ವೃದ್ಧರ ನಿರ್ಬಂಧವು ಇಲ್ಲದಂತಾಗುತ್ತದೆ. ಗಜಗ ಆಡುವದು ಇನ್ನೇ ಮೊದಲಾದ ವ್ಯಾಯಾಮರೂಪದ ಆಟಗಳು ನಾಮಶೇಷವಾಗಿ, ಕೊಳ್ಳಪಟ್ಟಿ ಹೆಣೆಯುವದು, ಕರೀಮಣಿಯ ಒಡವೆಗಳನ್ನು ತಯಾರಿಸುವದು ಮುಂತಾದ ಕೂತಲ್ಲೇ ಕೂತು ಮಾಡುವ ಕೆಲಸಗಳು ನಡೆದಿವೆ. ಅದೇಮೇರೆಗೆ ದೇವರಿಗೆ ಹೋಗುವದು ಪ್ರದಕ್ಷಿಣೆ ಹಾಕುವದು ಮುಂತಾದ ವ್ಯಾಯಾಮದ ಧಾರ್ಮಿಕ ಪದ್ಧತಿಗಳು ಕೂಡ, ತೀರ ಕಡಿಮೆಯಾಗಿವೆ. ಶರೀರಪೋಷಣೆಗೂ ಸುದೃಢತೆಗೂ ಅತ್ಯವಶ್ಯವಿರುವ ಬಾಲ್ಯಾವಸ್ಥೆಯಲ್ಲಿ ಹೆಣ್ಣುಮಕ್ಕಳನ್ನು ಶಾಲೆಗೆ ಕಳಿಸುವದರಿಂದ ಅವರ ಬೆಳವಣಿಗೆಗೆ ಅತಂಕವಾಗುತ್ತದೆ; ಇದಲ್ಲದೆ ಯೋಗ್ಯ ಶಿಕ್ಷಣಪದ್ಧತಿಯ ಅಭಾವದಿಂದ ಅವರ ಶರೀರದ ಮೇಲೂ ಮನಸ್ಸಿನ ಮೇಲೂ ಅನಿಷ್ಟ ಪರಿಣಾಮಗಳಾಗುತ್ತವೆ. ಮನೆಯ ನಿರ್ಬಂಧವು ಶಿಥಿಲವಾದ್ದರಿಂದ ಅವರ ಅಲ್ಪವಿದ್ಯೆಯು ಒಮ್ಮೊಮ್ಮೆ ದುರ್ವಿಕಾರಕ್ಕೆ ಕಾರಣವಾಗಿ ಕುಟುಂಬದಲ್ಲಿ ಆಲಸ್ಯದ ಬೀಜವು ಮೊಳೆದೋರುತ್ತದೆಂಬದು ಅನುಭವಕ್ಕೆ ಬರುವದುಂಟು. ಇದೇ ಮಾದರಿಯ ಇನ್ನೂ ಅನೇಕ ಅನಿಷ್ಟ ಸಂಗತಿಗಳು ಬ್ರಾಹ್ಮಣರ ಮನೆಯಲ್ಲಿ ಸೇರಿರುವವು; ಆದರೆ ಅವನ್ನೆಲ್ಲ ಇಲ್ಲಿ ಹೇಳುವ ಪ್ರಯೋಜನವಿಲ್ಲ. ಚಿಕಿತ್ಸಕ ಬುದ್ಧಿಯ ಮನುಷ್ಯರಿಗೆ ಅವು ಸಹಜ ಕಾಣುವಂತಿವೆ.

ಪ್ರೌಢ ವಯಸ್ಸಿನಲ್ಲಿ ಸ್ತ್ರೀಪುರುಷರ ಸಮಾಗಮವಾಗುವದು ಇಷ್ಟವಾಗಿದೆ; ಯಾಕಂದರೆ ಆ ಕಾಲಕ್ಕೆ ಉಭಯತರ ಶರೀರದ ಬೆಳವಣಿಗೆಯು ಪೂರ್ಣವಾಗಿರುತ್ತದೆ. ಆದರೆ ಈ ಬೆಳವಣಿಗೆಯು ಪೂರ್ಣವಾಗಬೇಕಾದರೆ ಬಾಲ್ಯಾವಸ್ಥೆಯಲ್ಲಿ ಶರೀರಕ್ಕೆ ಕೆಲವೊಂದು ವೇಳೆಯವರೆಗೆ ನಿತ್ಯ ಶಾರೀರಿಕ ಶ್ರಮದ ಅವಶ್ಯಕತೆಯಿದ್ದು ಮನಸ್ಸಿಗೆ ಅಯೋಗ್ಯ ಹಾಗೂ ಅನಾಚಾರದ ಮನೋವೃತ್ತಿಗಳ ಸಂಸರ್ಗವು ಕಿಂಚಿತ್ತಾದರೂ ಆಗಕೂಡದು. ಶರೀರಕ್ಕೆ ಅವಶ್ಯಕ ಶ್ರಮ ಉಂಟಾಗದಿದ್ದರೆ ಅಲ್ಪವಯಸ್ಸಿನಲ್ಲಿಯೇ ಶರೀರದ ಬೆಳುವಣಿಗೆಯು ನಿಂತುಹೋಗಿ ಪ್ರೌಢವಯಸ್ಸಿನೊಳಗಿನ ಮನೋವಿಕಾರಗಳು ಪ್ರಾದುರ್ಭೂತವಾಗುವವು. ಇಂಥ ಸ್ತ್ರೀಪುರುಷರ ಸಮಾಗಮವು ಅಲ್ಪವಯಸ್ಸಿನಲ್ಲಾದರೇನು? ಪ್ರೌಢ

ವಯಸ್ಸಿನಲ್ಲಾದರೇನು ? ಉಭಯ ಪಕ್ಷದಲ್ಲಿಯೂ ಅನಿಷ್ಟವೇ. ಇಸ್ಪೇಟು ಆಡುವದರಲ್ಲಿ, ಕಾದಂಬರಿಗಳನ್ನೋದುವದರಲ್ಲಿ, ನಾಟಕಗಳನ್ನು ನೋಡುವದರಲ್ಲಿ, ಕೊಳ್ಳಪಟ್ಟ ಹೆಣಿಯುವದರಲ್ಲಿ, ಕಸೂತಿ ತೆಗಿಯುವದರಲ್ಲಿ, ಕೂತಲ್ಲೇ ಹುಡುಗರನ್ನು ಆಡಿಸುವದರಲ್ಲಿ ಇಲ್ಲವೇ ಇದೇತರದ ಶ್ರಮರಹಿತ ಕೆಲಸಗಳನ್ನು ಮಾಡುವದರಲ್ಲಿ ಸ್ತ್ರೀಯರು ಹನ್ನೆರಡು ವರ್ಷದವರಾದರೇನಾಯಿತು ? ಇಪ್ಪತ್ತು ವರ್ಷದವರಾದರೇನಾಯಿತು ? ಅವರ ಶರೀರದ ಬೆಳವಣಿಗೆಯು ನಿಂತು ಹೋಗುವದು ಸರಿಯೇ. ಅಲ್ಪವಯಸ್ಸಿನಲ್ಲಿಯೇ ಅವರಿಗೆ ವಾರ್ಧಕ್ಯವು ಬರುವದು; ತಾರುಣ್ಯದ ಕಾಂತಿಯು ೨೦–೨೫ ವರ್ಷಕ್ಕೇನೇ ಲಯಹೊಂದಿ, ಮೋರೆಯು ಬೆಳ್ಳಗಾಗುವದು, ಗಲ್ಲಗಳು ಕೂತು ಹೋಗುವವು, ಖಲ್ವಾಟಾವಸ್ಥೆ ಬರುವದು, ಕಣ್ಣುಗಳು ತೇಜೋಹೀನವಾಗುವವು, ಕೂಸುಗಳಿಗೆ ಮೊಲೆಯುಣಿಸಬೇಕಾದರೆ ಹಾಲು ಬರುವದಿಲ್ಲ. ಈ ಸ್ಥಿತಿಯು ಸುಧಾರಿಸಿದ ಹೊಸ ಪದ್ಧತಿಯಂತೆ ನಡೆಯುವ ಎಷ್ಟೋ ಕುಟುಂಬಗಳಲ್ಲಿ ಕಾಣಹತ್ತಿದೆ. ಹೀಗಾಗಲಿಕ್ಕೆ ಬಾಲವಿವಾಹವಾಗಲೀ ಪ್ರೌಢವಿವಾಹವಾಗಲೀ ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ಕಾರಣವಲ್ಲ.

ಸ್ತ್ರೀಯರ ಬೆಳವಣಿಗೆಯ ಅಪೂರ್ಣತೆಗೆ ವ್ಯಾಯಾಮದ ಅಭಾವವು ಒಂದು ಕಾರಣವೆಂಬುವದು ನಿಜ; ಆದರೆ ಎಲ್ಲ ಕುಟುಂಬಗಳಿಗೂ ಇದೇ ಕಾರಣವಲ್ಲ. ಇದಕ್ಕೂ ಪ್ರಬಲವಾದ ಕಾರಣಗಳು ಬೇರೆ ಇದ್ದು ಅವುಗಳ ವ್ಯಾಪ್ತಿಯು ವಿಸ್ತೃತವದೆ. ಅದ್ಯಾವದೆಂದರೆ—

೭. ಹೆಣ್ಣುಮಕ್ಕಳ ಅಪೂರ್ಣ ಬೆಳವಣಿಗೆಯ ವಿಷಯಕ್ಕೆ ಇದ್ದ ಸ್ಥಿತಿಯನ್ನು ಈ ಮೊದಲೇ ವಿವರಿಸಿರುತ್ತೇವಷ್ಟೇ. ಇನ್ನು ಹೆಣ್ಣುಮಕ್ಕಳಿದ್ದ ತಂದೆಗೆ ಅವರ ಲಗ್ನ ಮಾಡಬೇಕಾದರೆ ಪರಿಪರಿಯಾಗಿ ವಿಚಾರಮಾಡಬೇಕಾಗುತ್ತದೆ. ಈಗಿನ ಕಾಲದಲ್ಲಿ ಸಾಮಾನ್ಯ ಸ್ಥಿತಿಯೊಳಗಿನ ಕುಟುಂಬನತ್ಸಲ ಮನುಷ್ಯನಿಗೆ ಹುಡುಗಿಯ ಲಗ್ನವನ್ನು ಬಹಳವಾದರೆ ರಜೋದರ್ಶನಕಾಲದವರೆಗೆ ದೂಡಲಿಕ್ಕೆ ಬರುವದು. ಆದರೆ ಮನೆಯ ಪರಿಸ್ಥಿತಿಯ ಮೂಲಕ ಈ ವಿವಾಹಕಾಲವನ್ನು ಮುಂದೆ ಹಾಕುವದರಿಂದ ನಿಃಸಂದೇಹವಾಗಿ ಒಳ್ಳೇ ಪರಿಣಾಮವೇ ಆಗುತ್ತವೆಂತಲ್ಲ; ಯಾಕಂದರೆ ಹುಡುಗಿಗೆ ಒಂದು ತರವ ಚಿಂತೆ ತಾಗಿದಂತಾಗಿ ಅವಳ ನೈಸರ್ಗಿಕ ಬೆಳವಣಿಗಿಗೆ ಆತಂಕವಾಗುತ್ತದೆ. ಹಾಗೆಯೇ ಹುಡುಗಿಯು ಬಹಳ ಬೆಳೆದಪ್ಪರಿಂದ ಅವಳಿಗೆ ಯೋಗ್ಯವರನನ್ನು ಹುಡುಕುವ ಕೆಲಸವು ಹೆಚ್ಚು ಕಠಿಣವಾಗುತ್ತದೆ; ಇದರಿಂದ ಒಮ್ಮೊಮ್ಮೆ ಕೂಡಿದಲ್ಲಿ ಹುಡುಗಿಯನ್ನು ಕೊಟ್ಟುಬಿಡಬೇಕಾಗುತ್ತದೆ. ಬ್ರಾಹ್ಮಣ ಕುಟುಂಬದಲ್ಲಿ ಹೆಣ್ಣುಮಕ್ಕಳ ವಿವಾಹಕಾಲದ ವಿಷಯಕ್ಕೆ ಸ್ತ್ರೀಪುರುಷರದಾಗಲೀ ವೃದ್ಧತರುಣರದಾಗಲೀ ಇನ್ನೂ ಮತೈಕ್ಯ

ವಾಗಿಲ್ಲ. ಆ ಉಭಯತರಲ್ಲಿ ವಿವಾಹದ ಮೊದಲು ನಡೆದ ವಾದವಿವಾದಗಳನ್ನು ದಿನಾಲು ಕೇಳಿ ಕೇಳಿ ಹೆಣ್ಣುಮಕ್ಕಳ ಬಾಲಿಶ ಸ್ವಭಾವವು ಇಲ್ಲದಂತಾಗಿ ಅವರಿಗೆ ಅಕಾಲಕ್ಕೆ ಪ್ರೌಢವಿಚಾರದ ಸ್ಫೂರ್ತಿಯಾಗುತ್ತದೆ. ತಾಯಿತಂದೆಗಳ ದೋಷದಿಂದ ಒಮ್ಮೊಮ್ಮೆ ಹೀಗಾಗದಿದ್ದರೂ ಬೇರೊಂದು ಸಂಗತಿಯಿಂದ ಈ ರೀತಿ ಅನಿಷ್ಟಪರಿಣಾಮವು ತೀವ್ರ ಸಂಭವಿಸುತ್ತದೆ. ಅದು ಹ್ಯಾಗಂದರೆ:—ಸದ್ಯಕ್ಕೆ ಹುಡುಗರ ವಿವಾಹದ ವಯೋ ವ್ಯರ್ಯಾದೆಯು ೧೮–೨೦ ವರ್ಷಗಳವರೆಗೆ ಬೆಳೆದದ್ದರಿಂದ ಹಾಗೂ ಅಲ್ಪವಯಸ್ಸಿನಲ್ಲಿಯೇ ಅವರ ಮನಸು ಪ್ರೌಢವಾದ್ದರಿಂದ ಅವರಲ್ಲಿ ಭಿನ್ನ ಮನೋವಿಕಾರಗಳು ಅಕಾಲದಲ್ಲಿಯೇ ಜಾಗೃತವಾಗುತ್ತವೆ. ಈ ಹುಡುಗರು ದುರ್ಬಲರಿರುವದರಿಂದಲೂ ಆತ್ಮಘಾತಕವಾದ ವ್ಯಸನ ಪರಂಪರೆಗೆ ಅವರು ಈಡಾಗಿದ್ದರಿಂದಲೂ ಅವರಿಗೆ, ಮದುವೆಯಾದಬಳಿಕ ಹುಡಿಗೆಯು ಪೂರ್ಣ ಬೆಳವಣಿಗೆ ಹೊಂದುವವರೆಗೆ ಬ್ರಹ್ಮಚರ್ಯ ವೃತದಿಂದಿರುವದು ಅಶಕ್ಯ ಇಲ್ಲವೆ ಅಪಾಯಕರವಾಗುತ್ತದೆ. ಇದರಿಂದ ವಿವಾಹವಾದಬಳಿಕ ಸ್ವಲ್ಪ ದಿವಸಗಳಲ್ಲಿಯೇ ಪತ್ನಿಯು ಬಹುತರವಾಗಿ ೧೩ ವರ್ಷದವಳಿರುವಾಗ್ಗೆ ಮನೆಯ ಮೂರ್ಖ ಸ್ತ್ರೀಯರ ಸಹಾಯದಿಂದ ಇಲ್ಲವೇ ಆಗ್ರಹದಿಂದ ಸ್ತ್ರೀಪುರುಷರ ಸಮಾಗಮವಾಗಹತ್ತುತ್ತದೆ. ಇದರಿಂದ ದ್ವಿತೀಯವಿವಾಹ ಹಾಗೂ ಪ್ರೌಢ ವಯಸ್ಸಿನ ಪುರುಷರ ವಿವಾಹಗಳಿಂದ ಸ್ತ್ರೀಯರ ಬೆಳವಣಿಗೆಯ ಮೇಲೆ ಆದ ಕೆಲಕೆಲವು ದುಷ್‌ಪರಿಣಾಮಗಳು ೧೦೦ ಕ್ಕೆ ೫೦ ಮನೆತನಗಳಲ್ಲಿ ಸದ್ಯಕ್ಕೆ ಕಾಣಹತ್ತಿವೆ. ಸ್ತ್ರೀಯರ ಬೆಳವಣಿಗೆಯು ಬಹುತರವಾಗಿ ೧೩ ನೇ ವರ್ಷಕ್ಕೆ ನಿಂತುಹೋಗುವದು, ಅವಳಿಗೆ ಮಾತೃತ್ವಬರುವದು, ಅವಯವಗಳು, ವಿಶೇಷವಾಗಿ ಕಾಲುಗಳು ಕ್ಷೀಣವಾಗುವದು, ಹುಡುಗರು ಬದುಕದಿರುವದು, ಇಲ್ಲವೆ ಸಂತತಿಯು ತೀರ ಅಕುಂಚಿತ ಆಕಾರದ್ದೂ ಕ್ಷೀಣವಾದದ್ದೂ ಹುಟ್ಟುವದು, ತಾಯಿಗೆ ಇಲ್ಲವೆ ಸಂತತಿಗೆ ಅಪಸ್ಮಾರದ ವಿಕಾರವಾಗುವದು, ಬಾಳಂತರೋಗ ಮುಂತಾದವುಗಳಿಂದ ಅಕಾಲಕ್ಕೆ ಸಾಯುವದು, ಇವೆಲ್ಲ ಆ ದುಷ್ಪರಿಣಾಮಗಳಲ್ಲಿ ಪ್ರಮುಖವಾಗಿರುವವು.

ಇನ್ನು ಹೆಣ್ಣುಮಕ್ಕಳ ವಿವಾಹವು ೮–೯ ಇಲ್ಲವೇ ಹತ್ತನೇ ವರ್ಷದಲ್ಲಿ ಆಗಿದ್ದು ಲಗ್ನ ಸಮಯಕ್ಕೆ ಮುದುಮಗನು ೧೨–೧೩ ಇಲ್ಲವೇ ೧೪ ವರ್ಷದವನಿರುವದು,—ಅಂದರೆ ವಧೂವರರ ವಯಸ್ಸಿನಲ್ಲಿ ಸುಮಾರು ೪ ವರ್ಷಗಳ ಅಂತರವಿದ್ದ—ವಿವಾಹಗಳು

(ಸಶೇಷ)

ಆ ಕಡೆಗೆ ಕಿವಿಯೆತ್ತಿ ಕೇಳನು. ಮತ್ತೇನಾದರು ಒಂದು ಮಾತನ್ನು ನಡುವೆಯೇ ಎತ್ತಿ ಬಿಡುವನು. "ಮಗಳು ದೊಡ್ಡವಳಾಗಿ ಬಿಟ್ಟಳು" ಎಂದು ಗೃಹಿಣಿಯು ತಿರಸ್ಕಾರವ್ಯಂಜಕ ಸ್ವರದಿಂದ ಮಾತಾಡಿದರೆ ಧನದಾಸನು ಅದನ್ನು ಕೇಳುವದಿಲ್ಲ ಸಹ. ಇಷ್ಟೇ ಹೇಳುವನು:—"ಗುರುದೇವನು ಬರಲಿ, ಪುರೋಹಿತರು ಬರಲಿ, ಆ ಮೇಲೆ ಈ ಕಾರ್ಯವು ನಡೆಯತಕ್ಕದ್ದು" ಎಂದು ಮಾತ್ರ ಹೇಳುವನು. ಈ ವಿಚಾರದಲ್ಲಿ ಗೂಢವೇನಿರುವದು?

ಶಶಿಭೂಷಣನು ಸಿಂಹಲಕ್ಕೆ ಹೋಗಿ ಬಿಟ್ಟನು. ತರುವಾಯ ಒಂದರಹಿಂದೊಂದು ಎರಡು ವರುಷಗಳು ಕಳೆದುಹೋದವು. ಅವನು ತಿರುಗಿ ಬರಲಿಲ್ಲ. ಹಿರಣ್ಮಯಿಗೂ ಎರಡನೇ ಯಾವ ಸಂಬಂಧವೂ ಗೊತ್ತಾಗಲಿಲ್ಲ. ಅವಳು ಹದಿನೆಂಟು ವರುಷದ ಪ್ರಮದೆಯಾಗಿ ಉಪವನದೊಳಗಿನ ಹೊಸದಾಗಿ ಅರಳಿನಿಂತ ಗುಲಾಬಿಯ ಹೂವಿನಂತೆ ನೋಡಿದವರ ಕಣ್ಮನಂಗಳನ್ನು ತಣಿಸುತ್ತ ಸೃಷ್ಟಿಕರ್ತನ ಅಗಾಧ ಮಹಿಮೆಯ ಪ್ರತಿರೂಪವೆಂಬಂತೆ ಒಪ್ಪುತ್ತಿದ್ದಳು. ಅವಳನ್ನು ನೋಡಿದೊಡನೆಯೇ ಕವಿಕುಲಗುರುವಾದ ಕಾಳಿದಾಸನ

अनाघ्रातं पुष्पं किसलयमलूनं कररुहै-
रनाविद्धं रत्नं मधु नवमनास्वादितरसम्।
अखण्डं पुण्यानां फलमिव च तद्रूपमनघम्
न जाने भोक्तारं कमिह समुपस्थास्यति विधिः॥

(ಶಕುಂತಲಾ. ೨—೧೦)

ಎಂಬ ಉಕ್ತಿಯು ಸ್ಮರಣೆಗೆ ಬರುವದು.

ತಂದೆಯು ವಿವಾಹದ ಪ್ರಸ್ತಾಪವನ್ನೆತ್ತಲೊಲ್ಲನೆಂದು ಹಿರಣ್ಮಯಿಗೆ ವ್ಯಸನವಾಗದು. ಅದರಿಂದ ಅವಳಿಗೆ ಒಂದು ತರದ ಸಮಾಧಾನವೇ ಇತ್ತು. ವಿವಾಹದ ಪ್ರಸ್ತಾಪವು ಅವಳ ಕಿವಿಯಲ್ಲಿ ಬಿದ್ದೊಡನೆಯೇ ಬಾಲ್ಯಮಿತ್ರನಾದ ಶಶಿಭೂಷಣನ ಪ್ರಸ್ಫುಟವಾಗಿ ಪ್ರತಿಬಿಂಬಿಸಿದ್ದ ಮೂರ್ತಿಯು ಸ್ಮರಣೆಗೆ ಬರುವದು. ಬಾಲ್ಯಕಾಲದ ಸಂಗತಿಗಳೆಲ್ಲವೂ ಒಂದೊಂದಾಗಿ ಸ್ಮರಣೆಗೆ ಬರುವವು. ಇದೊಂದು ಸೃಷ್ಟಿಯ ನಿಯಮ. ಜನರು ನಮ್ಮನ್ನು ಎದುರಿಗಿದ್ದಾಗ ಅವರ ಬಗ್ಗೆ ನಮ್ಮಲ್ಲಿ ಇರುವ ಆದರವೂ ಪ್ರೀತಿಯೂ ಅಷ್ಟು ಉಜ್ವಲವಾಗಿರುತ್ತಿರುವದಿಲ್ಲ. ಆದೇ ಅವರು ಕಣ್ಮರೆಯಾದರೆಂದರೆ, ಅವರು ನಮ್ಮನ್ನಗಲಿ ಹೋಗಿಬಿಟ್ಟರೆಂದರೆ ಆಗ ಮಾತ್ರ ಅವರ ವಿಯೋಗದಿಂದ ಉಂಟಾಗುವ ಶೋಕವೇದನೆಯನ್ನು ಸಹಿಸುವದು ಅಸಾಧ್ಯನೇ ಆಗುವದು. ಅವರು ಎಷ್ಟೆಷ್ಟು ದುರ್ಲಭರೆನಿಸುವರೋ ಅಷ್ಟಷ್ಟು

For Exchange and Review.

ಕರ್ನಾಟಕ ವಿದ್ಯಾವರ್ಧಕ ಸಂಘ ... ಸ್ವಧರ್ಮ ಕಾರ್ಯಾಲಯ ... ವಿದ್ಯಾಲಯ

ವಿವಿಧಾರ್ಥಸಂದೋಹವುಳ್ಳ

ನಂದಿನೀ.

ಎಂಬ ಮಾಸಪತ್ರಿಕೆ.] [ಶ್ರೀಕ್ಷೇತ್ರಗೋಕರ್ಣ.



ವರ್ಷ, ೧] ೧೦ಲಲಲ ಆಷಾಢ [ಅಂಕ, ೪

ವ್ಯಾಘ್ರ್ಯಾಃ ಸುಸಾಹಚರ್ಯೇಣ ಶಿಕ್ಷಯನ್ತೀ ಸನಾತನಮ್ ।
ನಯವರ್ತ್ಮ ಜಯತ್ಯೇಷಾ "ನನ್ದಿನೀ" ಲೋಕನನ್ದಿನೀ ॥

ಸಂಪಾದಕ— ನಾರಾಯಣಶಾಸ್ತ್ರೀ ಭಡತಿ.

ಪ್ರಕಾಶಕ:— ರಾಮಾ ತಿರುಮಲಭಟ್ಟ ಸಿದ್ಧೇಶ್ವರ.

ವಾರ್ಷಿಕ ವರ್ಗಣಿ] ೨-೦-೦ [ಅಂಚೆ ವೆಚ್ಚ ಸಹಿತ

ಶ್ರೀನಂದಿನೀ ಮುದ್ರಣಾಲಯ ಗೋಕರ್ಣ.

ವಿಜ್ಞಪ್ತಿ—
ತಿದ್ದುಪಡಿ.

ಈ ಸಂಚಿಕೆಯಲ್ಲಿ ಪ್ರಕಟಿಸಿದ ಮುಹೂರ್ತಮಾಧವಿಯ "अश्विन्यादिषु भैषु" ಎಂಬ ಶ್ಲೋಕದ **रन्ध्रघटिकाः** ಎಂಬ ಶಬ್ದಕ್ಕೆ ಒಂದು ಕನ್ನಡ ಟೀಕಾ ಪುಸ್ತಕ ನೋಡಿಕೊಂಡು ೮ ಗಳಿಗೆಗಳೆಂದು ಅರ್ಥ ಬರೆದುಹೋಗಿದೆ. ಆದರೆ ಸಭ್ಯಕ್ಕೆ ಮತ್ತೆರಡು ಸಂಸ್ಕೃತ ಟೀಕಾ ಪುಸ್ತಕಗಳಲ್ಲಿ ಆ ರಂಧ್ರ ಶಬ್ದಕ್ಕೆ ೯ ಗಳಿಗೆಗಳೆಂತ ಅರ್ಥ ಬರೆದದ್ದು ಕಂಡುಬಂತು. ಕನ್ನಡ ಟೀಕಯಪರು ರಂಧ್ರ ಶಬ್ದವು ರಾಶಿಚಕ್ರದ ೮ನೇ ಸ್ಥಾನಬೋಧಕವಾದ್ದರಿಂದ ೮ ಗಳಿಗೆಗಳೆಂತ ಬರೆದರೂ ಇತರ ಸಂಸ್ಕೃತ ಟೀಕೆಗಳ ಮೇಲಿಂದಲೂ "**अङ्कसंख्यघटिकाः**" ಎಂಬ ಮುಹೂರ್ತ ಶತಕದ ವಚನದಿಂದಲೂ ಇಲ್ಲಿ ೯ನವರಂಧ್ರ ಬೋಧಕವಾದ ರಂಧ್ರ ಶಬ್ದವೇ ಉಪಯೋಗಿಸಲ್ಪಟ್ಟಿರುವದೆನ್ನುವದೇ ಸಮಂಜಸವೆಂದು ತೋರುತ್ತದೆ. ಆದ್ದರಿಂದ **रन्ध्रे**, ಇದರ ಬದಲು **रन्ध्रे** ಎಂತಲೂ, (ಪಜ್ಞ್ತಿ ೧೫) ಟೀಕೆಯಲ್ಲಿ ೮ ಗಳಿಗೆ, ಎಂಬದರ ಬದಲು ೯ ಗಳಿಗೆ ಎಂತಲೂ, (ಪಜ್ಞ್ತಿ ೨೬) ಭಾವಾರ್ಥದಲ್ಲಿ ಎಂಟೆಂಟು ಘಟಿಗಳೂ, ಎಂಬದರ ಬದಲು ಒಂಬೊಂಬತ್ತು ಘಟಿಗಳೂ, ಎಂತಲೂ ವಾಚಕರು ನೆನಪಿನಿಂದ ತಿದ್ದಿಕೊಂಡು ಓದಬೇಕು.

ವಿಷಯಾನುಕ್ರಮಣಿಕೆ.

ಶಿವಸ್ತವರಾಜ.	ಪುಟ	೧-೨
೨ ಊಟವೂ ಉಪೋಷಣವೂ.	"	೨-೫
೩ ವಿಳಮ್ಬ.	"	೬
೪ ಉಗಟುಗಳು.	"	೬
೫ ಸುಗುಣಾಭರಣ.	"	೭
೬ ಮಾಸಮಾಹಾತ್ಮ್ಯ.	"	೪೩-೪೬
೭ ಗೃಹವೈದ್ಯ.	"	೪೯-೫೨
೮ ಬುದ್ಧನ ಜೀವನ ಚರಿತ್ರೆ.	"	೫೯-೬೬
೯ ಮುಹೂರ್ತ ಮಾಧವೀ.	"	೪೯-೫೬

ಸುಬೋಧ.

ಕೇವಲ ಭಾಷಾಭಿಮಾನದಿಂದಲೇ ಹೊರಡಿ---ಸುವ ಈ ಮಾಸಪತ್ರಿಕೆಯಲ್ಲಿ ಆತ್ಮೋದ್ಧಾರ ಪ್ರತಿಪಾದಕ ಸುಂದರ ಲೇಖಗಳು ಪ್ರಕಟವಾಗುವವು. ವಾ. ವ. ೧॥ ರೂ. ಕಾರ್ಯದರ್ಶಿ 'ಸುಬೋಧ' ಬೆಂಗಳೂರು.

विस्फुरद्विशदवर्णशालिनी कामितामितरसार्थदायिनी ॥
आदधात्वभिनवां मुदं नृणां नन्दिनी विबुधनन्दिनी चिरम् ॥

श्री भगवानाह— "न हि कल्याणकृत्कश्चिद्दुर्गतिं तात गच्छति"

॥ शिवस्तवराजः ॥

(चतुर्थः पटलः)

देव रुद्र! तव चरणं दुर्बलस्य ननु शरणम् ॥
अन्यदेव धरणिपतेरन्यदेव कुलसमितेः ॥ १ ॥
पौरुषे फलविरहिते त्वां जनो गिरिश! भजते ॥
किं पुनर्भवति विमुखे पौरुषं कथय भजताम्? ॥ २ ॥
कर्तुरप्रतिहतगिरः पौरुषाच्चलगुणसिद्धम् ॥
ध्यातुरस्खलितमनसः सिद्धिषु स्मरहरपदम् ॥ ३ ॥
पौरुषं विदितमफलं कारुणे पुरमथन! नः ॥
शक्तमीदृशि तु समये श्रद्दधाति तव चरणम् ॥ ४ ॥

पौरुषं यदि कविमतं नाथ तेऽपि पदभजनम् ॥
दैववादपटुवचसो मूकतैव मम शरणम् ॥ ५ ॥
पूर्वजन्मसुकृतबलं दैवमीश निगदति यः ॥
भक्तिपौरुषविरहिणो भावि तस्य रिपुदयितं ॥ ६ ॥
उद्यतस्य तव चरणं संश्रितस्य च पशुपते ॥
पूर्वजन्मसुकृतबलश्रद्धयालमहृदयया ॥ ७ ॥
अस्तु पूर्वभवसुकृतं मास्तु वा भुवननृपते ॥
साम्प्रतं तव पदयुगं संश्रितोऽस्म्यव बिभृज वा ॥ ८ ॥
नास्ति सम्प्रति किमपि किं भूतिमाप्स्यसि किमुततः ॥
भावि जन्मनि वितरणे का प्रसक्तिरवनदने ॥ ९ ॥
दीनबन्धुरिति जगति ख्यातिरस्ति तव महती ॥
मास्तु बन्धुपदमभवज्ञातिवाचकमिह गतम् ॥ १० ॥

प्रणेता— वासिष्ठः काव्यकण्ठो गणपतिशास्त्री.

ಊಟವೂ ಉಪೋಷಣವೂ.

ಅನ್ನವು ಪ್ರಾಣಿಮಾತ್ರದ ಜೀವನಕ್ಕೆ ಮೂಲಭೂತವಾದದ್ದು. ಆದ್ದರಿಂದ ಅದು ಎಲ್ಲರಿಗೂ ಅತಿಶಯ ಇಷ್ಟವಾದದ್ದೆಂಬದು ಸ್ವಾಭಾವಿಕವು. ಜೀವನಾಶ್ರಯವಾದ ಅನ್ನವು ದೇಹವ ಪೋಷಣೆಗೆ ಹ್ಯಾಗೆ ಕಾರಣವಾದದ್ದೋ ಹಾಗೆಯೇ ಉಪೋಷಣ (ಊಟಮಾಡದಿರೋಣ) ವು ದೇಹದ ರಕ್ಷಣೆಗೆ ಕಾರಣವಾದದ್ದಾಗಿರುತ್ತದೆ. ಸಹ್ಯ (ಸರಿಯಾಗಿ ಜೀರ್ಣ) ವಾಗುವಂಥದಿದ್ದರೇನೇ ಅನ್ನವು ಪೋಷಕವಾಗುವದು. ಇಲ್ಲದಿದ್ದರೆ ಅದೇ ಮಾರಕವಾಗುವದು. ಇದರಂತೆ ಉಪೋಷಣವಾದರೂ ಸಹ್ಯವಾದದ್ದಾದರೆ ಪೋಷಕವೂ, ಅಸಹ್ಯವಾದದ್ದಾದರೆ ಮಾರಕವೂ ಆಗುವದು. ಯಾವ ಕಾಲಕ್ಕೆ ಅನ್ನವು ಅಜೀರ್ಣವಾಗಿ ಮಾರಕವಾದದ್ದಾಗುವದೋ ಆ ಕಾಲಕ್ಕೆ ಉಪೋಷಣವು ಅವಶ್ಯವಾಗಿ ಪೋಷಕವಾಗುವದು. ಜನ್ಮಾಗಿ ದಸಿದು ಅನ್ನದ ಆವಶ್ಯಕತೆಯಿದ್ದಾಗ ಮಾತ್ರ ಉಪೋಷಣವು ಮಾರಕವಾಗುವದು.

ಇಷ್ಟವಾದ ಯಾವದೊಂದು ಪದಾರ್ಥವು ವಿಪುಲವಾಗಿ ದೊರೆತರೆ ಅದರಲ್ಲಿ ಅನಾದರವು ಹೆಚ್ಚು; ಇದಲ್ಲದೆ ಅದರ ಉಪಯೋಗವೂ ತೀರ ಅಳತೆಗೆಡುವದು; ಇದು ಸಾಮಾನ್ಯನಿಯಮವು. ಉಂಡುತಿನ್ನುವ ವಿಷಯದಲ್ಲಂತೂ ಮಾನವನು ಈ ನಿಯಮವನ್ನು ಹೆಚ್ಚಿನ ಮಾನದಿಂದ ಕಾದುಕೊಂಡಿದ್ದಾನೆ. ಉಂಡುತಿನ್ನಲು ಕಮ್ಮಿಯಿಲ್ಲವೆಂದಿರುವವರಲ್ಲಿ ಇದನ್ನು ಮೀರಿ ನಡೆಯುವವರು ಬಹಳ ಅಪರೂಪ. ಬೆಳಿಗ್ಗೆ ಒಂದುಬಗೆಯಾದರೆ ಮಧ್ಯಾಹ್ನಕ್ಕೆ ಮತ್ತೊಂದು ಬಗೆ; ಸಂಧ್ಯಾಕಾಲಕ್ಕೆ ಇನ್ನೊಂದು ಬಗೆ; ಮರುದಿನ ಬೆಳಿಗ್ಗೆ ಬೇರೊಂದು ಬಗೆ; ಅಂತೂ ಊಟವು ಬಗೆಬಗೆಯಾಗುತ್ತಿದ್ದರೇ ಏನಾದರೂ ಇಷ್ಟು ಹೊಟ್ಟೆಗೆ ಹೋಗುವದು. ಇದು ಶ್ರೀಮಂತರ ಬಗೆ. ಆದರೆ ಬಡವರಿಗೆ ಈ ಬಗೆಬಗೆಯ ಬಡಿವಾರಗಳೇನೂ ಅವಶ್ಯವಿರುವದಿಲ್ಲ. ಬೆಳಿಗ್ಗೆ ಕಾಸಿಟ್ಟುಕೊಂಡ ಬರೇ ಗಂಜಿಯೇ ಆದರೂ ಮರುದಿನ ಬೆಳಿಗ್ಗೆ ಸಹ ಪಾರಣಕ್ಕೆ ಪಾಯಸವಷ್ಟೇ ರುಚಿಕರವಾಗುವದು. ಹೀಗೆ ರುಚಿಯಾದ ಅನ್ನವೇ ಹಿತಕರವೂ ಆಗುವದೆಂಬದನ್ನು ಮತ್ತೆ ಹೇಳಬೇಕಾದ್ದಿಲ್ಲ. ಇಚ್ಛೆಯಿಲ್ಲದಿದ್ದರೂ ಸಹ ಏನಾದರೂ ಮೂಡಿ ಹೊತ್ತು ಹೊತ್ತಿಗೆ ಉಣ್ಣಲೇ ಬೇಕು; ಆಗಾಗ ಮಿಷ್ಟಾನ್ನವಾಗಲೇಬೇಕು; ಎಷ್ಟೇ ತೃಪ್ತಿಯಾಗಿದ್ದರೂ ಹೊಸದೊಂದು ವಸ್ತು ತಿನ್ನುವ ಬಯಕೆಯಾಯಿತೆಂದರೆ ದುರ್ಲಭ, ತುಟ್ಟಿ, ಅನವಶ್ಯಕ ಇವುಗಳಲ್ಲಿ ಲಕ್ಷ್ಯವಿಲ್ಲದೆ ಅದನ್ನು ಕೊಂಡು ತಿನ್ನಲೇ ಬೇಕು; ಹೀಗೆ ಉಂಡುತಿನ್ನುವದು ತಮ್ಮ ಸೌಭಾಗ್ಯವೆಂದೇ ಹಲವರ ಭಾವನೆಯು. ಸಾಮಾನ್ಯಜನತೆಯಾದರೂ ಇಂಥವನು ಭಾಗ್ಯಶಾಲಿಯೆಂದೇ ಭಾವಿಸಿಕೊಳ್ಳುವದು. ತನಗೆ ಪ್ರಿಯವೆಂದು ಕಂಡ ಈ ದುಶ್ಚಟದಬಗ್ಗೆ ತನ್ನವರೆಂದು ಎರಡನೆಯವರಿಗೆ ಸಹ ಒತ್ತಾಯಪಡಿಸುವದೂ ಒಂದು ಪ್ರೀತಿಯ ಲಕ್ಷಣವೆಂಬ ಗ್ರಹಿಕೆಯೂ ಕೆಲವರಿಗಿರುವದು. ಆದ್ದರಿಂದಲೇ ಈಬಗ್ಗೆ ಅಂಥರಾದ ಕೆಲವರ ಕೃತಿಗಳು ತೀರ ಅವರ್ಣನೀಯವಾದವಿರುವವು. ಹುಡುಗರು ಸುಖದಿಂದ ನಿದ್ದೆಮಾಡಿರುವಾಗ, ಅನ್ನದ ಮುಂದೆ ಕುಳ್ಳಿರಿಸಿದರೂ ಅಪೇಕ್ಷಿಸದಿರುವಾಗ, ಜಡ್ಡು ಬೇನೆ ಬೇಸರಿಕೆಗಳಿಂದ ಬೇಡಬೇಡ, ಎಂದು ಬಾಯ್ದೆರೆಯದೆ ಅಳುತ್ತಲಿರುವಾಗ, ಇತ್ಯಾದಿ ಹಲವು ಪ್ರಸಂಗಗಳಲ್ಲಿ ಸಾಮ ದಾನ ಭೇದ ದಂಡ ಈ ನಾಲ್ಕೂ ಉಪಾಯಗಳನ್ನು ನಡಿಸಿಯಾದರೂ ಅವರನ್ನು ಉಣ್ಣಿಸದೆ ಬಿಡರು. ಇಂಥ ಅನಿಯಮಿತ ಮತ್ತು ಅನವಶ್ಯಕ ಆಹಾರದಿಂದ ಜೀರ್ಣಕೋಶವು ಕೆಟ್ಟುಹೋಗುವದು. ಇದರಿಂದಲೆ ವಿವಿಧವಾದ ಆಪತ್ತಿಗೆ ಈಡಾಗಬೇಕಾಗುವದು. ಅಜೀರ್ಣದಿಂದ ಕೆಡಕಾಗದಹಾಗೆ ಚಿಕಿತ್ಸೆಮಾಡಿಕೊಳ್ಳು-

ತ್ತಲಿರುವದಕ್ಕಿಂತ ತನ್ನ ಪೋಷಣೆಗೆ ಎಷ್ಟು ಅವಶ್ಯವಾದದ್ದೋ ಅಷ್ಟೇ ಅನ್ನವನ್ನು ತಕ್ಕೊಳ್ಳುವದು ಲೇಸು. ಅನವಶ್ಯಕವಾಗಿ ತಿಂದುಹಾಕುವದರಿಂದ ಅನಿಷ್ಟವಾಗುವದೇ ಹೊರತು ಯಾವ ಲಾಭವೂ ಆಗುವದಿಲ್ಲ.

ಕೆಲವರಿಗಂತೂ ಪ್ರಮಾಣ ಮೀರಿ ಉಂಡುತಿಂದು ರೂಢಿಬಿದ್ದುಹೋಗಿರುವದು. ಚೀಲದಂತೆ ಒತ್ತಿ ಅನ್ನ ತುಂಬುವರು. ಉಂಡ ಅನ್ನವು ಯೋಗ್ಯ ಪಚನವಾಗುವದೋ ಇಲ್ಲವೋ? ಆದು ಅವರಿಗೆ ತಿಳಿಯದು. ಹೊಟ್ಟೆಯಲ್ಲಿ ಸ್ವಲ್ಪ ಉರಿಯಾದ ಕೂಡಲೆ ಹಸಿವೆಯಾಗುವದೆಂದು ತಿಳಿದು ಆಹಾರತಕ್ಕೊಳ್ಳುವರು. ಅಜೀರ್ಣಮಾಡುವ (ಗುರುವಾದ) ಅನ್ನವು ಜೀರ್ಣಮುಖವಾದಾಗ ಹೊಟ್ಟೆಯಲ್ಲಿ ಉರಿಯಾದಂತಾಗುವದು. ಪಚನಕ್ಕೆ ತಕ್ಕ ಸಾಮಗ್ರಿಗಳ ಕೊರತೆಯಾದರೆ ಹಾಗೆ ಉರಿಯುಂಟಾಗುವದು. ಅಂಥ ವೇಳೆಯಲ್ಲಿ ಒಳ್ಳೇ ನೀರು ಕುಡಿಯಬೇಕು. ಪಚನಕ್ರಿಯೆಗೆ ಅನುಕೂಲವಾಗುವದು.

ಕೆಲವರ ಕರಳುಗಳು ಭಾರವಾದ ಅನ್ನವನ್ನು ಅಪಕ್ವದಶೆಯಲ್ಲಿಯೇ ಹೊರಗೆ ದೂಡಿಬಿಡುವದು. ಇದು (ಮಲವು) ಹೊಟ್ಟೆಯೊಳಗಿದ್ದಾಗ ದುರ್ಗಂಧವಾಯು ಬರುವದು; ಹೊರಬಿದ್ದಮೇಲೂ ಹೆಚ್ಚು ದುರ್ಗಂಧಿಯಾಗಿಯೇ ಆಗಿರುವದು. ಇಂಥ ಸ್ಥಿತಿಯಿಂದ ಕೆಡಕಾಗದೆ ಎಂದೂ ಇರದು. ಹೀಗಿದ್ದರೂ ಹೆಚ್ಚಿನ ಅನ್ನವುಕ್ಕುವದೆಂಬದು ಒಂದು ದುಷ್ಪಚಟವೇ ಸರಿ.

ಈ ದುಶ್ಚಟವು ಮನುಷ್ಯನ ಸಂಬಂಧವಿಲ್ಲದ ಯಾವ ಪ್ರಾಣಿಗಳಲ್ಲಿಯೂ ಇರುವದಿಲ್ಲ. ಆದ್ದರಿಂದಲೇಅವೆಲ್ಲ ಪ್ರಾಣಿಗಳೂ ನಿರೋಗವಾಗಿರುವವು. ಜೀವುಗಳಿಗೆ ಚಿತ್ರವಿಚಿತ್ರ ರೋಗಗಳೂ, ಚಿಕಿತ್ಸೆಗಳೂ ಇಂದಿಗೂ ಹುಟ್ಟಲಿಲ್ಲ. ಸಾರಾಂಶ ನಿಯತವಾಗಿ ಉಣ್ಣಬೇಕು. "ಅನ್ನವೇ ಜೀವನೌಷಧವು; ಅನ್ನವೇ ಮೃತ್ಯು(ವಿಷ)ವು" ಎಂದು ಹೇಳಿದ ಶ್ರುತಿಯ ಮರ್ಮವೇ ಇದು.

ಈತರದ ಅನಿಯಮಿತ ಆಹಾರ ದುಶ್ಚಟದಿಂದುಂಟಾಗುವ ಆಪತ್ತನ್ನು ಪರಿಹರಿಸಿಕೊಳ್ಳಲು ಉಪೋಷಣವು ಒಂದು ದಿವ್ಯೌಷಧವಾಗಿದೆ; ಇಷ್ಟೇ ಅಲ್ಲ ಉಪೋಷಣದಿಂದ ಅನೇಕತರದ ಲಾಭಗಳಾಗುವವು. ಆದ್ದರಿಂದಲೇ ಉಪೋಷಣವನ್ನು ವ್ರತವಾಗಿ ಆಚರಿಸುವಂತೆ ಶಾಸನಮಾಡಿಟ್ಟ ನಮ್ಮ ಪೂರ್ವಜರಾದಶಾಸ್ತ್ರಕಾರರ ಕೌಶಲ್ಯಾತಿಶಯವು ವರ್ಣನೀಯವಾಗಿರುವದು. ಹೆಚ್ಚು ಪ್ರಮಾಣದಿಂದ ಆಹಾರ ತಕ್ಕೊಳ್ಳುವದು; ಜಡವಾದ ಆಹಾರತಕ್ಕೊಳ್ಳುವದು; ಅವಶ್ಯವಿಲ್ಲದೇ ಮೇಲಿಂದ ಮೇಲೆ ಆಹಾರತಕ್ಕೊಳ್ಳುವದು ಸಹ ಅಕ್ರಮವು; ಅಹಿತಕ್ಕೆ ಮೂಲವು. ಈ ಬಗ್ಗೆ– **अनारोग्यमनायुष्यमस्वर्ग्यं चाति भोजनम्। अपुण्यं लोकविद्विष्टं तस्मात्तत्परिवर्जयेत्॥** (ಅತಿ ಭೋಜನದಿಂದ ಆರೋಗ್ಯವು



ಉಂಟಾಗದು; ಆಯುಷ್ಯವು ಕ್ಷಯವಾಗುವದು; ಸ್ವರ್ಗ (ಸಾತಂತ್ರ್ಯ ಸುಖ) ವು ಸಿಕ್ಕದು; ಪಾಪವೊದಗುವದು; ಇದಲ್ಲದೆ ಜನ ನಿಂದೆಯೂ ಪ್ರಾಪ್ತವಾಗುವದು. ಆದ್ದರಿಂದ ಅತಿಭೋಜನ ಮಾಡಬಾರದು.

ಎಂಬ ಮನು ವಚನವು ಅತ್ಯಂತ ಮನನೀಯವಾದದ್ದಾಗಿದೆ.

ಅನ್ನವು ಮನುಷ್ಯನಿಗೆ ಅವರ್ಜನೀಯವಾದದ್ದು. ಆದ್ದರಿಂದ 'ಉಣ್ಣಬೇಕು' ಎಂದು ಎಲ್ಲಿ ವಿಧಿಸಲಿಲ್ಲ. ಆದರೆ ಅನ್ನದಿಂದ ಹಿತವೇ ಆಗುವಂತೆ, ಉಪವಾಸಮಾಡಬೇಕೆಂದೂ ಮಿತಿಯಿಂದ-ತುಸು ಆಹಾರ ತಕ್ಕೊಳ್ಳಬೇಕೆಂದೂ ಅದು ರುಚಯಾದದ್ದೂ ಪವಿತ್ರವಾದದ್ದೂ ಸ್ನಿಗ್ಧವಾದದ್ದೂ ಇರಬೇಕೆಂದೂ ಇತ್ಯಾದಿ ನಿಯಮಗಳನ್ನು ಹೇಳಿದ್ದಾರೆ. ಈ ನಿಯಮಗಳನ್ನು ಪಾಲಿಸುವವನು ನಿರೋಗಿಯೂ ಸತೇಜನೂ ಸದಾ ಉತ್ಸಾಹಶೀಲನೂ ಸುಖಿಯೂ ಚಿರಾಯುವೂ ಆಗುವನೆಂಬದನ್ನು ಎಲ್ಲರೂ ನಿರ್ವಿವಾದವಾಗಿ ಒಪ್ಪಿಕೊಳ್ಳುವರು. ಆದರೆ ಯಥಾರ್ಥವಾಗಿ ಆ ನಿಯಮಪಾಲನಮಾಡುವಲ್ಲಿ ಮಾತ್ರ ಬಹುಶಃ ಮುಂದರೇ ಆಗಿರುವರು. "ಅಡಿ ಕಟ್ಟಿದರೂ ತೊಡು ಕಟ್ಟದು" (ಶಿಶ್ನೇಂದ್ರಿಯ ನಿಗ್ರಹಮಾಡಬಹುದು; ಆದರೆ ಜಿಹ್ವೇಂದ್ರಿಯ ನಿಗ್ರಹಮಾಡುವದು ದುಸ್ಸಾಧ್ಯವು.) ಎಂದು ಗಾದೆಯಿದೆ. ಸವಿ ಸವಿಯಾದ ಮಿತಿಯಿಲ್ಲದ ಆಹಾರದಿಂದ ಕೆಡಕಾಗುವಷ್ಟು ಇನ್ಯಾವದರಿಂದಲೂ ಆಗಲಾರದು.

ಇದಲ್ಲದೆ ಕೆಲವರು ದುರಾಶೆಯಿಂದ ಹೆಚ್ಚಿಚ್ಚು ಅನ್ನವನ್ನು ಒಮ್ಮೆಲೇ ಇಕ್ಕಿಕೊಳ್ಳುವರು. ತುರುಕಿ ತುರುಕಿ ಅದೂ ಸೇರದೆ ಕೆಡೆಗೆ ಉಂಡ ಎಂದು ಎಲೆಯಲ್ಲಿ ಬಿಸಾಡಿಬಿಡುವರು. ಯಾವ ಜನರು ಹಗಲೆಲ್ಲ ಮೈಮುರಿದು ದುಡಿದರೂ ಸರಿಯಾದ ಕೂಳು ಸಹ ಕಾಣದೇ ಕಷ್ಟದಿಂದ ನಿರ್ವಾಹಮಾಡುವರೋ ಅಂಥವರಿಗೆ ನಿಜವಾಗಿ ಅನ್ನದ ಬೆಲೆ ಗೊತ್ತಿರುವದೇ ಹೊರತು ದೈವಶಾಲಿಗಳಾಗಿ ಕೂತುತಿನ್ನುವವರಿಗೆ ಎಲ್ಲಿಂದ ಗೊತ್ತಾಗಬೇಕು? ಆದರೆ ಹಾಗೆ ಅನ್ನವನ್ನು ಕೆಡಿಸುವದಾದರೂ ಮಹಾಪಾತಕವೆಂದೇ ನಿಸ್ಸಂದೇಹವಾಗಿ ಹೇಳಬಹುದು. "ಅನ್ನಂ ನ ನಿಂದ್ಯಾತ್ | ತದ್ವ್ರತಂ" ಎಂಬ ತೈತ್ತಿರೀಯ ಉಪದೇಶವನ್ನುಲ್ಲಂಘಿಸುವದರಿಂದಲೂ, ಪ್ರಾಣಿಮಾತ್ರಕ್ಕೆ ಜೀವನವಾದ ಅನ್ನವನ್ನು ವ್ಯರ್ಥವಾಗಿ ಹಾಳುಗೆಡುಹುವದರಿಂದಲೂ ಎಂಥ ಪಾಪವೊದಗುವದೆಂಬದನ್ನು ಬೇರೆ ಹೇಳಬೇಕೇ? ಸಾರಾಂಶ— ಹಲವರಲ್ಲಿ ಸಂಕ್ರಾಂತವಾದ ಈ ದುಶ್ಚಟಗಳು ಅವಶ್ಯವಾಗಿ ಎಲ್ಲಕ್ಕೂ ಮೊದಲು ಬಿಡತಕ್ಕಂಥವಾಗಿರುವವು.

ಕಿಟ್ಟಿ ಕಿಟ್ಟಿ

ಜಟಿಲವಿಹವೀಜಗದ ಜೀವನದಿ

ನರನ ಬುದ್ಧಿಯ ವಡೆದು—ಸಿಂಹಧೈರ್ಯವ ತಳೆದು

ನರಸಿಂಹನಾಗಿ ಭಾಳ್ಕು

ಪರಿವಿಡಿ

೧	ನರಸಿಂಹಾವಲೋಕನ	೧
೨	ನಾವು	೪
೩	ಮಂಗನ ಮರದಾಟ	೫
೪	ಕನ್ನಡ ಸಾಹಿತ್ಯದಲ್ಲಿ ಹೊಸತನ	೭
೫	ತಿಳಿಗೇಡಿ	೭
೬	ವಿಮರ್ಶೆಯ ವ್ಯಾಸನಿಂದ	೭
೭	ಕನ್ನಡ ನಾಟಕಗಳಲ್ಲಿ ಹೊಸಹುಟ್ಟು	೧೦
೮	ಹಿಂದುಸ್ತಾನದ ಆಂದಾಜುಪತ್ರಿಕೆ	೧೩
೯	ಮನೆಯ ಮಾತು	೧೬
೧೦	ಮೇಘದೂತ	೧೮
೧೧	ಈ ವೇಷ ಭೂಷಣವೆ!	೧೯
೧೨	ಏಶಿಯಾ ಪರಿಷತ್ತು	೨೦
೧೩	ಒಂದು ಪತ್ರ	೨೩
೧೪	ಪುನರ್ರಚನೆ	೨೪
೧೫	ಸಾಹಿತ್ಯ ಮಂಟಪ	೨೭
೧೬	ರಸಪ್ರಕರಣ... ಬಾಗಿದಬೆ	೨೭
೧೭	ಸಮಗುಣದ ಆಹ	೨೮
೧೮	ಮಾರಾಟಕರ ಕಾ	೨೯

ಹೊದಿಕೆ ಚಿತ್ರ:

ಚಿತ್ರವು ಅರ್ಥಪೂರ್ಣವಾಗಿಹುದೆ? ಈ ಪುಟದ ಮೆಲೆ ಬರೆದ ನಾಲುಗೆಳು ಆ ಚಿತ್ರದಿಂದ ಸೂ
ಲ್ಪಡುವುವೆ? ನಿಮ್ಮ ಒಪ್ಪಿಗೆ-ಇಲ್ಲವೆ ವಿಮರ್ಶೆ ತಿಳಿಸಿರಿ. ಕಲಾವಿದರು ಯಾರಾದರೂ ಅರ್ಥಪೂರ್ಣವು
ನರಸಿಂಹನ ಚಿತ್ರ ತೆಗೆದು ಕಳಿಸಿದರೆ ಅದು ನಮಗೆ ಗ್ರಾಹ್ಯವಾದರೆ ಅವರಿಗೆ ಗೌರವಧನ ಕೊಡುವೆವು.

ಆಗತಾನೆ ತಿದ್ದುಪಡಿ ಪುಟ ೪: ಸಾಕೆನ್ನು ದಿಲ್ಲಿ ಎಂದೂ ಪುಟ ೧೮: ಪದ್ಯ ೩ ಚಿತ್ರಕೂಟದಲ್ಲಿರು
ಎಂದೂ ಓದಿರಿ.

೫—೪—೧೯೪೭

ವಾರ್ಷಿಕ ವಂತಿಗೆ
೫ ರೂ.
ಬಿಡಿ ಪ್ರತಿ
ಆಣೆ ೬

ನ ರ ಸಿ ಂ ಹ

ಸಂಪಾದಕ
ನಾಡಗೀರ ರಘುನಾಥ

ಸಂಪಾದಕ ಮಂಡಲ
ಶೇರಂಗ — ಜಿ. ಕುಲಕರ್ಣಿ — ವಿ. ಎಂ. ಇನಾಮದಾರ — ನೆರಂಗ
ಎಚ್. ಎಸ್. ಪಾಟೀಲ — ಪಿ. ವಿ. ಜೋಶಿ — ಕೃಷ್ಣಮೂರ್ತಿ ಪುರಾಣಿಕ — ಹೆಬ್ಬಳ್ಳಿ ಕೃಷ್ಣಮೂರ್ತಿ

R.No.B.4937

ಪ್ರತಿ ತಿಂಗಳು
೫ನೆಯ
ದಿನಾಂಕಕ್ಕೆ
ಪ್ರಕಟವಾಗುವದು

ಸಂಪುಟ ೫ | ಸಂಚಿಕೆ ೨

ನರಸಿಂಹಾವಲೋಕನ

ಮದ್ರಾಸದ ಮೈಲಿಗೆ

ಮದ್ರಾಸ ಮಂತ್ರಿಮಂಡಳದ ಬಿಕ್ಕಟ್ಟು ಕೊನೆಗೊಮ್ಮೆ ಬಗೆ ಹರಿಯಿತು ಎಂದರೂ ಸಂತೋಷಪಡುವಂತಿಲ್ಲ. ಕಾಂಗ್ರೆಸ ಅಧ್ಯಕ್ಷ ಕೃಪಲಾನಿಯವರಂತೆ ಮದ್ರಾಸದ ಪರಿಸ್ಥಿತಿಗಾಗಿ ಯಾವ ವಿಚಾರವಂತ ದೇಶಾಭಿಮಾನಿಗೂ ಖೇದವಾಗದಿರದು. ಬಿಕ್ಕಟ್ಟು ತಲೆ ಎತ್ತಿದ ರೀತಿ, ಅದನ್ನು ಬಗೆಹರಿದ ರೀತಿ ಇವೆರಡನ್ನೂ ನೋಡಿದರೆ ಕಾಂಗ್ರೆಸು ಹಿಂದಿನಂತೆ ಬಹುಕಾಲ ಸಂಸ್ಥೆಯಾಗಿ ಬಾಳಲಾರದು, ಇಷ್ಟೆ ಅಲ್ಲ, ದೇಶದ ಹಿತದ ದೃಷ್ಟಿಯಿಂದ ಅದಷ್ಟು ಬೇಗ ಆ ಸಂಸ್ಥೆಯ ವಿಸರ್ಜನೆಯಾಗುವುದೊಳಿತು ಎಂದು ಹೇಳ ಬಹುದು. ಶ್ರೀ. ಟಿ. ಪ್ರಕಾಶಂ ಅವರು ಕಾಂಗ್ರೆಸ ಹಿರಿಯರನ್ನು ವಿರೋಧಿಸಿದ ದಿನದಿಂದ ಈ ಬಿಕ್ಕಟ್ಟು ಪ್ರಾರಂಭವಾಯಿತು. ಕಾಂಗ್ರೆಸ ಪಕ್ಷದ ಬಹುಮತ ಸದಸ್ಯರಿಗೆ ಬೇಡಾದ ನಾಯಕನನ್ನು ಹೇರಬೇಕೆಂದು ಆಗ ಹವಣಿಸಿದ ಈ ಹಿರಿಯರು ಬಹುಮತದ ನಾಯಕನೆ ಬೇಕೆಂಬ ಹೊಡ್ಡ ತತ್ತ್ವವನ್ನು ಈಗ ಉಪದೇಶಿಸುವುದು ಅಪಹಾಸ್ಯವಾಗಿದೆ. ಇಂದು ಮದ್ರಾಸ ಶಾಸನಸಭೆಯ ಕಾಂಗ್ರೆಸ ಪಕ್ಷದಲ್ಲಿ ಹುಟ್ಟಿದ್ದ ಒಡಕಿಗೆ ಅನೇಕ ಕಾಂಗ್ರೆಸ 'ಹಿರಿಯ'ರೆ ಹುಟ್ಟುಗೊಟ್ಟರೆಂಬುದನ್ನು ನಾವೆ ಮರೆಯದಿರೋಣ. ಇಡಿಯ ಒಂದು ವರ್ಷ ವೈಯಕ್ತಿಕ ದ್ವೇಷದ ಕುಹಕರಿಗೆ ಕಿವಿಗೊಟ್ಟು ಕೊನೆಗೆ ಪ್ರಜಾಪ್ರಭುತ್ವದ ಉಪನ್ಯಾಸನನ್ನು ಪಠಿಸಿದರೆ ಯಾವ ಬುದ್ಧಿವಂತನೂ ಮೋಸಹೋಗಲಾರನು.

ಇದು ಆತ್ಮಪ್ರಭುತ್ವ

ಯಾವ ಕಾರಣಕ್ಕಾಗಿ ಶ್ರೀ. ಟಿ. ಪ್ರಕಾಶಂ ಇವರು ರಾಜೀನಾಮೆಯನ್ನು ಕೊಡುವ ಪ್ರಸಂಗ ಬಂದಿತು? ಬಹುಮತದವರ ವಿಶ್ವಾಸವಿಲ್ಲ ಎಂಬ ಪ್ರಜಾಪ್ರಭುತ್ವದ ತತ್ತ್ವಕ್ಕಾಗಿ. ತತ್ತ್ವ! ಮದ್ರಾಸ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಕೊಳೆಯ ಸಂದರ್ಭದಲ್ಲಿ 'ತತ್ತ್ವ' ಎಂಬ ಶಬ್ದದ ದುರುಪಯೋಗವಾಗುವುದು. ಇಡಿಯ ಒಂದು ವರ್ಷದ ಆಡಳಿತೆಯಲ್ಲಿ ಖಾದೀ ಪ್ರಚಾರ, ಪಾನ ನಿರೋಧ, ಗ್ರಾಮಪುನರ್ಘಟನೆ ಮೊದಲಾಗಿ ಕಾಂಗ್ರೆಸದ ಧ್ಯೇಯ ವನ್ನೇ ಶ್ರೀ. ಪ್ರಕಾಶಂ ಅವರು ಅಜಗಣಿಯಲ್ಲಿ ಕಂದಿದ್ದಾರೆ. ಇದಕಾಗಿ ಇವರಲ್ಲಿ ಅವಿಶ್ವಾಸ! ಕಳೆದ ಸಲ ನಾವು ವಿವೇಚಿಸಿದ ಸ್ವಭ್ರಾಷ ಕೊಳೆಯ ಅತಿರೇಕ ಇಲ್ಲಿ ಎದ್ದು ಕಾಣುತ್ತಲಿದೆ! ಬಹುಮತದ ಹೆಸರಿನಿಂದ ಎಂತಹ ಘೋರ ಅನ್ಯಾಯ ನಡೆಯಬಹುದೆಂಬುದರ ದೃಷ್ಟಾಂತ ಇಲ್ಲಿದೆ. ಇಂದು 'ಬಹುಮತ ತತ್ತ್ವ'ಕ್ಕೆ ಪ್ರೋತ್ಸಾಹಕೊಟ್ಟು ಕಾಂಗ್ರೆಸು ಮಿಕ್ಕ ಪ್ರಾಂತಿಕ ಸರಕಾರಗಳಲ್ಲೂ ಒಡಕು ಹುಟ್ಟುವುದು ಸುಲಭವಾಗುವಂತೆ ಮಾಡಿದೆ. ಪ್ರಾಂತಿಕ ಇಲ್ಲವೆ ಜಾತೀಯ ಇಲ್ಲವೆ ವೈಯಕ್ತಿಕ ಕಾರಣಗಳಿಗಾಗಿ ೧೦೦ ಜನರಲ್ಲಿ ೫೧ ಜನರು ಯಾವ ಕಾರಣವನ್ನೂ ತೋರಿಸದೆ ಅವಿಶ್ವಾಸ ಗೊತ್ತುವಳಿಯನ್ನು ಸ್ವೀಕರಿಸಿದರೆ ಸಾಕು; ಉರುಳಿತು ಕಾಂಗ್ರೆಸ ಮಂತ್ರಿಮಂಡಳ. ನಿಜವಾದ ತತ್ತ್ವಾಭಿಮಾನಿಯು ಈ ಪರಿಸ್ಥಿತಿಗಾಗಿ ಅಧಿಕಾರದಿಂದ ದೂರ ಉಳಿದು ಕಾಂಗ್ರೆಸದ ಹೆಸರಿನಿಂದ ಕಿಡಿಗೇಡಿಗಳೇ ಹೆಚ್ಚಾಗಿ ರಾಜ್ಯ ನಡೆಸಬಹುದಾಗಿದೆ.

ವಿಶ್ವಾಸ ತಪ್ಪಿದೆ

ಇಂದು ಕಾಂಗ್ರೆಸು ಅನಾಯಕವಾಗಿ, ಅತಂತ್ರವಾಗಿ ತಪ್ಪು ದಾರಿಯನ್ನು ಹಿಡಿದಿದೆಯಲ್ಲದೆ, ತನ್ನದು ತಪ್ಪು ದಾರಿ ಎಂಬ ಅರಿವು ಕೂಡ ಅದಕ್ಕಿಲ್ಲ ಎಂಬುದನ್ನು ಇನ್ನೊಂದು ದೃಷ್ಟಾಂತದಿಂದ ನೋಡಬಹುದು. ಪಂಜಾಬದಲ್ಲಿ ಜಾತೀಯ ಗಲಭೆ ಎದ್ದು, ಪ್ರಾತಿನಿಧಿಕ ಮಂತ್ರಿಮಂಡಳ ಅಶಕ್ಯವೆಂಬಾಗ, ಗವರ್ನರರೆ ಆಳಿಕೆ ಅನಿವಾರ್ಯವಾಯಿತಷ್ಟೆ? ಇದರ ಬಗ್ಗೆ ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿಯು ಒಂದು ನಿರ್ಣಯವನ್ನು ಸ್ವೀಕರಿಸಿತು; ಪಂಜಾಬದಲ್ಲಿ ಜಾತಿಗನುಸಾರವಾಗಿ ಮುಸಲ್ಮಾನ ಮತ್ತು ಮುಸಲ್ಮಾನೇತರ ಎರಡು ವಿಭಾಗಗಳಾಗಬೇಕೆಂದು ಸಾರಿತು. ಭಾರತವನ್ನು ವಿಚ್ಛೇದಿಸಿ ಪಾಕಿಸ್ತಾನವನ್ನು ಬೇಡುವ ಮುಸ್ಲಿಂ ಲೀಗಿಗೆ ಬುದ್ಧಿಗಲಿಸಲು, ವಿಚ್ಛೇದನಕ್ಕೆ ಇತಿ-ಮಿತಿ ಇಲ್ಲ ಎಂದು ತೋರಿಸಲು ಕಾಂಗ್ರೆಸು ಈ ನಿರ್ಣಯವನ್ನು ಸ್ವೀಕರಿಸಿದೆ ಎಂದು ಕೆಲವರು ಸಮಾಧಾನವನ್ನು ತಂದುಕೊಳ್ಳಬಹುದು. ಆದರೆ ಆವರು ಕಾಂಗ್ರೆಸ ಸಂಸ್ಥೆಯ ಹೊಣೆಯನ್ನು ಮರೆತಂತೆ ತೋರುತ್ತಿದೆ. ಕಾಂಗ್ರೆಸು ಇಡಿಯ ದೇಶದ ಸಂಸ್ಥೆಯು; ರಾಷ್ಟ್ರೀಯತೆಯಿಂದ ಜಾತೀಯತೆಯನ್ನು ಹೊಡೆದೋಡಿಸುತ್ತಿರುವ ಸಂಸ್ಥೆಯು; ಸಾವಿರಾರು ಮುಸಲ್ಮಾನರ, ಮುಸ್ಲಿಂ ಸಂಸ್ಥೆಗಳ ವಿಶ್ವಾಸವನ್ನು ಪಡೆದುಕೊಂಡ ಸಂಸ್ಥೆಯು; ಇಂದು ಆ ಸಂಸ್ಥೆಯು ಅಧಿಕೃತವಾಗಿ ಜಾತೀಯ ದೃಷ್ಟಿಯಿಂದ ಪ್ರಾಂತರಚನೆಯನ್ನು ನಡೆಸಿದರೆ? ಈಗ ಈ ಕಾರಣಕ್ಕಾಗಿ ಅಖಿಲ ಭಾರತ ಮೊಮಿನ ಸಂಸ್ಥೆಯು, ಮಜಲಿಸ್-ಎ-ಅಹರಾರ್ ಸಂಸ್ಥೆಯು (ಇವೆರಡೂ ಮುಸ್ಲಿಂ ಸಂಸ್ಥೆಗಳು) ಕಾಂಗ್ರೆಸದ ನೇತೃತ್ವವನ್ನು ಬಿಟ್ಟುಕೊಡಬೇಕೆಂದು ನಿರ್ಧರಿಸಿವೆ. ಯಾಕೆಂದರೆ ಕಾಂಗ್ರೆಸಿಗೇ ಮುಸ್ಲಿಮರು ಬೇಡಾದರೆ ಅವರಿಂದಲೂ ಆ ಸಂಸ್ಥೆಯಲ್ಲಿ ವಿಶ್ವಾಸವನ್ನಿಡುವುದು ಹೇಗೆ?

ಸುಳ್ಳು ಸಮಾಧಾನ

ಕಾಂಗ್ರೆಸ ಸಂಸ್ಥೆಯ ಆಚ್ಚುಕಟ್ಟು ನಡಿಲಾಗುತ್ತಿದೆ ಎಂದು ಟೀಕೆ ಮಾಡುವಾಗ ಒಂದು ಮಾತನ್ನು ನಾವು ಮರತಿಲ್ಲ. ಸಧ್ಯಕ್ಕೆ ರಾಜಕೀಯ ಸ್ವಾತಂತ್ರ್ಯ ಮತ್ತು ಹೊಸ ಘಟನೆ ಆಸ್ತಿತ್ವದಲ್ಲಿ ಬರಲಿದ್ದು, ಆ ಮೇಲೆ ಕಾಂಗ್ರೆಸ ಸಂಸ್ಥೆಯೆ ಉಳಿಯಲಿಕ್ಕಿಲ್ಲ. ಅದಕಾಗಿ ಇಂದು ಆ ಬಗ್ಗೆ ಹಿರಿಯರು ಲಕ್ಷ್ಯ ವ್ಯೆಸುತ್ತಿರಲಿಕ್ಕಿಲ್ಲ ಎಂಬುದು. ಇದು ನಿಜ. ಆದರೆ ಕಾಂಗ್ರೆಸು ಸಂಸ್ಥೆಯ ರೂಪದಲ್ಲಿ ಉಳಿಯದಿದ್ದರೂ ರಾಜಕೀಯ ಮುಂದಾಳುತನವು ಇಂದಿನ ಕಾಂಗ್ರೆಸ ಮುಂದಾಳುಗಳಿಗೆಯು ಉಳಿಯುವುದು. ಹೀಗಿರುವಾಗ ಕಿಡಿಗೇಡಿಗಳಿಗೆ ಪ್ರೋತ್ಸಾಹ ಕೊಟ್ಟರೆ ಅವರದೆ ಮುಂದಾಳುತನ ಉಳಿಯಗೊಟ್ಟಂತಾಗಲಿಲ್ಲವೆ? ಪಂಜಾಬದಲ್ಲಿ ಅಧಿಕಾರ ಲಾಲಸೆಯಿಂದ ಮಂತ್ರಿಮಂಡಳ ಉರುಳಿಸಿದ ಮುಸ್ಲಿಂ ಲೀಗ ಪಕ್ಷಕ್ಕೂ ಆದೇ ಕಾರಣದಿಂದ ಮದ್ರಾಸ ಮಂತ್ರಿಮಂಡಳವನ್ನು ರುಳಿಸಿದ 'ಅತಿ-ಪ್ರಕಾಶ'ರಿಗೂ ನಮ್ಮ ದೃಷ್ಟಿಯಿಂದಂತೂ ಯಾವ ವ್ಯತ್ಯಾಸವೂ ಇಲ್ಲ.

ನಿಜವಾದ ದಾರಿ

ಮದ್ರಾಸ – ಪಂಜಾಬಗಳಲ್ಲಿಯ ಕುಚೇಷ್ಟೆಗೆ ಬೇರೊಂದು ಕಾರಣವೂ ಇದೆ. ಪಂಜಾಬದಲ್ಲಿ ವೈಯಕ್ತಿಕ ರಾಜಕಾರಣವು ಜಾತೀಯ ಸೋಗನ್ನು ಹಾಕಿಕೊಂಡಿದೆ, ಮದ್ರಾಸದಲ್ಲಿ ವೈಯಕ್ತಿಕ ರಾಜಕಾರಣವು ಪ್ರಾಂತಿಕ ಸೋಗನ್ನು ಹಾಕಿಕೊಂಡಿದೆ. ಒಂದು ಕಡೆ ಜಾತೀಯತೆಯನ್ನು ಹೊಡೆದೋಡಿಸಬೇಕು; ಇನ್ನೊಂದು ಕಡೆ ಪ್ರಾಂತಾಭಿಮಾನದ ದುರುಪಯೋಗಕ್ಕೆ ಅವಕಾಶ ದೊರಯದಂತೆ ಮಾಡಬೇಕು. ಪ್ರಾಂತಾಭಿಮಾನದ ದುರುಪಯೋಗವಾಗದಂತೆ ನೋಡಲು ಭಾಷಾವಾರ ಪ್ರಾಂತರಚನೆಯೊಂದೇ ಉಪಾಯವಾಗಿದೆ. ತಮಿಳು ಮತ್ತು ಆಂಧ್ರ ಪ್ರಾಂತಗಳು ಪ್ರತ್ಯೇಕವಾಗಿದ್ದಲ್ಲಿ ಪ್ರಾಂತಾಭಿಮಾನದ ರಕ್ಕರಿಗೆ ಅವಕಾಶ ದೊರೆಯುತ್ತಿರಲಿಲ್ಲ; ಆದರಂತೆಯೆ ಕರ್ನಾಟಕಪ್ರಾಂತ ಪ್ರತ್ಯೇಕವಾಗಿದ್ದಲ್ಲಿ ನಮ್ಮಲ್ಲೂ ಪ್ರಾಂತಾಭಿಮಾನದ ದುರುಪಯೋಗ, ಅದರಿಂದ ಇಡಿಯ ಮುಂಬಯಿ ಪ್ರಾಂತದ ಮೇಲೆ ದುಷ್ಪರಿಣಾಮ ತಪ್ಪುವಂತಿಲ್ಲ. ಪಂಜಾಬದಲ್ಲಿ ಜಾತಿಯಿಂದ ಭಿನ್ನರಾಗಿದ್ದ ವರು ಭಾಷೆಯಿಂದ ಇದು ವರೆಗೂ ಒಂದಾಗಿದ್ದುದು ನಮ್ಮ ಸುದೈವ. ಜಾತಿಗನುಸಾರವಾಗಿ ಪ್ರಾಂತಪುನರ್ರಚನೆ ನಡೆಸಿದಲ್ಲಿ ಬಂಗಾಲದ ವಿಭಜನೆಯು ಅನಿವೇಕವನ್ನೂ ಒಪ್ಪಬೇಕಾಗುವುದು. ದೇಶದ ಅಹಿತ ಅನಿವಾರ್ಯವಾಗುವುದು.

ಕನ್ನಡಿಗರ ಕರ್ತವ್ಯ

ಇಂದು ಕರ್ನಾಟಕದಲ್ಲಿ ಈ ಮಾತುಗಳನ್ನು ನಾವು ಹೆಚ್ಚಾಗಿ ಗಮನಿಸಬೇಕಾಗಿದೆ. ರಾಜಕೀಯ ಜಾಗೃತಿಯು ನಮ್ಮಲ್ಲಿ ಕಡಿಮೆ ಎಂದೇ ಹೇಳಬಹುದು. ಕಾಂಗ್ರೆಸದ ಚಳವಳಗಳಲ್ಲಿ ನಾವು ಮುಂದಾಗಿದ್ದರೂ ರಾಜಕಾರಣದ, ರಾಜಕೀಯ ತತ್ತ್ವಗಳ ಜ್ಞಾನ ಸಾಮಾನ್ಯ ಕನ್ನಡಿಗನಿಗ ಸಾಕಷ್ಟು ಇಲ್ಲ. ಆದಕ್ಕೆಂದೇ ಕರ್ನಾಟಕದಲ್ಲಿ ರಾಜಕೀಯ ದೃಷ್ಟಿಯಿಂದ ಪಕ್ಷಗಳಿಲ್ಲ; ಕಾಂಗ್ರೆಸ ಚಟುವಟಿಕೆಗಳಲ್ಲಿ ಬುದ್ಧಿಗಿಂತ ಅಂಧಶ್ರದ್ಧೆ, ಸ್ವಾರ್ಥ ಇವುಗಳ ಪ್ರಾಬಲ್ಯ ಹೆಚ್ಚು. ಕರ್ನಾಟಕವು ಪ್ರತ್ಯೇಕ ಪ್ರಾಂತವಾಗುವುದು ಖಂಡಿತವಾಗಿದೆ. ಇಂದಿನಿಂದಲೆ ನಾವು ಸಿದ್ಧರಾಗಬೇಕು. ಕರ್ನಾಟಕದ ಆರ್ಥಿಕ, ಔದ್ಯೋಗಿಕ ಮತ್ತು ಸಾರ್ವಜನಿಕ ಪ್ರಗತಿಯ ಸಮಸ್ಯೆಗಳ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ಮುಂದಿಸಿ ಲೋಕಮತವನ್ನು ಸೃಷ್ಟಿಯಿಂದ, ರಾಜಕೀಯ ಪಕ್ಷಗಳನ್ನು ಕಟ್ಟಿಕೊಳ್ಳಬೆಕ್ಕು. ಹೀಗಾಗದಿದ್ದಲ್ಲಿ — ಯಾರು ನಮ್ಮ ಪ್ರಾಂತ ರಾಜ್ಯವನ್ನು ನಡೆಸಿದರು ದೇವರ ನಮ್ಮನ್ನು ಕಾಪಾಡಬೇಕು.

ಜೆನಿವಾ ಪರಿಷತ್ತು

ಇವೆ ತಿಂಗಳು ಹತ್ತನೆಯ ದಿನಾಂಕಕ್ಕೆ ಸ್ವಿತ್ಜರಲಂಡದ ಜೆನಿವಾನಲ್ಲಿ ಅಂತರ ರಾಷ್ಟ್ರೀಯ ವಾ ವಾರ ಪರಿಷತ್ತು ಸೇರುವುದು. ಪರಿಷತ್ತಿನಲ್ಲಿ ಭಾಗವತ್ತಿನಲ್ಲಿಯು ೧೬ ರಾಷ್ಟ್ರಗಳು ಭಾಗವಹಿಸುವವು. ಈ ಪರಿಷತ್ತಿನ ಪೂರ್ವಭಾವಿಯಾಗಿ ಒಂದು 'ಅನೌಪಚಾರಿಕ' ಸಮ್ಮೇಲನ ಲಂಡನದಲ್ಲಿ ಕೂಡಿದೆ. ಜೆನಿವಾ ಪರಿಷತ್ತು ಈ ವಿಷಯದಲ್ಲಿಯ ಎರಡನೆಯ ಮಟ್ಟ. ಇದೆ ಮುಖ್ಯವಾದುದು. ಇಲ್ಲಿ ಸ್ವೀಕೃತವಾದ ವಿಷಯಗಳನ್ನು ಮುಂದೆ ಸೇರಲಿರುವ ಮಹಾಪರಿಷತ್ತಿನಲ್ಲಿ ಕ್ರಮಬದ್ಧವಾಗಿ ಒಪ್ಪಿಗೆ ಪಡೆವುವು. ಆಗ ಅವುಗಳಿಗೆ ಅಂತರರಾಷ್ಟ್ರೀಯ ಅಧಿಕಾರ ಬರುವುದು.

ಈ ಜೆನಿವಾ ಪರಿಷತ್ತಿಗೆ ಭಾರತವೂ ಆಮಂತ್ರಿತವಾಗಿದೆ. ಇದರವರೆಗೆ ನಡೆಯುತ್ತಿದ್ದ ಅಂತರರಾಷ್ಟ್ರೀಯ ಸಭೆಸಮ್ಮೇಲನಗಳಲ್ಲಿ ಭಾರತವು ಆಗಾಗ ಭಾಗವಹಿಸುತ್ತಿದ್ದರೂ ಭಾರತದ ಮಾತಿಗೆ ಬೆಲೆ ಜನರ ಬೆಂಬಲ, ಅಧಿಕಾರ ವಿರದೆ, ಬ್ರಿಟಿಶ್ ಸರಕಾರದ ದನಿಯಲ್ಲೆ ತನ್ನದೊಂದು ದನಿಯನ್ನು ಸೇರಿಸುತ್ತಿತ್ತು. ಈ ಸಲ ಹಾಗಿಲ್ಲ. ಭಾರತದನಿ 'ಭಾರತದನಿ'ಯೆಂದೆ ಗುರುತಿಸಲಾಗುವುದು ಅಧಿಕ ಜನರ ಬೆಂಬಲವಿದೆ. ನಿಜವಾಗಿ ನಮ್ಮ ಹಿತಸಂಬಂಧವನ್ನು ಕಾಯಿದುಕೊಳ್ಳುವುದಕ್ಕೆ ಅಸ್ಪದವಿದೆ. ನಮ್ಮ ಪಕ್ಷವನ್ನು ನಾವು ನಮ್ಮ ದೇಶದ ಹಿತದ ದೃಷ್ಟಿಯಿಂದ ಸಮರ್ಥಿಸಲು ಅಧಿಕಾರವಿದೆ. ಈ ಸಂಗತಿಯು ಮುಖ್ಯವೂ ಆಗಿದೆ; ಮಹತ್ತ್ವದ್ದೂ ಆಗಿದೆ.

ಅಲ್ಲಿ ನಡೆಯುವುದೇನು ಎಂಬುದನ್ನು ಮೊದಲು ತಿಳಿಯಬೇಕು. ಯುದ್ಧವು ಮುಗಿದು ಎಲ್ಲ ರಾಷ್ಟ್ರಗಳು ಈಗ್ಗೆ ಪುನರ್ರಚನೆಯಲ್ಲಿ ಆಸ್ಥೆಯಿಂದ ತೊಡಗಿರುವುದು ತಿಳಿದ ಮಾತ್ರ. ಈ ಯುದ್ಧದ ಅನಿವಾರ್ಯ ಪರಿಣಾಮವಾಗಿ ಇಂದು ಇಡಿಯ ಜಗತ್ತು ಒಂದು ಕುಟುಂಬದಂತೆಯಾಗತೊಡಗಿದೆ. ಒಬ್ಬರು ಸುಖವಾಗಿ ಬಾಳಬೇಕಾದರೆ ಇನ್ನೊಬ್ಬರ ನೆರವು–ಸಹಾನುಭೂತಿ, ಸಹಕಾರ ಇವು ಅಗತ್ಯವಾಗಿವೆ. ಆದಕ್ಕಾಗಿ, ಎಲ್ಲ ರಾಷ್ಟ್ರಗಳು ಒಂದೆಡೆ ಸೇರಿ ತಮ್ಮ ಸದ್ಯದ ಪರಿಸ್ಥಿತಿಯನ್ನು ವಿವರಿಸಿ ತಮ್ಮ ಆಗತ್ಯತೆಯನ್ನು ಮಂಡಿಸಿ, ಯಾವ ರಾಷ್ಟ್ರದಿಂದ ಆದನ್ನು ಪೂರೈಸಿಕೊಳ್ಳಬಹುದೆಂಬುದನ್ನು ವಿಚಾರಿಸಬೇಕಾಗಿದೆ. ಇದು ಜಾಗತಿಕ ಪುನರ್ರಚನೆಗೆ ಅನುಕೂಲವನ್ನು ಕಲ್ಪಿಸುವುದು. ಇದರಿಂದ ಪ್ರತಿಯೊಂದು ರಾಷ್ಟ್ರವೂ ತನ್ನ ಭವಿಷ್ಯತ್ತನ್ನು ಉಜ್ವಲಗೊಳಿಸಿಕೊಳ್ಳಬಹುದಾಗಿದೆ; ಸರಿಯಾಗಿ ಎಲ್ಲಿಯೂ ಹೊಂದಿಕೆಯಾದರೆ ನಾನಾ ಜಗತ್ತು ಒಳ್ಳೆಯ ಕಾಲವನ್ನು ನಿರೀಕ್ಷಿಸಲು ಏನೂ ಅಡ್ಡಿಯಿಲ್ಲ.

ಪ್ರತಿಯೊಂದು ರಾಷ್ಟ್ರವೂ ತನ್ನಿಂದಾದ ನೆರವನ್ನು ಕೊಟ್ಟು ಇನ್ನಿತರರಿಂದ ತನಗೆ ಬೇಕಾದ್ದನ್ನು ನೆರವು ಪಡೆಯುವುದು ಅಷ್ಟೇನು ಸುಲಭ ಕೆಲಸವಲ್ಲ. ಇದುವರೆಗೆ ಇದ್ದ—ಇನ್ನೂ ಇರಬಹುದು—ಸಾಂಶಕವೃತ್ತಿಯ ರಾಜಕಾರಣದಲ್ಲಿ ರಥ ಮುಂದೂಡುವುದು ಹೊಣೆಗಾರಿಕೆಯುತ್ತಾದಷ್ಟೆ—ಚಾತಾಕ್ಷತನದ್ದೂ ಆಹುದು. ನಮ್ಮ ದೇಶದಿಂದ ಭಾರತ ಸರಕಾರದ ವ್ಯಾಪಾರ್ಯ ಮಂತ್ರಿ ನುತ್ತ ಅವರ ಕಾರ್ಯದರ್ಶಿಗಳು; ಇಬ್ಬರು ಕೇಂದ್ರಶಾಸನ ಸಭೆಯ ಸದಸ್ಯರು; ಇಬ್ಬರು ಪ್ರವೀಣರು; ಇಬ್ಬರು ವರ್ತಕ ಸಂಘದ ಪ್ರತಿನಿಧಿಗಳು. ಇಷ್ಟು ಜನರು ಪರಿಷತ್ತಿಗೆ ಹೋಗುವರು. ಇವರೆಲ್ಲರೂ ಭಾರತದ ಬೆಳವಣಿಗೆಯ ದೃಷ್ಟಿಯನ್ನೆ ಇಟ್ಟುಕೊಂಡು ಕಾರ್ಯ ಯಶಸ್ವಿಯಾಗಿ ಮಾಡಿಕೊಂಡು ಬರುವರೆಂದು ನಾವು ಆಶಿಸುತ್ತೇವೆ.

ಏಶಿಯಾ ಪರಿಷತ್ತು

ಕಳೆದ ತಿಂಗಳು ೨೩ ನೆಯ ದಿನಾಂಕಕ್ಕೆ ಯುಗಾದಿಯ ಶುಭ ಮುಹೂರ್ತದಲ್ಲಿ ಅಂತರ ಏಶಿಯ ಸಂಬಂಧ ಬೆಳೆಸುವುದಕ್ಕಾಗಿ ದಿಲ್ಲಿಯಲ್ಲಿ ಪರಿಷತ್ತು ಸೇರಿತು. ಇದು ಏಶಿಯದ ಏಳ್ಗೆಯನ್ನು ಸಾಧಿಸುವುದಕ್ಕೆಂದು ಇದೆ. ಇದುವರೆಗೆ ಯುರೋಪ್ಕೀಯರಿಂದ ದೊಚಿಸಿಕೊಳ್ಳಲ್ಪಟ್ಟ ಏಶಿಯದ ರಾಷ್ಟ್ರಗಳು ಒಂದಾಗಬಯಸಿವೆ. ಹೆಚ್ಚು ಕಷ್ಟಗಳಿಗೀಡಾದ ಭಾರತವು ಹೆಚ್ಚು ತೀಕ್ಷ್ಣತೆಯಿಂದ ಪ್ರತಿಭಟನೆ ಮಾಡಬೇಕಾಗಿ ಬಂದುದರಿಂದ ಹೆಚ್ಚಿನ ಅನುಭವ ಪಡೆದಿದೆ. ಈ ಅನುಭವಕ್ಕಾಗಿ ಎಲ್ಲರೂ ಭಾರತವನ್ನೆ ಮುಂದಿನ ಮಾರ್ಗಕ್ಕಾಗಿ ನೋಡುತ್ತಿದ್ದಾರೆ. ಅನೇಕ ದೃಷ್ಟಿಯಿಂದ ಇಂದು ಭಾರತವು ಜಗತ್ತಿನ ಲಕ್ಷ್ಯವನ್ನೂ ಕೇಂದ್ರೀಕರಿಸಿರುವುದರಿಂದ ನುಂದಿನ ಘಟನೆಗಳಿಗೆಲ್ಲ ಭಾರತವೆ ಕೇಂದ್ರವಾಗಿದೆ. ಅಲ್ಲದೆ, ಭಾರತವು ಜಗತ್ತಿಗೆ ಶಾಂತಿ ಪಾಠವನ್ನು ಕೊಡುವ ಮಟ್ಟದಲ್ಲಿಯೂ ಇದೆ. ಇವೆಲ್ಲ ಕಾರಣಗಳಿಗಾಗಿ ಎಲ್ಲರೂ ಭಾರತದ ಕಡೆಗೆ ನೋಡುತ್ತಿದ್ದಾರೆ ಮಾರ್ಗದರ್ಶನಕ್ಕಾಗಿ. ಇದರಿಂದ ನಮಗೆ ಹೆಚ್ಚು ಅಭಿಮಾನವೆನ್ನಿಸುತ್ತಿದ್ದರೂ ಅದೇನು ಕಡಿಮೆಯ ಹೊಣೆಗಾರಿಕೆಯ ವಿಷಯವಲ್ಲ. ಅದನ್ನೆಲ್ಲ ವಹಿಸಿಕೊಳ್ಳಲು ಭಾರತದ ಧುರೀಣದಲ್ಲಿ ಶಕ್ತಿಯೂ ಇದೆ; ಆತ್ಮವಿಶ್ವಾಸವೂ ಇದೆ. ಈ ಪರಿಷತ್ತು ಭಾವೀ ಏಶಿಯದ ಏಳ್ಗೆಗೆ ಸಹಕಾರಿಯಾಗಲು ಗಟ್ಟಿಯಾದ ಹೆಜ್ಜೆಯೆಂದು ನನುಗೆನ್ನಿಸುತ್ತದೆ. (ಹೆಚ್ಚಿನ ವಿವರಗಳನ್ನು ಬೇರೆಕಡೆಗೆ ಕೊಟ್ಟಿದೆ.)

ನಾವು

ಈ ಸಲದಿಂದಲೆ ಹಿಂಗ್ಗಿದ್ದೇವೆ. ೩೨ ಪುಟಗಳಿಂದ ನಿಮ್ಮೆಡೆಗೆ ಬರುತ್ತಿದ್ದೇವೆ. ಇದೆವರೆಗೆ ತೋರಿಸಿದ ಆದರ–ಅಭಿಮಾನಗಳಿಂದ 'ನರಸಿಂಹ' ನನ್ನು ಇನ್ನು ಮುಂದೆ ಬರಮಾಡಿಕೊಳ್ಳುವಿರೆಂದು ಆಶಿಸುತ್ತೇವೆ. ನವೀಕರಣ ಕಾರ್ಯ ಹೆಚ್ಚಾಗಿ ಮಾಡಿಸಿಕೊಳ್ಳುವುದು ನಿಮ್ಮನ್ನೆ ಕೂಡಿದೆ. ನೀವು ಕೊಡುವ ಸಹಕಾರವೇ ನಮ್ಮ ಮೂಲಧನ; ಅದೇ ನಮ್ಮ ಉತ್ಸಾಹ ಶಕ್ತಿ. ನಿಮ್ಮ ಸಕ್ರಿಯ ಸಹಕಾರ ಸೋನೆಯಾಗಿ ಸಾಗಿಬರುವುದು ಎಂದು ಆಶಿಸುತ್ತೇವೆ. ಪುಟಗಳು ೩೨ ಆದುದರಿಂದ ಬೆಲೆಯನ್ನು ಹೆಚ್ಚಿಸಿದ್ದೇವೆ. ಈ ಮೊದಲೆ ತಿಳಿಸಿಯೂ ಇದ್ದೇವೆ. ಈ ಮೊದಲು ಕೊಟ್ಟ ಸೂಚನೆಯಿಂದ ಅನೇಕರು ತಮ್ಮ ವಂತಿಗೆ ಹಣ ಕೊಟ್ಟು ಕಳಿಸಿದ್ದಾರೆ. ಅವರೆಲ್ಲರಿಗೆ ನಾವು ಉಪಕೃತರಾಗಿದ್ದೇವೆ. ಕೊಟ್ಟ ಅವಧಿಯಲ್ಲಿ ವಂತಿಗೆ ಹಣ ಕೊಡದೆ ಇದ್ದವರು ಇನ್ನು ಮುಂದೆ ಹೆಚ್ಚಿಸಿದ ವಂತಿಗೆ ಹಣವನ್ನೆ ಕೊಡಬೇಕಾಗುವುದು.

ಮತ್ತೆ ಜಾಹೀರಾತಿನ ವಿಷಯ. ಜಾಹೀರಾತು ಅನ್ನೇಕೆ ಸ್ವೀಕರಿಸುವುದಿಲ್ಲವೆಂದು ನಮ್ಮ ಅನೇಕರು ಕೇಳಿದರು. ನಮ್ಮ ಉತ್ತರ ಇಂತಿದೆ. ಮಾಸಿಕ ಪತ್ರಕೆ ಜಾಹೀರಾತಿನ ಉಪಯೋಗ ಅಷ್ಟು ಇಲ್ಲ. ಮಾಸಿಕ ಪತ್ರವನ್ನು ಓದುವ ನಾಗರಿಕರು ಜಾಹೀರಾತನ್ನು ಓದಿ ಯಾವುದೆ ಸರಕನ್ನು ಕೊಳ್ಳಬೇಕೆಂಬ ವಿಚಾರವವರು ಇರುವರೆಂದು ನಮಗೆ ಅನ್ನಿಸುವುದಿಲ್ಲ. ಆಲ್ಲದೆ, ಓದುಗರಿಂದ ಹಣ ಪಡೆದು ಅವರಿಗೆ ಶಕ್ತವಿದ್ದಷ್ಟು ಹೆಚ್ಚಿಗೆ ಓದುವ ಸಂಗತಿಯನ್ನು ಒದ್ದಗಿಸಬೇಕೆಂದು ಜಾಹೀರಾತಿಗಾಗಿ ಸ್ಥಳ ಹಾಳುಮಾಡಿ ಓದುಗರ ಮೇಲೆ ಭಾರ ಹಾಕಬಯಸುವುದಿಲ್ಲ. ಓದುಗರ ಕೊಡುವ ಹಣಕ್ಕೆ ತಕ್ಕ ಪ್ರತಿಫಲ ಸಿಕ್ಕುವಂತೆ ಮಾಡಬೇಕೆಂದು ನಮ್ಮ ಹಂಬಲವಿದೆ.

ಇದರಲ್ಲಿ ಇನ್ನೊಂದು ಮಾತು. ಸಾಹಿತ್ಯ ಸಂಸ್ಕೃತಿ ಮೊದಲಾದ ವಿಷಯಗಳಿಗೆ ಸಂಬಂಧವಿದ್ದ ವಿಷಯಗಳ ಜಾಹೀರಾತು ಏಕೆ ಹಾಕಬಾರದು? ಅವುಗಳ ಅವಶ್ಯಕತೆ ಇದೆ. ಎಂದು ಕೆಲವರ ಪ್ರಶ್ನೆ. ಇದರಲ್ಲಿ ಒಂದು ಅರ್ಥವಿದೆ. ಆದಕ್ಕೆ ನಾವು ಸಾಹಿತ್ಯಕ್ಕೆ ಸಂಬಂಧವಿದ್ದ ವಿಷಯಗಳ ಜಾಹೀರಾತುಗಳನ್ನು ಹಾಕಬೇಕೆಂದು ನಿರ್ಧಾರ ಮಾಡಿದ್ದೇವೆ. ಕವರಿನ ೩-೪ ಇವುಗಳನ್ನು ಮಾತ್ರ ಆ ಬಗೆಯ ಜಾಹೀರಾತಿಗಾಗಿ ಮೀಸಲು. ಉಳಿದ ಭಾಗದಲ್ಲಿ ಜಾಹೀರಾತು ಹಾಕಲು ನಾವು ಸರ್ವಥಾ ಒಪ್ಪುವುದಿಲ್ಲ. ಈ ನಮ್ಮ ನಿರ್ಣಯವು ನಮ್ಮ ಓದುಗರಿಗೆ ಮಾನ್ಯವೆಂದು ನಂಬುತ್ತೇವೆ.

ಈ ಸಲದಿಂದಲೆ ನಾವು ಕನ್ನಡ ಕನ್ನಡೇತರ ಪುಸ್ತಕಗಳ ವಿಮರ್ಶೆ ಕೊಡುತ್ತಲಿದ್ದೇವೆ. ಕನ್ನಡೇತರ ಪುಸ್ತಕಗಳಲ್ಲಿಯೆ ವಿಚಾರಗಳನ್ನು ವಿವರವಾಗಿ ಇನ್ನು ಮುಂದೆ ಕೊಡುತ್ತೇವೆ. ಅದರಿಂದ ಆಯಾ ಭಾಷೆ ಬಾರದವರಿಗೆ ಅದರಲ್ಲಿನ ವಿಚಾರ ತಿಳಿದುಕೊಳ್ಳಲು ಅನುಕೂಲವಾಗುವುದು.

ನಮ್ಮ ಆಸೆ ಆಕಾಂಕ್ಷೆಗಳು ಈಡೇರಬೇಕಾದರೆ ಕೊಂಡು ಓದುವವರ ಸಂಖ್ಯೆ ಬೆಳೆಯಬೇಕು. ಈ ಚಟುವು ನಮ್ಮ ಪತ್ರಿಕೆಗೆ ಮಾತ್ರ ಪೋಷಕವಲ್ಲ; ಇಡಿನಾಡಿಗೆ ಹಿತಕರವು. ಕನ್ನಡನಾಡು ಕೂಡ ಉಳಿದವರ ಜತೆಯೆರೆದು ನಿಲ್ಲಬೇಕೆಂದು ಹಾರೈಸುವವರು ಕೊಂಡು ಓದುವ ಚಟವನ್ನು ತಮ್ಮಲ್ಲಿ ತಂದುಕೊಂಡು ತಮ್ಮ ನೆರೆ-ಹೊರೆ-ಕೆಳೆಯರಲ್ಲಿ ತರಲು ಪ್ರಯತ್ನಿಸುವರೆಂದು ಆಶಿಸುತ್ತೇವೆ.

—ಸಂಪಾದಕ

ಮುಂಗನ ಮುರದಾಟ

ಸಿಂಧದ ಸೋಡಚೀಟಿ

"ರಾ!! ರಾ!! ಹಿಂದಪ್ಪಾ ಇನ್ನ ಮುಂದಪ್ಪಾ ಸಾಕಿನ್ನುದಲ್ಲಿ ಇವನಿಗೆ—

ಕೆಳಗೆ ಸಹಿ ಮಾಡುವ ಸಿಂಧವ್ವಾ ಗಂಡ ಹಿಂದಪ್ಪಾ ನಾನು ಕೊಡುವನೋಟೀಸು ಯೇನಂದ್ರೆ—

ನೀನು ನನ್ನವನಿದ್ದು ಸುಮಾರು ಸಾವಿರಾರು ವರ್ಷ ಆಯ್ತು. ಕಳೆದ ೭-೮ ವರ್ಷಲಾಗಾಯ್ತು ನಾನು ನಿನ್ನನ್ನು ಕೆಣಕಿದೆ, ಚಿವುಟಿದೆ, ನಿನ್ನ ಹುಡುಗರನ್ನ ಹೊಡೀ ಬಡೀ ಮಾಡಿದೆ, ನೀನು ನನ್ನನ್ನು ಬಿಡಲಿಲ್ಲ. ಅಲ್ಲದೆ, ನಾತು ಯೇನು ಮಾಡಿದ್ರೂ ನೀನುನನ್ನನ್ನು ಬಿಡೋಲಕ್ಷಣ ಕಾಣಿಸೋದಿಲ್ಲ. ನಿನ್ನ ಕಡಿಂದ ತಗೊಂಡ ಸಾಲಾ ನಾನು ತಿರುಗಿ ಕೊಟ್ಟರೂ ನಿನಗ ಎಳ್ಳೇ ಸಮಜೂತ ಆಧಾಂಗ ಕಾಣೋದಿಲ್ಲ. ಊರಾಗಿನ ಸಂಭಾವಿತ ಪಂಜರ ನಜರಾನಜರ ನಾನು ಕೆಟ್ಟ ನಡತೀಯಾಕೀ ಅಂತ ಅನ್ನಿಸಿದ್ರೂ ನೀನು ಬಿಡವಲ್ದು ಅಂಬೋದಕ್ಕ ಈ ನೋಟೀಸು ಕೊಡೋಭಾಗ ಬಿತ್ತು. ಇನ್ನ ಮುಂದೆ ನಾ ನಿನ್ನ ಮಕ್ಕಳನ್ನ ಹೊಡೆದರ ಬಡೆದರ ಹೊರಗ್ಗ ಹಾಕಿದರ ಅದಕೆಲ್ಲಾ ನಿನ್ನದೇ ಜಬಾಬ್ದಾರಿ. ಹೊರಗಿನ ಮಕ್ಕಳನ್ನ ನನ್ನ ಮನ್ಯಾಗ ತಂದಿಟ್ಕೊಂಡರ ಅವರ ಮ್ಯಾಲೆ ನಿನ್ದು ಯಾವ್ದೂ ಅಧಿಕಾರ ನಡೀಲಿಕ್ಕಿಲ್ಲಾ ಅಂತ ಈ ನೋಟೀಸಿನ ಮೂಲ್ಕ ತಿಳಿಸ್ತಾ ಇದ್ದೀನಿ. ಒಂದೇ ಈಗ ನಿನ್ನ ಬಿಟ್ಟಿದ್ದಕೆ ನಾನು ಉಪವಾಸ, ಹೈರಾಣ ಆಗಿ ಸತ್ತರ ಅದರ ಪೂರಾ ಜವಾಬ್ದಾರಿ ನಿನ್ನ ತಲೀ ಮ್ಯಾಲೆ ಅಂತ ತಿಳ್ಕೋಬೇಕ್ಕು. ಪ ನಿನ್ನ ಬಿಟ್ಟ ಮ್ಯಾಲೆ ಹೊಟ್ಟೆ ಬಟ್ಟೆಗಾಗಿ ಜರಕರತಾ ನಾನು ಸಾಲ-ತಗಾದಿ ಮಾಡಿದ್ರ ಅದರ ಭಾರಾನೂ ನಿನ್ನ ತಲೀ ಮ್ಯಾಲೆ ಅಂತ ಬರೆದಕೊಟ್ಟ ನೋಟೀಸು.

ಈ ಹೆಬ್ಬಟ್ಟಿನ ಗುರ್ತು
ತಾ!!-ನಾಳೆ. ಇಪ್ಪಿ ಯೊವಾಗಲೂ } ಸಿಂಧವ್ವಾ ಗಂಡ
ತಿಂಗಳು-ಹೋದ್ದು — } ಹಿಂದಪ್ಪಾ ಈಕೀದು

ಒನ್ಮೆ ಡುರ್

(ಮದ್ರಾಸಿನಲ್ಲಿ ಹೊಸ ಮುಖ್ಯಮಂತ್ರಿಗಳಾದ ಓಮಂಡೂರ ರಾಮಸ್ವಾಮಿ ರೆಡ್ಡಿಯವರಿಗೆ ಅರ್ಪಿತ)

ಮದ್ರಾಸದಲ್ಲಿ ಪ್ರಕಾಶ ಅಡಗಿತು, ಕತ್ತಲೆ ಡುರ್ ಅಂದಿತು, ಅಂದಿತು ಕತ್ತಲೆ ಒಮ್ಮೆಂಡುರ್! ಅಕಟಕಟ! ದೀನಪಾಲಾ—ಆರ್ತಾರ್ತ್ ಕೃಪಾಲಾ—ನೀ ಕಣ್ಣೀರು ಸುರಿಸಿದೆಯಲ್ಲವೆ? ನೀನು ಸುರಿಸಿದ ಕಣ್ಣೀರಿಂದ ಇಡಿಯ ಮದ್ರಾಸ ಪ್ರಾಂತದಲ್ಲಿ ಮತ್ತೊಮ್ಮೆ ಮಹಾಪೂರವು ಪ್ರವಹಿಸಬಹುದಲ್ಲವೆ? ಪಾಪ! ಮದ್ರಾಸದಿಂದ ದಿಲ್ಲಿಗೆ ಮರುಳುವಾಗ ಆಚಾರ್ಯರ ಹೃದಯಕ್ಕೆ ಎಕ್ಸ್‌ಟ್ರಾ ಲಗೇಜ ಚಾರ್ಜ ಬಿದ್ದಿತಂತೆ! ಎಷ್ಟೊಂದು ಭಾರವಾಗಿರಬೇಕು ಆ ಹೃದಯ! ಕೂಪಮಂಡೂರ—ಅಲ್ಲಲ್ಲ—ಕೂಪಮಂಡೂಕದ ಕತೆಯೊಳಗಿನ ಕಪ್ಪೆಯಂತೆ ಆಚಾರ್ಯರ ಹೃದಯ ಇನ್ನೂ ಭಾರವಾಗಿ ಬಲಿಯುವುದೆಂದು ಮುಂಗರಾಯನ ಚಿಕಿತ್ಸೆ. ಯಾಕಂದ್ರೆ ಹಿರಿಯಕ್ಕನ ಚಾಳಿ ಮನೆಮುಂದಿಗೆಲ್ಲ ಎಂಬಂತೆ ಹಿರಿಮುಂಡೂರನ ಚಾಳಿ ಎಬ್ಬಿಸುವುದು ದೇಶದ ತುಂಬ ಪಾಳಿ! ಬೇಡಾದಾಗ ಮೇಲಿನ ಬಟ್ಟೆ ಬಿಸುಡುವಂತೆ ಬೇಡಾದಾಗ ಮಂತ್ರಿಯನ್ನು ಗೊಂಬೆಯಂತೆ ಕಿತ್ತೊಗೆಯುವುದು! ಇದಲ್ಲವೆ ಇಂಡ್ಲಿಶನ್ನ ಹೇಳುವ ಧರ್ಮರಕ್ಕಸಿ (demokrecy) ಯ ನೀತಿ? ಅರಿಸ್ಟಾಕ್ರಟರು ಜನರು, ಹಾರಿಸುವವರು ಇನ್ನೊಬ್ಬರು. ಈ ಹಿರಿಜನ ಜಾತಿ ಕಾಂಗ್ರೆಸ್ ಸಂಸ್ಥೆಯಲ್ಲಿ ಬೆಳೆಯುವುದು, ಆಚಾರ್ಯರು ಎಷ್ಟೇ ಮಡಿವಂತರಾದರೂ ಬೆಳೆಯುವುದು ಎಂದೇ ಮುಂಗರಾಯನ ಭವಿಷ್ಯ. ನೋಡುವಿರಂತೆ ದೇಶದ ತುಂಬ ನೋಡುವಿರಂತೆ, ಏಮಂಡಿ ಎಂದರೆ ಓಮಂಡೂರ ಎಂದು ಪ್ರತಿಧ್ವನಿಸಿ ಏಳುವ ಮಾಯಾಪುರುಷನ ಲೀಲೆಯನ್ನು ನೋಡುವಿರಂತೆ. ಒಂದು ಟಂಗಟೂರಿಗೆ ನೂರು ಪಟಂಗಟೂರುಗಳು ಹಬ್ಬುವ ಮದ್ರಾಸ ಮಹಿರಾವಣನ ಮಹಾತ್ಮೆಯನ್ನು ಮುಂಗರಾಯನು ಹೇಳಿದೆನೆಂಬುದನ್ನು ಮರೆಯಬೇಡಿರಿ.

ದೇಶದ ತುಂಬ ಕಂಡೀರಿ
ಕಡಿದಾಟದ ಓಮಂಡೂರಿ

ಮುಂಗಕುಣಿತ

ಮುಂಗಕುಣಿತವನ್ನು ಬಿಡಿಸುವ ಮುಂಗಮಿದುಳಿಲ್ಲದ ವಾಚಕರು ತಲೆತುರತುರಿಸಿ ಕನಲಿ ಮುಂಗರಾಯನ ಮೇಲೆ ರಕ್ತವನ್ನು ಚಿಮ್ಮಿದ್ದಾರೆ. ಅಕಟಕಟ! ಸಂಕ್ರಾಂತಿಯ ಕಾಲದಲ್ಲಿ ಅದೆಂತಹ ರಕ್ತದ ದುರುಪಯೋಗ! ಮೇ ತಿಂಗಳು (೫) ವರುಷದ ಅಯ್ದನೆಯ ತಿಂಗಳು; ಆ ತಿಂಗಳ ಹದಿನಾರನೆಯ ತಾ!! ನ ಹೇಳಿಕೆ ಎಂಬುದು ೫, ಮುಂದೆ—ಹಾಂ ಹಾಂ—ಈಗ ತಿಳಿಯಿತೆ? ಹದಿನಾರ—ಮೇ-ಡಿಸೆಂಬರ ಛೆ—ಯಾವ ಭಾಷೆ? ಹಿನ್ನಡೀ ಭಾಷೆ? ಹಹ! ಬುದ್ಧಿಗೂ ಸಕ್ರಾಂತಿ! ಹೀಗಿರುವಾಗ ಹೊಸ ವೈಸರಾಯರ ಹೆಸರು ಬೆಟ್ಟೆ (=) (mountain) ಎಂದು ಹೇಳುವ ಬೃಹಸ್ಪತಿಗಳೂ ಗೋಚರಿಸಬಹುದಲ್ಲ? ಸಾರಾಂಶ, ಮುಂಕಗಣಿತವನ್ನು ಬಿಡಿಸುವ ಬುದ್ಧಿ ಮತ್ತೆ ಯಾವ ಕನ್ನಡ ವಾಚಕನೂ ತೋರಿಸಲಿಲ್ಲ. ಹಾಯ್! ಹಾಯ್! ಕರ್ನಾಟಕಾ, ಕನ್ನಡಿಗರ ತ್ರಾಟಕಾ! ಒಂದು ಪ್ರಾಂತವಾದ ನಿನ್ನನ್ನೇ ಆಳುವ ಕನ್ನಡ ಆಯ್ ಸಿ ಎಸ್ ಜನ ಹುಟ್ಟುವುದು ಹೇಗೆ! ಯಾಕೆಂದರೆ ಆಯ್ ಸಿ ಎಸ್ ಪರೀಕ್ಷೆಯಲ್ಲಿ ಮುಂಕಗಣಿತದ ಪರೀಕ್ಷೆಯೂ ಇದೆ. ಏನು? ಬ್ರಿಟಿಶರ ಆಳಿಕೆಯಿಂದ "ಆಯ್ ಸಿ ಎಸ್ ಜಾತಿ" ಹಾಳಾಗುವುದೆ? ಹಾಳಾದರೂ "ಆಯ್ ಸಿ ಎಸ್" ಮಾತ್ರ ಹಾಳಾಗುವುದು, "ಜಾತಿ" ಉಳಿಯುವುದು; ಮುಂಕಗಣಿತದಲ್ಲಿ ತೇರ್ಗಡೆ ಹೊಂದುವ ಜಾತಿ ಮಾತ್ರ. ಅಂತೂ, ವಾಚಕಮಹಾಶಯಾ, ಮುಂಕಗಣಿತ ಮಹಾತ್ಮೆಯನ್ನು ಅರಿತುಕೊಳ್ಳಬೇಕಯ್ಯ, ಹಾಗಾದರೆ "ಉತ್ತಿಷ್ಠತ, ಜಾಗ್ರತ, ತಪ್ಪಿ ದಾರನ್ನ ಹರಿಯತ" ಹಹ! ಅದೂ ಒಂದು ಮುಂಕಗಣಿತದ ಲೆಕ್ಕ! ಈ ಮುರಿಗಕುಣಿತ—ಅಲ್ಲಲ್ಲ—ಮುಂದಕುಣಿತ—ಅಲ್ಲಲ್ಲ ಛೆ! ಥೂ—ಅಂತ್ರೆ—ಬಿಟ್ಟು ಇಪಸ್ಸು ಬಿಡಿಸುವ ಬಂಟ ನಾರು ಅಂತ ಮುಂಗರಾಯ ಮೈತುರಿಸುತ್ತಲಿದ್ದಾನೆ.

ಕರ್ನಾಟಕ ವಿದ್ಯಾವರ್ಧಕ ಸಂಘ
ಧಾರವಾಡ

ಕನ್ನಡ ಸಾಹಿತ್ಯದಲ್ಲಿ ಹೊಸತನ

ಆವಳ ಕೈವಿಡಿದಾ ರಾ।
ಜೀವ ಭವಂ ನಿಖಿಲ ಲೋಕ ನಿರ್ಮಾಣ ಕಲಾ॥
ಕೋವಿದನೆನಿಸಿದನಾ ವಾ।
ಗ್ದೇವತೆ ಸನ್ಮತಿಯನಿತ್ತು ಸಲಹುಗೆ ಜಗಮಂ॥

ಬಸವಪ್ಪ ಶಾಸ್ತ್ರಿಗಳು

ವಿಶ್ವದೊಳಗಿನ ಯಾವ ಸಾಹಿತ್ಯವನ್ನು ನೋಡಿದರೂ ಅದು ಕಾಲಮಾನಪರಿಸ್ಥಿತಿಗನುಸಾರವಾಗಿ ಒಂದಿಲ್ಲೊಂದು ರೀತಿಯಲ್ಲಿ ಬೆಳೆದುದು ಕಂಡುಬರುವದು. ಸಾಹಿತ್ಯದ ಬೆಳವಣಿಗೆಗೆ ಆವಶ್ಯವಾದ ಆಹಾರಗಳಲ್ಲಿ ದೇಶದ ರಾಜಕೀಯ ಜೀವನವು ಬಹು ಮುಖ್ಯವಾದುದು. ಜನಜೀವನದ ಮೇಲು ಕೀಳುಗಳು ದೇಶದ ರಾಜಕೀಯ ಪರಿಸ್ಥಿತಿ ಬಹಳವಾಗಿ ಅವಲಂಬನೆಯಾಗಿರುವದರಿಂದಲೂ ಸಾಹಿತ್ಯವು 'ಜನಜೀವನದ ವಾಣಿ' ಯಾಗಿರುವದರಿಂದಲೂ ಸಾಹಿತ್ಯದ ಬೆಳವಣಿಗೆಗೆ ರಾಜಕೀಯ ಜೀವನವು ಜೀವಾಳವೆಂದು ಹೇಳಬಹುದು. ಜನಜೀವನದಲ್ಲಿ ಕ್ರಾಂತಿಯುಂಟಾದಾಗ ಸಾಹಿತ್ಯದಲ್ಲಿ ಅದು ರೂಪಗೊಳ್ಳುವದು. ಜನರ ದೃಷ್ಟಿಯು ಬದಲಾಯಿಸಿದಂತೆ ಸಾಹಿತ್ಯ ರೂಪವು ಬದಲಾಗುವದು. ಇದಕ್ಕೆ ನಿದರ್ಶನವಾಗಿ ಜಗತ್ತಿನ ಎಲ್ಲ ಸಾಹಿತ್ಯಗಳು ಹೊಸ ಹೊಸ ರೀತಿಯಲ್ಲಿ ಆ ಆ ಕಾಲದ ಮಹಿಮೆಯಂತೆ ಬೆಳೆಯುತ್ತ ಬಂದಿವೆ; ಬೆಳೆಯುತ್ತಲೂ ಇವೆ. ಈ ಹೊತ್ತು ನಮ್ಮ ಸಾಹಿತ್ಯದಲ್ಲಿಯೂ ಪರಿವರ್ತನೆಯಾಗಿದೆ ಎಂದು ಹೇಳುವದಾದರೆ ಅದಕ್ಕೂ ಮೊದಲು ನಮ್ಮ ರಾಜಕೀಯ ಜೀವನದಲ್ಲಿಯೂ ಬದಲಾಗಿದೆ ಎಂದು ಹೇಳಬೇಕಾಗುವದು. ಭರತಖಂಡದ ರಾಜಕೀಯ ಜೀವನವು ನಮ್ಮ 'ದೇಶ ಭಾಷೆ'ಗಳ ದೃಷ್ಟಿಯನ್ನು ಬದಲಾಯಿಸಿ 'ಹೊಸತನ'ದ ಬೀಜವನ್ನು ಬಿತ್ತಿ ಅನೇಕ ಮಾರ್ಪಾಟುಗಳಿಗೆ ಎಡೆಗೊಟ್ಟಿದೆ.

ಈ ಹೊತ್ತು ಭರತಖಂಡದ ರಾಜಕೀಯ ಜೀವನವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ನಮಗೆ ಕಂಡುಬರುವದು ಕ್ರಾಂತಿಯ ಜೀವನ. ಹೊಸ ವಿಚಾರಗಳ, ಹೊಸ ಭಾವನೆಗಳ ಅದ್ಭುತ ಪ್ರವಾಹವು ವ್ಯಕ್ತಿ ಸ್ವಾತಂತ್ರ್ಯದ ಪ್ರಚಂಡ ಶಕ್ತಿವಾಹಿನಿಯೊಡನೆ ಒಂದೇಸಮನಾಗಿ ಧೀರಮುಖದಿಂದ ಹರಿಯತೊಡಗಿದೆ. 'ಹೊಸದು' ಬೇಕೆಂಬುದರ ಹಂಬಲವು ಪ್ರತಿಯೊಬ್ಬನ ಹೃದಯದಲ್ಲಿ ತಾಂಡವನಾಡುತ್ತಿದೆ. ಈ ಪ್ರವೃತ್ತಿಗೆ ಮುಖ್ಯವಾಗಿ ಎರಡು ಕಾರಣಗಳು. ಒಂದು ಸ್ವಾತಂತ್ರ್ಯದ ಸದಿಚ್ಛೆ; ಇನ್ನೊಂದು ಅನ್ಯ ಜನಾಂಗಗಳಂತೆ ತಾವೂ ಮೇಲಾಗಿ ಬಾಳಬೇಕೆಂಬ ಹಂಬಲ. ಇವುಗಳ ಸಿದ್ಧಿಗಾಗಿ ಭರತಖಂಡದ ಮೂಲೆ ಮೂಲೆಗಳಲ್ಲಿಯೂ ಉತ್ಸಾಹಭರಿತರಾದವರು ಸಿದ್ಧಪುರುಷರಾಗತೊಡಗಿದ್ದಾರೆ. ದುರ್ಬಲರು ಸಬಲರಾಗತೊಡಗಿದ್ದಾರೆ. ನವಜೀವನದ ನವೋದಯವಾಗತೊಡಗಿದೆ. ಇಂತು ರಾಜಕೀಯ ಜೀವನದಲ್ಲಿ ತೆರೆಗಳುಂಟಾದಾಗ ಜನಜೀವನದಲ್ಲಿಯೂ ಆದರ ಪರಿಣಾಮವು ಸ್ಪಷ್ಟವಾಗಿ ತೋರುವದು ಸ್ವಾಭಾವಿಕ. ಏಕೆಂದರೆ "ರಾಜಕೀಯ ಪ್ರಪಂಚದಲ್ಲಿ ನವಜೀವನವುಂಟಾದರೆ ಜನಜೀವನದಲ್ಲಿಯೂ ಅದು ಪ್ರವಹಿಸುವದು." ಇದನ್ನು ಕಂಡುಕೊಳ್ಳಲು ಸಾಹಿತ್ಯವೇ ಸರಳ ಮಾರ್ಗ. ಭರತಖಂಡದ ಎಲ್ಲ ದೇಶಭಾಷೆಗಳ ಸಾಹಿತ್ಯಕ್ಕೆ ನಾವು ಶರಣುಹೋದರೆ ಈ ಮಾತಿನ ನಿದರ್ಶನವಾಗದಿರದು. ಭರತಖಂಡದ ಜೀವನವು ಆಯಾ ಭಾಷೆಗಳ ಸಾಹಿತ್ಯದಿಂದ ವ್ಯಕ್ತವಾಗುತ್ತಿದೆ. ಹೊರಹೊಮ್ಮುತ್ತಿದೆ. ಕನ್ನಡ ನಾಡಿಗೂ ಈ ಮಾತು ಅನ್ವಯಿಸುವದು ಸ್ವಾಭಾವಿಕ.

ಈಗ ಎಲ್ಲ ದೇಶಭಾಷೆಗಳಲ್ಲಿಯೂ ಹೊಸಕಳೆಯು ಹೊರಹೊಮ್ಮುತ್ತಿದೆ. ಜಗತ್ತಿನಲ್ಲಿ ಪಡೆಯಬೇಕಾಗಿರುವ ಎಲ್ಲ ಜ್ಞಾನವನ್ನು ಪರಿಗ್ರಹಿಸಬೇಕೆಂಬ ಬಯಕೆಯು ಎಷ್ಟೋ ಬರಹಗಾರರಲ್ಲಿ ಕ್ರಾಂತಿಯನ್ನೆಬ್ಬಿಸಿದೆ. ಕೂಪಮಂಡೂಕವೃತ್ತಿಯ ಮಂಗಳಾಚರಣೆಯಾಗಿ ಹೃದಯದ ವಿಶಾಲ ಮಾರ್ಗವು ತೆರೆದಿದೆ. ನಾಡಿನ ಯುವಕ-ಯುವತಿಯರಲ್ಲಿ ಹೊಸ ಚೈತನ್ಯವು ಹೊರಹೊಮ್ಮಿ, ಅಸಂಖ್ಯಾಕರಾದ ಲೇಖಕರು ತಲೆಯೆತ್ತತೊಡಗಿದ್ದಾರೆ. ಸಾಹಿತ್ಯ ಸೇವೆಯಲ್ಲಿ ಮನಸ್ಸನ್ನು ಹಾಕುವವರ ಸಂಖ್ಯೆ ದಿನದಿನವೂ ಬೆಳೆಯತೊಡಗಿದೆ. ಸಾಹಿತ್ಯ ಸೇವೆಯಲ್ಲಿ ದೇಶಸೇವೆಯು ಅಡಕವಾಗಿದೆ ಎಂಬ ತತ್ವಕ್ಕೆ ಮನಸೋತ ಹಲವರು ಜನಾಂಗದ ಪ್ರತಿನಿಧಿಗಳಾಗತೊಡಗಿದ್ದಾರೆ. ತಮ್ಮ ನಾಡಿನ ಸಂಸ್ಕೃತಿಯನ್ನು ಅಭ್ಯಾಸ ಮಾಡತೊಡಗಿದ್ದಾರೆ. ಸಂಸ್ಕೃತಿಯನ್ನು ಕಂಡುಕೊಳ್ಳುವ ರಾಜಮಾರ್ಗವು ಸಾಹಿತ್ಯವಾದುದರಿಂದ ಅನ್ಯ ಸಾಹಿತ್ಯಗಳನ್ನು ಓದುವದು ಅವಶ್ಯವಾಗಿ ಪರಿಣಮಿಸಿದುದರಿಂದ ಆ ರೀತಿಯು

ಅಭ್ಯಾಸವನ್ನು ಕೆಲವರಾದರೂ ಮನಮುಟ್ಟಿ ಮಾಡ ತೊಡಗಿದ್ದಾರೆ.

ಮೇಲಿನ ಎಲ್ಲ ಮಾತುಗಳು ಭರತಖಂಡದ ಎಲ್ಲ ದೇಶಭಾಷೆಗಳಿಗೆ ಅನ್ವಯಿಸುವಂತೆ ಕನ್ನಡಕ್ಕೂ ಅನ್ವಯಿಸುತ್ತದೆ. ಕನ್ನಡವೂ 'ಹೊಸ ಹಾದಿ' ಯನ್ನು ತುಳಿಯತೊಡಗಿ 'ಹೊಸತನ'ವನ್ನು ಕಂಡುಕೊಂಡಿದೆ. ಈ ಹೊಸತನವನ್ನು ಕಂಡುಕೊಳ್ಳುವದೇ ಈ ಲೇಖನದ ಮುಖ್ಯ ಉದ್ದೇಶವಾಗಿದೆ.

ಕನ್ನಡ ಸಾಹಿತ್ಯದೇವಿಯು ಈ ಹೊತ್ತು ಹೊಸ ರೂಪಗಳನ್ನು ಧರಿಸಿ ನವನವಾಲಂಕಾರಗಳಿಂದ ಭೂಷಿತೆಳಾಗಿ, ಚೈತನ್ಯಯುಕ್ತಳಾಗಿ, ಧೀರಗಮನೆಯಾಗಿ ಸಾಗಹತ್ತಿದ್ದಾಳೆ. ಕನ್ನಡನಾಡು ಕಣ್ಣು ತೆರೆದಿದೆ. ನವಯುಗಾರಂಭವಾಗಿದೆ. ಇದಕ್ಕೆ ಕಾರಣಗಳು ಹಲವಾಗಿವೆ. ಅವನ್ನೆಲ್ಲ ಸಂಕ್ಷಿಪ್ತವಾಗಿ ಒಟ್ಟುಗೂಡಿಸಿ ಶ್ರೀಮಾನ್ ಕೆ. ವಿ. ಪುಟ್ಟಪ್ಪನವರ ಮಾತುಗಳಲ್ಲಿ ಹೇಳಬೇಕಾದರೆ ಅದು ಹೀಗೆ: "ನೂತನ ಸಂಸ್ಕೃತಿಗಳ ಸಂಸರ್ಗದಿಂದಲೂ, ರಾಷ್ಟ್ರೀಯ ಜೀವನದಲ್ಲಿ ಜರುಗುತ್ತಿರುವ ಉತ್ತಮೋತ್ತಮ ಆಕಾಂಕ್ಷೆಗಳ ಆಂದೋಲನದಿಂದಲೂ, ವೈಜ್ಞಾನಿಕರ ಅದ್ಭುತ ನೂತನಾವಿಷ್ಕಾರಗಳ ಹಿತಕರ ಆಘಾತಗಳಿಂದಲೂ, ಈಗ ನಮ್ಮ ಜೀವನದಲ್ಲಿ ಆಗಿರುವ ಮತ್ತು ಆಗುತ್ತಿರುವ ಪರಿಣಾಮಗಳ ಪ್ರತಿಫಲವಾಗಿ ನಮ್ಮ ಸಾಹಿತ್ಯದಲ್ಲಿ ನವಯುಗವು ಮೊಗದೋರಿದೆ." ಈ ನವೋದಯದ ಅರ್ಥವನ್ನು ಅನೇಕರು ಅನೇಕ ರೀತಿಯಲ್ಲಿ ಹೇಳುತ್ತಾರೆ. ಕೆಲವರು ನಮ್ಮ ಸಾಹಿತ್ಯದಲ್ಲಿ ಇಂದು ತೋರಿಬರುವ ಹೊಸತನವು ಆಂಗ್ಲ ಸಾಹಿತ್ಯದ ಪ್ರಭಾವವೆಂದೂ ಹೇಳುತ್ತಾರೆ. ಇದನ್ನಷ್ಟು ವಿವೇಚಿಸುವ: ಸಾಹಿತ್ಯದಲ್ಲಿ ಪ್ರಭಾವವೆಂಬುದು ಮೊದಲಿನಿಂದಲೂ ನಡೆದುಬಂದಿದೆ. ಕಾಲಮಾನಕ್ಕೆ ತಕ್ಕಂತೆ ಸಾಹಿತ್ಯವು ಬೆಳೆಯುವದು. ಇದನ್ನು ಕನ್ನಡನಾಡಿನ ಪೂರ್ವ ಸಾಹಿತ್ಯದಿಂದಲೂ ನಿದರ್ಶಿಸಬಹುದು. ಪೂರ್ವದ ಪರಿಸ್ಥಿತಿಗನುಸಾರವಾಗಿ ಅಂದಿನ ಸಾಹಿತ್ಯವು ಬೆಳೆಯಿತು. ಹಿಂದೆ ಸಂಸ್ಕೃತವು ಪ್ರಬಲವಾಗಿದ್ದಾಗ ಕನ್ನಡ ಸಾಹಿತ್ಯವು ಸಂಸ್ಕೃತ ಪ್ರಭಾವದಿಂದ ಬೆಳೆಯಿತು. ಈ ಹೊತ್ತು ಆಂಗ್ಲ ಸಾಹಿತ್ಯವು ಪ್ರಬಲವಾಗಿದೆ. ಆ ಕಾರಣ ನಮ್ಮ ಸಾಹಿತ್ಯವು ಅದರ ಸಂಪರ್ಕ ವಿಶೇಷದಿಂದ ಅನೇಕ ಮಾತುಗಳನ್ನು ಪರಿಪುಷ್ಟಿಗಾಗಿ ಪಡೆದಿದೆ ಎಂದು ಹೇಳಬಹುದು. [ಪ್ರಭಾವದ ವಿಧವನ್ನು ಮುಂದೆ ಚರ್ಚಿಸಲಿರುವೆ]. ಕನ್ನಡಕ್ಕೆ ಹೊಸತ ವ ಹೊಸಮಾತ್ರ ಕನ್ನಡದ ಹೊಸತನವು ಹೊಸದಾಗಿಯೇ ವ್ಯಾರಂಭವಾಗಿಲ್ಲ. ನಮ್ಮ ಸಾಹಿತ್ಯವನ್ನು ಪ್ರತಿ ಶತಮಾನದಿಂದ ಅಳೆದುನೋಡಿದರೆ ನಮಗೆ ಪ್ರತಿ ಶತಮಾನದಲ್ಲಿಯೂ ಹೊಸತನವು ಕಂಡುಬರುತ್ತದೆ. ಸಾಮಾನ್ಯದಲ್ಲಿ ಬೇರೆ ಬೇರೆ ರೂಪಗಳು, ಭಾಷೆ, ಛಂದಸ್ಸು ಮೊದಲಾದವುಗಳು ಆಯಾ ಕಾಲಕ್ಕೆ ಮಾರ್ಪಾಟಗುತ್ತ ಬಂದಿವೆ. ಒಮ್ಮೆ ಸಂಸ್ಕೃತದಿಂದ ಕೊಬ್ಬಿ ಇನ್ನೊಮ್ಮೆ ಸಮಸಂಸ್ಕೃತದಲ್ಲೆ ನುಗ್ಗಿ, ಮತ್ತೊಮ್ಮೆ ಅಚ್ಚಗನ್ನಡವಲ್ಲಿಳಿದು, ಈಗ ಹೊಸಗನ್ನಡಕ್ಕೆ ಬಂದಿದೆ. ಸಂಸ್ಕೃತದ ಸೀಮೆಯನ್ನು ದಾಟಿದಾಗ ಸಮಸಂಸ್ಕೃತ ಕಾಲದವರಿಗೆ ತಮ್ಮ ರೀತಿಯು ಹೊಸದಾಗಿ ಕಂಡಿತು. ಅದರಂತೆ ಮುಂದಿನವರಿಗೆ ತಮ್ಮ ಮಾರ್ಪಾಟುಗಳೆಲ್ಲ ಹೊಚ್ಚಹೊಸವೆಂದು ತೋರಿದವು. ರಾಜಪ್ರಭುತ್ವದ ಕಾಲದಲ್ಲಿ ಬೆಳೆದ ಆ ಸಾಹಿತ್ಯದ ರೀತಿಯೇ ಬೇರೆ. ಪ್ರಜಾಪ್ರಭುತ್ವದ ಒಲವಿನಲ್ಲಿ ಬೆಳೆಯುತ್ತಿರುವ ಇಂದಿನ ಸಾಹಿತ್ಯದ ರೀತಿಯೆ ಬೇರೆ. ಇಂದಿನವರಿಗೆ ಇದೇ ಹೊಸತು. ಇದನ್ನೆ ಕುರಿತು ಶ್ರೀಮಾನ್ ಬೇಂದ್ರೆಯವರು "ರಾಜಪ್ರಭುತ್ವದ ಧರ್ಮಪ್ರಮುಖ ಮತಾಭಿನಿವೇಶವುಳ್ಳ ಶಿಕ್ಷಣವನ್ನು ಮೀಸಲಾಗಿಟ್ಟುಕೊಂಡ ಹಳೆಯ ಕಾಲದ ಸಾಹಿತ್ಯದ ಭಾಷೆ-ವಿಷಯಗಳೇ ಬೇರೆ. ಈಗಿನ ಪ್ರಜಾಪ್ರಭುತ್ವದ ಹಾದಿಯಲ್ಲಿದ್ದ ಸಮಾಜ ಸಂಸ್ಥಾನವನ್ನು ಬಯಸುವ ಸಾರ್ವತ್ರಿಕ ಶಿಕ್ಷಣವುಳ್ಳ ಈಗಿನ ಕಾಲದ ಸಾಹಿತ್ಯದ ಭಾಷೆ-ವಿಷಯಗಳೇ ಬೇರೆ" ಎಂದು ಹೇಳಿದ್ದಾರೆ. ಆದುದರಿಂದ ಪ್ರಭಾವವನ್ನು ಬೆಳವಣಿಗೆಗೆ ಮೂಲವಲ್ಲ. ಬೆಳೆಯುವ ಸಾಹಿತ್ಯಕ್ಕೆ ಪ್ರಭಾವವು ಸಹಾಯಕವಾಗಬಹುದು. ಬೆಳವಣಿಗೆಗೆ ಜನಜೀವನವು ಮೂಲ. ಇದನ್ನೇ ಇನ್ನಷ್ಟು ಹಿಂಜಿ ನೋಡಬಹುದು.

ಬೆಳೆಯಲೇಕಾದ ಸಾಹಿತ್ಯಕ್ಕೆ ಜನಜೀವನವು ಗೊಬ್ಬರವಾದುದರಿಂದ ಜನಜೀವನವು ಸಂಕುಚಿತವಾದಂತೆ ಇಲ್ಲವೆ ವಿಕಾಸವಾದಂತೆ ಸಾಹಿತ್ಯವು ಸಂಕುಚಿತವಾಗಿ ಇಲ್ಲವೆ ವಿಶಾಲವಾಗಿ ಬೆಳೆಯುವದು. ಇದಕ್ಕೆ ಉದಾಹರಣೆಗಳು ನಮಗೆ ಸಾಕಷ್ಟಿವೆ. ಹತ್ತನೆಯ ಶತಮಾನದ ನಮ್ಮ ಸಾಹಿತ್ಯವು ನಮಗೆ ಅಭಿಮಾನಾಸ್ಪದವಾಗಿದ್ದರೆ ಹನ್ನೊಂದನೆಯ ಶತಮಾನದ

ಸಾಹಿತ್ಯವು ನಮಗೆ ಇಷ್ಟು ಸಮಾಧಾನಕರವಾಗಿಲ್ಲ. ಮುಂದೆ ಹನ್ನೆರಡನೆಯ ಶತಮಾನದ ಸಾಹಿತ್ಯವು ಕಮ್ಮನ್ನು ಮತ್ತೆ ಮೇಲು ಮೆಟ್ಟಿಲಿಗೆ ಒಯ್ದಿದೆ. ಈಗೆ ಜೀವಂತ ಸಾಹಿತ್ಯಕ್ಕೆ ಜೀವಣಿಗೆಯು ಸತ್ಯ ನಿದ ವಾದುದು. ಈ ಜೀವಣಿಗೆಯ ಕಾಲದಲ್ಲಿ ತೋರಿಬರುವ ಹೊಸತನವು ಕನ್ನಡಕ್ಕೆ ಮೊದಲಿ ನಿಂದಲೂ ಇದೆ. ಅದುಕಾರಣ ಈ ಹೊತ್ತು ತೋರಿ ಬರುವ ಹೊಸತನವು ಕೂಡ ಬರಬೇಕಾದುದೇ ಬಂದಿದೆ ಎಂದು ಹೇಳಬಹುದು.

[ಮುಂದುವರಿಯುವದು]

—ಶ್ರೀಕೃಷ್ಣಮುರಾರಿ

ತಿಳಿಗೇಡಿ

(ಇಂಗ್ಲಂಡಿನ ಒಂದು ಕತೆ)

ಜನರಲ್ ಹಾಸ್ಪಿಟಲ್‌ದ ಮುಂದೆ ಬಸ್ಸು ಬಂದು ನಿಂತಿತು. ಅಲ್ಲಿ ಇಳಿಯುವವರು ಯಾರೂ ಇದ್ದಿಲ್ಲ. ಆದರೆ ಹತ್ತುವವರು ಮಾತ್ರ ಹತ್ತು ಇಪ್ಪತ್ತು ಜನ ರಿದ್ದರು. ಬಸ್ಸಿನಲ್ಲಿ ನಿಂತು ಹೋಗುವದಕ್ಕೂ ಸ್ಥಳ ವಿದ್ದಿಲ್ಲ. ಆ ಜನರ ದಟ್ಟಣಿಯಲ್ಲಿ ಒಬ್ಬ ತರುಣಿಯು ಎಲ್ಲರನ್ನು ಸರಿಸುತ್ತ ತನ್ನ ಖಾಕಿ ಪೋಷಾಕದ ಬಲದಿಂದ ಬಸ್ಸಿನ ವಳಗೆ ಬಂದಳು. ಅವಳ ಕೈಗೆ ಒಂದು ಗೊಂಡೆ ಸಿಕ್ಕಿತು. ಬಸ್ಸು ಮುಂದೆ ಸಾಗಿತು. ತರುಣಿಯು ತನ್ನ ಮೂಗಿಗೆ ಕಾವಡರ ಬಡಿದು ಕೊಂಡು ಬಸ್ಸಿನಲ್ಲಿ ಕೂತ ಜನರನ್ನು ಒಬ್ಬೊಬ್ಬ ರನ್ನಾಗಿ ನೋಡಿದಳು. ತನ್ನ ಪಕ್ಕದಲ್ಲಿಯೇ ಒಬ್ಬ ತರುಣನು ಕೂತಿದ್ದನು. ತರುಣಿಗೆ ಆತನು ಕೂತದ್ದು ತಾನು ನಿಂತದ್ದು ನೋಡಿ ಹಿಡಿಸಲಾರದಷ್ಟು ಕೋಪ ಬಂತು. ಆತನನ್ನು ಉದ್ದೇಶಿಸಿ ಅವಳು "ಹೆಂಗಸು ನಿಂತಿರುವಾಗ ಕೂಡಲು ನಿನಗೆ ನಾಚಿಕೆಯಾಗುವ ದಿಲ್ಲವೇ? ನಿನ್ನ ವಯಸ್ಸಿನ ತರುಣರು ಹೇಡಿಯಂತೆ ಹಿಂದೆ ಉಳಿದು ಸುಖಬಟ್ಟರೆ ನಮ್ಮ ದೇಶದ ಗತಿ ಯೇನು? ನಿನ್ನನ್ನು ನೋಡಿದರೆ ನನಗೆ ನಾಚಿಕೆ ಯಾಗುತ್ತದೆ. ನನ್ನ ಅಣ್ಣನು ಡಾರ್ಡನೆಲ್ಸ್‌ನಲ್ಲಿ ಇನ್ನೂ ಯುದ್ಧ ಮಾಡುತ್ತಿರುವನು. ಈ ಸಲಾ ಬರು ವಾಗ್ಗೆ ಹಿಟ್ಲರನ ಮೀಶೆಯನ್ನು ನನಗೆ ಕಾಣಿಕೆಯಾಗಿ ತರುವೆನೆಂದು ಬರೆದಿರುವನು. ಅವನ ಜೊತೆಗಾರರು ಸಾವಿರಾರು ಜನರು ಆ ರಣಭೂಮಿಯಲ್ಲಿ ಮಡಿದರು. ನನ್ನ ಅಣ್ಣನು ಈಗ ಕ್ಯಾಪ್ಟನ್ ಆಗಿರುವನು. ನಿನಗೆ ಇಲ್ಲಿ ಇರುವದಕ್ಕಾದರೂ ಹೇಗೆ ಸಾಧ್ಯ? ಹೇಗೆ ನೀನು ಜನರಿಗೆ ಮುಖ ತೋರಿಸುವಿ?" ಯೆಂದು ಬಸ್ಸಿನಲ್ಲಿ ಕುಳಿತ ಎಲ್ಲರಿಗೂ ಕೇಳಿಸುವಂತೆ, ಎತ್ತಿದ ದನಿಯಲ್ಲಿ ನುಡಿದಳು. ಆ ಯುವಕನು ಮೋರೆಯನ್ನು ತುಸು ಕಷ್ಟದಿಂದ ಮೇಲೆ ಮಾಡಿ "ತಂಗಿ, ನಿನ್ನ ಅಣ್ಣನಿಗೆ ಡಾರ್ಡನೆಲ್ಸ್ ರಣಭೂಮಿಯಲ್ಲಿ ನನ್ನ ಬಲ ತೋಳು ಸಿಕ್ಕರೆ ಕಳುಹಿಸೆಂದು ಬರಿ. ಹೋದವಾರ ನಾನು ಅದನ್ನು ಅಲ್ಲೇ ಕಳೆದುಕೊಂಡುಬಂದಿರುವೆನು."

ವಿಮರ್ಶೆಯ

ವ್ಯಾಸನಿಂದ

ಭಾರತ ದರ್ಶನ: Discovery of India: ಬರೆದವರು, ಪಂಡಿತ ಜವಾಹರಲಾಲ ನೆಹರು.

(ಮಾರ್ಚ ಸಂಚಿಕೆಯಿಂದ ಮುಂದರಿದುದು)

ಬ್ರಿಟಿಶರ ಆಳಿಕೆ ರೂಢವಾದಂದಿನಿಂದ ಎರಡು ಭಿನ್ನ ಸಂಸ್ಕೃತಿಗಳ ಜನರು ಒಂದೆಡೆ ಬಂದರು ಎಂದು ಹೇಳುವಂತಿಲ್ಲ. ಬ್ರಿಟಿಶರಿಗೆ ಮುಂಚೆ ಆಳಿದ ಪರಕೀ ಯರ ಸಂಸ್ಕೃತಿ ಭಾರತೀಯ ಸಂಸ್ಕೃತಿಯೊಡನೆ ಬೆರೆತುಕೊಂಡಂತೆ ಬ್ರಿಟಿಶ ಮತ್ತು ಭಾರತೀಯ ಸಂಸ್ಕೃತಿಗಳ ಬೆರಕೆಯಾಗಲಿಲ್ಲ. ಇದು ಮಹತ್ವದ ಮಾತು. ಏಕೆಂದರೆ, ಈ ಮಾತಿಗಾಗಿಯೆ ಬ್ರಿಟಿಶರ ಆಳಿಕೆಯ ಪರಿಣಾಮವಾಗಿ ಭಾರತವು ಅವನತಿಯನ್ನು ಹೊಂದಿದೆ. (೧) ಬ್ರಿಟಿಶರು ಪರಕೀಯರಾಗಿ ನೆಲೆಸಿ ರಾಜ್ಯವನ್ನು ನಡೆಸಬೇಕಾಗಿ ಬಂದುದರಿಂದ ತಮ್ಮ ಮೇಲೆಯೇ ಜೀವನಕ್ಕಾಗಿ ಅವಲಂಬಿಸುವ ವರ್ಗ ಗಳನ್ನು ಹುಟ್ಟಿಸಿ ಅಂತಹಗಳ ಮುಖಾಂತರವಾಗಿ ರಾಜ್ಯಭಾರವನ್ನು ನಡೆಸಿದರು. ಉದಾ:- ಸಂಸ್ಥಾ ನಿಕರು, ಜಮೀನುದಾರರು. ಗಲಭೆಯ ಕ್ರಾಂತಿಯಲ್ಲಿ ಈ ವರ್ಗಗಳು ಬ್ರಿಟಿಶರಿಗೆ ಸಹಾಯ ಮಾಡಿದುವು. ಬ್ರಿಟಿಶರು ಹೋದರೆ ಇವುಗಳ ಅಸ್ತಿತ್ವಕ್ಕೆಯೆ ಧಕ್ಕೆ ಬರುತ್ತಿದ್ದಿತು. (೨) ಬ್ರಿಟನದಲ್ಲಿ ಪ್ರತಿಗಾಮಿಗಳಾದ

ಜನರೇ ಭಾರತಕ್ಕೆ ಬಂದುದರಿಂದ ಯಾಂತ್ರಿಕ ಯುಗದ ಮತ್ತು ಪ್ರಜಾಸತ್ತೆಯ ಪ್ರಗತಿ ಭಾರತದಲ್ಲಾಗಲಿಲ್ಲ. ಹಿಂದುಸ್ತಾನದ ನುಲಿಗೆಯಿಂದ ಬ್ರಿಟಿಶರ ಯಾಂತ್ರಿಕ ಶಕ್ತಿ ಬೆಳೆದು (ಅದಕ್ಕೆ ಮೂಲ ಧನ ದೊರೆಯಿತು ನಮ್ಮಿಂದ) ಅದರ ಲಾಭ ಪಡೆಯುವುದಕ್ಕಾಗಿ ನಮ್ಮಲ್ಲಿಯ ಕಸಬುಗಳನ್ನು ಅವರು ನಾಶ ಗೊಳಿಸಿದರು. ಇದರ ಫಲವಾಗಿ ಲಕ್ಷಾವಧಿ ಜನರು ಭೂಮಿಯ ಮೇಲೆ ಅವಲಂಬಿಸಿ ನಮ್ಮ ಬಡತನವನ್ನೂ ನಿರುದ್ಯೋಗವನ್ನೂ ಬೆಳೆಯಿಸಲು ಮೊದಲು ಮಾಡಿದರು. ಬ್ರಿಟಿಶರ ಆಳಿಕೆಗೂ ಭಾರತದ ಬಡತನಕ್ಕೂ ಎಷ್ಟು ಸಂಬಂಧವಿದೆ ಎಂಬುದನ್ನು ಪಂಡಿತ ಜವಾಹರರು ವು. ಳಲ ರಲ್ಲಿ ಮಾರ್ಮಿಕವಾಗಿ ತೋರಿಸಿ ಹೀಗೆ ಹೇಳಿದ್ದಾರೆ:— A significant fact which stands out is that those parts which have been longest under British rule are the poorest to-day. (ಇ) ಗಲಾಟೆ ರಲ್ಲಿ ಬ್ರಿಟಿಶ್ ಆಳಿಕೆಯ ಯಾತನೆ ಸಹಿಸಲಸಾಧ್ಯವಾಗಿ ಒಂದು ಬಂಡು ಇಡಿಯ ದೇಶದ ತುಂಬ ಎದ್ದಿತು. ಆದರೆ ಅದು ಜನತೆಯ ಬಂಡು ಆಗಿರಲಿಲ್ಲ. ಅದಕ್ಕೆ ಪ್ರಗತಿಪರ ಧ್ಯೇಯವೂ ಇದ್ದಿರಲಿಲ್ಲ. ದೇಶಾಭಿಮಾನದ ಬೀಜ ಬಿತ್ತಲು ಮಾತ್ರ ಅದು ಮಹತ್ವಪೂರ್ಣವಾಗಿತ್ತು; ಹಿಂದು-ಮುಸಲ್ಮಾನರು ಜಾತಿಭೇದವನ್ನು ಮರೆತು ಒಂದಾಗಿ ಬ್ರಿಟಿಶರ ವಿರುದ್ಧ ಹೋರಾಡಿದರು. ಈ ಬಂಡಿನ ಪರಿಣಾಮವಾಗಿ ಬ್ರಿಟಿಶರು ತಮ್ಮ ಶಾಸನಪದ್ಧತಿಯನ್ನು ಸುಧಾರಿಸಿಕೊಂಡರು. ಆಂದಿನಿಂದ ಜಾತಿ-ಜಾತಿಗಳ ವೈಮನಸ್ಸು ಬೆಳೆಯಿಸುವುದು, ಅಂತಃಕಲಹಗಳಿಂದ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುವುದು ಬ್ರಿಟಿಶ ರಾಜ್ಯನೀತಿಯ ಮೊದಲ ಧ್ಯೇಯವಾಯಿತು.

* * * *

ಬ್ರಿಟಿಶ ಆಳರಸರು ಬಯಸದಿದ್ದರೂ ಕೂಡ ಒಂದು ವಿಷಯದಲ್ಲಿ ಸಂಸ್ಕೃತಿಗಳ ಸಂಪರ್ಕದಿಂದ ಕ್ರಮೇಣ ದೇಶದಲ್ಲಿ ಹೊಸ ಚೈತನ್ಯ ಮೂಡಿತು. ಪರಕೀಯರ ಜೀವನವನ್ನು (ಸಾಹಿತ್ಯವನ್ನು) ನಾಹಸಗಳನ್ನು ಅರಿತುಕೊಳ್ಳುವ ಕುತೂಹಲದ ಬುದ್ಧಿವಂತರು ಈ ಚೈತನ್ಯದ ಜನಕರಾದರು. ಇವರಲ್ಲಿ ರಾಜಾ ರಾಮ ಮೋಹನರಾಯ, ಸ್ವಾಮಿ ದಯಾನಂದ ಸರಸ್ವತಿ ಇವರು ಅಗ್ರಗಣ್ಯರು. ಇವರ ಪ್ರೇರಣೆಯಿಂದ ಹಿಂದು ಧರ್ಮವು ತನ್ನ ಸಂದು-ಸಡಿಲುಗಳನ್ನು ಸರಿಪಡಿಸಿಕೊಂಡು ಗಟ್ಟಿಯಾಗತೊಡಗಿತು. ಇಂಗ್ಲಿಶ್ ಶಿಕ್ಷಣ ಮತ್ತು ಸಾಹಿತ್ಯಗಳ ಪ್ರಭಾವದಿಂದ ಪ್ರಗತಿ ಸುಧಾರಕರು ಒಂದೆಡೆ ಮುಂದೆ ಒಂದರೆ. ಪೈ ಸಂಪ್ರದಾಯದ ವಿಶಾಲ ದೃಷ್ಟಿಯನ್ನಿಟ್ಟುಕೊ ಸ್ವಾಮಿ ವಿವೇಕಾನಂದರಂತಹರು ಇನ್ನೊಂಗ ಜಾಗೃತಿಯನ್ನೂ ಸ್ವಾಭಿಮಾನವನ್ನೂ ಹುಟ್ಟಿಸಿದ

* * * *

ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ಲಕ್ಷದಲ್ಲಿಡಬೇಕಾಗುವುದು. ಅದೆಂದರೆ, ಪ್ರಾರಂಭದ ಪ್ರಗತಿಯಲ್ಲಿ ಹಿಂದುಗಳೆ ಇದ್ದರು. ಇಂಗ್ಲಿಶ ಶಿಕ್ಷಣವನ್ನು ಪಡೆಯಲು ಮುಸಲ್ಮಾನರು ಮನಸ್ಸುಮಾಡಲಿಲ್ಲ; ಧನದ ವ್ಯವಹಾರ ಅವರ ಧರ್ಮಕ್ಕೆ ನಿಂದ್ಯವಿದ್ದುದರಿಂದ ಔದ್ಯೋಗಿಕ ಬೆಳೆವಣಿಗೆಯಲ್ಲಿ ಅವರು ಸೇರಲಿಲ್ಲ. ಮುಂದೆ ಅವರಲ್ಲಿ ಜಾಗೃತಿಯುಂಟಾದಾಗ ಹಿಂದುಗಳಂತೆ ಅವರು ತಮ್ಮ ಪ್ರಾಚೀನ ವೈಭವವನ್ನು ನೆನೆದುಕೊಳ್ಳಲಿಲ್ಲ; ಏಕೆಂದರೆ ಹಿಂದುಗಳಿಗೆ ವೈದಿಕ ಸಂಪ್ರದಾಯವಿದ್ದಂತೆ ಅವರಿಗೆ ಈ ದೇಶದಲ್ಲಿ ಯಾವ ಸ್ಫೂರ್ತಿದ್ಧಿಯೂ ಇದ್ದಿರಲಿಲ್ಲ. ಹೀಗಾಗಿ ಪ್ರತ್ಯೇಕವಾಗಿಯೆ ಅವರ ಜಾಗೃತಿಗೆ ಪ್ರಾರಂಭವಾಯಿತು. ಈ ಜಾಗೃತಿಗೆ ಮೂಲಪುರುಷರಾದ ಸರ್ ಸೈಯ್ಯದ ಅಹಮ್ಮದ ಖಾನರು (ಅಲಿಗಡ ವಿಶ್ವವಿದ್ಯಾಲಯವ ಸ್ಥಾಪಕರು ಇವರೆ) ಹೇಳುವ ಒಂದು ಮಾತು ಮನನೀಯವಾಗಿದೆ. ಜಾತಿಭೇದವು ರಾಷ್ಟ್ರೀಯ ಕಾರಣದಲ್ಲಿ ಸೇರಬೇಕೆ ಎಂಬ ಪ್ರಶ್ನೆಗೆ ಅವರ ಈ ಮಾತು ಉತ್ತರವಾಗಿದೆ:— Do you not inhabit the same land? Remember that the word Hindu and Muhamedan are only meant for religious distinction—otherwise all persons whether Hindu or Muhamedan, even the Christians who reside in this country are all in this particular respect belonging to one and the same nation. (ವು ೪೧೧). ಆದರೆ, ಇಂತಹ ಬುದ್ಧಿವಂತಿಕೆ ಕ್ರಮೇಣ ಆಗಾಖಾನ ಮತ್ತು ಮಹಮ್ಮದ ಅಲಿ ಜಿನಾ ಇವರ ನೇತೃತ್ವದಲ್ಲಿ ಹೇಗೆ ನಷ್ಟವಾಯಿತೆಂಬುದನ್ನು ಸಂದರ್ಭಾನುಸಾರವಾಗಿ ಜವಾಹರರು ವಿವರಿಸಿದ್ದಾರೆ. ಈ ಬಗ್ಗೆ ಸರ್ ಮಹಮ್ಮದ ಇಕ್ಬಲ್‌ರು ತಮಗೆ ಹೇಳಿದ ಒಂದು ಮಾತನ್ನು ಕಾಣಿಸಿದ್ದಾರೆ ಜಿನಾ ಮತ್ತು

ಜವಾಹರರ ಸಂಬಂಧವಾಗಿ ಇಕ್‌ಬಲ್‌ರು ಹೀಗೆ ಹೇಳಿದರಂತೆ.— What is there in common between Jinnah and you ? He is a politician, you are a patriot (ಪು. ೪೧೯) ಆ ಮಾತು ಇಂದಿನ ರಾಜಕಾರಣದ ತೊಡಕನ್ನೆ ಬಿಚ್ಚಿಹೇಳುತ್ತಿದೆ.

* * * *

ಇನ್ನು ಮುಂದಿನ ಕತೆ ಇತ್ತೀಚಿನ ಕತೆ, ಕಾಂಗ್ರೆಸಿನ ಇತಿಹಾಸ, ದೇಶಾಭಿಮಾನದ ಚಳವಳಿ, ಸ್ವಾತಂತ್ರ್ಯ ಯುದ್ಧದ ಸತ್ಯಾಗ್ರಹ ಸ್ವರೂಪ—ಇವೆಲ್ಲ ಕೊನೆಯ ೨೦೦ ಪುಟದ ವಿಷಯಗಳಾಗಿವೆ. ಈ ಬಗ್ಗೆ ವಿಮರ್ಶೆಯಾಗಲಿ ವಿವರಣೆಯಾಗಲಿ ಇಂದಿನ ವಾಚಕರಿಗೆ ಅಷ್ಟೊಂದು ಅಗತ್ಯವಿಲ್ಲವೆನ್ನಿಸಿದ್ದರಿಂದ ಈ ದೀರ್ಘ ವಿಮರ್ಶೆಯನ್ನು ಇಲ್ಲಿಗೆ ತಡೆಯುವೆವು.

ಪಂಡಿತ ಜವಾಹರರ ಈ ದೊಡ್ಡ ಗ್ರಂಥವೆಂದರೆ ಇತಿಹಾಸದ ತಂತ್ರ (technique)ದ ದೃಷ್ಟಿಯಿಂದ, ವಿಷಯ ನಿರೂಪಣೆಯ ದೃಷ್ಟಿಯಿಂದ, ನಾವಿರುವ ವರ್ಷಗಳ ಮತ್ತು ವಿಶಾಲ ದೇಶದ ಇತಿಹಾಸವನ್ನು ಏಕಸೂತ್ರವಾಗಿ ಬರೆದ ಬುದ್ಧಿಮತ್ತೆಯ ದೃಷ್ಟಿಯಿಂದ ಶೈಲಿಯ ಸೌಂದರ್ಯಕ್ಕಾಗಿ, ಕಾವ್ಯ-ಮಯ ಭಾವನೆಯ ಬೆರಕೆಗಾಗಿ, ಕೊನೆಗೆ, ಇಂದಿನ ಹಿಂದುಸ್ತಾನದ ಹೊಸ ಚೈತನ್ಯದ ಪ್ರತೀಕ ಪುರುಷರೆ ಗ್ರಂಥಕರ್ತರೆಂಬುದಕ್ಕಾಗಿ ಎಲ್ಲರೂ ಅಭಿಮಾನದಿಂದ ಸಂಗ್ರಹಿಸಬೇಕಾದ ಪುಸ್ತಕ, ತಿಳುವಳಿಕೆಯಿಂದ ಓದತಕ್ಕ ಗ್ರಂಥವಾಗಿದೆ. ಜಗತ್ತಿನ ಇತಿಹಾಸ ವಾಙ್ಮಯದಲ್ಲಿ ಇದಕ್ಕೆ ಶಾಶ್ವತ ಸ್ಥಾನ ದೊರೆಯುವುದೆಂದು ಹೇಳಿದ ಮೇಲೆ ಬೇರೆ ವಿಮರ್ಶೆ ಬೇಕೆ?

'ವಿಧಿ ತಂದ ವಧು' ಅನುವಾದಕರು: ಪಿ. ವೆಂಕಟೇಶಾಚಾರ್ಯ, B A. B T. ಸಂಜೀವಿನಿ ಪ್ರಕಾಶನ ಕುಬ್ಬಳ್ಳಿ ಬೆಲೆ ೧–೮–೦ ರೂ. ಪುಟ ೧೪೬

ಶ್ರೀಮಾನ್ ಗುಡಿವಾಟಿ ವೆಂಕಟಾಚಲಂ ಇವರ 'ದೈವ ಮಿಚ್ಚಿನ ಭಾರ್ಯ' ಎಂಬ ತೆಲಗು ಕಾದಂಬರಿಯ ಸರಳಾನುವಾದ. ಶ್ರೀ ಚೆಲಂ ಅವರು ಸ್ತ್ರೀಯರ ಸ್ಥಿತಿಯನ್ನು ಸುಧಾರಿಸಿ ತಿವರ ಉನ್ನತಿಗಾಗಿ ದುಡಿಯುತ್ತಿರುವ ಕೃತಿಗಳಲ್ಲಿ ಒಂದೆಂದು ಅನುವಾದಕಾರರು ಹೇಳಿರುವರು. ತೆಲಗು ಕನ್ನಡ ಭಾಷೆಗಳು ಅಕ್ಕತಂಗಿಯರಂತಿರುವವು ಆ ಭಾಷೆಯಲ್ಲಿಯ ಅತಿ ಉತ್ತಮವಾದ ಗ್ರಂಥಗಳನ್ನು ಕನ್ನಡಿಸಬಹುದಿತ್ತು. ಶ್ರೀ ವೆಂಕೋಬಾಚಾರ್ಯರು ಉಭಯ ಭಾಷಾ ವಿಶಾರದರು. ಈ ಕಾದಂಬರಿಯು ಯಾವ ಭಾಷೆಯಲ್ಲಿ ಇದ್ದರೂ ಆ ಭಾಷೆಗೆ ಆ ಸಮಾಜಕ್ಕೆ ಒಂದು ಕಲಂಕ. ಇದರಲ್ಲಿ ತೆಲಗರ ಸಮಾಜವು ನಮಗೆ ಕಾಣುವದಿಲ್ಲ—ಇದು ಯಾವ ಸಮಾಜದ ಚಿತ್ರವೂ ಅಲ್ಲ. ಇದರಲ್ಲಿಯ ನಾಯಕನು ಕೇವಲ ಕೈಲಾಗದ ಹೆಂಗಸರಂತೆ ಪರ ಸ್ತ್ರೀಯನ್ನು ಪ್ರೀತಿಸುವನು. ಆ ಪದ್ಮಾವತಿಯ ಗಂಡನ ನಡತೆಯನ್ನು ನೋಡಿದರೆ ಅವನು ಗಂಡೆನು ಹೌದೊ ಅಲ್ಲವೋ ಎಂಬ ಸಂಶಯವು ಬರುವದು. ಇನ್ನು ನೂರು ವರ್ಷಗಳ ಮುಂದೆ, ಸಮಾಜವು ಹೀಗಾಗಬಹುದೆಂದು ತಿಳಿಯಬೇಕೆಂದರೆ, ಕಾದಂಬರಿಕಾರು ನಾಮದಾರ ಗೋಖಲೆಯವರು ವಿಲಾಯತಿಯ ವ್ಯವಸಾಯದ ಸಮಯವನ್ನು ಕಾದಂಬರಿಯ ಕಾಲವೆಂದು ಇಟ್ಟುಕೊಂಡಿರುವರು! ಮೂರ್ತಿರಾಯನು ಹಾದರ ಮಾಡಿದ ಹೆಂಡತಿಯನ್ನು ಕ್ಷಮಿಸಿ ಅವಳಿಂದ ಇಬ್ಬರು ಮಕ್ಕಳನ್ನು ಹಡೆಯುವನು. ಅವಳು ಮತ್ತೆ ತನ್ನ ಪ್ರಿಯನನ್ನು ಹೊಂದುವಳು. ಹೆಂಗಸಾದರೂ ತಾರತಮ್ಯ ವಿಚಾರ ನಾಯಿಕೆಯಲ್ಲಿ ಹೆಚ್ಚು. ಉದ್ದುದ್ದ ಭಾಷಣದಿಂದ ತನ್ನ ಹೇಯವಾದ ಪ್ರೇಮವು ಪವಿತ್ರವೆಂದು ಸಿದ್ಧಮಾಡಲು ಬಹಳ ಹವಣಿಸುವಳು. ಕೇವಲ ಅವಳ ಭಾಷಣಗಳೇ ಹೆಚ್ಚು. ಒಂದೇ ವಾಕ್ಯದಲ್ಲಿ ಮದರಾಸಿನಿಂದ ಸಿಂಗಾಪೂರಕ್ಕೆ ಹೋಗಿಬಂದನು ರಾಧಾ ಎಂದು ಬರೆದ ಪುಸ್ತಕದಲ್ಲಿ ಪದ್ಮಾತಿಯ ಭಾಷಣಗಳು ಬೇಸರ ಹುಟ್ಟಿಸುವವು. ಈ ಕಾದಂಬರಿ (ಕಾದಂಬರಿಯೇ ಇದು?) ಯಾವ ಕಾರ್ಯವನ್ನೂ ಸಾಧಿಸುವದಿಲ್ಲ; ಇದು ಅಚ್ಚಾಗದಿದ್ದರೆ ಒಳ್ಳೇದಾಗುತಿತ್ತು. ಕೇವಲ ಅನುವಾದಕಾರರ ಅತುಲ ಕನ್ನಡ ಪ್ರೇಮವನ್ನು ವ್ಯಕ್ತಮಾಡುತ್ತದೆ; ಅವರು ತಮ್ಮ ಹಿಮಾಲಯದಂಥ ಹುರುಪನ್ನು ಬೇರೆ ರೀತಿಯಿಂದ ಉಪಯೋಗ ಮಾಡಿ ಕನ್ನಡ ಸೇವೆ ಮಾಡಬೇಕು. ಒಟ್ಟಾರೆ ಕಾದಂಬರಿಯ ಹೆಸರು ಮಾತ್ರ ಮನಹಿಡಿಯುವಂಥದು.

THE FOURTH
MYSORE STATE JOURNALISTS' CONFERENCE

ಹಾಸನ HASSAN

ವಿಷಯವಾರು ಕ್ರಮಣಿಕೆಯಲ್ಲಿ.

ವಿಷಯಗಳು		ಪಾನು.
ಪತ್ನಿಪ್ರೇಮ ಪರೀಕ್ಷೆ	—	—
ದಾಂಪತ್ಯ ಪ್ರೇಮವು	—	—
ಸ್ತ್ರೀಪುರುಷರ ಭೇದಭಾವ.	—	—
ವಿಷಯವುಣ್ಣುಗಳ ಫಲಕ್ಕೆ ಪರಲೋಕವೇಕೆ	—	—
ಗೃಹಶಿಕ್ಷಣ		—



ಶ್ರೀ ಗುರು ಪ್ರಸನ್ನ

ಮುಂಡಿಗೆ

ಜ್ಞಾನೋತ್ಕರ್ಷ ಮಾಲಾ.

ಮತ್ತೇಭ ವಿಕ್ರೀಡಿತ ವೃತ್ತ:—

ಎನತಾ ನರ್ಗವ ವಿಜ್ಞಾನೋನ್ನತಿಕೆಯುಂ ವಕ್ತೃತ್ವ ಸಂವೃದ್ಧಿಯುಂ
ಜನರೋನ್ನಮ್ಯಣಿಜೇಳ್ಕೆಯುಂ ಸುತಕಲಾ ಕೌಶಲ್ಯಮುಂ ನಾಧಿಪಾ
ನನುಮಾರ್ಗಂಗಳ ನಾರಿಸೈತಿರುವ ಜ್ಞಾನೋತ್ಕರ್ಷ ಮೌಲಾಗ್ರಣಂ
ವಿ ಸುತಾನಂದಕರಂ ವಿಚಾರಿಸಲಿವೇ ಲೋಕೋತ್ತರಾಶಾಧರಂ॥

ಒಂದ. ಆರಿಂದೆ ಜನಾಂಗಂಮ। ತ್ತಾರಿಂದೆ ಜನಾಂಗ ದೇಳ್ಗೆ ಯಾಸಾದಾರ್ಯರ್ದ್॥
ಆರೆಲ್ಲರ ಪಾಲಕರಾ। ನಾರೀಕುಲದೇಳ್ಗೆ ಯಾಗಲೀಪ್ಪತ್ಕ ನೊಲವಿಂ॥೧॥

ಲೇಖಕ :— ಮಲ್ಲಪ್ಪ ಎಲ್ಲಪ್ಪ ಕವಲಿ ಮಾಸ್ತರ ಕೋಣ.

ಪತ್ನಿಪ್ರೇಮ ಪರೀಕ್ಷೆ

"ಅರ್ಧಂ ಭಾರ್ಯಾ ಮನುಷ್ಯಸ್ಯ ಭಾರ್ಯಾ ಶ್ರೇಷ್ಠ ತಮಃ ಸ್ನೇಹಃ
ಭಾರ್ಯಾವತ ಸಖಾ ಭಾರ್ಯಾ ಮೂಲ ತ್ರಿವರ್ಗ ಸಾಧನಂ॥"

ಮಧ್ಯರಾತ್ರಿ ಸಮಯ ಈ ಪ್ರಪಂಚದಲ್ಲಿ ಇಂಥವೇಳೆಯಲ್ಲಿ ಇಂಥವೇ ಪ್ರಸಂಗ
ಳು ನಡುವವೆಂದು ಹೇಳುವದು ಬಹಳ ಕಠಿಣ ಯಾಕಂದರೆ ಒಮ್ಮೊಮ್ಮೆ ನಾನು ನಾನಾ ಪ್ರ
ದೇಶಗಳಿಗೆ ಪ್ರವಾಸಕ್ಕೆ ಹೋಗಿದ್ದಾಗ ಅಲ್ಲಿ ಪ್ರಸಂಗವಶಾತ್ ಹೊತ್ತಲ್ಲದ ಹೊತ್ತಿನಲ್ಲಿ ಎದ್ದು
ಬಂದಿದ್ದು ಉಂಟು ಆದಕಾರಣ ಈ ಪ್ರಸಂಗವಿಶೇಷವನ್ನು ಯಾವ ಸಮಯದಲ್ಲಿ ನಡೆದಿತ್ತೆಂದು
ಹೇಳಲಾರೆನು ಆದರೆ ಇದು ಸತ್ಯವಾದ ಪ್ರಸಂಗವೆಂಬುದು ಮಾತ್ರ ನಿಶ್ಚಯ ಇದರಲ್ಲಿ ಯಾವ
ಜಾತಿ ಭೇದಕ್ಕೂ ಅವಕಾಶವಿಲ್ಲ ಆದಕಾರಣ ಇದನ್ನು ಓದುವ ಸಹೃದಯರಿಗೆ ಯಾವ ಜಾತಿಯವರೂ
ಹೀನೈಸಿಕೊಳ್ಳಲಿಕ್ಕಿಲ್ಲವೆಂದು ನಂಬಿಕೆಯಿದೆ ಇಂಥ ಪ್ರಸಂಗಗಳು ಪ್ರತಿಯೊಂದು ಜಾತಿಯವರಲ್ಲಿ
ಯೂ ಸಂಭವಿಸಬಹುದು)

ಕಾಗಿಬಂದರೆ ಆಶ್ಚರ್ಯವೇನು? ಪತಿಯು ಸಂಕಟದಲ್ಲಿದ್ದಾಗ ಅತಿಸಿಗೆ ನಾಲು ಸಮಾಧಾನದ ಮಾತುಗಳನ್ನು ಹೇಳಿ ಅವನ ದುಃಖವನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನಿಸುವದು, ಅಂಥಸ್ಥಿತಿಯಲ್ಲಿಯೂ ಪತಿಗೆ ಧೈರ್ಯೋತ್ಸಾಹಗಳನ್ನು ಕೊಡುವದು ಇವೇ ಮೊದಲಾದ ಕಠಿಣ ಕೆಲಸಗಳನ್ನು ಸರ್ವಸ್ತ್ರೀ ಪುರುಷರನ್ನೇ ಆವರಿಸಿರುವ ಸ್ತ್ರೀಯರು ನೆರವೇರಿಸಿದ್ದಾರೆ ಯಾರಿಗೆ ತಾನೇ ಆಶ್ಚರ್ಯವಾಗಲಿಕ್ಕಿಲ್ಲ! ಇದೇ ಕಾರಣದ ಸಲುವಾಗಿ ಕವಿಗಳು ಸ್ತ್ರೀಯರಿಗೆ, ವಸಂತ ಋತುವಿನಲ್ಲಿ ಒಂದುವೃಕ್ಷಕ್ಕೆ ತೊಡಕಿ, ವರ್ಷಾಕಾಲದಲ್ಲಿ ಝಂಝಾವಾತದಿಂದ ಆ ವೃಕ್ಷವು ಮೂಲೋತ್ಪಾಟನವಾಗುವಾಗಲೂ ಅದನ್ನು ಬಿಡದೆ, ಮತ್ತಿಪ್ಪು ಗಟ್ಟಿಯಾಗಿಯೇ ಆ ವೃಕ್ಷವನ್ನು ಅಪ್ಪಿಕೊಂಡು, ಅದು ಉರುಳಿ ಬೀಳದಂತೆ ಭದ್ರವಾಗಿ ಮಾಡುವ ಬಳ್ಳಿಯ ಸಾಮ್ಯವನ್ನು ಕೊಟ್ಟರೆ, ಆದಕ್ಕೆ ರಸಿಕರು ಒಪ್ಪಿಕೊಳ್ಳದೆ ಮಾಡುವದೇನು? ಆದರೆ ಸರ್ವತ್ರ ಇಂಥ ಸ್ತ್ರೀಯರೇ ಮೊರೆಯುವದು ಅಸಂಭವವು: ಇಷ್ಟೇ ಅಲ್ಲ, ಅಕಸ್ಮಾತ್ತಾಗಿ ದೊರೆಯುವ ಸಂಭವವೇ ಹೆಚ್ಚು. ಪತಿಯ ಸೌಖ್ಯವೇ ತನ್ನ ಸೌಖ್ಯ, ಪತಿಯ ದುಃಖವೇ ತನ್ನ ದುಃಖವೆಂದು ತಿಳಿದು, ಅವನ ಸುಖ ದುಃಖಗಳ ಪಾಲುಗಾರ್ತಿಯಾಗುವ ಪತ್ನಿಯೇ ಪತ್ನಿಯು. ಉಳಿದವರೆಲ್ಲ ಲಗ್ನವಾದವನಮಾತ್ರಕ್ಕೆ ಹೆಕ್ಕಿನಿಂದ ಪತ್ನಿಯರೆಂಬ ಹೆಸರನ್ನು ಧರಿಸಿ ಮೆರೆದರೆ ಪತಿಗೆ ಬಂದ ಭಾಗ್ಯವೇನು? ಪತಿಯ ಸುಖ ದುಃಖ ಭಾಗಿನಿಯರಾದ ಸ್ತ್ರೀಯರು ನಮ್ಮ ದೇಶದಲ್ಲಿ ವಿಶೇಷವಾಗಿದ್ದದರಿಂದಲೇ ನಮ್ಮಾ ಭಾರತ ಮಾತೆಯು ಜಗತ್ತಿನಲ್ಲಿಷ್ಟು ಹೆಸರುಗೊಂಡಿರುವಳು. ಅಂಥ ಪತಿವ್ರತೆಯೋರ್ವಳ ಚರಿತ್ರೆಯನ್ನು ನಮ್ಮ ವಾಚಕ ಮಹಿಳಾಮಣಿಗಳಿಗಾಗಿ ಕೆಳಗೆ ಕೊಡುತ್ತೇವೆ.

ನನ್ನ ಮಿತ್ರನಾದ ವಿನಾಕರಾಯನು ಮುಂಬಯಿಯಲ್ಲಿ ಓದುತ್ತಿರುವಾಗಲೇ ದುರ್ದೈವದಿಂದ ಅವನ ತಂದೆಯು ತೀರಿಕೊಂಡನು. ಮನೆಯಲ್ಲಿ ಯಾರೂ ಹಿರಿಯರಿಲ್ಲದಂತಾಯಿತು. ವಿನಾಯಕರಾಯನಾದರೂ ತನ್ನತಂಗಿಗೆ ಏಕಮಾತ್ರ ಪುತ್ರನು. ಆದ್ದರಿಂದ ಮುಂದೆ ಕಲಿಯುವದನ್ನು ಬಿಟ್ಟುಗೊಟ್ಟುಗೃಹಕೃತ್ಯವನ್ನೆಯನ್ನು ಮಾಡುವದಕ್ಕಾಗಿ ಸ್ವಗ್ರಾಮಕ್ಕೆ ಬಂದುಬಿಟ್ಟನು. ವಿನಾಯಕರಾಯನ ತಂದೆಯು ಜಿನ್ನಿವಾಲ್ಯಗಾರಿಕೆಯನ್ನು ಮಾಡಿ ವಿಪುಲವಾಗಿ ಧನ ಸಂಪಾದಿಸಿದ್ದನು. ಅವನು ಮಾಡುತ್ತಿದ್ದ ವ್ಯವಹಾರವು ರೋಖ ರುಪಾಯಿಗಳನ್ನೇ ಅವಲಂಬಿಸಿತ್ತಾದ್ದರಿಂದ, ಜನ್ಮಾನುಗಳನ್ನು ಮಾತ್ರ ಸಂಪಾದಿಸಿರಲಿಲ್ಲ. ವಿನಾಯಕರಾಯನು ಸ್ವಲ್ಪವಯಸ್ಸಿನವನಾಗುತ್ತ ಬಂದದರಿಂದ, ತಂದೆಯ ಮರಣದ ತರುವಾಯ ಕೆಲವು ಜನಗಳಮೇಲೆ ಲಗ್ನ ಮಾಡಿಕೊಂಡನು. ಸರಸ್ವತೀಬಾಯಿಯು (ವಿನಾಯಕರಾಯನ

ನ ಹೆಂಡತಿಯ ಹೆಸರು) ಒಬ್ಬ ದೊಡ್ಡ ಗೃಹಸ್ಥನ ಮಗಳಿದ್ದು, ಚನ್ನಾಗಿ ಶಿಕ್ಷಣ ಹೊಂದಿದ್ದಳು. ಅವಳಿಗೆ ಪತ್ನಿಯ ಕರ್ತವ್ಯ-ಕರ್ಮಗಳು ಯಾವವೆಂಬುದು ಗೊತ್ತಿತ್ತು. ಆದ್ದರಿಂದ ವಿನಾಯಕರಾಯನು ಯಾವಾಗಲೂ ಪತ್ನಿಯ ಸಹವಾಸದಲ್ಲಿಯೇ ಹೊತ್ತುಗಳೆಯಲು ಇಚ್ಛಿಸುತ್ತಿದ್ದನು. ಆದ್ದರಿಂದಅವನು ತನ್ನ ಪಿತ್ರಾರ್ಜಿತ ರೋಡುಡ ಆಸ್ತಿಯನ್ನೆಲ್ಲ ಹತ್ತಿರದಲ್ಲಿಯ ವ್ಯಾಪಾರದಲ್ಲಿ ಹಾಕಿ; ಶಾಲುಗಾರನಿಗೆ ಎಲ್ಲ ಕೆಲಸವನ್ನು ಒಪ್ಪಿಸಿ, ತನ್ನ ಮನೋಹರೆಯೊಡನೆ ಯಾವಾಗಲೂ ಮನೆಯಲ್ಲಿಯೇ ಇರಹತ್ತಿದನು. ಅವನು ತನ್ನ ಹೆಂಡತಿಗೆ ಯಾವರೀತಿಯಿಂದಲೂ ಯಾತಕ್ಕೂ ಕೊರತೆ ಮಾಡಿರಲಿಲ್ಲ. ಮನೆಯಲ್ಲಿ ಬೇಕಾದಷ್ಟು ಆಭರಣಗಳು, ಸರಸ್ವತೀಬಾಯಿಯೂ ತವರ್ಮನೆಯಿಂದ ಎಷ್ಟೋ ಅಮೂಲ್ಯ ಆಭರಣಗಳನ್ನು ತಂದಿದ್ದಳು. ಮನೆಯಲ್ಲಿ ಅಡಿಗೆ ಮಾಡಲಿಕ್ಕೆ ಒಂದು ಶೊತ್ತು ಇದ್ದಿತು. ಸಾರಾಂಶ ಶ್ರೀಮಂತತನದ ಠೀವಿಯಲ್ಲಿ ಏನೂ ಕೊರತೆ ಇದ್ದಿಲ್ಲ. ಗಂಡಹೆಂಡಂದಿರಿಬ್ಬರೂ ಸುಧಾರಿಸಿದವರಾದುದರಿಂದ ಸದಾ ಪರಸ್ಪರವಾಗಿ ಅನಂದ ಗೈಯುತ್ತ ಕಾಲವನ್ನು ಬಹುಸುಖವಾಗಿ ಕಳೆಯುತ್ತಲಿದ್ದರು. ಈಪ್ರಕಾರ ಒಂದು ವರ್ಷ ಸಂದಿತು.

ಕಾಲಚಕ್ರಾನುಗಾಮಿಯಾದ ಈ ಜಗತ್ತಿನಲ್ಲಿ ಯಾವಸ್ಥಿತಿಯೂ ಸ್ಥಿರವಾದದ್ದಲ್ಲ. ತಿಪ್ಪಿಯಮೇಲೆ ಮಲಗುವ ತಿರುಕನು ಉಪ್ಪರಿಗೆಯ ಮೇಲೆ ಮಲಗುವ ಸುಸ್ಥಿತಿಯನ್ನು ಹೊಂದುವದೂ, ವಿಷಕುಡಿವೇನಂದರೆ ಪ್ಲೇಗ ಸಹ ಇಲ್ಲದವನು ಕುಬೇರನಾಗಿ ಕೂಡ್ಯುವದೂ ಕಾಲಚಕ್ರದ ಗತಿಯಿಂದಲೇ! ಇದೋ ನೋಡಿರಿ! ಬಾಕೀ ವಸೂಲ ಮಾಡುವದಕ್ಕಾಗಿ ದಿನಾಲೂ ನಾಲ್ಕುಆಣೆ ಕೂಲಿ ಗೊತ್ತುಮಾಡಿಕೊಂಡು ಊರಿಂದೂರಿಗೆ ಕೂಳುನೀರಿಲ್ಲದೆ ಅಲೆಯುತ್ತಿದ್ದ ಹುಸರತನಾಬನಿಗೆ ಸೋಡತಿ (ಲ್ಯಾಯಟ್ರಿ) ಯಲ್ಲಿ ಒಂದು ಲಕ್ಷರೂಪಾಯಿಗಳು ದೊರೆದು ಹೆಸರತ ಸಾಹೇಬರಾಗಿದ್ದಾರೆ. ಇದಾದರೂ ಕಾಲಚಕ್ರದ ಗತಿಯಿಂದಲೇ! ಇದೇ ಕಾಲಚಕ್ರವೇ ಸುಖದಲ್ಲಿ ಲೋಲಾಡುತ್ತಿದ್ದ ವಿನಾಕರಾಯನಿಗೆ ಸರ್ವಸ್ವ ಘಾತವಾಡಿಬಿಟ್ಟಿತು.

ಒಂದು ದಿನ ಸಂಧ್ಯಾಕಾಲದಲ್ಲಿ ನಾನು ಮನೆಯಲ್ಲಿ ಸ್ವಸ್ಥವಾಗಿ ಕುಳಿತುಕೊಂಡು, ಬಹುದಿನಗಳಿಂದ ವಿನಾಕರಾಯನು ನನ್ನ ಭೆಟ್ಟಿಗೆ ಬಾರದ್ದರಿಂದ ಇಂದಾದರೂ ಬಂದಾನೆಂದು ಅವನ ದಾರಿಯನ್ನೇ ನೋಡುತ್ತಿದ್ದೆನು. ಇಷ್ಟರಲ್ಲಿ ನಿಜವಾಗಿ ವಿನಾಕರಾಯನು ಬರುವದು ಸ್ವಲ್ಪ ದೂರದಿಂದ ನನ್ನ ದೃಷ್ಟಿಗೆ ಬಿದ್ದಿತು. ಸ್ವಲ್ಪ ಹೇಳಿಯಲ್ಲಿ ನಾನು ಕೂತಲ್ಲಿಗೇ ಬಂದನು. ಅವನ ಮುಖಚರ್ಯೆ

ಯು ತೀರ ವಿನ್ನವಾಗಿತ್ತು. ಏನೋ ಒಂದು ದಾರುಣವಾದ ವ್ಯಸನಾಗ್ನಿಯಿ
ದ ಬಹಿಸುತ್ತಿರುವವನಂತೆ ತೋರುತ್ತಿದ್ದನು. ಈ ಮೊದಲು ಇಂಥ ಸ್ಥಿತಿಯ
ನಾನೆಂದೂ ಅವನನ್ನು ನೋಡಿರಲಿಲ್ಲ. ಭೆಟ್ಟಿಯಾದಕೂಡಲೆ ಆ ಹೂತು
ಮಾತು ತೆಗೆದು ಹರಟುತ್ತ ಹಾಸ್ಯವೈಯುತ್ತಿದ್ದ ವಿನಾಯಕರಾಯನು, ಬಂದು
ಹ್ಹೀ ವೇಳೆಯಾದರೂ ಸುಮ್ಮನೇ ಕೂತುಕೊಂಡಿದ್ದನು. ನನ್ನಿಂದ ತಡೆಯ
ವದಾಗಲಿಲ್ಲ. ಮಾತಾಡಿಸಿದೆನು.—

"ಏನು ವಿನಾಯಕರಾಯರೇ," ನಾನು ಮೆಲ್ಲಗೆ ವಿಚಾರಿಸಿದೆನು, "ಎ
ಯಾದರೂ ನೆಟ್ಟಗಷ್ಟೇ! ನೀವು ಈಗ ಹೀಗೇಕೆ ಉದಾಸೀನರಾಗಿರುವಿರಿ? ಸರಸ್ವತೀಬಾ
ಯಿಯವರು ಕ್ಷೇಮದಿಂದಿರುವರೇ?"

ನಾನು ಪ್ರಶ್ನಮಾಡಿದ ಎಷ್ಟೋ ಹೊತ್ತಿನಮೇಲೆ ಮಿನ್ನ ಸ್ವರದಲ್ಲಿ ಉತ್ತರಕೊ
ಟ್ಟನು, "ಏನು ಹೇಳಲಿ! ನಾನು ಸರ್ವಸ್ವೀ ಮುಳುಗಿಹೋಗಿರುವೆನು."

"ಆದುದಾದರೂ ಏನು?" ನಾನು ವಿಚಾರಿಸಿದೆನು.

"ನಾನು ನನ್ನ ದುಡ್ಡನ್ನೆಲ್ಲ ಪತ್ತಿಅರಳಿಯ ವ್ಯಾಪಾರದಲ್ಲಿ ಹಾಕಿದ್ದು ನಿಮ
ಗೆಗೊತ್ತಿರುವದಷ್ಟೇ? ಈಗ ಎಂಟು ದಿನಗಳ ಹಿಂದೆ ನನ್ನ ಪಾಲುಗಾರನ ಕಡೆ
ಯಿಂದ – ಭಯಂಕರ ಹಾನಿಯಾಗಿರುವದೆಂದೂ, ತೀವ್ರ ವ್ಯವಸ್ಥೆ ಮಾಡಿಕೊಳ್ಳ
ದಿದ್ದಲ್ಲಿ ದಿವಾಳಿ ತೆಗೆಯುವ ವೇಳೆಯು ಸಮೀಪಿಸುವದೆಂದೂ ಪತ್ರ ಬಂದದೆ. ನ
ನ್ನಲ್ಲಿಯಲ್ಲಿಯಂತೂ ರೋಕ ಒಂದು ರೂಪಾಯಿ ಸಹ ಇಲ್ಲ. ಜಮೀನುಗ
ಗಳಿಲ್ಲದ್ದು ನಿಮಗೆ ಗೊತ್ತೇ ಇದೆ. ಇಂಥ ಭಯಂಕರ ಸಂಕಟದೊಳಗಿಂದ ಹೇಗೆ
ಪಾರಾಗಾದೇನೆಂಬ ಹಂಚಿಕೆಗಳೊಂದೂ ತೋಚದೆ ಹುಚ್ಚನಾಗಿ ಹೋಗಿರುವೆನು.
ಇತ್ತಲೆಯಲ್ಲಿ ಸಿಕ್ಕ ಸಿಕ್ಕ ವಿಚಾರಗಳು ಬರುತ್ತಿರುವವು. ಇಂದು ಮುಂಜಾವಿನಲ್ಲಿ
ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿದ್ದೆನು. ಆದರೂ ಕಟ್ಟಕಡೆಗೆ ಈ
ಸಂಗತಿಯನ್ನೊಂದು ಬಾರೆ ನಿಮಗೆ ತಿಳಿಸುವದು ಯೋಗ್ಯವೆಂದು ನಿಮ್ಮ ಬಳಿಗೆ
ಬಂದಿರುವೆನು." ಮತ್ತಿಷ್ಟು ಮಿನ್ನನಾಗಿ ಉಸುರ್ಗರೆಯುತ್ತ ನನ್ನ ಬಾಯಿಂದೇ
ಏನನ್ನು ಹೊರಡುವದೋ ಎಂದು ಟಕ್ಕುಹಿಡಿದು ಕೂತನು.

ಬೇಕಾದಂಥ ದೊಡ್ಡ ವಿಚಾರವನ್ನು ಮಾಡಬಹುದು; ಡಾಕ್ಟರ ಜೋಸ
ನಂತೆ ಹೊಸ ಹೊಸ ಶೋಧಗಳನ್ನು ಮಾಡಬಹುದು. ಆದರೆ ಧನಹಾನಿಯಿಂ
ದ ಸಂಕಟಕ್ಕೊಳಗಾದ ಮನುಷ್ಯನನ್ನು ಉಳಿಸಿಕೊಳ್ಳಲು ಉಪಾಯ ಶೋಧಿಸುವ

ಕರ್ನಾಟಕ ವಿದ್ಯಾವರ್ಧಕ ಸಂಘ

ಯುಷ್ಕ! ಮೊಡ್ಡ ಮೊಡ್ಡ ಸುಪಿಚಾರಿಗಳಾದ ಕಾರಣ[illegible]ಂದ ಧನಹಾನಿಯು ಹೊಡತವನ್ನು ಸಹಿಸಲಾರದೆ — ಉಪಾಯಗಾಣದೆ — ಆ ಹತ್ಯಮಾಡಿಕೊಂಡ ಉದಾಹರಣೆಗಳುಂಟು. ಎಷ್ಟೋ ಸಾರೆ ಹಾನಿಯನ್ನು ಕೋಸಿ ನೋಸಿ ದಡ್ಡು ಬಿದ್ದ ವ್ಯಾಪಾರಿಗಳೇ ಒಮ್ಮೊಮ್ಮೆ ಗದಗುಟ್ಟಿ ನಡಗುತ್ತಿರ , ಪಾಪ! ಹೊಸದಾಗಿ ವ್ಯಾಪಾರವನ್ನು ಪ್ರಾರಂಭಿಸಿದ್ದರಿಂದ ಹಾನಿಯಂದರೇ ಂಬದು ಗೊತ್ತಿಲ್ಲದ ನವಿನ್ಯವಿನಾಯಕರಾಯನಂಥ ಹೊಸಬರಿಗೆ, ಇಂಥ ಭ ಂಕರ ಹಾನಿಯು ತಟ್ಟಿದಾಗ, ಆತ್ಮಘಾತದ ಹೊರತು ಅನ್ಯಉಪಾಯವೇ ತೋರದಿದ್ದರೆ ಆಶ್ಚರ್ಯವೇನು? ಹತ್ತಿ ಅರಳಿಯ ವ್ಯಾಪಾರವೆಂದರೆ, ಮ ನುಷ್ಯನನ್ನು ಮೇಲಕ್ಕೆ ಎತ್ತಿ ಆಕಾಶಕ್ಕೆ ಒಯ್ಯುವ ಇಲ್ಲವೆ ಕೆಳಗೆ ಹಾಕಿ ಳೆದು ಪಾತಾಳಕ್ಕೆ ಒಯ್ಯುವ ರಾಕ್ಷಸೀಯ ಕೃತ್ಯವೆಂದೇಅನ್ನಬಹುದು. ವ್ಯಾಪಾರದಲ್ಲಿ ಒಂದಕ್ಕೊಮ್ಮೆ ಬಹುದೊಡ್ಡ ಹಾನಿಯಾಗಿ, ಆ ಹಾನಿ ನ್ನು ತುಂಬುವದಕ್ಕಾಗಿಯೇ ತಮ್ಮ ಆಯುಷ್ಯವನ್ನೆಲ್ಲ ಪೆಚ್ಚುಮಾಡುತ್ತಿ ವ ಸುದ್ದಿವಿಗಳು ಇನ್ನೂ ನಮ್ಮ ದೃಷ್ಟಿಗೆ ಬೀಳುತ್ತಿರುವರು. ಇವೆಲ್ಲ ವಿಚಾರ ಸು ನನ್ನ ತಲೆಯಲ್ಲಿ ತರಂಗಿಸಹತ್ತಿ ನನ್ನನ್ನು ಗೊಂದಲದೊಳಗೆ ಕೆಡವಿಬಿಟ್ಟ . ಮಿತ್ರನ ಮುಖವು ದೃಷ್ಟಿಗೆ ಬೀಳುತ್ತಲೇ ನನಗೆ ಬಲು ಕೆಡಕೆನಿಸಹತ್ತಿತು. ಾವದರೂ ಉಪಾಯವನ್ನು ಮಾಡದ ಹೊರತು ಗತ್ಯಂತರವಿಲ್ಲೆಂದು ನನಗೆ ಸಂ ಣ್ಣವಾಗಿ ತಿಳಿದವರಿಂದ ಹಾಗೆಯೇ ಆಲೋಚಿಸಹತ್ತಿದೆನು. ಆಲೋಚನಾಂತ್ಯದ ನನಗೆ ಸ್ವಲ್ಪ ಸಮಾಧಾನವಾದಂತಾಗಿ, ಮನಸ್ಸಿನೊಳಗಿದ್ದದ್ದನ್ನು ವಿನಾಯಕ ಯನಿಗೆ ತಿಳಿಸುವದಕ್ಕಾಗಿ ಪುನಃ ಅವನೊಡನೆ ಮಾತಾಡಹತ್ತಿದೆನು.

"ವಿನಾಯಕರಾವ, ಮುಂಚಿದ್ದಕ್ಕೆ ಚಿಂತಿಸಿ ಫಲವಿಲ್ಲ. ಏನಾದರೂ ಉ ಪಾಯವನ್ನು ಯೋಚಿಸುವದೇ ನಿಜವಾದ ಪೌರುಷವು. ಇಂಥ ಸ್ಥಿತಿಯು ಜಗ ತ್ತಿನಲ್ಲಿ ನಿಮಗೊಬ್ಬರಿಗೇ ಒಂದಿರುವದೆಂಬುದಿಲ್ಲ. ನೀವು ಕೈಕೊಂಡ ವ್ಯಾಪಾ ರ ಹಾಡೇ ಹೀಗೆ! ಇರಲಿ, ಈ ಸಂಗತಿಯನ್ನು ನೀವು ಸರಸ್ವತೀಬಾಯಿಯವ ರಿಗೆ ತಿಳುಹಿಸಿರುವಿರೋ?"

"ಇಲ್ಲ ಅಕೆಗೆ ಹೇಗೆ ತಿಳುಹಲಿ? ಗರ್ಭಶ್ರೀಮಂತರ ಮಗಳವಳು. ಚಿಕ್ಕಂದಿನಿಂದ ಐಶ್ವರ್ಯದಲ್ಲಿಯೇ ಹೊರ್ಡವಳಾಗಿರುವಳು. ನಮ್ಮ ಮನೆಗೆ ಬಂ ದಬಳಿಕಾದರೂ ಇಲ್ಲಿಯವರೆಗೆ ಅಕೆಗೆ ಯಾವತರದ ಕೊರತೆಯೂ ಇದ್ದಿಲ್ಲ. ಈ ಅವಳಿಗೆ, ಇನ್ನು ಮುಂದೆ ನಮಗೆ ಪ್ರಾಪ್ತವಾಗುವ ದಾರಿದ್ರ್ಯವನ್ನು ಹೇಗೆ ತಿಳಿ ಲಿ? ಇಲ್ಲಿಯ ವರೆಗೆ ಅಡಿಗೆ ಮಾಡಲಿಕ್ಕೆ ದಾಸಿಯು, ಕೆಲಸಬೊಗಸೆಗಳನ್ನು ಮಾಡಲಿಕ್ಕೆ ಆಳುಗಳು, ಪೂಜಾಚರ್ಚನೆಗಳನ್ನು ಮಾಡಲಿಕ್ಕೊಬ್ಬ ಆಚಾರಿ ಈ ಮೇ

ರೆಗೆ ಶ್ರೀಮಂತತನವನ್ನನುಭೋಗಿಸಿದ ಅವಳು ಕಠಿಣತರ ದಾರಿದ್ರ್ಯವನ್ನೆಂತು ಸುವಳು? ಆ ಸಂಗತಿಯನ್ನವಳಿಗೆ ತಿಳುಹಿಸಿದರೆ, ಮೊದಲಿನ ಪ್ರೇಮವು ಲ್ಲಿ ಸ್ಥಿರವಾಗಿ ಉಳೆಯುವದೋ? ಧನವಿಲ್ಲದವನನ್ನು ಹೆಂಡರು ಮಕ್ಕಳು, ಧು -ಬಳಗ ಯಾರೂ ಪ್ರೀತಿಸುವದಿಲ್ಲ. ತೀರಿತು! ಇನ್ನು ನನ್ನ ಸಂಸಾರ ಸು ಮಂಣುಪಾಲಾಯಿತು.! ನನ್ನ ಆನಂದ ವೃಕ್ಷವು ಸಮೂಲ ಕಿತ್ತು ಹೋಯಿತ್ತ

ಇಷ್ಟು ಮಾತಾಡಿ ವಿನಾಯಕರಾಯನು ಸ್ತಬ್ಧನಾದನು. ಆಗ ನಾನು ಮಾತಾಡಿದೆನು. "ವಿನಾಯಕರಾವ, ಇದೇನು? ಅಪ್ರಬುದ್ಧರಂತೆ ಗೇಕೆ ನಿರಾಶರಾಗುವಿರಿ? ಪತಿಯ ಬಳಿಯಲ್ಲಿ ಧನವಿದ್ದರೆ ಪತ್ನಿಯು ಪ್ರೇಮಿ ಡುವಳೆಂದಮೇಲೆ, ಪ್ರೇಮವೆಂದರೆ ಧನದ ಪ್ರತಿಫಲವೇ ಎಂದು ಹೇಳಬೇಕಾ ತಲ್ಲ! ಪತ್ನಿಯ ಪ್ರೇಮವನ್ನು ನೀವು ಪರೀಕ್ಷಿಸಿಲ್ಲ; ಧನವಿರುವಾಗ ಪತ್ನಿಯೆ ಬೇಕಾದವರು ಪ್ರೀತಿಸುವರು. ಧನವಿಲ್ಲದಾಗಲೂ ಯಾರು ಪ್ರೀತಿಸುವರೋ ರೇ ನಿಜವಾದ ಹಿತಚಿಂತಕರು."

"ಸಾಕು ಮಾಡಿರಿ ನಿಮ್ಮ ಮಾತನ್ನು" ವಿನಾಯಕರಾಯನು ನ ಮಾತಾಡಿದನು, "ಆದಸಂಗತಿಯನ್ನು ಆಕೆಗೆ ತಿಳುಹಿದರೆ, ಆಕೆ ತನ್ನ ತ ನೆಗೆ ತಿಳಿಸದೇ ಬಿಡುವಳೇ? ತೀರಿತು! ಅಲ್ಲಿಯ ತನಕ ನನ್ನ ದಿವಾಳಿಯ ಯು ಹೋದಮೇಲೆ ಏನ್ನೇನು? ಹೋದ ಹೋದಲ್ಲಿ ನನಗೆ ಅವಮಯಾ ಕಂಡಕಂಡವರು ಪಿತ್ರಾರ್ಜಿತ ಆಸ್ತಿಯನ್ನೆಲ್ಲ ಹಾಳುಮಾಡಿದ ಬರಿಗೈ ಬೊಕ್ಕ ನೆಂದು ಬಟ್ಟುವಾಡಿ ತೋರಿಸಿ ಹಾಸ್ಯ ಗೈದಾರು! ನಾನು ಈಸಂಗತಿಯನ್ನು ಳಿಗೆ ಎಂದೂ ತಿಳಿಸುವದಿಲ್ಲ."

"ವಿನಾಯಕರಾವ, ಹೀಗೆ ಜಾಣತನವಿದ್ದೂ ದಡ್ಡತನದಿಂದ ಮಾತ ರೆ ನಾನೇನು ಹೇಳಲಿ? ಸರಸ್ವತೀಬಾಯಿಯವರ ವಿಷಯವಾಗಿ ಹೀಗೆ ಮ ಡುವದು ತೀರ ಅಯೋಗ್ಯವು. ಅವರ ಸ್ಥಿತಿರೀತಿಗಳನ್ನು ನಾನು ಚಿಕ್ಕಂದಿ ಲೂ ಬಲ್ಲೆನು. ನೀನು ಆಡಿತೋರಿಸಿದಂತೆ ಮಾಡುವ ಸ್ತ್ರೀಯರವರಲ್ಲವೆಂದು ನು ಸಾರಿ ಸಾರಿ ಹೇಳುತ್ತೇನೆ. ಅವರ ಯೋಗ್ಯತೆಯನ್ನೇ ಕಂಡುಹಿಡಿಯ ದು, ವರ್ಷದ ವರೆಗೂ ಅವರೊಡನೆ ಇದ್ದು ನಿಮ್ಮಿಂದಾಗಿಲ್ಲವೆಂದಮೇಲೆ ನ ಕಂಣಿದ್ದೂ ಕುರುಡರು. ನಿಸ್ಕಪಟ ಪ್ರೇಮವುಳ್ಳ ಅವರಿಗೆ ವರ್ತಿಸಿದ ಸಂಗ ನ್ನು ತಿಳಿಸದೆ ಮುಚ್ಚಿಟ್ಟರೆ, ಪತ್ನಿದ್ರೋಹ ಮಾಡಿದಂತಾಗಲಿಲ್ಲವೇ? ಸದ್ಯಕ್ಕ ಗಿದ ಸಂಕಟದೊಳಗಿಂದ ಪಾರಾಗುವದು ನಿಮ್ಮ ಮನಸ್ಸಿನಲ್ಲಿದ್ದರೆ, ಮತ್ತು ನ

ನ್ನ ನಿಜವಾದ ಹಿತಚಿಂತಕನೆಂದು ನಿಮ್ಮ ಭರವಸೆ ಇದ್ದರೆ, ಈಗಲೇ ಹೋಗಿ ಸಂಗತಿಯನ್ನು ಸರಸ್ವತೀಬಾಯಿಯವರಿಗೆ ತಿಳುಹಿರಿ. ಸದ್ಯಕ್ಕೊದಗಿದ ಸಂ ದೊಳಗಿಂದ ಪಾರಾಗುವ ಹಂಚಿಕೆಯು ಇದೇ."

ಇಷ್ಟೊಂದು ಆಜ್ಞತೆಯಿಂದ ನಾನು ಮಾತಾಡಿದ್ದರಿಂದ ವಿನಾಯಕರಾ ನು ಒಪ್ಪಲೇಬೇಕಾಯಿತು. ಅದರಂತೆ ಪತ್ನಿಗೆ ಆದಸಂಗತಿಯನ್ನು ತಿಳುಹಿಸ ಒಪ್ಪಿದವನಾಗಿ ನನ್ನ ನಿರೋಪ ತೆಗೆದುಕೊಂಡು ಮನೆಗೆ ಹೊರಟು ಹೋದ ಸರಸ್ವತೀಬಾಯಿಯವರ ವಿಷಯವಾಗಿ ನನಗೆಲ್ಲ ಸಂಗತಿಗಳು ಗೊತ್ತಿದ್ದದ ನ, ಅವರಿಗೆ ಈ ಸಂಗತಿಯು ತಿಳಿಯುವದು ವಿಹಿತವೆಂದೂ ನನಗೆ ಅನಿಸುತ್ತಿ ಸ ನನ್ನ ಮನಸ್ಸಿಗೆ ಸಮಾಧಾನವಿರಲಿಲ್ಲ. ಪುನಃ ಮಿತ್ರನ ಭೆಟ್ಟಿಯು ಎಂ ಆಗುವದೋ, ಯಾವಾಗ ಅವನ ಕ್ಷೇಮಸಮಾಚಾರಗಳನ್ನು ವಿಚಾರಿಸುವೆ ೀ ಎಂಬ ಆತುರತೆಯು ನನ್ನನ್ನು ಆವರಿಸಿತ್ತು.

ಮೇಲಿನ ಸಂಗತಿಯು ವರ್ತಿಸಿ ಹದಿನೈದು ಇಪ್ಪತ್ತು ದಿನಗಳಾದರೂ ಾಯಕರಾಯನು ನಮ್ಮ ಮನೆಯ ಕಡೆಗೆ ಹಾಯಲಿಲ್ಲ. ಇಂದು ಬಂದಾನು ಳೆ ಬಂದಾನೆಂದು ಹಾದಿ ನೋಡಿ ನೋಡಿ ಬೇಸತ್ತೆನು. ನನ್ನ ಮನಸ್ಸಿನಲ್ಲಿ ಏ ನೋ ಶಂಕೆಗಳು ಉತ್ಪನ್ನವಿಸಹತ್ತಿದವು. ಕಾರ್ಯ ಬಾಹುಲ್ಯದ ಮೂಲಕವಾ ನನಗೆ ಎಲ್ಲಿಯೂ ಹೋಗಲು ಕೂಡುತ್ತಿರಲಿಲ್ಲ. ಆದರೂ ಈ ಹೊತ್ತು ಬಿಟ್ಟು ಬಿಟ್ಟಿ ನನ್ನ ಮಿತ್ರನ ಮನೆಗೆ ಹೋಗಬೇಕೆಂದು ನಿಶ್ಚಯಿಸಿದೆನು. ಸಾಯಂ ಲದ ವೇಳೆಗೆ ಹೊರಟೆನು. ಮೊದಲು ವಿನಾಯಕರಾಯನಿದ್ದ ಭವ್ಯವಾದ ಡೆಕ್ಕೆ ಹೋದೆನು. ಅವಕ್ಕೆ ಕೀಲಿ ಹಾಕಿತ್ತು. ನೆರೆಹೊರೆಯವರನ್ನು ವಿಚಾ ಲು, "ವಿನಾಯಕರಾಯರು ಬಾಡಿಯನ್ನು ಮಾರಿದರೆಂದೂ, ಸದ್ಯಕ್ಕೆ ಊರ ಾರಗಿರುವ ಒಂದು ಸಣ ಮನೆಯಲ್ಲಿ ಇರುವರೆಂದೂ" ತಿಳಿಯಿತು. ಕೂಡ ನಾನು ಅಲ್ಲಿಗೆ ಹೊರಟೆನು. ನಾನು ಬಂದದ್ದನ್ನು ನೋಡಿ ವಿನಾಯಕರಾಯ , ಬಹುಪ್ರೇಮದಿಂದ ಕರೆದು ಕೂಡ್ರಿಸಿಕೊಂಡನು. ಇಷ್ಟರಲ್ಲಿಯೇ ಸರಸ್ವತೀ ಾಯೀಯವರು ಒಳಗಿಂದ ಬಂದು, "ಏನು! ಅಣ್ಣಂದಿರೆ, ಬಹುದಿನಕ್ಕೆ ಬಡವರ ನೆಗೆ ಭಾಗೀರಥೀಬಾಯಿಯು ಬಂದತಾಯಿತು." ಎಂದು ಹಾಸ್ಯ ತಕೆದು ನು ತರು. ಅವರ ಆ ಹಾಸ್ಯವಚನದಿಂದ ನನಗೆ ಸಂತೋಷವಾದರೂ "ಬಡವರ ನೆಗೆ" ಎಂಬ ಶಬ್ದವು ಕವಿಯಲ್ಲಿ ಬಿದ್ದಕೂಡಲೆ ಬಲುಖೇದವೆನಿಸಿತು, ಆದ ಖೇದವನ್ನು ತೋರಗೊಡದೆ, "ಕೆಲಸಗಳ ಬಹಳವಿದ್ದದರಿಂದ ಬರುವದಾಗ ಲ್ಲ: ವಿನಾಯಕರಾಯರ ಭೆಟ್ಟಿಯು ಮೇಲಿಂದಮೇಲೆ ಆಗುತ್ತಲೇ ಇರುವದು"

ಎಂದು ನಾನು ಹೇಗಾದರೂ ನುಡಿದೆನು. ವಿನಾಯಕರಾಯ-ಸರಸ್ವತೀ ಜ
ಯವರ ಪ್ರೇಮಮುದ್ರೆಯಿಂದಲೂ, ಪಾಡೆಯು ಮೂರಲ್ಬಟ್ಟೆತೆಂಬವರ ಮೋ
ಲೂ ಏನಾದರೂ ವ್ಯವಸ್ಥೆಯಾಗಿದೆ ಎಂದು ನನಗೆ ತಿಳಿದರೂ, ವರ್ತಿಸಿದ
ತಿ, ಸಂಸಾರದ ಸ್ಥಿತಿ ಮೊದಲಾದವುಗಳನ್ನು ಕೇಳಲು ನನ್ನ ಮನಸ್ಸು ಹಾತ
ಯಹತ್ತಿತು. ಪತಿವೃತಾಶಿರೋಮಣಿಯು ನಮ್ಮೈದುರಿಗೆ ಇದ್ದದ್ದಕ್ಕಾಗಿಧೈ
ಯಾಗದ್ದರಿಂದಲೋ ಅಥವಾ ಅಲ್ಲಿಯೇ ವಿಚಾರಿಸುವದು ಅಪ್ರಶಸ್ತವೆಂದು ತಿಳಿ
ರಿಂದಲೋ, ತಿರುಗಾಡುವ ನೆವದಿಂದ ವಿನಾಯಕರಾಯನನ್ನು ಹೊರಡಿಸಿಕ
ಡು ಹೊರಟೆನು. ಮನೆಬಿಟ್ಟು ಹೊರಡುವದೊಂದೇ ತಡ— "ವಿನಾಯಕರ
ಏನೇನು ವ್ಯವಸ್ಥೆ ಮಾಡಿದಿರಿ? ಸದ್ಯದ ಪ್ರಪಂಚದ ಸ್ಥಿತಿಯು ಹೇಗೆ? ನ
ನಿವಿಸ್ತಾರವಾಗಿ ತಿಳುಹಿರಿ" ಎಂದು ನಾನು ತೀವ್ರತೆಯಿಂದ ನುಡಿದೆನು.

ವಿನಾಯಕರಾಯನು ಆನಂದದಿಂದ ಅದಸಂಗತಿಗಳನ್ನೆಲ್ಲ ಒಂದೆ
ದಾಗಿ ಹೇಳಹತ್ತಿದನು:— "ಅದಸಂಗತಿಯನ್ನು ಆಕೆಗೆ ಹೇಳಲು ಒಪ್ಪಿ ನಿ
ಲ್ಲಿಂದ ಮನೆಗೆ ಬಂದೆನಷ್ಟೆ! ಮನೆಗೆ ಹೋಗಿ ಅವಳ ದರ್ಶನವಾದಕೂಡಲೆ,
ನ್ನೋ ಒಂದುತರದ ಲಜ್ಜೆಯುನನ್ನನ್ನಾವರಿಸಿ ಬಿಟ್ಟಿತು. ಅವಳೆದುರಿಗೆ ಮಾ
ಲುಸಪ ನನಗೆ ಧೈರ್ಯವಾಗಲಿಲ್ಲ. ಹೀಗೆಯೇ ಎರಡು ಮೂರು ದಿನಗಳು ಹೆ
ದ್ದು ಅವರೆ ನನ್ನ ಔದಾಸೀನ್ಯದಲ್ಲಿ ಪಾತ್ರ ಅಂತರವಾಗಿದ್ದಿಲ್ಲ. ಇದನ್ನು ನಿ
ಕೆಯೇ — ನೀವು ೪-೧೦ ದಿನಗಳಿಂದ ಹೀಗೇಕೆ ಉದಾಸೀನರಾಗಿರು
ಊಟ ಉಪಚಾರಗಳಲ್ಲಿ ಮೊದಲಿನಂತೆ ಪ್ರೀತಿಯಿಲ್ಲವೇಕೆ? ಸುಮಸಲ್ಲಾಪ
ಕೊ ಇಲ್ಲವೇನಿಲ್ಲ! ಎಂದು ಮುಂತಾಗಿ ನನ್ನನ್ನು ಪರಿಪರಿಯಾಗಿ ವಿಚಾರಿಸ
ಸಲು ಕಡೆಗೆ ಹೇಳಬಿಟ್ಟೆನು. ವೈದ್ಯವು ದ್ರಾವಕವಾದ ಆ ಸಂಗತಿಯನ್ನು
ಿ, ಕಿಂಚಿತ್ತಾದರೂ ಅವಳ ಮುಖಮುದ್ರೆಯಲ್ಲಿ ಅಂತರವಾಗಲಿಲ್ಲ. ಮೊ
ಂಸಿಯೇ ಪ್ರೇಮದಿಂದ— ಇದಕ್ಕೇಕೆ ಇಷ್ಟು ಚಿಂತೆ! ವ್ಯಾಪಾರಿಗಳಾದಮೇಲೆ
ಸಂಕಟವು ಕಟ್ಟಿಟ್ಟ ಗಂಟು! ವ್ಯಾಪಾರವನ್ನು ಕೈಕೊಂಡ ಮೇಲೆ ಹಾನಿ ಲಾಭ
ಚಿಗೊಡಲೇಬೇಕು. ಬಂದಸಂಕಟಕ್ಕೆ ಎದುರಾಗಿ ನಿಲ್ಲದೆ ಅಂಜಿ ಕೂತರೆ ಸಂಕ
ಟ ಮತ್ತಿಷ್ಟು ವಿಕರಾಳ ಸ್ವರೂಪವನ್ನು ಧರಿಸುವವು. ಈಗ ನೀವು ಹೀಗೆ
ದಾಸೀನರಾಗಿ ಕೂತರೆ ಆದ ಹಾನಿಯು ತುಂಬಿ ಬರುವದೇನು? ಎಂದು ಪ
ತ್ರಾಲುಗಾರನಿಂದ ಬಂದ ಪತ್ರವನ್ನು ಇಸಕೊಂಡು ಓದಿದಳು. ಓದುವದನ್ನು
ಡಲೆ ಹೀಗೆ ನಮ್ಮನೆ ಕೂತರೆ ದಿವಾಳಿತೆಗೆಯುವ ಪ್ರಸಂಗವು ಬರುವ ಮಾತೆ
ದಿಗೆಡಾಗುವದು? ಆ ಪ್ರಾಮಸಿಲ್ಲಿಯೇ ಇದ್ದಬಿದ್ದ ಪಡತೆಗೆಗಳನ್ನೆಲ್ಲ ನಮ್ಮಕ್ಕೆ
"ಯಾವಾಗ ಶಿಕ್ಷಾಗಲಿ ಅಂಗಡಿಯಂತೆಯೇ ಬಂಗಾರಿಕ ರಾಯಂಕರಾಯಪಡಿ

ನಿಯನ್ನು ತುಂಬಿಬಿಡೋಣ ಎಂದಳು. ಅದಕ್ಕೆ ನಾನು—ನಾಡೆ, ಪಿತ್ರಾರ್ಜಿ
ತಾಭರಣಗಳನ್ನು ಮಾರಿದರೂ ಸಾಲವು ತೀರುವಂತಿಲ್ಲ, ಎಂದು ಖಿನ್ನನಾಗಿ
ಬಿಡಿದೆನು. ಅದಕ್ಕವಳು ಪ್ರತ್ಯುತ್ತರವಾಗಿ — ತವರುಮನೆಯಿಂದ ತಂದ ದಾ
ನಿಗಳಿಗೇನಾಗಿದೆ? ಅವೇನು ಜೂಡಿಯ ಜವಿಾನುಗಳೋ? ಅವನ್ನು ಮಾರ
ಬಹುದೇನು? ಎಂದು ಸ್ವಲ್ಪ ತೀವ್ರತೆಯಿಂದಲೇ ನುಡಿದಳು. ನಾನು ನಿರುತ್ತ
ರನಾದೆನು. ಅವಳು ಹೆಚ್ಚಾಗಿ ಉಪದ್ರ ಮಾಡಹತ್ತಿದ್ದರಿಂದ, ಪಾಡೆ, ಆಭರಣ
ವಲಾದವುಗಳನ್ನೆಲ್ಲ ಮಾರಿ, ಸಾಲವನ್ನು ತೀರಿಸಿದೆನು. ಆಳುಗಳಿಗೆ ಮನೆ
ಯನ್ನು ಬಿಟ್ಟುಹೋಗಲು ಹೇಳುವಾಗ ನನ್ನ ಕುತ್ತಿಗೆಯು ಬಿಗಿದು ಮಾತುಗಳು
ಹೊರಡದಂತಾದವು. ಆದರೂ ಅನಿವಾರ್ಯಪ್ರಸಂಗವಾದುದರಿಂದ, ಅವರೆಲ್ಲರಿ
ಗೂ ಬಿಟ್ಟು ಹೋಗಲು ಹೇಳಿದೆನು. ಇರಲಿಕ್ಕೆ ಸ್ಥಳವಿಲ್ಲದುದರಿಂದ ಇಲ್ಲಿ ಭಾಡಿ
ಯಿಂದ ಇದ್ದೇನೆ.

"ಈಗ ಸಂಸಾರಸ್ಥಿತಿರೀತಿಗಳು ಹೇಗಿರುವವು?" ನಾನು ನುಡಿದೆನು.

ವಿನಾಯಕರಾಯನು ಹೇಳಹತ್ತಿದನು. —"ಆಳುಗಳೆಲ್ಲವೂ ಹೊರಟು
ಹೋದುದರಿಂದ ಮೊದಲಿನ ಮನೆಯಿಂದ ತಂದ ಸಾಮಾನುಗಳನ್ನೆಲ್ಲ ನಾವೇ
ವ್ಯವಸ್ಥೆಯಿಂದ ಇಡಬೇಕಾಯಿತು. ಭಾರವಾದ ಸಾಮಾನುಗಳನ್ನು ಅತ್ತಿಂದಿ
ತ್ತಿಂದತ್ತ ಎತ್ತಿಡುವಾಗ ಆಕೆಗಾದ ಶ್ರಮವನ್ನು ನನ್ನಿಂದ ನೋಡುವದಾಗ
ಲಿಲ್ಲ. ಆದರೂ ಆಕೆಯು ತನಗೆ ಶ್ರಮವಾದದ್ದನ್ನು ನನಗೆ ಸ್ವಲ್ಪವೂ ತೋರ
ಗೊಡಲಿಲ್ಲ. ಮಂಚದಿಂದ ಮಣಿಯ ಮೇಲೆ, ಮಣಿಯಿಂದ ಮಂಚದ ಮೇಲೆ
ಹೀಗೆ ಸುಖದಿಂದ ಲೋಲಾಡಿದ ಅವಳು, ಮೊದಲು ದಾಸಿಯು ಮಾಡುತ್ತಿದ್ದ ಎ
ಲ್ಲ ಕಾರ್ಯಗಳನ್ನು ಮಾಡುವದನ್ನು ನೋಡಿ ನನಗೆ ಅತ್ಯಾಶ್ಚರ್ಯವಾಗಿದೆ. ನೊ
ದಲಿನ ಅವಳ ಪ್ರೇಮವು ಎಳ್ಳಷ್ಟಾದರೂ ಕಡಿಮೆಯಾಗಿಲ್ಲ. ನನ್ನ ಪತ್ನಿಯು ಇ
ಷ್ಟೊಂದು ಸುಶೀಲಳಿರುವಳೆಂದೂ ಬೇಕಾದಂಥ ಪ್ರಸಂಗದಲ್ಲಿಯಾದರೂ ಅವಳ
ಪೂರ್ವ ಸ್ವಭಾವವು ಬದಲಾಗದೆಂದೂ ನಾನು ನಿಜವಾಗಿಯೂ ತಿಳಿದಿರಲಿಲ್ಲ!
ಅವಳ ಮನೋರಥಗಳೆಲ್ಲ ಪೂರ್ಣಮಾಡಲ್ಪಡುವದರಿಂದಲೂ, ಯಾವದಕ್ಕೂ ದ
ಾತಿ ಇಲ್ಲದ್ದರಿಂದಲೂ ಅವಳು ನನ್ನ ಮೇಲೆ ಪ್ರೇಮಮಾಡುವಳೆಂದು ತಿಳಿದಿದ್ದೆ
ನು. ಈಗಿನ ಸ್ಥಿತಿಯನ್ನು ನೋಡಿದರೆ, ನನ್ನ ಮೊದಲಿನ, ಅವಳ ಪ್ರೇಮವಿಷಯ
ವಾದ ತಪ್ಪು ಕಲ್ಪನೆಯನ್ನು ದೂರೀಕರಿಸಲೋಸುಗವೇ ದೇವರು ಈ ಹೊತ್ತು
ತಂದಿರಬಹುದೆಂದು ಅನಿಸಹತ್ತಿದೆ. ಅವಳ ಪ್ರೇಮವು ನಿಷ್ಕಲಂಕವಾದುದು.

"ಪ್ರಸಂಗವು ಬಂದಹೊರತು ಮನುಷ್ಯನ ನಿಜವಾದ ಪರೀಕ್ಷೆಯಾಗು

ಮಿತ್ರ. ಸಂಕಟಗಳೆಂದರೆ ಮನುಷ್ಯನ ಗುಣಾವಗುಣಗಳನ್ನು ಪರೀಕ್ಷಿಸುವ ಗಟ್ಟಿ ಸು. ಇರಲಿ, ಸದ್ಯಕ್ಕೊಪ್ಪದಿರುವ ದಾರಿದ್ರ್ಯದ ಮೂಲಕವಾಗಿ ನಿಷ್ಕಾಮನಾಗಿರಬಹುದಲ್ಲವೆ? " ನಾನು ಮಾತಾಡಿದೆನು.

" ಇಲ್ಲ ಇಲ್ಲ! ನನಗೆ ಸೌಖ್ಯದ ಭಾಂಡಾರವೇ ದೊರೆತಿದೆ. " ವಿನಾಯಕರಾಯನು ನಿಶ್ಚಯ ದರ್ಶಕ ಸ್ವರದಿಂದ ಅಂದನು.

ನನ್ನ ಮಿತ್ರನು ಆ ದಿನ ರಾತ್ರಿ ತನ್ನ ಮನೆಗೆ ಊಟಕ್ಕೆ ಬರಲಿಕ್ಕೆ ಬ ಆಗ್ರಹಮಾಡಿದನು. ಇನ್ನೂ ನನ್ನ ಮಿತ್ರನ ಸಂಸಾರದ ಸ್ಥಿತಿಗತಿಗಳನ್ನು ನೋಡುವದೂ ನನ್ನ ಮನಸಿನಲ್ಲಿತ್ತು. ಅದ್ದರಿಂದ ಒಪ್ಪಿದವನಾಗಿ ರಾತ್ರಿಯ ಆಲ್ಲಿಗೇ ಊಟಕ್ಕೆ ಹೋದೆನು. ಬಡತನದ ಸ್ಥಿತಿಯಲ್ಲಾದರೂ ಸಾಮಾನುಗ ನ್ನು ಓರಣದಿಂದ ಇಟ್ಟಿದ್ದನ್ನು ನೋಡಿ ನನಗೆ ಬಲು ಆನಂದವಾಯಿತು. ಊ ಮಾಡುವಾಗ ನಾವು ಅನೇಕ ಸರಸಸಲ್ಲಾಪಗಳನ್ನಾಡಿದೆವು. ನೆನಗಂತೂ ಆ ಪ ಯುಕ್ತ ದಂಪತಿಗಳನ್ನು ನೋಡಿ ಬಲು ಸಂತೋಷವಾಯಿತು. ಊಟವಾ ಮೇಲೆ ಸ್ವಲ್ಪ ಹೊತ್ತು ಕುಳಿತು ತಾಂಬೂಲಚರ್ವಣವಾದ ಮೇಲೆ ನಿರೋಪ ನ್ನು ಹೊಂದಿ ಹೊರಟು ಹೋದೆನು.

ನಾನು ಹಿಂದೊಮ್ಮೆ ಕಾಲಚಕ್ರದ ಸ್ಥಿತಿಯನ್ನು ಅದು ನನ್ನ ಮಿತ್ರ ಸರ್ವಸ್ವ ಘಾತಮಾಡಿದ ಬಗೆಯನ್ನು ಹೇಳಿರುವೆನು. ಯಾವಕಾಲಚಕ್ರದ ಕ್ರಗತಿಯಿಂದ ನನ್ನ ಮಿತ್ರನು ಅತ್ಯಂತ ವಿಪನ್ನಾವಸ್ಥೆಯನ್ನು ಹೊಂದಿದ್ದನೋ ದೇ ಕಾಲಚಕ್ರದ ಸುಗತಿಯಿಂದ ಈಗ ಡೊಡ್ಡಶ್ರೀಮಂತನಾಗಿದ್ದಾನೆ. ಸರಸ್ವತಿ ಬಾಯಿಯ ವರ್ತನದಲ್ಲಿ ಈಗಲೂ ಅಂತರವಾಗಿಲ್ಲ. ವಿನಾಯಕರಾಯರು ನ ಗೆ ಮೇಲಿಂದಮೇಲೆ ಭೆಟ್ಟಿಯಾಗುತ್ತಾರೆ. ಭೆಟ್ಟಿಯಾದಾಗಲೆಲ್ಲ ಹಿಂದೆ ತವ ಗೊದಗಿದ ದಾರಿದ್ರ್ಯ ಸ್ಥಿತಿಯಲ್ಲಿಯ ಸುಖಗೋಷ್ಟಿಗಳನ್ನೇ ತೆಗೆಯುತ್ತಾರೆ.

ಲವಾದ ಎದೆಯಲ್ಲಿ ತನ್ನ ಪ್ರೇಮ ಸುಧೆಯನ್ನು ಸುರಿದು ಸುಖಾನುಭವವನ್ನು
ೊಂದುವಂತೆ; ಪ್ರೇಮಿಕಳಾದ ಪತ್ನಿಯು ಪ್ರಪಂಚದ ನೀಚ ಹಾಗು ಕ್ಷಣಿಕವಾದ
ನೇಕ ತರದ ಆಶೆಗಳನ್ನು ಬಿಟ್ಟುಬಿಟ್ಟು, ಡಾಂಬಿಯ ಮುಗ್ಗಲಿಗಿರುವ ಸುಂದರವಾದ
ಂಬಣ್ಣದ ವಿಷ ಫಲಗಳಿಗೆ ಅನುರಕ್ತಳಾಗದೆ, ಆಶಿಸದೆ ಒಮ್ಮನಸ್ಸಿನಿಂದಲೂ,
ಕಾಗ್ರ ಚಿತ್ತದಿಂದಲೂ ತನ್ನ ಪತಿಯಲ್ಲಿ ಮನಸ್ಸನ್ನೂ ಪ್ರಾಣವನ್ನೂ ಅರ್ಪಿಸಬೇ
ು. ಹುತ್ತು ಪತಿಶೇವೆಯಿಂದಲೇ ಶಾಂತಿ ಸುಖವನ್ನು ಅನುಭವಿಸಬೇಕು. ಇ
ನ್ನು ಸಂಸಾರ ಸಾಗರವು ಪ್ರಿಯತಮೆಯಾದ ತರಂಗಿಣಿಯ ಪ್ರೇಮದಿಂದ ಪ್ರಫುಲ್ಲಿತ
ಾಗಿ ಆನಂದದಿಂದ ಅವಳಿಗೆ ತನ್ನ ಎದೆಯಲ್ಲಿ ಸ್ಥಳಕೊಟ್ಟು ಪ್ರೇಮದ ಪ್ರತಿದಾನ
ಮಾಡುವಂತೆ ವಿಚಾರ ಶೀಲನಾಪಸಪ್ಪತಿಯು ಸಾನಂದ ಚಿತ್ತನಾಗಿ ಪತ್ನಿಯ ಪ್ರೇ
ಮರಾಶಿಯನ್ನು ಅನುಭವಿಸುತ್ತ ಸುವ್ಯವಹಾರ ಹಾಗು ಸುಮಿಷ್ಟ ವಾಕ್ಯ ಮೊದ
ಾದವುಗಳಿಂದ ಪತ್ನಿಯುಕೊಟ್ಟ ಪ್ರೇಮರಾಶಿಗೆ ಪ್ರತ್ಯರ್ಪಣ ಮಾಡಬೇಕು.

ಪತಿ-ಪತ್ನಿಗಳು ಈ ಸೂತ್ರವನ್ನು ಯಾವಾಗಲೂ ಮನಸ್ಸಿನಲ್ಲಿಟ್ಟುಕೊಂಡು
ೀವನವಾರ್ಗದಲ್ಲಿ ಮುಂದರಿಯಬೇಕು. ಇದಕ್ಕೆ ವಿರುದ್ಧವಾದರೆ ಇಡೀ ಆಯು
ಷ್ಯದಲ್ಲೆಲ್ಲಾ ವಿಷಮಯವಾದ ಫಲವನ್ನು ಅನುಭವಿಸಬೇಕಾದ್ದರಲ್ಲಿ ಸಂದೇಹವಿಲ್ಲವು
ಇದ್ದರಿಂದ ವಿವಾಹ ಶೃಂಖಲೆಯಿಂದ ಬದ್ಧವಾದೊಡನೆಯೇ ಪತಿ-ಪತ್ನಿಗಳು ತಮ್ಮತ
ಮ್ಮ ಕರ್ತವ್ಯಗಳನ್ನು ಪಾಲಿಸುವದಕ್ಕೆ ಯತ್ನ ಶೀಲರಾಗಬೇಕು. ಆ ಹೊತ್ತಿನಿಂ
ದ ದಾಂಪತ್ಯ ಧರ್ಮ ದಾಂಪತ್ಯ ನೀತಿಗೆಳೆಂದರೇನೆಂಬವನ್ನೂ ಅವುಗಳ
ನ್ನು ಹೇಗೆ ಪಾಲಿಸಬೇಕೆಂಬವನ್ನೂ ತಿಳಿದು ಕೊಳ್ಳುವದಕ್ಕೆ ಸಾಕಷ್ಟು ಪ್ರಯತ್ನಿಸ
ಬೇಕು ದಾಂಪತ್ಯ ಜೀವನದ ಪವಿತ್ರತೆಯು ಅತ್ಯಂತ ಪ್ರಯೋಜನೀಯವಾದದ್ದು.
ಪತಿ-ಪತ್ನಿಗಳು ಕಾರ್ಯಕಲಾಪ, ಆಚಾರ ವಿಚಾರ ನೀಯಮ ನಿಷ್ಠೆ ಮೊದಲಾದ
ವುಗಳಲ್ಲಿಯಲ್ಲದೆ ಸಾಧಾರಣ ವ್ಯವಹಾರದಲ್ಲಿ ಸಹ ಪವಿತ್ರತೆಯನ್ನು ಅವಲಂಬಿಸ
ಬೇಕು. ಮತ್ತು ಯಾವಾಗಲೂ ಸತ್ಯದ ಮಾರ್ಗವನ್ನೇ ಅನುಸರಿಸಬೇಕು.
ಮನಸು ಆತ್ಮಗಳು ನೀಚ ಹಾಗು ಅಪವಿತ್ರವಾಗದಂತೆ ಯಾವಾಗಲೂ ಆತರದ
ಕಾರ್ಯಗಳಿಂದ ದೂರವಾಗಿರಬೇಕು. ಮತ್ತು ಭೇರೆ ಯಾರ ಆಶ್ರಯವನ್ನು ಬ
ಯಸದೆ ಸದಾ ಸತ್ಕಾರ್ಯದಲ್ಲಿ ಅನುರಕ್ತರಾಗಿರಬೇಕು. ಅಂದರೆ ದಾಂಪತ್ಯ
ಪ್ರೇಮವು ದೃಢವಾಗುವದು. ಮನೆತನವು ಮಂಗಳವಾಗುವದು. ಸಂಸಾರವು
ಸುಖಮಯವಾಗಿ ಪರಿಣಮಿಸುವದು. ಅಂದರೆ ಗೃಹಲಕ್ಷ್ಮಿಯ ಶೋಭೆಯು
ಅತ್ಯಂತವಾಗಿ ಅಭಿವರ್ಧಿಸುವದು.

ಶ್ರದ್ಧಾಪಿ ಪರಮಾಗತಿಃ

ದೇಶೀಯ ವಿದ್ಯಾಲಾಲಾ ಪತ್ರಿಕಾ

ಸಂಪುಟ ೩ | ಕ್ರೋಧನ ಸಂ॥ ಆಷಾಢಮಾಸ—ಜುಲೈ ೧೯೨೫. | ಸಂಚಿಕೆ ೧

ಕನ್ನಡಿ

ಕೆಂಪಗಳವ, ಕನಸಿಂದ ಜೆಳಗಾಗಿ ಒಲುಕಾಲ
ಕಳೆದುಹೊಂಮ್ತೆನುತಾಗ ತಿಳಿವನಾರಾಣೆ ತಾ।
ನಿಳಿದು ಮಾಂಜುವ ಬಂಗ ತಿಳಿನೀರ ಮುಂದೆದ್ದು ಬಿಳಿ ಮುಡಿಯ ತಿಳಿದುಡುತಲೆ ॥೧॥

ತರಣಿಗರ್ಘ್ಯವನಿತ್ತು ಅರಿವನಾರಾಣೆ ಜನ
ನರವಪಿಡಿವಾಗ ಕುಳಿತಿರುತ್ತಿರ ಘಳಿಗೆಯುರು।
ತರದಕಾಂತಿಯು ನಮದು ತೆರದು ಕಂಗಳ ದೆಂಪು ನರಸತಿಯು ನಗುತೆಂದಳು ॥೨॥

ಮನಿಸೆಂಟು ಶತಮಾನ ಪುಟಿದ ದುವ್ಯಾನದಲಿ
ಮುದಹಾನವನಿಯುದಲೆ ಕೊರಗಿ ಕುಳಿತೆ।
ನಡುಮ ಹೀರವಸಿಳಿದು ಇದುಗೊ ಸಿಂಗರವಾಗಿ ಮುದದಿ ಮನವಿನಿಯ ನಡಿಗೆರಗಿ ಬರುವೆ ॥೩॥

ಗುಜರಾತಗಗ್ಗರವು ನದಪದಕೆ ದನಿಗೊಡಲು
ಗಜಬಜಿಯ ಮಗುವಂತೆ ಮುದವಿಟ್ಟು ಅನುನಯಿಸಿ।
ವಿಜಯವಂಗದ ಶಂಖದಂದವನ ಹೂಡಿಗಳು ಕಿಂಕಿಣಿಸೆ ದನಿಗೊಡುತಲೆ ॥೪॥

ಭಾರತಿಯ ಬಲು ಮಧುರ ಹಾವಭಾವಗಳನ್ನು
ತೋರಿ ನಲಿದೊಲಿಯೆ ತಾನ್ನರರರಮನಪಿನಲ।
ಪೂರವದನೆನಹೆಂಬ ಪಿರಿಶೆರಗಿನಂಬರವ ನೆಲಿಯ ಪಿಡಿದುಡುತೆದ್ದಳು ॥೫॥

ಸಂಸ್ಕೃತದಕಾಂಚಿಯಾ ಹೊಳೆವ ಗೆಜ್ಜೆಗಳಲುಗೆ
ಝಂಕರಿಸೆ ಜಯವೆಂದು ಬಳೆಗಗ್ಗರಗಳ್ಕ।
ಪಿಂಕದಲಿ ಗಂಟಿಕ್ಕಿ ರಸಗಬ್ಬಗುಪ್ಪನವ ಜಿಗಿಯು ಹಳದೆನುತ ನಗುತ ॥೬॥

ಅಂದವಿದು ಕುಂಕುಮವು ಪಿಂಪಿಯಾ ನವರಾಗ
ದಿಂದ ಕೂಡಿಹುದೆಂದು ಒಂದು ಬೆರಳಲಿ ತೆಂದು।
ಎಂಪಿನಾ ನೆಪ್ಪಿನಲಿ ಹಣೆಗಿಟ್ಟಳವನರಿದಿ ಬಳಿಕ್ಕಿತಿದ್ದುವೆನೆನ್ನುತ ॥೭॥

ಮಹರಾಷ್ಟ್ರ ಮುಕುರವದು ಬಿಗಿದ ಮುತ್ತುಗಳಿಂ
ದ ಗಹಗಹಿಸಿ ಯಲುಗುತಲಿ ನಗೆಯ ಹೊಳಪಲಿ ನಗಲು।
ಬಹು ಕೆಂಪಿನಾ ತೊಲೆತೆಲುಗನ್ನು ಹೋಲುತಲಿ ಮಿನುಗಿ ಮೃಗತಿರೆಯಹಳೆಯೆ ॥೮॥

ತಮಿಳಕಂಠಿಯ ಕೀಲನಮಿತಪ್ರೇಮದಲೊತ್ತಿ
ರಮಣಿಯುಳಿದಾಭರಣಗಳನೆಲ್ಲ ಧರಿಸಿದಳು।
ಅಮಮ ಬಲು ಸಿರಿ ಮೊಗದ ಜೆಳಕಿನಲಿ ಉಡಿತೊಡಿಗೆ ತಲೆಗುತ್ತೆ ಮುಂಕು ಬಡಿದು ॥ ೯

ಸಿಂಗರವು ಮುಗಿಯಿತಿದು ಮುಂಜೆಳಗಿ ಜೆಳೆಯುತಿದೆ
ಅಂಗಾಂಗಗಳಕಾಂತಿ ಇಂಬಾಯ್ತುಡಿಗೆತೊಡಿಗೆ।
ಸಂಗಡಲೆ ತಿದ್ದುವೆನು ತಿಲುಕವನು ಎನ್ನುತಲೆ ಅರಸಿರನ್ನಗನ್ನಡಿಯ ॥ ೧೦॥

ಬಲುದಿನದ ರತುನವಿದು ಚಿರಕಾಲವಾಯ್ತಿದನು
ತೆರೆದು ನೋಡಿಲ್ಲೆಂದು ಒಲಿದುನೋಡುತ ರಮ್ಯ।
ಒರಸಿದಳು ಶೆರಗಲ್ಲಿ ಆಬ್ಬಬ್ಬ ಬಲುಮಂಕು ಹೋಯ್ತಾಯ್ತು ಎನುತಲೆನುತ ॥ ೧೧॥

ಶೆರಗೆಳೆದು ಭಾರತಿಯು ಒರಸುತ್ತ ನೋಡುತ್ತ
ಸಿರಿಗನಡಿಯೇತಕಿದು ಒಲಿಯುದಿಹುದು।
ವರಪತಿಯಕಾಣಲಿಹೆ ಸರಿಯಲ್ಲ ತಿಲುಕವಿದು ಸಿರಿಗನಡ ವದನವನು ತೋರದಿಹುದು ॥ ೧೨॥

ಚಿರದಿನದರತುನವಿದು ಸಿರಿಗನಡಗನಡಿಯಿದು
ಹರಿಹೊಲಸು ಹಿಡಿಯಿತೆನುತೆನುತ ಕೊರಗಿ।
ಶೆರಗೆಳೆದು ಭಾರತಿಯು ಒರಸೊರಸಿನೋಡುವಳು
ಸಿರಿಗನಡ ಮೊಗಛೊಬಿಯ ತೋರದೆನುತ ॥ ೧೩॥

[ಜೂಡಿ=ಬಳೆ; ಛೊಬಿ=ಛವಿ, ಕಾಂತಿ, ಚಿತ್ರ]

— ಶ್ರೀ ಹೊಯಿಸಳ.

ಗೀತಾಂಜಲಿ

(ಗೆಳೆಯರ ಗುಂಪಿನಿಂದ)

[ಬೆಳಗಾಂವಿಯಲ್ಲಿ ನೆರೆದ ಹನ್ನೊಂದನೆಯ ಕರ್ಣಾಟಕ ಸಾಹಿತ್ಯ ಸಮ್ಮೇಳನದಲ್ಲಿ ಓದಿದ ಲೇಖನ.]

ರವೀಂದ್ರನು ಮೃಗಳ್ಳನು, ಮನಗಳ್ಳನು, ಎದೆಗಳ್ಳನು–ಒಬ್ಬರ ಬಗೆಗಳ್ಳನು. ಮೈಯ್ಯುಂಡ ನನ್ನೆಲ್ಲ ಮನಗಂಡ ಮಾತುಗಳನ್ನೂ ಆವಾಗಲೋ ನನ್ನ ಹೃಮರೆಯಿಸಿ ಸದ್ದಿಲ್ಲದೆ ಕದ್ದು ಕೊಂಡೋಡಿದ್ದಾನೆ! ಕಂಡದ್ದು ನುಡಿಯಲ್ಲಿ ಕಾಣಿಸಲು, ಉಂಡದ್ದು ಹಾಡಿನಲ್ಲಿ ಹರಿಯಿಸಲು, ಹಾತೊರೆದು ಹಾಡಬೇಕೆನ್ನುವ ಮುನ್ನ, ತಾನು ಹಾಡಿನನ್ನೆಲ್ಲ ವಿಾಸಲವನ್ನೂ ಮುರಿದು ಬಿಟ್ಟಿದ್ದಾನೆ. ಹೀಗೆಂದೆ, ಅತನ ಸೊಲ್ಲಿನಲ್ಲಿ ಸೂನುವ ರಸಭಾಂಡಾರದ ಸರ್ವಾಧಿಕಾರವೂ ನನ್ನದಾಗಿದೆ; ಹೀಗೆಂದೆ, ಅತನು ಹೂಬಟ್ಟಲಲ್ಲಿ ಬಚ್ಚಿಟ್ಟ ಮಕರಂದವನ್ನೆಲ್ಲ ಹೀರಿ ನೋಡಿನುವ ಮುದುಕರವೂ ನಾನಾಗಿರುವೆ. ಇದ್ದರಿಂದ ಹೂವನ್ನುಂಡು ಹಿಗ್ಗುವೆನು; ಮೂಸಿ ಮೋದಪಡುವೆನು.

"ನಿನ್ನೆದೆಯ ಬದಿ ಒಂದರಗಳಿಗೆಯೇ ಸಲಿಗೆಯಿಂದ ಕೂಡಬೇಡುವೆನಯ್ಯಾ!

ಆ-ನನ್ನ ಕೆಲಸಗಳನ್ನು ಆ-ಮೇಲೆ ಮುಗಿಸೇನಂತೆ!
ನಿನ್ನ ನೋಡದ ನನ್ನೆದೆಗೆ ಹಗುರಿಲ್ಲ; ನಿನ್ನ ಕೂಡದ ನನ್ನೆದೆಗೆ ಹಿಗ್ಗಿಲ್ಲ.

ನಿನ್ನೊಡನಾಡದೆ ಮಾಡುವ ನನ್ನಾ ಮನವಿಲ್ಲದ ಮಾಳ್ಕೆಗೆ ಮುಗಿಯಿಲ್ಲ.

ಇಂತೆಂದೆ ನನ್ನೊಡೆಯಾ! ನಿನ್ನೆಡೆಯ ಬಳಿ ಒಂದರಗಳಿಗೆಯೇ ಸಲಿಗೆಯಿಂದ ಕೂಡಬೇಡುವೆ ನಾನು"

"ಯಾಕೆ ? ಯಾಕೆಸ್ಮೊಲವೆ ' ' ನಿನಗೆಂಪೆ ತುಂಬಲಿಸಿ ಹಿಂಬಾಲಿಸುವ ನನ್ನೀಕೆ ಬೀಗೆ ಹೊರ ಹೊರಗೇ ನಿಲ್ಲಿಸಬೇಕೆನ್ನುವಿ?

ದುಡಿಸಿಯಿಲ್ಲಿ ತೊದಗಿದ ಬಿಡುವಿಲ್ಲದ ಪಗಲಲ್ಲಿ ಪಗಲೆಲ್ಲ ಜಗದ ಜಾತ್ರೆಯ ಜನರ ಕೂಡಿರುವೆ ಆದರೆ ನಾನೀ ಯಾರಿಲ್ಲದ ಇರುಳನ್ನು ನೀನಿಲ್ಲದೆ ಕಳೆಯಲಾರೆನು ಗೆಳೆಯಾ ' ಇರುಳಲ್ಲಿ ಇರುಳೆಲ್ಲ ನಿನ್ನನ್ನೆ ಹಾಡ್ಕೆಸುವೆನು

ಇರುಳಲ್ಲಿ, ಇರುಳೆಲ್ಲ ನಿನ್ನನ್ನೆ ಕೂಡಿರ ಬಯಸುವೆನು '

ನೀನು ನಗೆಯುಗುವಮೊಗವನ್ನು ನಾಕಾಣದಂತೆ ಕತೆಗೂ ಕದ್ದಿಟ್ಟಿಯಾದರೆ, ನೀನೊಮ್ಮೆ ನನ್ನನ್ನು ಕತೆಗೂ ಕೈಬಿಟ್ಟಿಯಾದರೆ, ಅಯ್ಯೋ! ನಾನರಿಯೆ! ನಾನರಿಯೆನೊಲವೆ' ಯಾವಾಗಲೂ ನನ್ನೆದೆಯನ್ನ ಳಿಸಿ–ಅಳಿಸಿ-ಕಂಬನಿಯ ಮುಳಿಯ ಸುರಿಸಿ, ಬೆಳೆದೇನೆನ್ನುವ ಈ ಹಾಳುಹೊತ್ತನ್ನು ಹೇಗೆ ತಿಳಿದೇನೆಂಬುದನ್ನು'!"

ಹೀಗೆ ಪಲುಬಿ ಹಲುಬಿ ನೈಮನಗಳು ಸೋತಂತಾಗಿ ದುಮ್ಮಾನಗೊಂಡಿದ್ದರೂ, ನಿಲ್ಲೆದೆಯ ನೆಲ್ಲರುಳು ಮಾತ್ರ ನುಮ್ಮನಿರಲಾರದೆ, ಅ-ತನ್ನ ಪ್ರೀತಿಯ ಪರಮೇಶ್ವರನಿಗೆ ಬಸ್ಸೂ ಒಟ್ಟುಗುಟ್ಟುತ್ತಲೇ ಇದೆ:—

"If Thou speakest not, I will fill my heart with Thy silence and endure it."

"ನೀನು ನನ್ನೊಡನೆ ಮಾತನಾಡದಿದ್ದರೆ, ನನ್ನೆದೆಯೊಳಗೆದ ನಿನ್ನ ಮೌನವನ್ನೆ ತುಂಬಿ ನಿನ್ನನ್ನೆ ನಂಬಿ ತಾಳಿಕೊಳ್ಳುವೆ ದೇವಾ'"

ನಾನು ಹಾಡಿದ ಹಾಡು ಬೇಡಾಗಿ ಬೇಸರಗೊಟ್ಟರೆ, ಇದೋ ನಿಲ್ಲಿಸಿಬಿಟ್ಟಿ. ಇದರಿಂದೇ ನಿನ್ನ ಹೃದಯವು ಹೊಯ್ದಾಡುತ್ತಿದ್ದರೆ, ಇನೋ ನನ್ನೆದೆಯೊಳಗೆ ನಟ್ಟ–ನಿನ್ನ ಮೊಗದೊಳಗಿಟ್ಟ ನನ್ನ ದಿಟ್ಟಿಯನ್ನು ಕಿತ್ತುಕೊಳ್ಳುವೆ.

—Gardener

"ನೀನು ಕೈಮುಟ್ಟಿ ಕೊಟ್ಟ ಮುಚ್ಚುಗೆಯನ್ನೀ ಕೊಳ್ಳುವೆನಯ್ಯಾ ' ನನಗಿನ್ನೇನೂ ಹೆಚ್ಚಿನದೆನ್ನುವದೇ ಬೇಡ'

ಅದೊಂದು ನಿರ್ಮಾಲ್ಯಮಾಲೆಯಾಗಿದ್ದರೆ, ಅದನ್ನೆ ಎದೆಗವಚಿ ನನ್ನಿಯಿಂದ ನೆನಸುವೆನಯ್ಯಾ! ಅದೊಂದು ಮುಳ್ಳಿನ ಕಾರ್ಮೊನೆಯಿದ್ದರೆ, ಅದು ನೀನಾಡುವ ಕೂರ್ಮೆವನೆಯಿಂದೆ ಮುತ್ತಿಕ್ಕೆ ಸಹಿನುವೆನಯ್ಯಾ'

ನಿನ್ನೊಂದೆ ನನ್ನಿಯ ನಿಡಿನೋಟವು, ನನ್ನಿರವನ್ನು ಅಮೃತವನ್ನಾಗಿ ಮಾಡಿ, ಅ-ಮೃತವನ್ನಾಗಿ ಮಾಡುವದೊಜೆಯಾ'

ಅಪ್ಪ ಬೆದರಿಕೆಯ ಬಿರಿನೋಟಗಳಾಗಿದ್ದರೆ, ಅವನ್ನಾವಾಗಲೂ ನನ್ನೆದೆಗೆ ಜಾರ್ಚಿಕೊಳ್ಳುತ್ತ ಬಚ್ಚಿಡುವೆನಯ್ಯಾ!!

—Gardener

ತನ್ನ ಮನದನ್ನೆನಿಂದ ಬಂದದ್ದು ಮುಳ್ಳಿನ ಮೊನೆಯಿದ್ದರೂ, ನನ್ನಿಯ ನನೆಯಿದ್ದರೂ, ಮುತ್ತಿಕ್ಕಿ ಎದೆಗೆ ಮತ್ತಿಕ್ಕಿಕೊಳ್ಳುವ, ರವೀಂದ್ರನ ಸುಪ್ತಾದ್ಭರ್ಭದೊಳಗಿಂದ ಜನಿಸಿ ಬಂದೀ ಜೀವಿಯ ನಿಷ್ಕಾಮ, ನಿರ್ವ್ಯಾಜ ಪ್ರೇಮಲತೆಯ ವಿಸ್ತಾರ ಮರ್ಯಾದೆಯು ಅದೆಷ್ಟು ವಿಶಾಲವಾಗಿದೆಯೊ! ಪವಿತ್ರವಾದ ಪ್ರೇಮಧರ್ಮದ ರಹಸ್ಯವೇ ತ್ರಿಕಾಲಾಬಾಧಿತವಾಗಿರುವದು. ಇರಲಿ; ಆ ಅಂತಃಕರಣದ ಆರ್ತತೆಯ ಅಂತವು ಇಲ್ಲಿಗೇ ಆಗಿಲ್ಲ :—

"ನೀನು ಬೇಕೆನಗೆ ನೀನೆ ಬೇಕೆನ್ನೊಲವೆ!
ನೀನು ಬೇಕೆನಗೆ ನೀನೆ ಬೇಕು!!
ಮೊದಲು ಮುಗಿಯಿಲ್ಲದೆ ನನ್ನೆದೆಯು ಇದನ್ನೆ ನುಡಿಯುತ್ತಿರಲೆನ್ನರಸೆ!
ನೀನು ಬೇಕೆನಗೆ ನೀನೇಬೇಕು!!"

ಹೀಗೆಂದುಕೊಂಡು, ಮನದಲ್ಲಿ ಸೊಂದುಕೊಂಡು, ಆ ಆಲ್ಲರದ ಬೇಗೆಯಿಂದ ಬೆಂದುಕೊಂಡು, ಬಾಡಿದ ಬಗೆಯನ್ನು ಎಂತೆಂತೊ ಆ ಜೀವಿ ಸೈಸಿಟ್ಟುಕೊಳ್ಳುತಿದೆ. ಇಷ್ಟೊಂದು ಅಲ್ಪವಿದರೂ, ಕಣ್ಣೆರೆಯ ಮುಂದೋಡಿ ಬಂದಾ

ಡಬಾರದ್ದು, ಮುಗಿಲ್ದೆರೆಯ ಹಿಂದಿರುವ ಅದಾವ ಕಾಣಬಾರದ ತಿಟ್ಟಿಯೊ !

ಈ ಜೀವಿಯ ಈ ಬಗೆಯ ದುಃಖಭೂತ ಬಾಷ್ಪಾಂಜಲಿಯೇ, ಒಲುಮೆಗಾಗಿ ತನ್ನ ನನ್ನಿಯ ಜೆನ್ನಿಗನ ಅಡಿಗಿರಿಸಿದ ಪ್ರೀತಿಪೂತ ಪುಷ್ಪಾಂಜಲಿಯು.

ಗೆಳೆಗೆಳೆಯರು, ನಲ್ಲನಲ್ಲೆಯರು, ಜೀವದೇವರು ಇವರೆಲ್ಲರು ಸಜಾತಿಯ ಜೀವಿಗಳು. ಇವರೆಲ್ಲರ ಅಲ್ಲರವೂ ಒಂದೇ ಬಗೆಯದೇ. ಗೆಳೆಯ ಗೆಳೆಯನನ್ನಗಲಿ ಹಾಗೇ ' ಹಾ ' ತೊರೆಯುವನು, ನಲ್ಲನಲ್ಲೆಯನ್ನಗಲಿ ಹಾಗೇ ಹಂಬಲಿಸುವನು, ಜೀವ ದೇವನನ್ನಗಲಿ ಹಾಗೇ ಹಲುಬುವನು.

ರವೀಂದ್ರನ "ಗೀತಾಂಜಲಿ" ಯಲ್ಲ ಇಂಥ ಅಗಲಿಕೆಯ ಬಳಲಿಕೆಯೇ ಬಹಳ ! ಇಂಥ ಆಟದ ನೋಟಗಳೇ ಬಹಳ ! ಇಂಥ ಎದೆ ಮಾತುಗಳೇ ಬಹಳ ! ಇಂಥ ನನ್ನಿಯ ಕೂಟಗಳೇ ಬಹಳ !!

ಎದೆ ಎತ್ತಿಕೊಟ್ಟ ನುಡಿಯನ್ನೆ ನಾಲಿಗೆಯಿಂದ ಮಿಡಿದು ನುಡಿದು ಕರೆದದ್ದಾದರೆ ಆ ಕೂಗು ಮುಗಿಲಿನ ಮೂಲೆ ಮೂಲೆಗೂ ಮುಟ್ಟುವದು. ಕೂಸು, ಹೀಗೆ ಕೂಗಿ ಕರೆದೇ ತಾಯಿಯನ್ನೆಲ್ಲಿಂದಲೂ ಬರಮಾಡಿಕೊಳ್ಳುವದು!

ಕೈಗೊಳಲನ ಕೆಳೆಯನೆಳೆಸಿದ ರವೀಂದ್ರನು ಇಲ್ಲಿ ಗೆಳೆಯನಾಗಿ ಎದೆಯ ಒಳ ಒಳಗಿಂದೇ ತನ್ನ ಮಾತುಗಳನ್ನು ಹೊರ ಹೊಮ್ಮಿಸಿದ್ದಾನೆ. ಗೆಳೆಯನು ಗೆಳೆಯನ ಅಗಲಿಕೆಯಿಂದ ಆಡಬಹುದಾದ-ಅಲ್ಲ-ಆಡಬೇಕಾದ-ಅಲ್ಲ-ಆಡುವ ಮಾತುಗಳನ್ನೆಲ್ಲ, ನನ್ನ ಎದೆಹೊಕ್ಕು ಕೊರಳ ಬೆರಳ ಸಂಜುಗೂಡಿಸಿ ಹಾಡಿಸೋಡಿದ್ದಾನೆ ! ಎಲ್ಲವೂ ನಿಜವೇ !!

ಇಂಥ ಮೈಗಳ್ಳ, ಮನಗಳ್ಳ, ಎದೆಗಳ್ಳ, ಬಗೆಗಳ್ಳ, ಮಾತುಗಳ್ಳರೇ ಕಬ್ಬಿಗರು. ಮೈ-ಮನ-ಎದೆ-ಬಗೆಗಳ ಪಂಜುಗಳ್ಳರು ಕಬ್ಬಿಗರಾಗರು. ಅವರೀಬಗೆಯು ನಮಗೆ ಗೊತ್ತಾದರೆ ನಮ್ಮಿಂದ ಒಲವಿನ ನಲಿಗೆಯ ನುಲಿಗೆಯನ್ನಾದರೂ ಮಾಡಿಕೊಂಡು ಹೋಗದೆ ಬಿಡರು !! ಇಂಥ ಕುರುಹಾದ ಕಳ್ಳರಿಗೆ ಪರಾಂಕ್ಷಕರಣಪ್ರವೇತಿಗಳೆಂದು ಪರ್ಯಾಯ ನಾಮ. ಕವಿಯೆಂದರೆ ಜಗವನ್ನೆ ನುರಿಸಿ ನುಂಗಬಲ್ಲ ಜಟ್ಟಿಯು. ನುಂಗಿ ನುರಿಸುವವರು ನಿಜವಾದ ಕಬ್ಬಿಗರೇ ಅಲ್ಲ. ಇವರ ಅಜೀರ್ಣಾಂಶದಿಂದುಂಟಾದ ವಾಂತಿ ಭೇದಿಯ ರೋಗಿಗಳು. ರಸನೆಯಿದ್ದೂ ರಸಹೀನರದ ಶಾಪಗ್ರಸ್ತ ಅರಸಿಕ ಜೀವಿಗಳು. ತಾನು ನುರಿಸಿ ನುಂಗಿದ್ದನ್ನು ಮೈತುಂಬಿ ಹರಿಸಿ-ಬೆರೆಸಿ ಜಗದೊಂದಿಗೆ ಒಂದಿ ಒಮ್ಮುಖದಿಂದ ಒಡನುಡಿಯಹತ್ತಿದನೆಂದರೆ ಕವಿಗೆ " ನೀವು ನುಡಿದದ್ದೆಪುರುಳ್ ! ನಾವು ಪಿಡಿದದ್ದೆ ತಿರುಳ್ "! ಎಂದು ಎದೆ ತಟ್ಟಿ ಸಾರುವ ನೀರು ಉಂಟಾಗುವದು.

ಕವಿಯು ನಮಗೆ ತಿಳಿಯದ್ದನ್ನೆ ಹೇಳುವ ಬೇಕಾದ್ದನ್ನು ಬಿಡುವ ಟೀಕೆ ಟಿಪ್ಪಣಿಕಾರನಲ್ಲ ; ಆತನು, ನಮಗೆ ಹೊಳೆಯದ್ದನ್ನು ಹೊಳೆಸಿ, ತಿಳಿಯದ್ದನ್ನು ತಿಳಿಸಿ, ತಿಳಿಸಿದ್ದನ್ನು ಬೆಳಗಿಸಿ ತೋರಿಸುವನು. ಮರೆತದ್ದನ್ನು ಮರು ಮರುಳಿ ನೆನಪಿಗೆ ತಂದುಕೊಟ್ಟು, ಆದನ್ನಾವಾಗಲೂ ಹೊಚ್ಚ ಹೊಸಹಾಡಿಯನ್ನಾಗಿಯೇ ಇರಿಸುವನು; ಬಗೆಗೆ ಬೇಕಾದ್ದನ್ನೇ ತಂದು ಮುಂದಿಡುವನು.

ನಮ್ಮ ರವೀಂದ್ರನು ಇಂಥ ಕವೀಂದ್ರರಲ್ಲೊಬ್ಬನು. ಗೀತಾಂಜಲಿಯಲ್ಲಿ ರವೀಂದ್ರನಿಗೆ ಪರಾಂತಃಕರಣ ಪ್ರವೇಶಮಾಡಿ ಹೇಳಬೇಕಾದ ಪ್ರಸಂಗವೇ ಬಂದಿಲ್ಲ. ಅಂದರೆ-ಒಂದರಲ್ಲಿ ಬೆರೆಕೊಂಡು ತನ್ನನ್ನು ಮರಕೊಂಡು ಪಡಿನುಡಿಗಳನ್ನು ಒಡನುಡಿಯ ಬೇಕಾಗಿ ಬಂದಿಲ್ಲ. ಗೀತಾಂಜಲಯಲ್ಲಿ ತನ್ನಲ್ಲಿ ತಾನೆ ಬೆರೆಕೊಂಡಿದ್ದಾನೆ. ತನ್ನನ್ನು ಮರಕೊಂಡಿದ್ದಾನೆ.

ಎಂದ ಮೇಲಂತೂ ಕೇಳುವದೇನು! ಆತನೇನಂದರೂ ಎಂತೆಂದರೂ ಅವಕ್ಕುಂಟು ಹಿದುಗರೆಲ್ಲರ ಜೀವದ ಬೆಲೆ ! ಅವಕ್ಕುಂಟಾತನ ಜೀವಾಳದ ಬೆಲೆ! ಅವಕ್ಕುಂಟು ಶಾರದೆಯ ಶಕ್ತಿಯ ಬೆಲೆ! ಅವಕ್ಕುಂಟು ಪರಬ್ರಹ್ಮನ ಸೃಷ್ಟಿಯಬೆಲೆ! ರವೀಂದ್ರನೇ ಒಂದೆಡೆಗೆ ಹೀಗೆಂದು ಎದೆತಟ್ಟಿ ದನಿಗೂಡಿಸಿದ್ದಾನೆ.

".....I have never uttered any thing false in my poetry" (Letters, Modern Review, July, 1917)

ಸಾಮಾನ್ಯ ವ್ಯವಹಾರರಂಗದಲ್ಲಾದ್ದಾಗ ನಾವು ಒಲವಿನ ಒಂದಿಕೆಯಲ್ಲರುವಿಲ್ಲ. ಆಗ ನಾವು ನಾಚಿಕೆಯು ಈಜೆಗಿರುವೆವು. ಇಲ್ಲ ಬೈ-ಮನಗಳಿಗೆ ಮುಚ್ಚು-ಮರೆಗಳಿಲ್ಲದಿರೆ-ಅವಕ್ಕೆ ಇರಲೊಂದು ಮನೆಯಿಲ್ಲದೆ ಇರೆಸಾಗದು. ಒಲವಿನಒಂದಿಕೆಯಲ್ಲಿದ್ದಾಗ ನಾವು ನಾಚಿಕೆಯು ಆಜೆಗಿರುವೆವು! ಆಲ್ಲಿ ಬೈಮನಗಳು ಮುಚ್ಚು ಮರೆಯನ್ನುಚ್ಚಿರುವವು. ಮುಲರನ್ನು ಒಳಗೆ ಮುಚ್ಚಿಕೊಂಡು ಮುದುಡಿದ ಮೊಗ್ಗು ಬಿಚ್ಚಿ ಹೂವಾಗುವದು. ಆಗ ಒಲವಿನ ಒಂದಿಕೆಯಲ್ಲಿದ್ದಾಗ ಒಲವಿನ ವಿದ್ಯುತ್ಸ್ಪವಾಹವು ಪರಸ್ಪರರ ನವಿರ್-ನವಿರುಗಳೊಳಗಿಂದ ಸ್ರವಹಿಸಿ ಅಂತಃಕರಣ ಬಹಿಃಕರಣಗಳನ್ನೆಲ್ಲ, ನನ್ನಿಯ ಸಾಸಿರನೇಸರರ ಜೆಳ್ ಪೆಳಕಿನಲ್ಲಿ ಸಾಕ್ಷಾತ್ಕರಿಸಿಕೊಳ್ಳುವಾಗ ನಾಚಿಕೆಯ ಮುಚ್ಚು ಮರೆಯೇಕೆ? ಇದನ್ನು ಮನದಂದೇ ರವೀಂದ್ರನನ್ನುವದು:—

"ಉಡಿಗೆತೊಡಿಗೆ ನನ್ನ ನಿನ್ನ ನಡುವಾಗುವದೊಲವೆ!
ಎದೆ ಎದೆಗೆ ಬಿಡುವಾಗುವದೊಲವೆ!
ನನ್ನಿನನ್ನಿಯ ಕೂಟಕ್ಕೆ ತಡೆಯಾಗುವದೊಲವೆ!!
ನಲವು ನನ್ನಿಯಿಂದ ಕಡೆಯಾಗುವದೊಲವೆ!"
ಝಗಝಗಿಸುವ ಉಡುಪು ಸರಗುಟ್ಟಿ
ಲಕಲಕಿಸುವ ಮೂಕಮಾತುಗಳನ್ನು ಮುಳುಗಿಸವದು!"

ಹೀಗೆ ಅಳಿಯದ [illegible]
ಲ್ಲಾದರೂ ಉಂಟೇ [illegible]
ನಲ್ಲೆದುರ ನಲ್ಲೂಟಗಳುಂಟೇ! ಹೀಗೆ ಚಿಟಿಕಿಟ ಆಗದ ತ್ಯಾಗಯಾಗದಿಂದಾದ ಜೀವದೇವರ ಯೋಗವುಂಟೇ!!

ಇಂಥ ಮಾತಿನ ಮುತ್ತುಗುಳಿದ ಕವಿ ರವೀಂದ್ರನು ನನ್ನಿಯ ಮುನ್ನೀರಲ್ಲಿ ಮುಳುಮುಳುಗಿ ಒಲವಿನ ನಿಲುವಿನ ನಲ್ಲೆಯನ್ನು ಮೊದಲು ಮುತ್ತಿಟ್ಟು ಬಂದ. ಈ ಹೆಚ್ಚಿಗೆಯ ಮೆಚ್ಚುಗೆಯನ್ನು ಆ ಒಲವಿನ ನಿಲುವಿನ ನಲ್ಲೆಯಿಂದಲೇ ಪಡೆದು ಬಂದ!! ತನ್ನ ಸೊಲ್ಲಿನಲ್ಲಿ ಸೂಸಿ ಒನರುವ ಸೊಸೆಯ ಸೆಲೆಯನ್ನು ಆತನು ಆ ಜೆಲುವು ಒಲವು ನಲವುಗಳ ನೆಲೆಗಂಡೆ ತಂದಿರುವ.

ರವೀಂದ್ರನು ಪ್ರೇಮ ಪರವಶನಾಗಿ ಉಚ್ಚರಿಸಿದ ಪ್ರೇಮ ಪ್ರಣವಗಳ್ಗೆ ಗೀತಾಂಜಲಿಯನ್ನಷ್ಟು ಮಾತ್ರ ಸಮರ್ಪಿಸ ಬಂದ ನಾನು, ಆತನು ಇಂಪಾಗಿ ಪಾಡಿದ ಇನ್ನುಳಿದ ಸಾಮವೇದಗಳನ್ನು ಸಂಗಡ ತರಲಿಲ್ಲ.

" From the words of the poet men take what meanings please them ; yet their last meaning points to Thee. "

"ಕಬ್ಬಿಗನು ಉಸುರಿದ ಒಡನುಡಿಗಳಿಂದ ರಸಋಷಿಯು ಉಚ್ಚರಿಸಿದ ವೇದಗಳಿಂದ ನಾವು ನಮಗೆ ಬೇಕೆನಿಸಿದ ಅರ್ಥವನ್ನೆ ತೆರಸಿದರೂ ಆ ನುಡಿಗುಡಿಯಲ್ಲಿ ಮೂಡಿದಾತ ನೀನೇ ದೇವಾ!!!"

———o———

ನಟರಾಜಭಕ್ತ ಹೊಲೆಯನಂದ

[ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು]

ಅಯ್ಯಾ ವಾಚಕನೇ! ಬಿಡುಗಡೆ ಹೊಂದಿದ ನಂದನ ಆನಂದವನ್ನು ಬಣ್ಣಿಸಲು ಸಾಧ್ಯವೇ? ಬೇಡನ ಬಲೆಯಿಂದ ಆಗತಾನೇ ತಪ್ಪಿಸಿಕೊಂಡ ಹುಲ್ಲೆಯ ಆನಂದವೇನು! ಗುಲಾಮಗಿರಿಯಿಂದ ನಿವರ್ತನಾದ ಸಿದ್ದಿಯ ಆನಂದವೇನು! ದೀರ್ಘ ಕಾಲ ಬಂಜೆಯಾಗಿದ್ದು ಗಂಡುಮಗುವನ್ನು ಆಗ ತಾನೇ ಹೆತ್ತ ತಾಯಿಯ ಆನಂದವೇನು? ಕಣ್ಣು ಪಡೆದ ಹುಟ್ಟುಕುರುಡನ ಆನಂದವೇನು? ಇವುಗಳಲ್ಲಾವುದೂ ನಂದನಿಗೂ ನಂದನ ಇಷ್ಟದೇವತೆಯಾದ ನಟರಾಜನಿಗೂ ಅಡ್ಡಲಾಗಿದ್ದ ತಡೆ ಹೋದುದರಿಂದಾತನಿಗುಂಟಾದ ಆನಂದಕ್ಕೆ ಸಾಟಿಯಾಗದು.

ಆನಂದಪರವಶನಾದ ನಂದನು ನಟರಾಜನ ನಾಮಸಂಕೀರ್ತನವನ್ನು ಮಾಡುತ್ತ, ಕುಣಿಯು

ತ್ತ, ತೋಳವು ಆಹುತಿಯ ಮೇಲೆ ನೆಗೆಯುವು ದಕ್ಕೆ ಆತುರಪಡುವಂತೆ ನಟರಾಜನ ಮೇಲೆ ಬೀಳಲು ಹುಲ್ಲುಗಾವಲುಗಳ ಮೇಲೆ ಓಡ ತೊಡಗಿದನಾಗ.

ದಿವ್ಯಪ್ರೇಮವೆಂಬ ಅಗ್ನಿಯಿಂದ ದಗ್ಧನಾಗಿ ಹುಚ್ಚು ಹಿಡಿದವನಂತೆ ಕುಣಿಯುವನನ್ನು ಕಂ ಡರೆ ಇಂದ್ರಾದಿದೇವತೆಗಳಿಗೂ ಸಂತೋಷವಷ್ಟೆ. ಏಕೆಂದರೆ ಪ್ರೇಮವೇ ಅವರ ಪ್ರಪಂಚ. ವಾಚಕ ನೆ! ನಂದನ ಚರಿತ್ರೆಯು ಇನ್ನೂ ಹೇಳುವು ದನ್ನು ಕೇಳುವೆಯೋ! ನಂದನ ಆನಂದವನ್ನು ನೋಡಿ ಭೂದೇವಿಯು ತನ್ನ ತಲೆಯನ್ನಳ್ಳಾಡಿಸಿ ದಳಂತೆ. ಹುಲ್ಲು ಗರಿಗಳು ಸಂತಸದಿಂದ ತಲೆ ದೂಗಿದವಂತೆ. ಬಾಂದಳದಿಂದ ಆನಂದ ಸೂಚ ಕವಾದ ಮಳೆಯ ಹನಿಗಳು ಬಿದ್ದುವಂತೆ. ಆನಂ ದವನ್ನು ತಾಳಲಾರದೇ ನಂದನು ಕುಣಿಯುತ್ತಾ ಚಿಮ್ಮಿಸಿಗೆದನು ಹುಲ್ಲೆಯಂತೆ. ಹಾವಿನ ಮೊ ಟ್ಟೆಗಳು ಹಾವುಗಳಿಗೆ ಮಾತ್ರ ಗೊತ್ತು. ಹಾಗೆ ಯೇ ಪ್ರೇಮಾವಿಷ್ಟರಾದವರಿಗೇ ಪ್ರೇಮಾನಂ ದವು ಗೊತ್ತು. ಸಾವಿರಾರು ಎಕರೆಗದ್ದೆಯನ್ನು ಸ್ವಲ್ಪ ಕಾಲದಲ್ಲಿಯೇ ಕುಯ್ದಾನಂದನಿಗೆ ಆಧ ನೂರಿಂದ ಕೊಳ್ಳಡಕ್ಕೆ (ಕಾವೇರಿಗೆ) ನಡೆದು ಹೋಗುವುದು ಹೇಗೆ ತಾನೆ ಶ್ರಮವಾದೀತು! ತುಂಬಿಹರಿಯುತ್ತಿತ್ತು ಹೊಳೆ. ಪ್ರವಾಹವನ್ನು ನೋಡಿದರೆ ಏನೋ ಒಂದು ಬಗೆಯಾದ ಗಾಂ ಭೀರ್ಯವು ತೋರುತ್ತಿತ್ತು. ಪ್ರಜ್ಞೆಯಿಲ್ಲದೆ ಮಾ ತಾಡುತ್ತಾ ಮುಂದೆ ಹೋಗುವ ಕುಡುಕನಂತೆ ಕೆಲವೆಡೆ. ಕತ್ತಿನ ಮೇಲಣ ಕೂದಲನ್ನು ಒದ ರುತ್ತಾ ಹೆಜ್ಜೆ ಹಾಕುವ ಕಾಡುಸಿಂಹದಂತೆ ಮತ್ತೆ ಕೆಲವೆಡೆ. ದಪ್ಪಹೆಗಲನ್ನು ಅಲ್ಲಾಡಿ ಸುತ್ತ ಮುಂದೆ ನುಗ್ಗುವ ಗೂಳಿಯಂತೆ ಕೆಲವೆಡೆ. ಮೆಲ್ಲನೆ ತೆರಳುವ ಹಾವಿನಂತೆ ಇನ್ನೂ ಕೆಲವೆಡೆ. ಇದೀಗ ಹೊಳೆಯ ಪಟ. ದೂರದಲ್ಲಿ ಕಾಣು ತ್ತಿದ್ದ ಚಿದಂಬರ ದೇವಾಲಯದ ಗೋಪುರವನೀ ಕ್ಷಿಸಿ ವೇದಘೋಷವನ್ನು ಮಾಡುತ್ತಲಿದ್ದಿತೋ ಎಂಬಂತೆ ಹರಿಯುತ್ತಿದ್ದಿತಾ ಹುಚ್ಚು ಹೊಳೆ. ಹೊಳೆಯ ಅಂಚಿಗೆ ಬಂದು ಅಳವಾಗಿ ಹರಿಯುವ ನೀರನ್ನು ನೋಡಿದ ನಂದನು "ಎನ್ನ ಪ್ರಿಯ ನಟರಾಜ ಮೂರ್ತಿಯ ನಾಮಸಂಕೀರ್ತನವನ್ನು ಮಾಡುತ ಚಿಮ್ಮಿ ಮುಂದರಿಯುವಂತೆ ಇರು ವುದೀ ಹೊಳೆಯು. ಅದರಂತೆ ನಾನು ನರ್ತನ ಮಾಡುವೆ"ನೆಂದು ಬಗೆದು 'ನಟರಾಜನಾಟ್ಯವೆ ನಾಟ್ಯವು, ನಮ್ಮೆಲ್ಲರ ನಾಟ್ಯವು ಅಜ್ಞಾತೆಯು," ಎಂದು ಗಾನಮಾಡುತ್ತಾ ಕುಣಿದನು. ಬಿಸಲಿನ ಝಳದಿಂದ ಕಂದಿದ ಮುಖವುಳ್ಳವನಾಗಿ ವಿಭೂ ತಿಯನ್ನು ತಳೆದ ಗುರುತುಗಳುಳ್ಳ ಮೈಮೇಲಿನ ಜೀವರಿನ ನರಗಳಿಂದ ಕೂಡಿದವನಾಗಿ ಕಪ್ಪುರದ ಕಂಪುಳ್ಳವನಾಗಿ ಹರಿಗೋಲಿನವತರಿಗನೋರ್ವ ನು ಹರಿಗೋಲನ್ನು ನಡೆಸುತ ನಂದನನ್ನು ನವಿಾಪಿಸಿದನಾಗ. ಆತನನ್ನು ನೋಡಿದ ನಂದ ನು ಆತನನ್ನು ತನ್ನ ನಟರಾಜನೆಂದೇ ಭಾವಿಸಿ ಮನದಲ್ಲಿ ಪೂಜಿಸಿ ಹರಿಗೋಲಿನಲ್ಲಿ ಬಾಡಿಗೆಗೆ ಕುಳಿತು ನಟರಾಜಮೂರ್ತಿಯ ಕಳೆಗುಂದದ ಮಹಿಮೆಯನ್ನು ಕುರಿತು ಮಾಡಿದ ಗಾನಕ್ಕೆ ಚಿರಗಾದರಿತರವಥಿಕರು.

ಕುಣಿಯ ಹತ್ತಿತು ಹರಿಗೋಲು ನೀರಿನ ಮೇಲೆ. ಕುಣಿಯುತ್ತಿದ್ದ ಹರಿಗೋಲಿನಲ್ಲಿ ಕುಣಿ ವನು ನಂದ. ಕುಣಿಯತೊಡಗಿದರಿತರವಥಿಕರವ ನೊಡನೆ. ಹರಿಗೋಲಿನವನು ನಡೆಗೋಲನ್ನು ಬಿಟ್ಟು ಪ್ರಯಾಣಿಕರೊಡನೆ ಕುಣಿದನು ತಾನೂ. ಎಲ್ಲರೂ ಕುಣಿದರು. ಆನಂದೋತ್ಸವವಾಯಿ ತಾಗ. ಆದರೆ ಅದು ಹತ್ತು ನಿಮಿಷದ ನರ್ತನ ಮಾತ್ರ. ಹರಿಗೋಲು ಹಾಗೂ ಹೀಗೂ ತಡಿ ಯನ್ನು ಮುಟ್ಟಿದೊಡನೆಯೇ ನಂದನು ನಟ ರಾಜನ ರಾಜ್ಯದ ಮೇಲೆ ಹಾರಿ ಹರಿಗೋಲಿನವ ನಿಗೆ ಬಾಡಿಗೆಯನ್ನು ಕೊಡಲು ಸೊಂಟಕ್ಕೆ ಕೈ ಹಾಕಿ ದುಡ್ಡಿಗೆ ತಡವರಿಸಿದನು. ನೋಡಿದ ಹರಿಗೋಲಿನವನು 'ಬಾಡಿಗೆಯ ನೊಲ್ಲೆನೋ' ಎನುತ ಕಂಬನಿ ಸುರಿದನು ಹೊಳೆಹೊಳೆಯಾಗಿ! "ಎನ್ನ ಧಣಿ, ಎನ್ನೊಡೆಯ, ಹೊಲೆಯನಲ್ಲವೊ ನೀನು! ಭಗವನ್ಮೂರ್ತಿಯೇ ನೀನು! ನಾನೀಗ ಹೊಲೆಯ, ಗುಲಾಮನು ನಾನು. ನಿನ್ನಿಂದ ಬಾಡಿಗೆಯನೊಲ್ಲೆನೊ" ಎಂದು ನುಡಿಯುತ ಎರಗಿದನು ನಂದನ ಅಡಿಗಳಿಗೆ.

ಮೇಲೆ ಹೇಳಿದಂತೆ ಹತ್ತು ನಿಮಿಷಗಳು ಹಿಡಿ ಯಿತು ಹೊಳೆಯನ್ನು ದಾಟಲು. ಇಷ್ಟರಲ್ಲಿ

ಯೇ ನಂದನು ಭಕ್ತಾಗ್ರಣಿಯೆಂಬುದನ್ನು ಅವ ನೊಡನೆ ಹರಿಗೋಲಿನಲ್ಲಿ ಪ್ರಯಾಣ ಮಾಡಿ ದವರು ತಿಳಿದು ಅತನ ಭಕ್ತರಾದರು. ಹರಿ ಗೋಲಿನವನು ಬಿಟ್ಟನು ತನ್ನ ಹರಿಗೋಲನ್ನು. ಕಾರ್ಯಾರ್ಥವಾಗಿ ಹೊರಟಿದ್ದವನು ಮರೆತನು ತನ್ನ ಕಾರ್ಯವನ್ನು. ವರ್ತಕನು ಬಿಟ್ಟನು ತನ್ನ ವ್ಯಾಪಾರವನ್ನು. ಒಕ್ಕಲಿಗನು ದೂರಾ ಎಸೆದನು ತನ್ನ ನೇಗಿಲನ್ನು. ಈ ಮೇರೆಗೆ ಅವರೆಲ್ಲರೂ ನಂದನ ಸುತ್ತಲೂ ಗುಂಪುಕೂಡಿ ನರ್ತನಮಾಡ ತೊಡಗಿದರು ನಟರಾಜನಂತೆ. ದೂರದಲ್ಲಿ ಕಂ ಗೊಳಿಸುತ್ತಿದ್ದ ಚಿದಂಬರ ದೇವಾಲಯದ ಶೋ ಭಾಯಮಾನವೂ ಗಂಭೀರವೂ ಆದ ಗೋಪುರವು ನಂದನನ್ನು ನೋಡಿ ''ಬಾರೋನಂದ!ಕುಣಿಯೊ ನಂದ ಆನಂದ ಕುಣಿತವ-ಬಾರೊನಂದ! ಕುಣಿ ಯೊ ನಂದನಟೇಶನ ಕುಣಿತವ!ಕುಣಿಯೊ ನಂದ ದೂರಮಾಡೊ ಅಜ್ಞಾನವ''! ಎಂದ ಕರೆಯುತ್ತಿ ದ್ದಿತೋ ಎಂಬಂತೆ ತೋರಿತಾಗ ನಂದನ ಮನ ಸ್ಸಿಗೆ.

ನಟರಾಜ ದೇವಸ್ಥಾನದ ಗೋಪುರವನ್ನೀ ಕ್ಷಿಸಿ ತಲೆವಾಗಿ ಮನಸ್ಸಿನಲ್ಲಿ ಆರಾಧಿಸಿ 'ಎಲೈ ಸ್ವಾಮಿ! ಅನಂತವಾದೀ ಬ್ರಹ್ಮಾಂಡದಲ್ಲಿ ಸುಮ್ಮ ನೆ ಎರಚಿ ಬಿಟ್ಟಿರುವಂತೆ ತೋರುವ ಅಸಂಖ್ಯಾ ತವಾದ ಯಾವ ಗೋಳಪಿಂಡಗಳಾದರೆ ಯಾರ ಆಜ್ಞೆಯಿಂದ ತಮ್ಮ ದೈನಂದಿನ ಕಾರ್ಯವನ್ನು ನೆರವೇರಿಸುತ್ತಿರುವುವೋ, ದೃಷ್ಟಿಗೆ ಗೋಚರ ವಾಗದ ಯಾವ ಆಕಾಶವಾದರೆ ಎಲ್ಲವನ್ನೂ ಆವರಿಸಿಕೊಂಡು ಯಾರ ಆಜ್ಞೆಯಿಂದ ನಿಂತಿರು ವುದೋ ಅಂಥಹ ಮಹಿಮನೆ! ಎಲೈ, ದೇವ! ನಕ್ಷತ್ರಗಳೇನು, ಪರ್ವತಗಳೇನು, ನದಿಗಳೇನು? ಇವುಗಳ ಮುಂದೆ ನಾನೆಲ್ಲೋ? ನಾನೆಷ್ಟರ ವನೋ? ಹಗಲೂ ಇರುಳೂ ಭೋರ್ಗರೆವ ಮಹಾಸಾಗರದ ಬಿಂದುವೊಂದಕ್ಕೆ ಈ ಬಡಗುಳ್ಳೆ ಸಾಟಿಯಾಗದೋ, ಅದರ ಒಂದು ಕಣ ಮಾತ್ರ ನನಗಿಂತಲೂ ಪವಿತ್ರವೂ ಸುಂದರವೂ ಅಲ್ಲವೇ? ಉರಿಬಿಸಲನ್ನೂ ಪಟಪಟ ಮಳೆಯನ್ನೂ ಸೈರಿ ಸುವ ಮರಳು ನನಗಿಂತಲೂ ಹೆಚ್ಚಾಗಿ ನಿನ್ನ ಕೃಪೆಗೆ ಪಾತ್ರವಲ್ಲೋ? ಎಲೈ ಸನ್ಯಾಸಿಗಳಲ್ಲಿ ಸನ್ಯಾಸಿಯೇ! ಸೂರ್ಯರೇನು, ಚಂದ್ರರೇನು, ನಕ್ಷತ್ರಗಳೇನು, ಮೋಡಗಳೇನು? ಇಂತಹ ವ್ಯಕ್ತಿಗಳಿಂದ ಕೂಡಿದ ಅತಿವಿಶಾಲವಾದೀ ವಿಶ್ವ ಸಂಸಾರವನ್ನು ನಡೆಯಿಸುವೆಯಲ್ಲವೇ? ಇಂತಹ ನಿನ್ನ ದೃಷ್ಟಿಗೆ ನಾನು ಹೇಗೆತಾನೇ ಬಿದ್ದೇನು! ಅಹಾ! ಏನಚ್ಚರಿ! ಎಲೈ ದೇವ, ಮಹದೇವ! ಚಂಡಮಾರುತುಗಳನ್ನಿದಿರಿಸುತ ಸ್ಥಿರೋನ್ಮುಖವಾಗಿ ತನ್ನ ನೋಟವನ್ನು ತಿರುಗಿಸಿ ಅಚಲವಾಗಿ ನಿಂತಿರುವ ನಿನ್ನ ಗೋಪುರದಂತಹ ಸ್ಥೈರ್ಯವನ್ನು ನೀಡೊ ಎನಗೆ ಎಲೈ ಉಮಾನಾಥನೆ!' ಎಂದು ಮೊರೆಯಿಟ್ಟನು ನಂದ. ಮುಂದೆ ಕೊಂಚ ದೂರ ಹೋಗಲು ಗೋಪುರದ ಬುಡವು ಬಿದ್ದಿತು ದೃಷ್ಟಿಗೆ. ತರುವಾಯ ಕಂಗೊಳಿಸಿತು ದೇವಾಲ ಯದ ಮಹಾದ್ವಾರವು. ಆಗ ನಂದನು ಹಾಡಿ ದನೀಪರಿ.

''ಕೈಲಾಸದ್ವಾರವೋ ಇದು!
ಸಂತರು ಹೋಗುವ ಮಾರ್ಗವೋ ಇದು!
ಸಂತರಿಂದೂ ಹಿಂದಿರುಗದ ಬಾಗಿಲೋ ಇದು!
ಮುನಿಮಾಣಿಕರ್ ಪೊಕ್ಕು ಆನಂದಸ್ತವ ಗೈದ
ದಾರಿಯೋ ಇದು!
ಕಪ್ಪಿಗರೊಡೆಯರಪ್ಪರು ಒಳಪೊಕ್ಕು ಗಂಭೀರ
ವೇದ ಗಾಯನ ಗೈದ ದ್ವಾರವೋ ಇದು!
ಸುಂದರ ವರಮುನಿ ನಿಜ ಶ್ರೇನೇಶನಂತಹ ಗೃಹ
ದಲ್ಲಿ ಗಾಢಾಲಿಂಗನ ಗೈದ ಬಾಗಿಲೋ ಇದು!
ಹೊನ್ನಿಂಬೋಷಿಸಿ ವೇಶ್ಯಾನುಜನಂ ಕೊನೆಗವನಂ
ತನ್ನೊಳ್ಕೈಕ್ಯ ಮಾಡಿದ ನಟನ ಬಾಗಿಲೊ
ಇದು!

ಎನ್ನ ಬಡಹುಟ್ಟಿದವರೆ! ಎನ್ನ ಸಖರೆ! ಎನ್ನ ವರ್ಗದವರೆ! ಇಲ್ಲಿ ದೇವರಿದ್ದಾನೆ, ಇಲ್ಲ, ಅವನು ಸಾಕಾರನು, ನಿರಾಕಾರನು. ನರ್ತನಮಾಡುತ ಸುಮ್ಮನಿದ್ದಾನೆ. ಅಜ್ಞಾನಿಗಳು ಜ್ಞಾನಿಗಳಾಗು ವುದೀಗ. ಜ್ಞಾನಿಗಳು ಮೈಮರೆಯುವುದಿಲ್ಲೀಗ. ಇಲ್ಲಿ ಅಂಬರವೇ ಅವನು. ಜ್ಯೋತಿರ್ಮಯನು. ಇಲ್ಲಿ ಅವನೇ ಸೃಷ್ಟಿವಿನಾಶಕ.''

ಈ ಮರ್ಯಾದೆಯಲ್ಲಿ ಪಾವನಕ್ಷೇತ್ರವಾದ ಚಿದಂಬರವನ್ನು ಮುಟ್ಟಿ, ಅರಳಿ, ತನ್ನೊಳಮೈ ಯನ್ನು ಅಂಬರಕ್ಕೊಡ್ಡಿದ ತಾವರೆಮೊಗ್ಗಿನಸುತ್ತ

ಲೂ ಜೇಂಕಾರ ಮಾಡುತ್ತ ತಿರುಗುವ ಭ್ರಮರಗಳೋ ಎಂಬಂತೆ ಹಾಡುತ್ತಾ ಕುಣಿಯುತ್ತಾ ಗ್ರಾಮಪ್ರದಕ್ಷಿಣೆಯನ್ನು ಮಾಡಿದರವರು. ಒಳಗಾವ ದೇವರಿದ್ದಾನೋ ಅವನೇ ಹೊರಗೂ ಇರುವನಲ್ಲವೆ. ಅಂತಹ ಅಂತರ್ಯಾಮಿಯಿಂದ ಪ್ರೇರಿತರಾದಂತಹ ಚಿದಂಬರ ದೇವಾಲಯದ ದೀಕ್ಷಿತರ ಸಂಖ್ಯೆ (ನಟರಾಜದೀಕ್ಷಿತನನ್ನೂ ಸೇರಿಸಿ) ಮೂರು ಸಾಸಿರ.

ಆದರೆ ನಂದನಕಾಲದ ದೀಕ್ಷಿತರಿಗೂ ಈಗಣ ಕಾಲದವರಿಗೂ ಬಲು ಹೆಚ್ಚು ಕಡಮೆ. ಆ ಕಾಲದವರೂ ಸಂಸ್ಕೃತ ತಮಿಳು—ಈ ಭಾಷೆಗಳೆರಡರಲ್ಲಿಯೂ ಪಂಡಿತರು, ನಿಷ್ಠರು, ಪವಿತ್ರರು. ಈಗ ಅವರು ತಮ್ಮ ಮುಂಜುಟ್ಟಿಗೆ ಎಷ್ಟು ಪ್ರಸಿದ್ಧರಾಗಿರುವರೋ ಅಷ್ಟು ಪವಿತ್ರತೆಗೆ ಪ್ರಸಿದ್ಧರಾಗಿದ್ದರಾಗ. ಇಂತಹವರ ಕಣ್ಣಿಗೆ ನಂದನೂ, ಮೇಲು ಜಾತಿಯವರಾದರೂ ಹೊಲೆಯನಂದನಿಗಿಂತಲೂ ತಾವು ಕೀಳರೆಂದು ಬಗೆದಿದ್ದ ಆತನ ಜತೆಗಾರರೂ ಬಿದ್ದ ತರುವಾಯ, ನಂದನನ್ನೂ ಆತನ ಮುಖದಲ್ಲಿ ಹೊಳೆಯುತ್ತಿದ್ದ ದಿವ್ಯತೇಜಸ್ಸನ್ನೂ ಜೆನ್ನಾಗಿ ಒತ್ತಿನೋಡಿದ ದೀಕ್ಷಿತರ ಮನಸ್ಸಿಗೆ ದೃಢಪಟ್ಟಿತು ನಂದನು ಭಗವಂತನ ಇಷ್ಟಗೋಷ್ಠಿಯಲ್ಲೊಬ್ಬನೆಂಬುದು. ದೂರದಲ್ಲಿ ಕೇಳಿಬರುತ್ತಿದ್ದ ಆತನ ಪವಿತ್ರ ಕೀರ್ತನೆಗಳಿಗೆ ದೀಕ್ಷಿತರು ಆನಂದದಿಂದ ತಲೆದೂಗಿ ಮುಂದೆ ನಡೆದು ಹೋದರು ಅವನ ಮುಖವಾಗಿ. ದೇವಸ್ಥಾನವನ್ನು ಸಮಾಪಿಸುತ್ತಾ ಹೋದ ನಂದನ ಉತ್ಸಾಹವು ಹೆಚ್ಚಿ ತಲ್ಲದೆ ಹೆಚ್ಚಿದುವಾ ತನ ಮುಖಕಾಂತಿಯೂ, ಪ್ರಸನ್ನತೆಯೂ. ಅಲ್ಲದೆ ಕ್ರಮವಾಗಿ ಬಲಿತು ಹಣ್ಣಾದ ನಂದನ ಪ್ರೇಮವು ವ್ರಜದ ಗೋಪಿಯರ ಪ್ರೇಮಕ್ಕೆಣೆಯಾಗಿ ಮುಟ್ಟಿತು ಉತ್ತಮ ಶ್ರೇಣಿಯನ್ನು.

ತನ್ನ ಜತೆಗಾರರೊಡನೆ ನಂದನು ಇಂತಹ ಆನಂದೋತ್ಸಾಹದಲ್ಲಿ ಮುಳುಗಿ ಕಳೆದನು ಮೂರು ದಿವಸಗಳನ್ನು. ಆನಂತರ ಒಂದೇ ರಾತ್ರಿ ದೀಕ್ಷಿತರೆಲ್ಲರಿಗೂ ನಟರಾಜನು ಅತ್ಯಾಶ್ಚರ್ಯಕರವಾಗಿ ಪ್ರಸನ್ನನಾಗಿ ತನ್ನ ಭಕ್ತಮಂಡಲಿಯಲ್ಲಿ ಪರಮಪವಿತ್ರನಾದ ಹೊಲೆಯ ಮುನಿ ನಂದನನ್ನು ಬ್ರಾಹ್ಮಣ ಗೋಷ್ಠಿಗೆ ಸೇರಿಸಿಕೊಳ್ಳುವಂತೆ ಅನುಜ್ಞೆಯನ್ನಿತ್ತನೆಂಬುದು ಲೋಕಪ್ರತೀತಿ. ಮೂಡಿದ್ದಾನೆ ಸೂರ್ಯನಾಗತಾನೆ. ಬಲು ಚಲುವಾದ ಪ್ರಾತಃಕಾಲ. ತಮ್ಮ ಸ್ನಾನಾಹ್ನಿಕಾದಿಗಳನ್ನು ಮುಗಿಸಿಕೊಂಡು ವಿಭೂತಿಯಿಂದ ಭೂಷಿತರಾಗಿ, ಕೊರಳಿನಿಂದ ಜೋಲುಬಿದ್ದಿರುವ ರುದ್ರಾಕ್ಷಿಮಾಲೆಗಳನ್ನುಳ್ಳವರಾಗಿ, ದೇವಸ್ಥಾನದಲ್ಲಿ ಸಾಮಾನ್ಯವಾಗಿ ಎಲ್ಲರೂ ಸೇರುವ ದೇವಸಭಾ ಮಂಟಪದಲ್ಲಿ ನೆರೆದಿದ್ದಾರೆ. ದೀಕ್ಷಿತರೆಲ್ಲರಿಗೂ ಹಿರಿಯರಾದ ಅಪ್ಪಯ್ಯದೀಕ್ಷಿತರು ಎದ್ದು ತನಗೆ ಕಳೆದಿರುಳು ನಟರಾಜಸ್ವಾಮಿಯು ಕನಸ್ಸಿನಲ್ಲಿ ದರ್ಶನವನ್ನಿತ್ತು ಅಗ್ನಿಪ್ರವೇಶಪೂರ್ವಕವಾಗಿ ನಂದನನ್ನು ಪವಿತ್ರನನ್ನಾಗಿ ಮಾಡುವುದು ಸಾಧ್ಯವೆಂಬುದನ್ನು ತನಗೆ ತಿಳಿಸಿ ಅಂತರ್ಧಾನನಾದನೆಂಬುದನ್ನು ಸಭೆಗೆ ಅರಿಕೆಮಾಡಲು ಅವರಿಗೆ ಕಿರಿಯವರಾದ ಕುಪ್ಪಣ್ಣದೀಕ್ಷಿತರೆದ್ದು ಸೂಚಿಸಿದರು ತನಗೂ ಅದೇ ರಾತ್ರಿ ಅದ ಅನುಭವವನ್ನು. ಸುಬ್ಬಾದೀಕ್ಷಿತರೆದ್ದು ಮೊದಲು ಮಾತಾಡಿದವರಿಬ್ಬರಿಗೂ ಕೈಮುಗಿದು ತನಗೂ ಅದೇ ಪ್ರಕಾರ ಕನಸುಬಿದ್ದುದನ್ನು ವಿವರಿಸಿ ಪರಮಾಶ್ಚರ್ಯಚಕಿತರಾದರು. ಆ ಮೇಲೆ ಅದೇ ಪ್ರಕಾರ ನುಡಿದರು ನಟರಾಜದೀಕ್ಷಿತರು. ಅನಂತರ ಒಟ್ಟಿಗೆಲ್ಲರೂ ಎದ್ದು ತಮಗೆಲ್ಲರಿಗೂ ಒಂದೇ ಕನಸು ಬಿದ್ದುದನ್ನು ತಿಳಿಸಿದರೊಂದೇ ಸ್ವರದಿಂದ. ಒಡನೆಯೇ ಗಾಳಿ ಜೋರಾಗಿ ಬೀಸುತ್ತಲೂ ಬಿಸಲಿನ ಜಳವು ಬಲವಾಗಿಯೂ ಇರುವ ಸಮಯದಲ್ಲಿ ಅಗ್ನಿಕುಂಡವನ್ನೇರ್ಪಡಿಸುವ ಸನ್ನಾಹವು ಜರುಗಿತು. ಇತ್ತ ನಂದನಾದರೋ ಸಂಜ್ಞಾಶೂನ್ಯನಾಗಿ ದೀರ್ಘಕಾಲ ಸಮಾಧಿಯಿಂದಾಗತಾನೆ ತಿಳಿದೆದ್ದು 'ಎಲೌ, ಸಖಿ! ಎನ್ನ ಪ್ರಿಯ ಚಲುವ ನಟೇಶನ ಬಳಿ ಸಾರ್ದು ನರ್ತನ ಗೈವಾತನಡಿಗಳಿಗೆ ರಗುವೆನೆಂದರುಹು!' ಎಂದು ಗಾನ ಮಾಡಿದನು. ಆಗ ಸುತ್ತಲಿದ್ದವರೆಲ್ಲರೂ ನಟರಾಜ, ನಟರಾಜ, ನಟರಾಜ ಎಂದು ಕೂಗಿದರು ಗಟ್ಟಿಯಾಗಿ.

ಮುಂದೆ ಹಾಗೆಯೇ ಹಾಡಲು ಪ್ರಯತ್ನಿಸಿದನು ನಂದ. ಆದರೆ ಬಹು ಕಾಲ ಮಾಡಿದ ಪ್ರಾರ್ಥನೆಗಳು ಫಲಿಸದೇ ತಾನಿನ್ನೂ ಭಗವತ್ಸಾ

ನ್ನಿಧ್ಯವನ್ನೈದಲಿಲ್ಲವೆಂಬ ದುಃಖಾತಿಶಯವಿಂದ ಆತನ ಗಂಟಲು ಕೂತು ಮಾತೇ ಹೊರಡಲಿಲ್ಲವು.

ಆ ಸಮಯಕ್ಕೆ ದೀಕ್ಷಿತರೆಲ್ಲರೂ ಒಟ್ಟಾಗಿ ನಂದನ ಬಳಿ ಬಂದು ಆತನಿಗೆ ತಿರಬಾಗಿ ಅಗ್ನಿಕುಂಡಸೇರ್ಪಟ್ಟಿದ್ದ ತೆಂಕಣ ಮಾಡಬೀದಿಗೆ ಕರದೊಯ್ದರಾತನನ್ನು. ಕುಂಡವನ್ನು ನೋಡಿ ದೊಡನೆಯೇ ಆ ಭಕ್ತಾಗ್ರಣಿಯು ಸಂತಸದಿಂದ ಧುಮಿಕಿದನು ಅದರೊಳಕ್ಕೆ ಈ ಪ್ರಕಾರ ಹಾಡುತ್ತಾ "ಸಂಜೆಯ ಚಂದ್ರನ ಅಂಶುಗಳಂತೆ, ವೀಣೆಯ ಮಿದುವಾದ ಇಂಚರದಂತೆ, ಸಂತರ ಬೀಗುವ ನಗುವೆಲರಂತೆ, ಉಕ್ಕಿ ಮೇಲ್ವಾಯುವ ಊಟೆಯ ಜಲದಂತೆ, ದುಂಬಿಗಳಿಟ್ಟಣಿಸಿದನಿಗ್ಳೆ ವಕಾಸಾರದಂತೆ, ಎನ್ನಪ್ಪ, ಎನ್ನೀಶನಡಿಗಳು ಕಂಪನೆಸಗುವುವು!" ಪೂತವಾದ ಭಕ್ತಿಯಿಂದ ಕೂಡಿದ ಎಲೈ ಧಾರ್ಮಿಕನಂದ, ಬೆಂಕಿ ಸುಡದೋ ನಿನ್ನನು (ಆತ್ಮನನ್ನು), ನೀರು ಒದ್ದೆಮಾಡದೋ ನಿನ್ನನು, ಕತ್ತಿ ಕಡಿಯದೋ ನಿನ್ನನು, ಗಾಳಿ ಒಣಗಿಸದೊ ನಿನ್ನನು, ಬ್ರಾಹ್ಮಣನಾದೆಯೋ ನಂದ ನೀನು, ನಿನ್ನ ಹೊಲಸು (ಹೊಲೆಯನ ಭಾವವು) ಸುಟ್ಟು ಬೂದಿಯಾಯಿತೊ ಇಂದು ನಂದ. ಎಲೈ ಆತ್ಮ (ನಂದ) ಅರೂಪನು ನೀನು, ನಿರೂಪನು ನೀನು, ಒಳಗಿಲ್ಲ ಹೊರಗಿಲ್ಲ ನೀನು, ಪೂರ್ಣತಾಪೂರ್ಣತಾತೀತನು ನೀನು, ವಿಶೇಷ ಶೂನ್ಯನು ನೀನು.

ಇರುವಾತ ನೀನೊಬ್ಬನೆ ಎಂದು ಸಕಲವೇದಗಳೂ ಸಾರುವುವೊ! ಅತ್ಯಂತೋನ್ನತ ಪರ್ವತಗಳಿಗಿಂತಲೂ ಅತಿಶಯ ಉನ್ನತನು ನೀನು, ದಿಙ್ಮಂಡಲಕ್ಕಿಂತಲೂ ಅತಿಶಯ ವಿಶಾಲನು ಜ್ಞಾನಿಗಳ ದೃಷ್ಟಿಗೆ ನೀನು, ಅವನೂ ಅಲ್ಲ, ಅವಳೂ ಅಲ್ಲ, ಅದೂ ಅಲ್ಲ, ಮತ್ತೇನೆಂದರೆ ಬರೀ ಚಲುವೊ! ಜಲುವಿನ ಗಡ್ಡೆಯೋ ನೀನು! ನಿನ್ನನ್ನಾರೂ ಅರಿಯರೊ! ಎಲೈ ನಂದ! ಹಿಂದಿಂದು ಮುಂದುಗಳ ಕರ್ಮಗಳನ್ನೆಲ್ಲಾ ಬೂದಿ ಮಾಡುವ ಜ್ಞಾನಾಗ್ನಿಯಿಂದ ದಗ್ಧನಾಗಿ ಪವಿತ್ರನಾದೆಯೋ ಎಲೈ ನಂದ!"

ಲೇಶಮಾತ್ರವೂ ಕಂಗೆಡದೆ ಪೂರ್ವಕ್ಕಿಂತಲೂ ಪವಿತ್ರತೆನಾಗಿ ಅಗ್ನಿಕುಂಡದಿಂದ ಹೊರಗೆ ಬಂದನು ನಂದ. ಒಳಗಾವುದು ಬೆಂದು ಬೇಯುತ್ತಿದ್ದಿತೋ ಈಗದು ತಂಪಾಗಿಯೂ ಆಪ್ಯಾಯಮಾನವಾಗಿಯೂ ಪರಿಣಮಿಸಿತು.

ಅಪೂರ್ಣತೆಯು ಕಳೆದು ಪರಿಪೂರ್ಣತೆಯುಂಟಾಯಿತು. ಅಭಾವವು ಸೌಖ್ಯಕ್ಕೆಡೆಗೊಟ್ಟಿತು. ಹೊಲೆಯ ಜಾತಿಯು ಮಾರ್ಪಟ್ಟು ನಿಜವಾಗಿಯೂ ಬ್ರಾಹ್ಮಣ ಜಾತಿಯಾಯಿತು. ತೆಂಕಣ ಮಾಡ ಬೀದಿಯಿಂದ ಪೂರ್ವ ಗೋಪುರದ ಮಾರ್ಗವಾಗಿ ನಂದನನ್ನು ಆತನಲ್ಲಿ ಭಕ್ತಿ ವಿಶ್ವಾಸಗಳುಳ್ಳ ದೀಕ್ಷಿತರು ಕರೆದೊಯ್ದು ಅಲ್ಲಿಂದ ತ್ರೀ ಸುಬ್ರಹ್ಮಣ್ಯ ದೇವಾಲಯದ ಪಕ್ಕದಲ್ಲಿ ನಡೆದು ಮುಂದೆ ಪುಷ್ಕರಣಿಯನ್ನೂ ದೇವ ಸಭಾ ಮಂದಿರವನ್ನೂ ದಾಟಿ ಗೋವಿಂದರಾಜಸ್ವಾಮಿಗೂ, ನಟರಾಜ ಮೂರ್ತಿಗೂ ಮಧ್ಯದ ಜಗುಲಿಯನ್ನು ಮುಟ್ಟಿದರು. ಆಗ ನಡೆದ ಅಚ್ಚರಿಯನ್ನು ಏನೆಂದು ಬಣ್ಣಿಸುವಾ! ವೇದಕ್ಕೆಟ್ಟೆಯಾದ ಸಂಕೀರ್ತನವನ್ನು ಮಾಡುತ್ತಾ ಎಷ್ಟು ಆನಂದದಿಂದ ಪ್ರೇಮಾವಿಷ್ಟನಾದ ನಂದನು ನಟರಾಜನ ಸನ್ನಿಧಾನಕ್ಕೆ ತೆರಳಿದನೊ, ಅದಕ್ಕಿಂತಲೂ ಹೆಚ್ಚಾದ ಆನಂದದೊಡನೆ ದಿವ್ಯಾಭರಣ ಭೂಷಿತೆಯಾಗಿ ವಿವಾಹಿತಳಾದ ಯಾವ ಚಲುವೆಯೂ ತನ್ನಿನಿಯನೊಡೆ ವೆರೆಯಲು ಪುಷ್ಪ ಚಂದನಾದಿ ಪರಿಮಳಗಳಿಂದ ಘಮಘಮಿಸುವ ಶಯ್ಯಾಗೃಹವನ್ನು ಹೊಕ್ಕಿರಲಾರಳೆಂದೂ. ನಂದನಷ್ಟು ಆತುರದೊಡನೆ ತೆರಳಿದನೊ, ಅದಕ್ಕಿಂತಲೂ ಹೆಚ್ಚಾದ ಆತುರದೊಡನೆ ಜೇನ್ನೆಯಿಂದ ತುಂಬಿದ ಅರೆಡೆಗೆ ಜೇಂಕರಿಸುತ್ತೆಂದೂ ಹಾರಿಹೋಗಿರದಾ ದುಂಬಿಯೂ. ಎಲೈ ಪಾಪಕನೆ, ಆ ಮಹಾಸನ್ನಿಧಾನವೆಂತಹದೆಂದು ಕೇಳುವೆಯೋ! ಮುನಿವರ ಸುಂದರರು ಎಲ್ಲಿ ನಟರಾಜ ಮೂರ್ತಿಯ ದಿವ್ಯ ಮಹಿಮೆಯನ್ನು ಈ ಪರಿಸ್ತುತಿಗೈದರೋ ಆ ಸನ್ನಿಧಾನವೈಯ್ಯಾ! ಯಾವನು ಅಪೂರ್ವನೋ, ಯಾವನ ಆವಾಸಸ್ಥಾನವಾದರೆ ಆತನ ಕೃಪಾಪಾತ್ರರಾದವರ ಹೃದಯವೋ, ಯಾವನಾದರೆ ವೇದರಾಶಿಗಳಲ್ಲಿಯೂ ಆಣುಗಳಲ್ಲಿಯೂ ಅಡಗಿರುವನೋ, ನಮ್ಮರಿವಿಗೆ ಗೋಚರನಾದರೂ

ಯಾವನು ನಿಜವಾಗಿಯೂ ದೇವನೋ, ಯಾವನು ಜೇನ್ನೈಯಂತೆಯೂ ಹಾಲಿನಂತೆಯೂ ಇನಿದಾಗಿರುವನೋ, ಯಾವನು ಸ್ವರ್ಗದ ಅತಿಶಯ ಜ್ಯೋತಿಯೋ, ಬ್ರಹ್ಮಾ ವಿಷ್ಣುಗಳಿಗೂ ಯಾವನು ಒಡೆಯನೋ, ಉಲ್ಲೋಲ ಕಲ್ಲೋಲವಾದ ಮಹಾಸಾಗರವನ್ನೂ, ಪರ್ವತ ಶ್ರೇಣಿಗಳನ್ನೂ ಯಾವನು ವ್ಯಾಪಿಸಿರುವನೋ, ಅವನೇ ಎನ್ನ ಸ್ವಾಮಿ. ಯಾವ ದಿವಸಗಳಲ್ಲಿ ನಾನು ಆತನನ್ನು ಸ್ತೋತ್ರಗೈಯ್ಯದೆ ಮರೆತೆನೋ ಅವು ನಾನು ಬದುಕಿದ್ದ ದಿನಗಳಲ್ಲವು. ಮತ್ತೆ ಯಾವ ನಿಷ್ಠಾನದಲ್ಲಾದರೆ ಪ್ರೇಮದಿಂದ ಸೊಕ್ಕಿದ ಮುನಿ ಮಾಣಿಕ್ಕರ ಮುಖದಿಂದ ತಮಿಳು ಉಪನಿಷತ್ತುಗಳು ಹೊರಟವೋ, ಎಲ್ಲ ಋಷಿಪುಂಗವ ತಾಯುಮಾನವರ ಸ್ವಾಮಿಯು ಆನಂದ ಬಾಷ್ಪಗಳನ್ನು ಸುರಿಸುತ ತಮಿಳು ವೇದ ಗೀತೆಗಳನ್ನು ಗಾನ ಮಾಡಿದರೋ! ಎಲೈ! ವಾಚಕನೆ! ಇನ್ನೂ ಎಂತಹ ನಿಷ್ಠಾನವೆಂದು ಕೇಳುವೆಯೋ? ತಮ್ಮ ಮುಂದೆ ಬರುವಂತಹ ಉದಾರ ಮನಸ್ಕರಾದ ಧರ್ಮನಿಷ್ಠರಿಗೆ ಮಾರ್ಗವನ್ನು ತೋರಿಸುವುದಕ್ಕಾಗಿ ಎಲ್ಲಿ ಮಹಾ ಪುರುಷರು ತಮ್ಮ ಅಡಿಪುಡಿಯನ್ನು ಬಿಟ್ಟಿರುವರೋ ಆ ನಿಷ್ಠಾನವಯ್ಯಾ! ಅಂತಹ ಮಹಾ ನಿಷ್ಠಾನದಲ್ಲಿ ನಿಂತನು ನಂದ. ಕನಕ ಸಭಾಮಂಟಪದಲ್ಲಿ ಇಕ್ಕೆಲದಲ್ಲಿಯೂ ಪೆರ್ಬಾಯುಳ್ಳ ಗಂಟೆಗಳು ತಮ್ಮ ಜೋಲು ನಾಲಿಗೆಗಳಿಂದ ಬೀರಿಡುವುವು ಬಲುದೂರ. ಆಗ ಆಪ್ಪಯ್ಯ ದೀಕ್ಷಿತರು ಗರ್ಭ ಗುಡಿಯನ್ನು ಹೊಕ್ಕು ನವಬ್ರಾಹ್ಮಣನಾದ ನಂದನ ಹೆಸರಿನಲ್ಲಿ ಪೂಜೆಯನ್ನು ಮಾಡಿ ಎತ್ತಿದರು ಮಂಗಳಾರತಿಯನ್ನು. ಅಂದು ನಡೆದದ್ಭುತವನ್ನು ಏನೆಂದು ವಿವರಿಸುವ! ಹೊಲೆಯ ಬ್ರಾಹ್ಮಣನಂದನು, ತನ್ನಿಷ್ಟ ಮೂರ್ತಿ, ತನ್ನ ಕನಸಿನ ಗಡ್ಡೆ, ತನ್ನ ಪ್ರೇಮದ ಗಣಿ, ತನ್ನ ಸುಂದರಮೂರ್ತಿ ನಟರಾಜನನ್ನು ಆಲಿಂಗನಮಾಡಲು ನುಗ್ಗಿದನು ನರ್ರನೆ ಗರ್ಭಗುಡಿಯೊಳಕ್ಕೆ. ಅಜ್ಞೋ ಮುಂ ನಿಂದ ಬಿಡುಗಡೆ ಹೊಂದಿದ ಸೀತಾದೇವಿಯು ಕೂಡ ಶ್ರೀರಾಮನನ್ನಪ್ಪಿಕೊಳ್ಳಲು ಓಡಿರಲಾರಳಷ್ಟು ಜೋಗನೆ. ರಾಧಾ ದೇವಿಯು ಕೂಡ ವಿಜನವಾದ ಯಮುನಾ ತೀರದಲ್ಲಿ ತನ್ನಿನಿಯ ಶ್ರೀಕೃಷ್ಣನನ್ನು ಆಲಿಂಗಿಸಲು ಹಾರಿ ಹೋಗಿರಳಷ್ಟು ತ್ವರೆಯೊಡನೆ.

"ನಟರಾಜ ಎನ್ನರಸ, ನಟರಾಜನನ್ನಿನಿಯ
ಬಂದೆನೊ ಎನ್ನೊಡೆಯ, ಬಂದೆನೊ ಎನ್ನಿನಿಯಾ
ಇಂದು ನಾವೀರ್ವರೊಂದು
ನೀನೆ ನಾನು, ನಾನೇ ನೀನು".

ಎಂದು ಹಾಡುತ್ತಾ ಹೊಲೆಯನಂದನು ಐಕ್ಯವಾದನು ಬ್ರಾಹ್ಮಣನಲ್ಲಿ. ಬ್ರಾಹ್ಮಣನಂದನು ಅಡಗಿಹೋದನು ಅಗೋಚರನೂ ಶಾಶ್ವತನೂ ಆದ ನಟರಾಜನಲ್ಲಿ. ಸುತ್ತಲಿದ್ದವರೆಲ್ಲರೂ ದೀಕ್ಷಿತರುಗಳು ಸಹಿತ ಚಕಿತರಾಗಿ ಮೂಕರಾದರಾಗ.

ನಂದನ ಚರಿತ್ರವು ಮುಗಿಯಿತಿಲ್ಲಿಗೆ. ಆದರೆ ಎಲೈ, ವಾಚಕನೇ! ಯಾವ ಗುರುವಾದರೆ ತನ್ನು ಪದೇಶವನ್ನು ಎಡಬಿಡದೆ ಸಂತತವೂ ಮಾಡುತ್ತಿರುವನೋ ಆತನಕಡೆಯೇ ನಮ್ಮ ಮನಸ್ಸು, ತಾನಾಗಿಯೇ ಪ್ರವರ್ತಿಸುವವರೆಗೆ ನಟರಾಜನ, ಮತ್ತವನ ಪರಮಭಕ್ತನಾದ ಹೊಲೆಯನಂದನ ಕನಸು ಪ್ರತಿರಾತ್ರಿಯೂ ನಮ್ಮ ತಲೆಗಳು ತುಂಬಿ ಹೋಗುವಂತೆ ಬೀಳಲಿ ಎಂದು ಆತಾಂಡವ ಮೂರ್ತಿಯನ್ನೇ ಪ್ರಾರ್ಥಿಸುವಾ.

ನಂ. ವೆಂಕಟೇಶಯ್ಯಂಗಾರ್.

[Adapted from 'Rambles in the Vedanta' by MR. RAJAM IYER.]



KARNATAKA VIDYA-VARDHAKA SANGHA
DHARWAR.

ಶಿಕ್ಷಣ ಪ್ರಪಂಚ

ಗುರುಕುಲ ಮಹಾವಿದ್ಯಾಲಯ, ಅಂಧೇರಿ, ಬೊಂಬಾಯಿ.

ಈ ಮಹಾ ವಿದ್ಯಾಲಯವು ಸ್ಥಾಪಿತವಾಗಿ ಈ ಏಪ್ರಿಲ್ ತಿಂಗಳಿಗೆ ಹದಿನಾಲ್ಕು ವರ್ಷಗಳಾದವು. ಆರ್ಯ ಸಮಾಜದ ಮಹನೀಯರು ಸ್ಥಾಪಿಸಿರುವ ವಿದ್ಯಾಶಾಲೆಗಳಲ್ಲಿ ಪ್ರಸಿದ್ಧವಾದುದು ಇದೊಂದು. ಮುಂಬಯಿ ಪ್ರಾಂತ್ಯಕ್ಕೆಲ್ಲಾ ಇದೇ ದೊಡ್ಡದಾದ ಗುರುಕುಲವು.

೮-೧೦ ವರ್ಷದ ಬಾಲಕನು ತಂದೆ ತಾಯಿಗಳನ್ನು ಬಿಟ್ಟು ಬಂದು ಈ ಶಾಲೆಯನ್ನು ಸೇರುತ್ತಾನೆ. ಚಿಕ್ಕ ವಯಸ್ಸಿನಿಂದಲೇ ಬಾಲಕನು ಗುರುಕುಲದ ವಾತಾವರಣದಲ್ಲಿ ಬೆಳೆಯುತ್ತಾನೆ. ಹುಡುಗರೆಲ್ಲರೂ ಒಂದೇ ಮನೆಯಲ್ಲಿ ವಾಸಮಾಡುತ್ತಾರೆ. ಹುಡುಗರಿಗೆ ಬಟ್ಟೆತಿಂಡಿ ಎಲ್ಲವನ್ನೂ ಗುರುಕುಲವೇ ಕೊಡುತ್ತದೆ. ಪ್ರತಿ ಬಟ್ಟೆಯನ್ನೇ ಪ್ರತಿಯೊಬ್ಬ ಬ್ರಹ್ಮಚಾರಿಯೂ ಉಪಯೋಗಿಸುತ್ತಾನೆ.

ವಿದ್ಯಾರ್ಥಿಯು ವಿದ್ಯಾಭ್ಯಾಸವನ್ನು ಮುಗಿಸುವನರೆಗೂ ಮದುವೆಯಾಗಲಿಕ್ಕಿಲ್ಲ. ಇವರು ತಿನ್ನುವ ಆಹಾರವಾದರೋ ಕೇವಲ ಸಾತ್ವಿಕವಾದುದು. ಹುಳಿ, ಖಾರಗಳನ್ನು ಹಾಕಿ ರುಚಿರುಚಿಯಾಗಿ ಕಾಯಿಪಲ್ಯಗಳನ್ನೂ ತಿಂಡಿಗಳನ್ನೂ ಮಾಡಿಸಿ ಹಾಕುವುದಿಲ್ಲ. ಸಪ್ಪೆಯಾದ ಆರೋಗ್ಯಕರವಾದ ಪುಷ್ಟಿವರ್ತಾದ ಆಹಾರವನ್ನು ತಿನ್ನುತ್ತಾರೆ. ವಿದ್ಯಾರ್ಥಿಯ ದಿನಚರಿಯನ್ನು ಒಂದೆರಡು ಮಾತುಗಳಲ್ಲಿ ಹೇಳುತ್ತೇನೆ.

ಪ್ರಾತಃಕಾಲ ೫ ಘಂಟೆಗೆ ರಕ್ಷಕನು ಬ್ರಹ್ಮಚಾರಿಗಳನ್ನು ಎಬ್ಬಿಸುತ್ತಾನೆ. ಶೌಚಾದಿಗಳನ್ನು ಮುಗಿಸಿದ ತಕ್ಷಣ ಮುಕ್ಕಾಲು ಗಂಟೆಯ ಕಾಲ ಪ್ರತಿಯೊಬ್ಬ ವಿದ್ಯಾರ್ಥಿಯೂ ಅಂಗಸಾಧನೆಯನ್ನು ಮಾಡುತ್ತಾನೆ. ಉಪಾಧ್ಯಾಯರು ಜಿಮ್ನಾಸ್ಟಿಕ್ಸ್, ದಂಡೆ, ಬಸ್ಕಿ ಮೊದಲಾದ ವ್ಯಾಯಾಮಗಳನ್ನು ತಪ್ಪದೆ ಪ್ರತಿಯೊಬ್ಬರಿಂದಲೂ ಮಾಡಿಸುತ್ತಾರೆ.

ಅನಂತರ ಭಾವಿಯಿಂದ ನೀರನ್ನು ಸೇದಿ ತಣ್ಣೀರಿನಲ್ಲಿ ಸ್ನಾನಮಾಡುತ್ತಾರೆ ತಾವೇ ಕೈಯಿಂದ ತಮ್ಮ ತಮ್ಮ ಬಟ್ಟೆಗಳನ್ನು ಒಗೆದು ಕೊಳ್ಳುತ್ತಾರೆ. ಕೇವಲ ಸಣ್ಣ ವಯಸ್ಸಿನ ಮತ್ತು ಕೈಲಾಗದ ಬ್ರಹ್ಮಚಾರಿಗಳ ಬಟ್ಟೆಗಳನ್ನು ದೊಡ್ಡ ಬ್ರಹ್ಮಚಾರಿಗಳು ಒಗೆದು ಕೊಡುತ್ತಾರೆ. ಸ್ನಾನ ಮುಗಿದನಂತರ ಎಲ್ಲರೂ ಒಟ್ಟಿಗೆ ಅಗ್ನಿಕುಂಡದ ಸುತ್ತಲು ಕುಳಿತು ಹೋಮವನ್ನು ಮಾಡಿ ಸಂಧ್ಯೆಯನ್ನು ಮಾಡುತ್ತಾರೆ. ಅನಂತರ ತಮ್ಮ ಕೊಠಡಿಗಳಲ್ಲಿ ಕಸವನ್ನು ತೆಗೆದು ಹಾಕುತ್ತಾರೆ. ಇದು ಮುಗಿದ ಮೇಲೆ ಪ್ರತಿಯೊಬ್ಬರೂ ಒಂದು ಬಟ್ಟಲು ಹಾಲನ್ನು ಕುಡಿಯುತ್ತಾರೆ. ಇಷ್ಟು ಹೊತ್ತಿಗೆ ೭॥ ಘಂಟೆಯ ಸಮಯವಾಗುತ್ತದೆ. ಅರ್ಧ ಘಂಟೆಯಕಾಲ ಧರ್ಮನೀತಿಯ ಪಾಠವು ನಡೆಯುತ್ತದೆ. ೮ ಘಂಟೆಯಿಂದ ವಿದ್ಯಾಶಾಲೆಯ ಪಾಠಗಳು ಪ್ರಾರಂಭವಾಗಿ ೧೦॥ ಘಂಟೆಯವರೆಗೂ ನಡೆಯುತ್ತವೆ, ತತ್‌ಕ್ಷಣವೇ ಊಟ. ೧೨ ಘಂಟೆಯಿಂದ ೨ ಘಂಟೆಯವರೆಗೆ ಸ್ವಾಧ್ಯಾಯ. ೨॥ ಘಂಟೆಯಿಂದ ೪½ ಘಂಟೆಗಳವರೆಗೆ ಮತ್ತೆ ಪಾಠಗಳು. ಫಲಾಹಾರಾರ್ಥವಾಗಿ, ಕಡಲೆಕಾಯಿ, ಹುರಿಗಡಲೆ ಇಂತಹ ಆಹಾರವು ಕೊಡಲ್ಪಡುತ್ತದೆ. ಅನಂತರ ೫ ಘಂಟೆಯಿಂದ ಫುಟ್‌ಬಾಲ್, ಕ್ರಿಕೆಟ್ ಮೊದಲಾದ ಆಟಗಳನ್ನಾಡುತ್ತಾರೆ. ಅಥವಾ ಜಿಮ್ನಾಸ್ಟಿಕ್ಸನ್ನು ಮಾಡುತ್ತಾರೆ. ೬ ಘಂಟೆಗೆ ಪುನಃ ಸಂಧ್ಯಾ. ೮ ಮೇಲೆ ಊಟ. ರಾತ್ರಿ ಓದಬೇಕೆಂಬ ನಿಯಮವಿಲ್ಲ. ಓದ ಕೂಡದೆಂದೇ ಸಾಧಾರಣ ನಿಯಮ. ಹದಿನಾಲ್ಕು ವರ್ಷಗಳೊಳಗಾಗಿ ಒಬ್ಬ ಬ್ರಹ್ಮಚಾರಿಯಾದರೂ ಕನ್ನಡಕವನ್ನು ಉಪಯೋಗಿಸಬೇಕಾದ ಪ್ರಮೇಯವು ಬರಲಿಲ್ಲ. ಇಲ್ಲಿಯ ಬ್ರಹ್ಮಚಾರಿಗಳಿಗಿರುವ ದೇಹಶಕ್ತಿಯು ಇನ್ನಾವ ಶಾಲೆಯಲ್ಲಿಯೂ ಇಲ್ಲವೆಂದೇ ಧೈರ್ಯವಾಗಿ ಹೇಳಬಹುದು. ವಾರ್ಷಿಕ ಮ

ಹೋತ್ಸವ ಕಾಲದಲ್ಲಿ ಬ್ರಹ್ಮಚಾರಿಗಳು ಕಟ್ಟಿಣದ ಸರಪಣಿಗಳನ್ನು ಕಡಿದು ಹಾಕುವರು. ಭಾರವಾದ ಗಾಡಿಯನ್ನು ಎದೆಯ ಮೇಲೆ ಎಳೆಸಿ ಕೊಳ್ಳುವರು. ಕಲ್ಲನ್ನು ಒಡೆಯುವರು ಇವೆಲ್ಲವನ್ನೂ ನೋಡಿ ನೆರೆದಿರುವ ಜನರು ಎಷ್ಟೋ ಆಶ್ಚರ್ಯ ಪಡುತ್ತಾರೆ. ಈ ಬ್ರಹ್ಮಚಾರಿಗಳಿಗೆ ಸರಕಾರವ ಕೆಲಸದ ಮೇಲೆ ದೃಷ್ಟಿಯೇ ಇಲ್ಲ. ಈಗಿನ ಬಿ. ಎ. ಗಳಂತೆ ಮುಂದೇನು ಗತಿಯೆಂಬ ಹೆದರಿಕೆಯು ಮೊದಲೇ ಇಲ್ಲ. ಕಾಯ ಕಷ್ಟವನ್ನಾದರೂ ಪಟ್ಟು ಜೀವನವನ್ನು ಸಂಪಾದಿಸಿಕೊಳ್ಳುವ ಧೈರ್ಯವೂ ವಿಶ್ವಾಸವೂ ಇವರಿಗುಂಟು.

ಪ್ರೊಫೆಸರುಗಳೂ ಪಂಡಿತರೂ ವಿದ್ಯಾಲಯದ ಕಟ್ಟಡದ ಹತ್ತಿರದಲ್ಲಿಯೇ ವಾಸಮಾಡುತ್ತಾರೆ. ವಿದ್ಯಾಲಯದ ತರಗತಿಗಳಲ್ಲಿ ಗಣಿತ, ಭೂಗೋಳ, ಚರಿತ್ರೆ, ರಸಾಯನ ಭೌತಿಕ ಶಾಸ್ತ್ರಗಳೂ ದೇಶಭಾಷೆಯಾದ ಗುಜರಾತಿಯಲ್ಲಿ ಕಲಿಸಲ್ಪಡುತ್ತವೆ. ಮಹಾವಿದ್ಯಾಲಯದ ತರಗತಿಗಳಲ್ಲಿ ಕೇವಲ ಇಂಗ್ಲೀಷ್, ಸಂಸ್ಕೃತ, ಗುಜರಾತಿಯ ಸಾಹಿತ್ಯಗಳೂ, ಆಧುನಿಕ ಪುರಾತನ ವೇದಾಂತಗಳೂ, ತರ್ಕ ವ್ಯಾಕರಣ ಶಾಸ್ತ್ರಗಳೂ ಕಲಿಸಲ್ಪಡುತ್ತವೆ. ಹಿಂದಿ ಭಾಷೆಯ ಮತ್ತು ಸಾಹಿತ್ಯದ ಪರಿಚಯವು ಪ್ರತಿಯೊಬ್ಬರಿಗೂ ಉಂಟು. ಕಾಲೇಜು ವಿದ್ಯಾರ್ಥಿಗಳು ಸಭೆಗಳಲ್ಲಿ ಸುಲಭವಾಗಿ ಸಂಸ್ಕೃತದಲ್ಲಿ ಚರ್ಚೆ ಮಾಡಬಲ್ಲರು. ದೊಡ್ಡಬ್ರಹ್ಮಚಾರಿಗಳು 'ಬ್ರಹ್ಮಚಾರಿ' ಯೆಂಬ ಮಾಸಪತ್ರಿಕೆಯನ್ನೂ ಚಿಕ್ಕ ಬ್ರಹ್ಮಚಾರಿಗಳು 'ಶಿಶು' ವೆಂಬ ಮಾಸಪತ್ರಿಕೆಯನ್ನೂ ಹೊರಡಿಸುತ್ತಾರೆ. ಅನೇಕರು ಹಿಂದಿ, ಸಂಸ್ಕೃತ, ಗುಜರಾತಿ ಭಾಷೆಗಳಲ್ಲಿ ಒಳ್ಳೆಯ ಕವಿತೆಯನ್ನು ಮಾಡಬಲ್ಲರು ಪತ್ರಿಕೆಯು ಲಿಖಿತವೇ. ಅಚ್ಚಾಗುವದಿಲ್ಲ. ಬ್ರಹ್ಮಚಾರಿಗಳೂ, ಉಪಾಧ್ಯಾಯರೂ ಇತರರೂ ಈ ಪತ್ರಿಕೆಗಳನ್ನು ಓದುತ್ತಾರೆ. ಸ್ಪುಟವಾಗಿ ಬರೆಯಲ್ಪಟ್ಟು ಪತ್ರಿಕೆಗಳು ಚಿತ್ರಪಟಗಳಿಂದ ತುಂಬಿ ಮುದ್ದಾಗಿರುತ್ತವೆ. ಇಲ್ಲಿಗೆ ಬರುವ ವಿದ್ಯಾರ್ಥಿಗಳಲ್ಲಿ ಅನೇಕರು ಮಧ್ಯಮತರಗತಿಯವರೇ. ತಾಯಿತಂದೆಗಳಿಲ್ಲದವರೂ ಪ್ರಾಯಶಃ ಇಲ್ಲ ಬರುತ್ತಾರೆ. ವರ್ಷಕ್ಕೊಮ್ಮೆ ಸೆಂಟಿಂಗಳಿನಲ್ಲಿ ರಜಾಬರುತ್ತದೆ. ಆಗ ಬ್ರಹ್ಮಚಾರಿಗಳು ಬೇಕಾದವರು ತಮ್ಮ ಊರಿಗೆ ಹೋಗಿ ಬರುತ್ತಾರೆ.

ಒಟ್ಟಿನಲ್ಲಿ ಇಲ್ಲಿಯ ವಿದ್ಯಾರ್ಥಿಗಳು ಬ್ರಹ್ಮಚಾರಿಗಳಾಗಿ ಜಿತೇಂದ್ರಿಯರಾಗಿ ಬೆಳೆದು ಗುರುಕುಲದ ವಾತಾವರಣದಲ್ಲಿ ದೊಡ್ಡವರಾಗಿ ನ್ಯಾಶ್ರಯ ಪರೋಪಕಾರಗಳನ್ನು ಸ್ವತಃಮಾಡಿ ಕಲಿತು ಸ್ನಾತಕ ಪದವಿಯನ್ನು ಪಡೆದು ವಿದ್ಯಾಲಯದಿಂದ ಹೊಗುವ ವೇಳೆಗೆ ಸುತಿಕ್ಷಿತರೂ, ಸದ್ಗೃಹಸ್ಥರೂ, ಸಜ್ಜನರೂ ಆಗಿ ದೇಶಸೇವಕರಾಗಿ ಪರಿಣಮಿಸುವರು. ಇಂತಹ ಸಂಸ್ಥೆಗಳು ಹಲವನ್ನು ಹಿಂದೂಸ್ಥಾನದಲ್ಲಿ ಸ್ಥಾಪಿಸಿದ ಆರ್ಯಸಮಾಜದವರು ನಮ್ಮೆಲ್ಲರ ವಂದನೆಗಳಿಗೆ ಅರ್ಹರಲ್ಲವೇ? **ಚ. ರಂ.**

ಶಾಂತಿನಿಕೇತನ.

ಪೂರ್ವದ ಶಾಲೆಗಳಿಗೂ ಈಗಿನ ಶಾಲೆಗಳಿಗೂ ಎತ್ತಿ ಕಾಣುವ ವ್ಯತ್ಯಾಸವೇನು? ನಮ್ಮ ಶಾಲೆಗಳು ಕಲ್ಲುಮಣ್ಣಿನ ಗೋಡೆಗಳು. ಸೃಷ್ಟಿ ಸೌಂದರ್ಯರಾಹಿತ್ಯವಾದ ಕತ್ತಲೆಯ ಕೋಣೆಗಳು. ಋಷ್ಯಾಶ್ರಮಗಳಿದ್ದುದು ಪ್ರಕೃತಿಯ ಮಧ್ಯದಲ್ಲಿ. ಬಾಲಕರು ಸದಾ ಗಿಡಮರಬಳ್ಳಿಗಳೊಡನೆಯೂ, ಪಶುಪಕ್ಷಿಗಳೊಡನೆಯೂ ನಲಿಯುತ್ತಾ ಜೀವನದ ತಿರುಳನ್ನು ತಿಳಿದು ಆನಂದದಲ್ಲಿರುತ್ತಿದ್ದರು. ಪುಸ್ತಕಗಳಿಂದ ತುಂಬಿದ ಕೋಣೆಗಳನ್ನು ಹಿಂದಿನವರು ಕಂಡರಿಯರು. ಅವರ ಗುರುವೇ ಅವರಿಗೆ ಸರ್ವವೂ ಆಗಿದ್ದನು. ಅಂತಹ ಗುರುವೆಲ್ಲಿ? ಅಂತಹ ಶಾಲೆಗಳಲ್ಲಿ? ಎಂಬ ಭಾವನೆಯನ್ನು ಸೂಚಿಸುವಂತೆ ಮಿಸ್. ಎಡ್. ಬಿ ದಾಸರವರು ಎಜುಕೇಷನಲ್ ರಿವ್ಯೂವಿನಲ್ಲಿ ಬರೆದಿರುವರು.

ಮಹಾತ್ಮಾ ಗಾಂಧಿಯವರ ಸಬರಮತಿ ಆಶ್ರಮವೂ, ಕವೀಂದ್ರರ 'ಶಾಂತಿನಿಕೇತನ'ವೂ ಪೂರ್ವದ ಋಷ್ಯಾಶ್ರಮಗಳನ್ನು ಬಲು ಮಟ್ಟಿಗೆ ಹೋಲುತ್ತವೆ.

ರವೀಂದ್ರರು ಹದಿಮೂರನೆಯ ವಯಸ್ಸಿನಲ್ಲಿ ಶಾಲೆಗೆ ಶರಣು ಹೊಕ್ಕರು. ಬೇಕಿಗ್ಗೆ ಅತುರಾ

ತುರವಾಗಿ ಅನ್ನವನ್ನುಣ್ಣುವ ವೇಳೆಗೆ ಶಾಲೆಗೆ ಕರೆದುಕೊಂಡು ಹೋಗಲು ಗಾಡಿಯು ಸಿದ್ಧವಾಗಿರುತ್ತಿತ್ತು. ಅದನ್ನು ನೋಡಿದೊಡನೆ ರವೀಂದ್ರ ಬಾಲಕನಿಗೆ ವಿಶೇಷದುಃಖವೂ ಸಂಕಟವೂ ಉಂಟಾಗುತ್ತಿತ್ತು. ಈ ಬಂದಿಯಖಾನೆಯಿಂದ ಎಂದು ಬಿಡಗಡೆಯಾಗುವೆನೆಂದು ಅವರು ನಿತ್ಯವೂ ಯೋಚಿಸುತ್ತಿದ್ದರು. ಕೊನೆಗೆ ಬೇಸರ ಪಟ್ಟು ಶಾಲೆಗೆ ಹೋಗುವುದಿಲ್ಲವೆಂದು ಹಠಹಿಡಿದರು. ಹಿರಿಯರು ಎಷ್ಟೋ ವಿಧದಲ್ಲಿ ಒತ್ತಾಯ ಮಾಡಿದರೂ ರವೀಂದ್ರರು ಶಾಲೆಗೆ ಹೋಗಲಿಲ್ಲ. ತಮಗೆ ತಾವೇ ಗುರುವಾದರು. ಕೈಗೆ ಸಿಕ್ಕಿದ ಪುಸ್ತಕಗಳನ್ನೆಲ್ಲಾ ಓದಿ ಮುಗಿಸಿದರು. ಅರ್ಥವಾಗದ ವಿಷಯಗಳನ್ನು ಊಹೆಯಿಂದ ತಿಳಿದುಕೊಂಡರು. ಸ್ವಾತಂತ್ರ್ಯದಿಂದ ಸ್ವಾಭಾವಿಕ ರೀತಿಯಲ್ಲಿ ಸೃಷ್ಟಿವೈಚಿತ್ರ್ಯವನ್ನೂ, ನಿಯಮಗಳನ್ನೂ ಅರಿತ ಕವಿಗಳು ತಮ್ಮ ಮಧ್ಯವಯಸ್ಸಿನಲ್ಲಿ 'ಶಾಂತಿನಿಕೇತ'ನವನ್ನು ಹೂಡಿದರು.

ಗಿಡಗಳ ಕೆಳಗೆ ಪಾಠಗಳು ನಡೆಯುತ್ತವೆ. ಬಾಲಕರಿಗೆ ಪೂರ್ಣಸ್ವಾತಂತ್ರ್ಯವುಂಟು. ಪಾಠವಾಗುತ್ತಿರುವಾಗ ಮಳೆಬಂದರೆ ಅಂದಿನ ಪಾಠ ಮುಗಿಯಿತು. ಹುಡುಗರೆಲ್ಲ ಮಳೆಯೊಡನೆ ಕಲೆತು ಓಡಾಡುವರು. ಕವಿಗಳೊಡನೆ ಸೇರಿ ಹಾಡುವರು. ಆಡುವರು. ಇಷ್ಟು ಸ್ವಾತಂತ್ರ್ಯವಿದ್ದರೆ, 'ಹುಡುಗರು ದಾರಿಗೆ ಬರುವುದಿಲ್ಲ'ವೆಂದು ಕೆಲವರು ಗೊಣಗುಟ್ಟಬಹುದು. ಶಾಂತಿನಿಕೇತನದಲ್ಲಿ ನಿಯಮಗಳಿಲ್ಲವೆಂದೂ, ಬಾಲಕರು ತಮ್ಮಿಷ್ಟಬಂದಂತಿರಬಹುದೆಂದೂ ತಿಳಿಯಬಾರದು. ಪ್ರತಿಯೊಬ್ಬ ಹುಡುಗನೂ ತನ್ನ ಕೊಠಡಿಯನ್ನು ಗುಡಿಸಬೇಕು. ಬಟ್ಟೆಗಳನ್ನು ಒಗಿಯಬೇಕು. ಬೆಳಿಗ್ಗೆ ಐದು ಗಂಟೆಗೆದ್ದು ಮಂಜು ಬೀಳುತ್ತಿದ್ದರೂ ತಣ್ಣೀರಿನಲ್ಲಿ ಮಿಂಯಬೇಕು.

ಕಾಫಿ, ಟೀಗಳಿಗೆ ಮಾರ್ಗವಿಲ್ಲ. ಎರಡು ಸಲ ಊಟ, ಮಧ್ಯೆ ಫಲಾಹಾರ ಬಿಟ್ಟರೆ ಬೇರೆ ಆಹಾರದೊರೆಯದು. ಹಣಕೊಟ್ಟು ಬಾಲಕರು ಬೇಕಾದ್ದನ್ನು ಕೊಂಡುಕೊಳ್ಳುವಂತಿಲ್ಲ. ಪ್ರತಿಯೊಬ್ಬ ಹುಡುಗನೂ ಬೈಲಿನಲ್ಲಿ ಆಡಬೇಕು. ಉಪಾಧ್ಯಾಯರೂ ಬಾಲಕರೊಡನೆ ಆಡುತ್ತಾರೆ. ವಯಸ್ಸನ್ನನುಸರಿಸಿ ಹುಡುಗರನ್ನು ಗುಂಪುಗುಂಪಾಗಿ ವಿಂಗಡಿಸಿದೆ. ಪ್ರತಿಯೊಂದು ಗುಂಪಿನವ ತಮ್ಮ ನಾಯಕನನ್ನು ಚುನಾಯಿಸುತ್ತಾರೆ. ಯಾರಿಗಾದರೂ ಆಲಸ್ಯವಾದರೆ ಆಶ್ರಮದಲ್ಲಿರುವ ವೈದ್ಯಶಾಲೆಯಿಲ್ಲಿ ಬಹಳ ಮುತುವರ್ಜಿಯಿಂದ ಅವನನ್ನು ನೋಡಿಕೊಳ್ಳುವರು. ಶಾಲೆಯ ಪಾಠಗಳಿಲ್ಲದ ವೇಳೆಯಲ್ಲಿ ಹುಡುಗರು ನಡೆಸುವ ಕೆಲಸಗಳಿಗೆ ಗುರುಗಳು ಪ್ರೋತ್ಸಾಹವನ್ನು ಕೊಡುವರು. ಆರೇಳು ವರ್ಷಗಳ ಬಾಲಕರು ಕೂಡ 'ತಿಶು' ಎಂಬ ಪತ್ರಿಕೆಯನ್ನು ಹೊರಡಿಸುವರು. ಹುಡುಗರು ಸದಾನಿಯಮಗಳಿಗಧೀನರಾಗಿದ್ದರೂ, ಸ್ವಾತಂತ್ರ್ಯ ಸುಖವನ್ನು ಅನುಭವಿಸುವರು.

ಶಾಂತಿನಿಕೇತನದ ಬಾಲಕರು ಸುತ್ತಮುತ್ತಲಿನ ಹಳ್ಳಿಯವರ ಕಷ್ಟಸುಖಗಳಲ್ಲಿ ಭಾಗಿಗಳಾಗಿರುವರು ಇತರ ದೇಶದಿಂದ ಬಂದ ಅಧ್ಯಾಪಕರೊಡನೆ ಸೇರಿ ಎಲ್ಲರನ್ನೂ ಸಮದೃಷ್ಟಿಯಿಂದ ನೋಡುವದನ್ನು ಕಲಿತಿರುವರು. 'ವಿಶ್ವಭಾರತಿ'ಯಲ್ಲಿ ಶಿಕ್ಷಣ ಪಡೆವ ಹಿರಿಯ ಬಾಲಕರು ಕಲೆ, ಸಾಹಿತ್ಯ, ವೇದಾಂತ ವಿಚಾರಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸುವರು. ಹೀಗೆ ಕಲಿತವರಲ್ಲನೇಕರು ಅಮೆರಿಕಾ, ಯೂರೋಪ್‌ದೇಶಗಳಲ್ಲಿ ಕೆಲಸ ಮಾಡುತ್ತಿರುವರು. ಮತ್ತು ಕೆಲವರು ನಮ್ಮ ದೇಶದಲ್ಲಿರುವ ಶೋಧನಾಗಾರಗಳಲ್ಲಿ ಇರುವರು.

ಹೀಗಿರುವಲ್ಲಿ ಶಾಂತಿನಿಕೇತನದ ಬಾಲಕರು ಕಲಿಯುವುದು 'ಆಟ' 'ಊಟ' ಮಾತ್ರವೆಂದು ಪ್ರೊಫೆಸರ್ ಶೇಷಾದ್ರಿಯವರು ಹೇಳಿದುದು ಶೋಚನೀಯವಲ್ಲವೇ?

ಡಾಲ್ಟನರ ಶಿಕ್ಷಣ ಕ್ರಮ

ಈ ಶಿಕ್ಷಣ ಕ್ರಮದಲ್ಲಿ ಬಾಲಕರಿಗೆ ಸಂಪೂರ್ಣ ಸ್ವಾತಂತ್ರ್ಯವುಂಟು. ಬಾಲಕನು ನೆಟ್ಟದೃಷ್ಟಿಯಿಂದ ಕಲಿಯುತ್ತಿರುವ ವಿಷಯವನ್ನು ಬಿಟ್ಟು ಬೇರೆ ಕಡೆಗೆ ಗಮನವನ್ನೆಳೆಯುವ ಘಂಟಾನಾದವಿಲ್ಲ. ಘಂಟಾರವಕ್ಕಧೀನನಾಗಿ

ಬೇರೆ ವಿಷಯಗಳನ್ನು ಹೊಸ ಉಪಾಧ್ಯಾಯರಿಂದ ಕಲಿಯಬೇಕಾಗಿಲ್ಲ. ಬಾಲಕನು ತನ್ನ ಸ್ವಭಾವಕ್ಕನುಗುಣವಾದ ವೇಗದಿಂದ ವಿಷಯ ಸಂಗ್ರಹ ಮಾಡಿದಲ್ಲದೆ ಯಾವ ವಿಷಯದಲ್ಲೂ ನಿಜವಾದ ಜ್ಞಾನವುಂಟಾಗದೆಂಬುದೇ ಈ ಶಿಕ್ಷಣ ಕ್ರಮದ ತತ್ವ.

ಈ ಕ್ರಮದಲ್ಲಿ ಬಾಲಕರು ಒಟ್ಟುಗೂಡಿ ಕೆಲಸ ಮಾಡುವುದರಿಂದ ಸಂಘಾವೇಕ್ಷೆಯೂ, ಸಮಾಜ ಸೇವೆಯೂ ಅವರಲ್ಲಿ ಹೆಚ್ಚುತ್ತದೆ ಬಾಲಕರು ತಮಗೆ ತಿಳಿಯದ ವಿಷಯಗಳನ್ನು ಸ್ವಾಭಾವಿಕವಾಗಿ ಕಲಿಯತೊಡಗರು. ತಮ್ಮ ಮನೋಗುಣವನ್ನನುಸರಿಸಿ ಕಲಿಯ ತೊಡಗುವ ವಸ್ತುಗಳಲ್ಲಿ ಜ್ಞಾನ ಸಂಪಾದಿಸಲು ಅನೇಕ ರೀತಿಯಿಂದ ಯೋಚಿಸಿ ತಮಗೆ ಸರಿಯಾದ ಮಾರ್ಗವನ್ನನುಸರಿಸುವರು.

ಈ ಕ್ರಮವನ್ನು ತೊಡಗುವಾಗ ಶಿಕ್ಷಕರು ಬಾಲಕರು ಕಲಿಯಬೇಕಾದ ಪಾಠಗಳ ಪಟ್ಟಿಯನ್ನು ಅವರಿಗೆ ತಿಳಿಸುವರು. ಅವುಗಳನ್ನು ಕಲಿಯುವ ಕ್ರಮವನ್ನು ಬಾಲಕರೇ ನಿಶ್ಚಯಿಸಿಕೊಳ್ಳುವರು. ತರಗತಿಯ ಉಪಾಧ್ಯಾಯರು ಅವರವರ ತರಗತಿಯು ಪ್ರತಿ ತಿಂಗಳಲ್ಲಿ ಕಲಿಯಬೇಕಾದ ವಿಷಯ ಸಂಗ್ರಹದ ಪಟ್ಟಿಯನ್ನು ಹಾಕುವರು. ಬೆಳಿಗ್ಗೆಯೆಲ್ಲಾ ತಮಗೆ ತೋಚಿದಂತೆ ಮೇಲಿನ ಪಟ್ಟಿಯ ವಿಷಯಗಳನ್ನು ಕಲಿಯಲು ಬಾಲಕರಿಗೆ ಪೂರ್ಣಸ್ವಾತಂತ್ರ್ಯವುಂಟು. ಚುರುಕಾದ ಬಾಲಕರು ದಡ್ಡರಿಗಿಂತ ಹೆಚ್ಚು ಸಂಗತಿಗಳನ್ನರಿತುಕೊಳ್ಳುವರು. ಒಬ್ಬ ಬಾಲಕನು ಕೆಲವು ದಿನಗಳು ಶಾಲೆಗೆ ಬಾರದಿದ್ದರೆ, ತಾನು ಕಲಿತು ನಿಲ್ಲಿಸಿದ ಸ್ಥಳದಿಂದ ಮುಂದೆ ಕಲಿಯ ಹೊರಡುವನು. ನಮ್ಮ ಶಾಲೆಗಳಲ್ಲಿರುವಂತೆ ಮುಂದಿನ ತರಗತಿಗೆ ಹೋಗದಿದ್ದರೆ ಪುನಃ ಕಲಿತದ್ದನ್ನೇ ಕಲಿಯಬೇಕಾಗಿಲ್ಲ. ಚರಿತ್ರೆ, ಭೂಗೋಳ ಮುಂತಾದ ಪಾಠಗಳಿಗೆ ಸಂಬಂಧಪಟ್ಟ ಪುಸ್ತಕಗಳೂ ಸಲಕರಣೆಗಳೂ ಗೊತ್ತಾದ ಕೊಠಡಿಗಳಲ್ಲಿರುವವು. ತಮಗೆ ಬೇಕಾದಾಗ ಇಷ್ಟ ಬಂದ ಕೊಠಡಿಯಲ್ಲಿ ಬಾಲಕರು ಕೆಲಸ ಮಾಡುವರು. ತಮ್ಮಿಷ್ಟದಂತೆ ನಡೆಯಲು ಸಂಪೂರ್ಣ ಸ್ವಾತಂತ್ರ್ಯರುವದರಿಂದ ಹುಡುಗರು ಕಾಲ ಹರಣ ಮಾಡುವ ಗೋಜೇ ಇಲ್ಲ. ಹುಡುಗರ ದಿನದಿನದ ವಿದ್ಯಾ ಜೀವನಗತಿಯನ್ನು ಗೊತ್ತು ಹಚ್ಚಲು ಕೆಲವು ಪದ್ಧತಿಗಳುಂಟು. ಪ್ರತಿಯೊಬ್ಬ ಬಾಲಕನೂ ತನ್ನ ಅಭಿವೃದ್ಧಿಯನ್ನು ತೋರಿಸುವ ಪಟ್ಟಿಯನ್ನು ಚಿತ್ರಿಸುವನು. ಶಿಕ್ಷಕರೂ ಎಲ್ಲ ಬಾಲಕರ ಅಭಿವೃದ್ಧಿಯನ್ನು ತೋರಿಸುವ ನಕ್ಷೆಯನ್ನು (Graph) ಬರೆದಿಡುವರು. ವಾರಕ್ಕೆ ಎರಡು ಮೂರಾವರ್ತಿ ಶಿಕ್ಷಕರು ಪ್ರತಿಯೊಂದು ವಿಷಯವನ್ನು ಕುರಿತು ಬಾಲಕರೊಡನೆ ಚರ್ಚಿಸಿ ಹೊಸ ನಲಹೆಗಳನ್ನು ಕೊಡುವರು.

ಈ ಕ್ರಮವು ಸಮರ್ಪಕವಾಗಿ ನಡೆಯಬೇಕಾದರೆ ಶಿಕ್ಷಕರು ಮೇಧಾವಿಗಳಾಗಿಯೂ, ಸಹೃದಯರಾಗಿಯೂ, ಶಾಂತಚಿತ್ತರಾಗಿಯೂ, ಹುಡುಗರೊಡನೆ ಮಿಳಿತರಾಗಿ ಅವರ ನಡೆನುಡಿಗಳನ್ನರಿತು ಅವರ ಕಷ್ಟಗಳನ್ನು ನಿವಾರಿಸುವ ಚಾತುರ್ಯವುಳ್ಳವರಾಗಿಯೂ ಇರಬೇಕು.

ಬಾಲಕರಲ್ಲಿ ಕಲಿಯಬೇಕೆಂಬ ಇಚ್ಛೆಯು ಸ್ವಾಭಾವಿಕವಾಗಿ ಉತ್ಪನ್ನವಾಗುವುದು. ಹುಡುಗರಿಗೆ ಶಾಲೆಯ ಕೆಲಸಕಾರ್ಯಗಳಲ್ಲಿ ಹೆಚ್ಚು ಶ್ರದ್ಧೆಯುಂಟಾಗುವುದು. ಹುಡುಗರಿಗೆ ಸ್ವತಂತ್ರ ಹೆಚ್ಚಾಗಿರುವುದರಿಂದ, ತಮ್ಮ ಜವಾಬ್ದಾರಿಯನ್ನು ತೀಕ್ಷ್ಣವಾಗಿ ತಿಳಿಯುವರು. ಗುರುಶಿಷ್ಯರಿಗೆ ಸಂಬಂಧವು ಮೈತ್ರಿಯಿಂದಿದ್ದು ಕಠಿಣ ನಿಯಮಗಳವಶ್ಯಕತೆಯಿರುವುದಿಲ್ಲ. ಈ ಫಲಗಳನ್ನು ಕೊಡುವ ಶಿಕ್ಷಣಕ್ರಮವನ್ನನುಸರಿಸುವ ಶಾಲೆಗಳು ನಮ್ಮಲ್ಲಿರುವವೇನು ?

ಎಜ್ಯುಕೇಷನಲ್ ರಿವ್ಯೂ

ಮೇ ೧೯೩೫.

ಆಂಧ್ರ ವಿಶ್ವವಿದ್ಯಾಲಯ

ಬಹಳ ಕಾಲದಿಂದ ಆಂಧ್ರಪ್ರಾಂತ್ಯದವರು ತಮಗೊಂದು ಪ್ರತ್ಯೇಕ ವಿಶ್ವವಿದ್ಯಾಲಯವೇರ್ಪಡಬೇಕೆಂದಿಟ್ಟಿದ್ದ ಆಸೆಯು ಕಡೆಗೆ ಪೂರ್ತಿಯಾಗುವಂತಿದೆ. ಮದರಾಸ್ ಶಾಸನ ಸಭೆಯಲ್ಲಿ ಆಂಧ್ರಪ್ರಾಂತ್ಯಕ್ಕೊಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಮಸೂದೆಯೊಂದನ್ನು

ತರಲಿದ್ದಾರೆ. ಇದರಲ್ಲಿ ವಿಶೇಷ ಸಂಗತಿಯೊಂದುಂಟು. ಪ್ರೌಢ ಶಿಕ್ಷಣದಲ್ಲಿ ಇಂಗ್ಲೀಷ್ ಭಾಷೆಯನ್ನು ಬಿಟ್ಟುಳಿದ ವ್ಯಾಸಂಗ ಪರೀಕ್ಷೆಗಳು ಆಂಧ್ರ ಭಾಷೆಯಲ್ಲಿಯೇ ನಡೆಯಲು ಏರ್ಪಾಡಾಗುತ್ತಲಿರುವುದು. ಶಿಕ್ಷಣ ಮಂತ್ರಿಗಳು **ಮಾತೃ ಭಾಷೆಯಲ್ಲಿಯೇ** ಶಿಕ್ಷಣವು ನಡೆಯಬೇಕೆಂಬ ತತ್ವವನ್ನನುಮೋದಿಸಿರುವರು. ಈ ತತ್ವವನ್ನನುಸರಿಸಿದಾಗ ವಿಶ್ವವಿದ್ಯಾಲಯವು ನಿಜವಾದ ಶಿಕ್ಷಣದ ಮತ್ತು ಅರಿವಿನ ಮಂದಿರವಾಗುವುದರಲ್ಲಿ ಒಂದು ದೊಡ್ಡ ಹೆಜ್ಜೆಯನ್ನು ಹಾಕಿದಂತಾಗುವುದು.

ತಿರುಪತಿಯ ವಿಶ್ವವಿದ್ಯಾಲಯ

ತಿರುಪತಿಯಂತಹ ದೇವಸ್ಥಾನಗಳಲ್ಲಿ ಬೇಕಾದಷ್ಟು ಧನವು ಸೇರುವುದು. ಶಿಕ್ಷಣವು ಊರ್ಜಿತ ಪಡಬೇಕಾದರೆ ಧನಸಹಾಯವು ಬೇಕು. ಈ ಕಾಲದಲ್ಲಿ ಹಣ ದೊರಕುವುದು ಕಷ್ಟ; ಆದ್ದರಿಂದ ದೇವಸ್ಥಾನಗಳಲ್ಲಿ ಮಿಗುವ ಹಣವನ್ನು ಶಿಕ್ಷಣಕ್ಕುಪಯೋಗಿಸಿಕೊಂಡು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದೆಲ್ಲೆಲ್ಲಿ ಸಾಧ್ಯವೋ ಆಯಾ ಸ್ಥಳಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಹೂಡಿ ಪಾರಲೌಕಿಕ ವಿದ್ಯೆಗೇ ಪ್ರಾಧಾನ್ಯ ಕೊಟ್ಟರೆ ದೇವಸ್ಥಾನಗಳ ಹಣವು ಸದ್ವಿನಿಯೋಗವೇ ಆಗುವುದೆಂದಭಿಪ್ರಾಯಪಟ್ಟು ಮದರಾಸ್ ಪ್ರಾಂತ್ಯದ ಮಂತ್ರಿಗಳಾದ ಪಾನಗಲ್ಲು ರಾಜರು ತಿರುಪತಿಯಲ್ಲಿ ವರ್ಷಂಪ್ರತಿ ಮಿಗುವ ಸುಮಾರು ೪೦ ಲಕ್ಷ ರೂಪಾಯಿಗಳನ್ನುಪಯೋಗಿಸಿ ಅಲ್ಲಿಯೇ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸುವ ಯೋಜನೆಯನ್ನು ಮಾಡಿರುವರು.

ಸೂಚಿತವಾಗಿರುವ ಶಿಕ್ಷಣ ಕ್ರಮದಲ್ಲಿ ಎರಡು ವಿಧಗಳಿಗವಕಾಶವಿರುವಂತೆ. ಒಂದು ಬಗೆಯ ಶಿಕ್ಷಣ ಕೇವಲ ಅಧ್ಯಾತ್ಮಿಕವಾದುದು. ಮತ್ತೊಂದರಲ್ಲಿ ಧಾರ್ಮಿಕ ಶಿಕ್ಷಣವೇ ಪ್ರಧಾನವಾಗಿದ್ದರೂ ವ್ಯವಹಾರಕ್ಕೆ ಬೇಕಾದಷ್ಟು ಇಂಗ್ಲೀಷ್ ಭಾಷೆಯ ಪರಿಚಯವನ್ನು ಪಡೆದ ಮೇಲೆ ಗಣಿತ, ತರ್ಕ, ಚರಿತ್ರೆ, ಭೌತಿಕಶಾಸ್ತ್ರಗಳು, ಆಯುರ್ವೇದ, ಶಿಲ್ಪ ಮೊದಲಾದ ಐಚ್ಛಿಕ ವಿಷಯಗಳಲ್ಲಿ ಬೇಕಾದುವನ್ನಾರಿಸಿಕೊಂಡು ಪಾಂಡಿತ್ಯವನ್ನು ಪಡೆಯಬಹುದು. ಇವುಗಳನ್ನು ನಿರ್ಧರಿಸುವುದರಲ್ಲಿ ಆರ್ಯಸಂಸ್ಕೃತಿಯ ವಾತಾವರಣವನ್ನು ಕಲ್ಪಿಸುವುದೇ ಪರಮೋದ್ದೇಶವಾಗಿರಬೇಕಾದುದತ್ಯವಶ್ಯಕ. ಶಿಕ್ಷಿತರು ನಿಜವಾದ ಪಾಂಡಿತ್ಯವನ್ನು ಪಡೆದಿರಬೇಕಾದುದಲ್ಲದೆ ಭಾರತೀಯ ಸಂಸ್ಕೃತಿಯನ್ನು ಜೀವನದಲ್ಲಿ ತೋರುವಂತಿರಬೇಕು ಮತ್ತು ದೇಶವತ್ಸಲರಾಗಿರಬೇಕು.

ಇತರ ವಿಷಯಗಳು ಮುಂದೆ ತಿಳಿಯತಕ್ಕವಾಗಿವೆ.

ಕುಂಭಕೋಣದಲ್ಲಿ ವೇದಾಧ್ಯಯನಕ್ಕೆ ಪ್ರೋತ್ಸಾಹ

ದೇಶದಲ್ಲೆಲ್ಲೆಲ್ಲಿಯೂ ಭಾರತೀಯರ ಪ್ರಾಚೀನ ಸಂಸ್ಕೃತಿಯ ಕಡೆ ದೃಷ್ಟಿಯು ತಿರುಗಿರುವುದು. ಪ್ರಾಚೀನ ಸಂಸ್ಕೃತಿಗೆ ಮೂಲಾಧಾರವಾದುವು ವೇದಗಳು. ಈ ಕಾಲದಲ್ಲಿ ಕಾರಣಾಂತರಗಳಿಂದ ವೇದಾಧ್ಯಯನವು ತೃಪ್ತಿಕರವಾಗಿಲ್ಲ. ಅದನ್ನು ಪ್ರೋತ್ಸಾಹಗೊಳಿಸುವುದು ಮುಖ್ಯ ಕರ್ತವ್ಯವಾಗಿದೆ. ಇದಲ್ಲದೆ ವೇದ ಪಾಠದಲ್ಲಿ ದಾಕ್ಷಿಣಾತ್ಯರಿಗೆ ಒಂದು ವಿಶೇಷ ಅನುಕೂಲವುಂಟು. ಆದ್ದರಿಂದ ಕುಂಭಕೋಣದಲ್ಲಿ ಪ್ರತಿವರ್ಷವೂ ವೇದಾಧ್ಯಯನದಲ್ಲಿ ಪರೀಕ್ಷೆ ನಡೆದು ಬಿರುದು ಬಹುಮಾನಗಳು ಸಲ್ಲುವಂತೆ ಶ್ರೀಕಂಚಿ ಕಾಮಕೋಟ ಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯ ಸ್ವಾಮಿಗಳು ವ್ಯವಸ್ಥೆ ಮಾಡುತ್ತಲಿರುವರು.

ಹಿಂದೂ ಪತ್ರಿಕೆಯಿಂದ

KARNATAKA VIDYA-VARDHAKA SANGHA
DHARWAR.
ಧಾರವಾಡ.
ಕರ್ನಾಟಕ ವಿದ್ಯಾ ವರ್ಧಕ ಸಂಘ

Read for "Nadi"
9.12.1940
DSR



तमसो मा ज्योतिर्गमय

Vithaldas Bhagavandas Darbar

High School, Bijapur

1940.

Price As.

Members of the Staff.

High - School.

1 Sjt. H. B. Konnur, M. A. (Head Master)
2 , G. J. Mangalgi VIDWAN.
3 ,, A. B. Kulkarni B A. B. T. (1st Assistant)
4 ,, K. P. Joshi. M. A B. T.
5 ,, P. B. Naregal, B. A. (Vishwa Bharati)
B. A. B. T. (BOM.)
6 ,, M. N. Katti, B. A. B. T.
7 ,, V. V. Nath, B. A.
8 ,, B. T. Kulkarni, B. A.
9 ,, B. R. Chakalabbi, B. A.
10 ,, K. A. Jahagirdar, B. A.
11 ,, G. R. Joshi, B SC.
12 ,, B. G, Godbole. B. SC.
13 ,, N. K. Deurkar,
14 ,, U. B. Konnur.
15 ,, R. B. Konnur.
16 ,, G. S. Kondaguli.
17 , U. V. Jahagirdar, S. T. C.
18 , H. M. Bableshwar, MONT. DIP.
19 ,, A J. M. Farooqui, PERSIAN, TEACHER.
20 ,, M H. Mamadapur, DRAWING ,,
21 ,, Bevoor, DRILL ,,
22 ,, Mudholkar, MUSIC ,,
23 ,, Dr. Sindagikar, L. C. P. S. (Physics & Hygiene)
24 ,, Onkar, R. B. CLERK

ಅಭಿಪ್ರಾಯಕ್ಕಾಗಿ –

ಕನ್ನಡನುಡಿಯಲ್ಲಿ ನಂಬಿಕೆಯಿಂದ –

ಸಹಿ

ಪ್ರಾಧ್ಯಾಪಕರು

ద్వం బి

ಬೆಳಕು

(ವಿಜಯಪುರದ ವಿಠ್ಠಲದಾಸ ಭಗವಾನದಾಸ ದರ್ಬಾರ ವಿದ್ಯಾಲಯದ ಪತ್ರಿಕೆ)

तमसो मा ज्योतिर्गमय!

ವರ್ಷ	ಶಕ ೧೮೬೩, ವಿಕ್ರಮ ಸಂವತ್ಸರ ಕಾರ್ತಿಕ-ಮಾರ್ಗಶೀರ್ಷ	ಸಂಚಿಕೆ
೧	ನವ್ಹೆಂಬರ ೧೯೪೦	೧

ಪ್ರಾರ್ಥನೆ

೧

ॐ भूः । ॐ भुवः । ॐ स्वः । ॐ महः । ॐ जनः । ॐ तपः । ॐ सत्यं । ॐ तत् **सवितुर्वरेण्यं भर्गो देवस्य धीमहि** धियो यो नः प्रचोदयात् ॥

೨

असतो मा सद्गमय । **तमसो मा ज्योतिर्गमय ॥**
मृत्योर्माऽमृतं गमय । ॐ आविरावीर्म एधि ॥

ಭೂಲೋಕ-ಭುವರ್ಲೋಕ-ಸ್ವರ್ಲೋಕ-ಮಹರ್ಲೋಕ-ಜನೋಲೋಕ-ತಪೋಲೋಕ-ಸತ್ಯಲೋಕಗಳನ್ನೆಲ್ಲ ಬೆಳಗುವ ಆ ಸೂರ್ಯದೇವನ ಹಿರಿ 'ಬೆಳಕ'ನ್ನು ನೆನೆಯುವಾ. ಆತನೇ ನಮ್ಮ ಬುದ್ಧಿ ಶಕ್ತಿಗಳನ್ನೆಲ್ಲ ಬೆಳಗಿಸಲಿ. (೧)

ದೇವದೇವನೆ, ಸುಳ್ಳಿನಿಂದ ನನ್ನನ್ನು ನಿಜಕ್ಕೆ ನಡೆಯಿಸು. ಕತ್ತಲೆಯಿಂದ ಬೆಳಕಿಗೆ ನಡೆಯಿಸು. ಸಾವಿನ ಜಗದಿಂದ ಅಮೃತ ಲೋಕಕ್ಕೆ ನಡೆಯಿಸು. ಪ್ರಣವ ಮೂರ್ತಿಯೆ ನೀನೇ ನನ್ನಲ್ಲಿ ಪ್ರಕಟವಾಗು. (೨)

ಪ್ರಾರ್ಥನೆ

(ಭರತೇಶ ವೈಭವದಿಂದ)

ನಿಂದಲ್ಲಿ ನಡೆವಲ್ಲಿ ಕುಳಿತಲ್ಲಿ ಸರ್ವತ್ರ ।
ಕುಂದದ ಕುಶಲ ಲೀಲೆಯೊಳು ।
ಸಂಧಿಸುವಭವ ನನ್ನೆದೆಯೊಳಗಿರು ಚಿದಾ- ।
ನಂದ ಚಿದಂಬರ ಪುರುಷಾ ॥

ತಿಳಿವೆಳಗಿನ ತೀರ್ಥರೂಪವೇ ತಿಂಗಳ ।
ಬೆಳಗಿನೊಳಾದ ಪುತ್ಥಳಿಯೆ ।
ತಳು ಮಾಡದೆನಗೆ ಸನ್ಮತಿದೋರು ಸುಜ್ಞಾನ ।
ನಿಳಯ ನಿರಂಜನ ಸಿದ್ಧಾ ॥

ಹಿಂದು ಮುಂದೆಡಬಲ ಹೊರಗೊಳಗಡಿ ಕಡೆ ।
ಯೆಂದೆನ್ನದಮೃತ ಸ್ವರೂಪ ।
ಎಂದೆಂದು ಯೆನ್ನ ಚಿತ್ತದೊಳಿರು ಸಚ್ಚಿದಾ- ।
ನಂದ ಚಿದಂಬರ ಪುರುಷಾ ॥

ಉಸುರೆಂಬ ಕರಗಸದಿಂದ ದೇಹಾತ್ಮರ ।
ಬೆಸುಗೆಯ ಬಿಡಿಸಿ ನೋಡಿದರೆ ।
ಮುಸುಳದೆ ತೋರ್ಪ ಮಹಾತ್ಮ ನೀನೆನಗೊಲ್ಪ- ।
ನೆಸಗು ನಿರಂಜನ ಸಿದ್ಧಾ ॥

ತೆರೆಯ ಮೇಲ್ತೆರೆಗಳ ತೋರುವಿಂಗಡಲಂತೆ ।
ಸಿರಿಯ ಮೇಲ್ಸಿರಿಯ ಸೂಚಿಸುವ ।
ಚರಿತಾರ್ಥ ನನ್ನಂತರಂಗದೊಳಿರು ಮನೋ- ।
ಹರನೆ ಚಿದಂಬರ ಪುರುಷಾ ॥

ಕಾಣದರ್ಥವ ಕಾಣಿಸುವ ಪರಂಜ್ಯೋತಿ ನೀ ।
ಮಾಣದೆ ನನ್ನೆದೆಯೆಂಬ ।
ಕೋಣೆಯೊಳಗಿರು ಹೋದೆಯಾದರೆ ನಿನಗೆ ನಿ- ।
ನ್ನಾಣೆ ಚಿದಂಬರ ಪುರುಷಾ ॥

ನಮ್ಮ ಮಾತು

(ಸಂಪಾದಕ ಸಮಿತಿಯಿಂದ)

ನಮ್ಮ ವಿದ್ಯಾಲಯ ಪತ್ರಿಕೆಯಾದ 'ಬೆಳಕನ್ನು' ಇಂದು ಬೆಳಕಿಗೆ ತರಲು ತುಂಬಾ ಆನಂದವಾಗುತ್ತದೆ. ಐದು ವರ್ಷಗಳ ಹಿಂದೆ ಈ ಪತ್ರಿಕೆಯು ಶ್ರೀಮಾನ್ ಬೇಂದ್ರೆಯವರ ಆಶೀರ್ವಾದದೊಡನೆ ಪ್ರಾರಂಭಿಸಲ್ಪಟ್ಟಿತು. ಇದೇ ವರುಷ ಬೇರೆಬೇರೆ ವರ್ಗಗಳ ವಿದ್ಯಾರ್ಥಿಗಳು **ನಲಿವು, ಚಿಲುಮೆ, ಗೆಲವು, ಬೆಳಗು, ಬೆಳದಿಂಗಳು, ರನ್ನಗನ್ನಡಿ** ಮುಂತಾಗಿ ಹಲವು ಪತ್ರಿಕೆಗಳನ್ನು ಹೊರಡಿಸಹತ್ತಿರುವರು. ಆವುಗಳಲ್ಲಿ ನೊಸ್ಸಿನ ನಾಡಹಬ್ಬದಲ್ಲಿ ಏರ್ಪಡಿಸಲ್ಪಟ್ಟಿದ್ದ ಕೈಬರಹದ ಪತ್ರಿಕೆಗಳ ಸ್ಪರ್ಧೆಯಲ್ಲಿ ನಮ್ಮ ಶಾಲೆಗೆಯೆ ಮೊದಲನೆಯ ಮೆಚ್ಚು ದೊರಕಿತು. ಹೀಗೆ ಕಾಲಕಾಲಕ್ಕೆ ಪ್ರಕಟವಾದ ಪತ್ರಿಕೆಗಳಲ್ಲಿಯ ಉತ್ತಮ ನೆನಿಸಿದ ಬರಹಗಳನ್ನು ಆಯ್ದು ಅಚ್ಚು ಹಾಕಿಸಬೇಕೆಂದಿದ್ದ ಮನೀಷೆಯು ಇದೀಗ ಸಫಲವಾಗುತ್ತಿದೆ. ಈ ಸಲದ ಸಂಚಿಕೆಯಲ್ಲಿ ಇನ್ನೂ ಎಷ್ಟೋ ಉತ್ತಮವಾದ ಬರಹಗಳನ್ನು ಬಿಡಬೇಕಾಗಿ ಬಂದುದಕ್ಕೆ ವಿಷಾದಿಸುತ್ತೇವೆ

ಶಾಲೆಯ ಜೀವದ ಹೂವುಗಳಂತಿರುವ ಮುದ್ದು ಮಕ್ಕಳ ಎದೆಮುಗುಳುಗಳು ಅರಳುವಂತೆಯೂ, ಶಾಲೆಯ ಅಂತಃಪ್ರಪಂಚದ ವಾತಾವರಣವು ಆವಾಗಲೂ ಆಕರ್ಷಕವಾಗುವಂತೆಯೂ ಈ ಪತ್ರಿಕೆಯನ್ನು ಇದಕ್ಕೂ ಹೆಚ್ಚಿನ ವೈವಿಧ್ಯವುಳ್ಳದನ್ನಾಗಿ ಮಾಡುವ ಹಂಬಲವಿದೆ.

ನಮ್ಮ ನಾಡಿನ ಶಿಕ್ಷಣವು ದೇಶಭಾಷಾಪ್ರಧಾನವಾಗಬೇಕೆಂದು ಶಿಕ್ಷಣ-ತಜ್ಞರೆಲ್ಲರು ಮನಗಂಡ ಮಾತನ್ನು ಕೃತಿಯಲ್ಲಿ ತರುವದು ಶಿಕ್ಷಕರಾದ ನಮ್ಮ ಕರ್ತವ್ಯವಾದುದರಿಂದ ಈ ಪತ್ರಿಕೆಯಲ್ಲಿ ದೇಶಭಾಷೆಗಳಿಗೇ ಆಗ್ರಮಯಾಗಿದೆಯನ್ನು ಕೊಟ್ಟಿದೆ. ಕನ್ನಡವು ನಮ್ಮ ಮಾತಾದುದರಿಂದ "ನಮ್ಮ ಮಾತು" ಕನ್ನಡವಾಗಿದೆ.

ಈ ಸಲ ನಮ್ಮ ಶಾಲೆಯಿಂದ ಬಿ. ಟಿ. ಅಭ್ಯಾಸಕ್ಕಾಗಿ ಶ್ರೀ ಆರ್. ಎಮ್. ಕುಲಕರ್ಣಿಯವರೂ, ಪಿ. ಟಿ ಟ್ರೇನಿಂಗಕ್ಕಾಗಿ ಶ್ರೀ ಆರ್. ಎಸ್. ಕೇಳ್ಕರರವರೂ ಹೋಗಿದ್ದಾರೆ. ಈರ್ವರು ವಿಜಯಿಗಳಾಗಿ ಬರಲೆಂದು ಹಾರೈಸುತ್ತೇವೆ.

ಈ ಪತ್ರಿಕೆಯನ್ನು ಅಚ್ಚು ಹಾಕಿಸಿ ಬೆಳಕಿಗೆ ತರಲು ನಮಗೆ ಸ್ಫೂರ್ತಿಯಿತ್ತ, ನಮ್ಮ ಶಾಲೆಯ ಮುಖ್ಯಾಧ್ಯಾಪಕರೂ ಮತ್ತು ಶಾಲೆಯ ಸರ್ವತೋಮುಖ ಶ್ರೇಯಸ್ಸಿಗೆ ಕಾರಣರಾದವರೂ ಆದ ಶ್ರೀಮಾನ್ **ಕೊಣ್ಣೂರ ಹಣಮಂತರಾಯರಿಗೆ** ನಮ್ಮ ವಂದನೆಗಳು. ಅವರು 'ಎಳೆಯರಾಗುವಾ....' ಎಂಬ ತಮ್ಮ ಪದ್ಯದಿಂದ ಬಾಲಕರನ್ನು ಹರಸಿದ್ದಾರೆ.

ನಮ್ಮ ಈ ಕೆಲಸದಲ್ಲಿ ನೆರವನ್ನಿತ್ತ ಶಿಕ್ಷಕ ವರ್ಗಕ್ಕೂ ಮತ್ತು ಅತಿ ಸ್ವ
ವೇಳೆಯಲ್ಲಿ ಅಂದವಾಗಿ ಅಚ್ಚುಹಾಕಿಕೊಟ್ಟ ರಾಧಾ ಪ್ರಿಂಟಿಂಗ ಪೆಸ್ಸಿನ ಒಡೆಯ
ರಿಗೂ ಧನ್ಯವಾದಗಳು.



ಈ ವರುಷದಲ್ಲಿ ಶಾಲೆಯು ಇಬ್ಬರು ಬಾಲಕರಿಗಾಗಿ ಕಂಬ
ಗರೆಯುವ ದುರ್ದೈವಿಗಳು ನಾವಾಗಿದ್ದೇವೆ. ೧ನೇ ವರ್ಗ
ಕುಮಾರ ಕೃಷ್ಣಕುಮಾರ ಓದುತಾ ಈತನೂ, ೬ನೇ ವರ್ಗ
ಕುಮಾರ ಬಬಲೇಶ್ವರ ಎಸ್. ಸಿ. ಈತನೂ ಅಕಾಲದಲ್ಲಿ ಕಾಲ
ದವಡೆಗೆ ತುತ್ತಾದುದು ನಮ್ಮೆಲ್ಲರ ದುರ್ಭಾಗ್ಯವಾಗಿದೆ. ಜಗದ ತಂದೆ
ಮಕ್ಕಳ ಮುದ್ದು ಆತ್ಮಗಳಿಗೆ ಶಾಂತಿಯನ್ನೀಯಲಿ.

ಒಳನುಡಿ

ವಿಶ್ರಾಂತವಾಳದಲಿ ಝಳಪಿಸುವ ಕೋಲ್ಮಿಂಚು
ಕಾಮೋಡದುದರವನು ಭೇದಿಸುತೆ ಬರಬೇಕು;
ತಿಳಿನೀರ ತೊರೆಯಾಗಿ ವಿಸ್ತರದಿ ಪರಿವ ಹೊಳೆ
ಗಿರಿಕಂದರಂಗಳೊಳು ಎಡವುತಡಿಯಿಡಬೇಕು;
ಪರಿಮಳವನೆಲ್ಲೆಡೆಗೆ ಬೀರಲೆಂದಿಹ ಸುಮನ
ನೆಲದ ಒಸರೊಳಗಿದ್ದು ಗಂಧವೆಡೆಯಲಿಬೇಕು;
ಕಮನೀಯಕಾಂತಿಯನು ತಳೆಯಲೆಂದಿಹ ಮುತ್ತು
ಮುನ್ನೀರನಾಳದಲಿ ತಿಳಿಯದಂತಿರಬೇಕು.

ಬಾಳುವೆಯ ಕಳ್ತಲೆಯು ಜೀವನಾವರಿಸಿರಲು
ಜೀವನದ ಗೊತ್ತುಗುರಿ ಕಾಣದಂತಾಗಿರಲು
ನಡೆವಪಥವದು ಮತ್ತೆ ಗಡಚುಗಡಚಾಗಿರಲು
ಜ್ಞಾನಜ್ಯೋತಿಯು ಬೆಳಗಿ ದಾರಿದೋರಲು ಮುಂದೆ
ಎಡರುಗಳಸಮ್ಮಥನದಿಂ ಕಿಡಿಯು ಮೂಡುವರೆ
ಅರರಿಯದಿಹಜಗದಿ ಕಡುತವಿಸುತಿರಬೇಕು.

— ಗುಂಡಪ್ಪ

ಎಳೆಯರಾಗುವಾ !

ರಾಮದಾಸ.

ಎಳೆಯರಾಗುವಾ, ನಾವು ಗೆಳೆಯರಾಗುವಾ !

ಚಿಕ್ಕ ಚಿಕ್ಕ ಗೆಳೆಯರಿಲ್ಲ
ಮಿಕ್ಕ ಮಾತುಗಳನು ಮರೆತು
ಅಕ್ಕರೆಂಬ ಗುಡಿಯ ಕಟ್ಟಿ
ಐಕ್ಯವೆಂಬ ಶಿಖರವಿಡುತ

ಎಳೆಯರಾಗುವಾ, ನಾವು ಗೆಳೆಯರಾಗುವಾ !

ಭವದ ಯಾತ್ರೆಯಲ್ಲಿ ಭ್ರಮಿಸಿ
ಭವಣಿಗೊಂಡು ಬಳಲುತಿರುವ
ಭುವನ ಜನಕೆ ದಾರಿ-ದೀಪ
ಧ್ರುವರು ಆಗಿ ಬೆಳಗುತಿರುವ

ಎಳೆಯರಾಗುವಾ, ನಾವು ಗೆಳೆಯರಾಗುವಾ !

ನಾಡಹಬ್ಬ

ಲೇ:- ಕೊಡಗಲಿ ನಾರಾಯಣ(ಳ

ನಾಡಹಬ್ಬವು ಪೂರ್ವಕಾಲದಲ್ಲಿ ವಿಜಯನಗರ ಸಾಮ್ರಾಜದಲ್ಲಿ ಹರ ವಿದ್ಯಾರಣ್ಯರ ಕಾಲದಿಂದ ರೂಢಿಪ್ರಾಪ್ತವಾಯಿತು. ಅವರು ನವರಾ ಯಲ್ಲಿ ಸಜ್ಜನ, ಗಾಯಕ, ಮೊದಲಾದವರ ಸಂಗಡ ಈ ವೇಳೆಯನ ಕಳೆಯುತ್ತಿದ್ದರು. ದುರ್ಗಾಷ್ಟಮಿಯದಿವಸ ಮಲ್ಲರ ಕುಸ್ತಿಗಳು ಜರಗುತ್ತಿದ್ದ ಮಹಾನವಮಿಯ ದಿವಸ ಶಸ್ತ್ರಾಸ್ತ್ರ ಪೂಜೆಯನ್ನು ಮಾಡಿ ದಸರೆಯ ದಿವ ವಿಜಯ ಯಾತ್ರೆಗೆ ಹೊರಡುವರು. ಅದ್ದರಿಂದ ಈಗ್ಗೆ ದಸರೆಯ ದಿವಸ ಕು ರೆಯ ಮೇಲೆ ಕುಳಿತುಕೊಂಡು ಬನ್ನಿಯ ಗಿಡಕ್ಕೆ ಹೋಗುವರು. ಆ ಗಿಡದ ಯಲ್ಲಿ ಪೂರ್ವಕಾಲದಲ್ಲಿ ಶಸ್ತ್ರಾಸ್ತ್ರಗಳನ್ನು ಪೂಜಿಸುತ್ತಿದ್ದರು. ಅದ್ದರಿಂದ ಈ ದರೂ ಕತ್ತಿ, ಬಂದೂಕುಗಳನ್ನು ಇಟ್ಟು ಅಲ್ಲಿ ಪೂಜೆಮಾಡಿ ಬರುವರು. ಇ ಪೂರ್ವಕಾಲದಿಂದ ನಡೆದು ಬಂದ ಪದ್ಧತಿಯು. ಮಹಾರಾಷ್ಟ್ರದಲ್ಲಿ ಗಣಪತಿಯ ಕುಲದೇವರು. ಆದ್ದರಿಂದ ಟಿಳಕರವರು ಸಾರ್ವಜನಿಕ ಗಣಪತಿಯನ್ನು ಪೂ ಜೆಯನ್ನು ಸುರುಮಾಡಿದರು. ಕರ್ನಾಟಕದಲ್ಲಿ ಬಹುಶಃ ಹೆಣ್ಣು ದೇವತೆಯ ಕುಲದೇವತೆ ಇರುವದರಿಂದ ಈ ಸಮಯದಲ್ಲಿ ಕುಲದೇವತೆಯನ್ನು ಪೂಜೆಮ ಡಲು ಸುರುಮಾಡಿದರು. ಸುಮಾರು ೧೦-೧೫ ವರ್ಷಗಳ ಪೂರ್ವದಲ್ಲಿ ಬೇಂ ಮೊದಲಾದವರು ನಾಡದೇವಿಯನ್ನೇ ಪೂಜೆಮಾಡಲು ಸುರುಮಾಡಿದರು. ನಿಂದ ಇದಕ್ಕೆ ನಾಡಹಬ್ಬವೆಂಬ-ಹೆಸರು ಪ್ರಾಪ್ತವಾಯಿತು.

ಇದು ನವರಾತ್ರಿಯಲ್ಲಿ ಜರಗುತ್ತಿದೆ. ಈ ಹಬ್ಬದಲ್ಲಿ ಎಷ್ಟೊ ಜಿದ್ದುಗಳೂ, ಸಾಲೆಯ ಸಣ್ಣ ಸಣ್ಣ ಬಾಲಕರ ಆಟ, ವ್ಯಾಯಾಮ, ಗಾಯ ಮೊದಲಾದವುಗಳೂ ಜರಗುತ್ತವೆ. ಈ ಹಬ್ಬದಲ್ಲಿ ಮುಂಜಾವಿನ ಸಮಯದ ನಾಡದೇವಿಯ ಸ್ತೋತ್ರಮಾಡಿ ಆಟಗಳನ್ನು ನೋಡಿ ಜನರು ಊಟಮಾ ಆನಂದದಿಂದ ತಿರುಗಾಡುವರು. ಇದರಲ್ಲಿ ಜಾತಿಯ ಭೇದವು ಇರುವದಿಲ್ಲ ಜನರೂ ಕೂಡಿ ನಾಡದೇವಿಯ ಸ್ತೋತ್ರ ಮಾಡುವರು.

ಇದರಂತೆಯೇ ಬಂಗಾಲದ ಜನರೂ ನಾಡದೇವಿಯನ್ನು ಸುತ್ತಾರೆ.

ಹುಟ್ಟಿದ ದಿನದ ಪತ್ರ

(ಜವಾಹರರ ''ಜಗಚ್ಚರಿತ್ರೆಯ ಚಿತ್ರಗಳು'' ಎಂಬ ಪುಸ್ತಕದೊಳಗಿನ ಪ್ರಥಮ ಪತ್ರ.
—ಅನುವಾದಕ : ನರೇಗಲ್ಲ.)

ಂದಿರಾ ಪ್ರಿಯದರ್ಶಿನಿಗೆ.

ಸೆಂಟ್ರಲ್ ಪ್ರಿಝನ್, ನೈನಿ. (೨೬-೧೦-೧೯೩೦)

ನಿನ್ನ ಹುಟ್ಟಿದ ದಿನದ ನಿಮಿತ್ತವಾಗಿ ನಿನ್ನವರು ನಿನಗೆ ಕಾಣಿಕೆಗಳನ್ನು,
ಭೇಚ್ಛೆ ಇಲ್ಲವೆ ಆಶಿರ್ವಾದಗಳನ್ನು ಕಳಿಸುವದುಂಟು; ಆದರೆ ನಾನು ನೈನಿ ಸೆರೆ
ನೆಯಿಂದ ಯಾವ ಕಾಣಿಕೆಯನ್ನು ಕಳಿಸಿ ಕೊಡಲಿ? ನನ್ನ ಕಾಣಿಕೆಗಳು ಪ್ರಾ-
ಂಚಿಕ ಅಥವಾ ಘನೀಭೂತ ಸ್ವರೂಪವುಳ್ಳವುಗಳಾಗಲಾರವು. ದೇವಲೋಕದ
ಂಗಲ ಕನ್ನಿಕೆಯೊಬ್ಬಳು ತಾನೇ ತಂದು ನಿನಗೆ ಕೊಡಬಹುದಾದ ಆಂತ:ಕರಣ
ತ್ತು ಆತ್ಮ ಪ್ರಪಂಚಕ್ಕೆ ಸಂಬಂಧಿಸಿದ ಆಕಾಶ ಲೋಕದ ಆಸ್ತಿಗಳು ಮಾತ್ರ
ನ್ನ ಕಾಣಿಕೆಗಳು ಆಗಬಲ್ಲವು. ಇಂಥವುಗಳನ್ನು ಸೆರೆಮನೆಯ ಎಷ್ಟೆತ್ತರ
ೋಡೆಗಳೂ ಅಡ್ಡಗಟ್ಟಿ ತಡೆದು ನಿಲ್ಲಿಸಲಾರವು.

ರಾಷ್ಟ್ರಗಳ ಜೀವನದಲ್ಲಿ ಉಂಟಾದ ಮಹತ್ವದ ಕಾಲಾವಧಿಗಳ ಬಗ್ಗೆ
ೀನು ನಿನ್ನ ಇತಿಹಾಸದ ಪುಸ್ತಕಗಳಲ್ಲಿ ಓದುತ್ತೀಯಷ್ಟೆ ! ಮಹಾ ಪುರುಷರ
ತ್ತು ಸ್ತ್ರೀಯರ ಸಂಬಂಧವಾಗಿಯೂ ಅವರು ಮಾಡಿದ ಮಹತ್ಕಾರ್ಯಗಳ
ಂಬಂಧವಾಗಿಯೂ ನಾವು ಓದುತ್ತೇವೆ. ಪುರಾತನ ಕಾಲದ ನಾಯಕ ಮತ್ತು
ಾಯಕಿಯರಂತೆ ನಾವೂ ವೀರ ಕಾರ್ಯಗಳನ್ನು ಆಗ ಮಾಡಿರಬೇಕೆಂದು ನಮ್ಮ
ಪ್ನ ಮತ್ತು ಮನ:ಸಂಭ್ರಮಗಳ ಕಲ್ಪನಾರಾಜ್ಯದಲ್ಲಿ ಎಷ್ಟೋಸಾರೆ ನಾವು
ೋಲಾಡುತ್ತೇವೆ. ಜೆನ್ ಆಫ್ ಆರ್ಕ್‌ಳ ಕಥೆಯನ್ನು ಮೊದಲುಸಾರೆ ಓದಿದಾಗ
ದೆಷ್ಟುನಿನಗೆ ಮನೋಹರವೆನಿಸಿತೆಂಬುದೂ ಹಾಗು ಆಕೆಯಂತೆಯೇ ಏನಾದರೂ
ಾಡಬೇಕೆಂಬ ಮಹತ್ವಾಕಾಂಕ್ಷೆಯು ನಿನ್ನಲ್ಲಿ ಉಂಟಾಯಿತೆಂಬುದೂ ನಿನ್ನ
ನಪಿಗೆ ಬರುತ್ತದೆಯೇ? ಸರ್ವಸಾಧಾರಣ ಸ್ತ್ರೀ-ಪುರುಷರು ಸಾಮಾನ್ಯ
ಾಗಿ ಶೂರರಾಗಿರುವದಿಲ್ಲ. ಅವರು ತಮ್ಮ ಹೊಟ್ಟೆ-ಒಟ್ಟೆ, ಮಕ್ಕಳು-ಮರಿ, ಹೊಲ,
ನೆ ಮುಂತಾದ ಕೇವಲ ತಮ್ಮ ಕೌಟುಂಬಿಕ ತೊಂದರೆಗಳಬಗ್ಗೆಯೇ ಆಲೋಚಿ
ುತ್ತಾರೆ. ಆದರೆ ಜನಾಂಗಕ್ಕೆ ಜನಾಂಗವೇ ಒಂದು ಮಹತ್ಕಾರ್ಯಕ್ಕಾಗಿ ಸಂಪೂ
ರ್ಣ ಶ್ರದ್ಧೆಯೊಡನೆ ಚೇತರಿಸಿಕೊಂಡು ಎದ್ದೇಳುವ ಕಾಲವೂ ಒಮ್ಮೆ ಒದಗಿ

ಬರುವದುಂಟು; ಆಗ್ಗೆ ಸರಳ ವೃತ್ತಿಯು ಸಾಮಾನ್ಯ ಸ್ತ್ರೀಪುರುಷರೂ ವಿಭು
ಗಳಾಗಿ ಪರಿಣಮಿಸಿ, ಚರಿತ್ರೆಯೆಲ್ಲವೂ ಚೈತನ್ಯಮಯವಾಗಿ ಯುಗಾಂತರವಾ
ಬಿಡುವದು. ಮಹಾನಾಯಕರಲ್ಲಿ ಸಮಗ್ರ ಜನಾಂಗಕ್ಕೇನೇ ಸ್ಫೂರ್ತಿಕೊಟ
ಅದರಿಂದ ಮಹತ್ಕಾರ್ಯಗಳನ್ನು ಮಾಡಹಚ್ಚುವ ಯಾವದೋ ಒಂದು ಪ್ರೇ
ಪಕ ಶಕ್ತಿಯುಂಟು.

ನೀನು ಹುಟ್ಟಿದ ೧೯೧೯ನೆ ಇಸ್ವಿಯು ಇತಿಹಾಸದಲ್ಲಿ ಅತ್ಯಂತ ಮಹತ್ವ
ವರ್ಷಗಳಲ್ಲೊಂದಾಗಿದೆ.ಆ ಕಾಲಕ್ಕೇನೇ ದೀನರ ದುಃಖಗಳಿಗಾಗಿ ಪ್ರೀತಿಸಹಾ
ಭೂತಿಗಳಿಂದ ತುಂಬಿದ ಅಂತಃಕರಣವುಳ್ಳ ಮಹಾನಾಯಕನೊಬ್ಬನು, ತ
ದೇಶೀಯರಿಂದ ಚರಿತ್ರೆಯಲ್ಲಿ ಎಂದುಮರೆಯದ ಒಂದು ಧಿರೋದಾತ್ತಮನ್ವಂತ
ವನ್ನೇ ಉಂಟು ಮಾಡಿಸಿ ಬಿಟ್ಟನು. ನೀನು ಹುಟ್ಟಿದ ತಿಂಗಳಲ್ಲಿಯೇ ಲೆನಿನ್ನ
ತನ್ನ ಮಹಾಕ್ರಾಂತಿಯನ್ನು ಪ್ರಾರಂಭಿಸಿ ರಸಿಯ ಮತ್ತು ಸೈಬೇರಿಯಾ
ಭೂಪ್ರದೇಶದ ಮುಖವನ್ನೇ ಬದಲಿಸಿ ಬಿಟ್ಟನು. ಮತ್ತು ಇಂದು ಹಿಂದುಸ್ಥಾ
ದಲ್ಲಿಕೂಡ ದುಃಖಿತರಾದವರೆಲ್ಲರಿಗಾಗಿಯೂ ಪ್ರೀತಿಯುಳ್ಳವನಾಗಿ ಅವರಿಗೆ ಸಹ
ಯ ಮಾಡಬೇಕೆಂಬ ಉನ್ಮಾದಮಯ ಉತ್ಕಂಠತೆಯುಳ್ಳ ಮತ್ತೊಬ್ಬ ಮಹ
ನಾಯಕನು ತನ್ನ ದೇಶ ಬಾಂಧವರು ಪುನಃ ಸ್ವತಂತ್ರರಾಗಿ ಹೊಟ್ಟೆಗಿಲ್ಲದವರೇ
ದರಿದ್ರರೂ ತಮ್ಮ ದುಃಖಗಳನ್ನು ನಿವಾರಿಸಿಕೊಳ್ಳಬೇಕೆಂಬುದಾಗಿ ತ
ತೇಜೋಬಲದಿಂದ ತನ್ನ ಜನತೆಯಲ್ಲಿ ಅದ್ಭುತ ಸಾಹಸ ಶಕ್ತಿಯನ್ನೂ ಉದಾ
ಒಲಿದಾನ ಪ್ರವೃತ್ತಿಯನ್ನೂ ಪ್ರೇರಿಸಿರುವನು. ಆ ಬಾಪೂಜಿಯು ಕಾರಾಗೃಹ
ಕತ್ತಲೆಯಲ್ಲಿ ಕುಳಿತಿದ್ದಾರೆ! ಆದರೆ ಅವರ ಸಂದೇಶದ ಮಂತ್ರಬಲವು ಭಾರ
ವಷ೯ದ ಕೋಟ್ಯಾವಧಿ ಜನರ ಅಂತಃಕರಣಗಳನ್ನು ಗಡಬಡಿಸಿ ಬಿಡುತ್ತ
ಗಂಡಸರೂ ಹೆಂಗಸರೂ ಚಿಕ್ಕಮಕ್ಕಳೂ ಕೂಡ ಸಂದಿಗೊಂದಿಗಳಿಂದ ಹೊರಬಿದ
ಬಂದು ಭಾರತ ಸ್ವಾತಂತ್ರ್ಯದ ಸೈನಿಕರಾಗಹತ್ತಿದ್ದಾರೆ. ಹಿಂದುಸ್ಥಾನದಲ್ಲಿ ನಾ
ಹೊಸ ಇತಿಹಾಸವನ್ನೇ ಉಂಟು ಮಾಡುತ್ತಿದ್ದೇವೆ. ಇದೆಲ್ಲವು ನಮ್ಮ ಕಣ್ಣು
ದೆಯೇ ನಡೆಯುತ್ತಿರುವದನ್ನು ನೋಡುವ ಎತ್ತು ಈ ಮಹಾ ನಾಟಕದಲ್ಲಿ ನಾ
ಕೆಲವೊಂದು ಪಾತ್ರವನ್ನು ವಹಿಸುವ ಭಾಗ್ಯವು ನಿನಗೂ ನನಗೂ ಲಭಿಸಿರುತ್ತ

ಈ ದೊಡ್ಡ ಚಳವಳಿಯಲ್ಲಿ ನಾವು ಹೇಗೆ ನಡೆದುಕೊಳ್ಳಬೇಕು? ಅ
ಲ್ಲಿ ನಾವು ಯಾವ ಭಾಗವನ್ನು ವಹಿಸಬೇಕು? ನಮ್ಮಪಾಲಿಗೆ ಯಾವಭಾಗ ಬರು
ದೆಂಬುದನ್ನು ನಾನು ಹೇಳಲಾರೆ. ಅದೇನೇ ಆಗಲಿ, ನಮ್ಮ ಕಾರ್ಯಕ್ಕೆ ಅ
ಕೀರ್ತಿಯನ್ನಾಗಲಿ ನಮ್ಮ ಜನಾಂಗಕ್ಕೆ ಅಪಮಾನವನ್ನಾಗಲಿ ತರಬಹುದಾದಂ

ಕರ್ನಾಟಕ ವಿದ್ಯಾವರ್ಧಕ ಸಂಘ

ಯಾವ ಕೆಲಸವನ್ನೂ ನಾವು ಮಾಡೋಣಬೇಡ. ಹಿಂದ ದೇಶದ ಸ್ವಾತಂತ್ರ್ಯದ
ಯನಿಕರು ನಾವಾಗುವದಾದರೆ ಈ ದೇಶದ ಮಾನವನ್ನು ನಾವು ಕಾಯಬೇಕಾಗು
ದು. ಮಾನವೆಂಬುದು ಪವಿತ್ರವಾದ ವಿಶ್ವಾಸನಿಧಿ (Trust) ಯಾಗಿರು
ದು. ಏನುಮಾಡಬೇಕೆಂಬ ಬಗ್ಗೆ ಎಷ್ಟೋಸಾರೆನಾವು ಸಂಶಯಪಡಲ್ಲಿ ಜೀವವೆವು.
ನಗೆ ಸಂಶಯವು ಬಂದಾಗೆಲ್ಲ ಸಣ್ಣದೊಂದು ಒರೆಯನ್ನು ಹಚ್ಚಿ ನೋಡಲು
ನೀಗ ಹೇಳುತ್ತೇನೆ. ಗುಪ್ತವಾಗಿಯಾಗಲಿ ಕದ್ದುಮುಚ್ಚಿಯಾಗಲಿ ಯಾವದನ್ನೂ
ಮಾಡಬೇಡ. ಮುಚ್ಚಿಡಬೇಕೆಂದು ನೀನಿಚ್ಛಿಸಿದರೆ ನೀನು ಹೆದರುತ್ತೀ ಎಂದರ್ಥ
ಾಗುವದು. ಹೆದರಿಕೆಯೆಂಬದು ಕೆಟ್ಟ ವಸ್ತುವಾಗಿದ್ದು ನಿನಗದು ಶೋಭಿಸುವ
ಲ್ಲ. ನೀನು ಧೀರಳಾಗಬೇಕು; ಅಂದರೆ ಉಳಿದದ್ದೆಲ್ಲವೂ ತಾನೇ ಹಿಂಬಾಲಿಸು
ದು. ನಿನ್ನಲ್ಲಿ ಧೈರ್ಯವಿತ್ತೆಂದರೆ ನೀನು ಅಂಜುವದಿಲ್ಲ. ನಿನಗೆ ನಾಚಿಕೆ ಬರು
ವಂತಹವನ್ನಾವುದನ್ನು ನೀನು ಮಾಡುವದಿಲ್ಲ. ಬಾಪೂಜಿಯವರ ನೇತೃತ್ವದಲ್ಲಿ
ಡೆದ ನಮ್ಮ ಈ ಸ್ವಾತಂತ್ರ್ಯದ ದೊಡ್ಡ ಚಳವಳಿಯಲ್ಲಿ ಮುಚ್ಚಿಗಾಗಲಿ ಮರೆ
ಾಗಲಿ ಅವಕಾಶವೆ ಇಲ್ಲವೆಂಬದನ್ನು ನೀನು ಬಲ್ಲೆ. ಮುಚ್ಚಿಡುವಂತಹದು
ಮ್ಮಲ್ಲೇನೂ ಇಲ್ಲ. ಯಾವುದನ್ನೂ ನಾವು ಅಂಜಿ ಮಾಡುತ್ತಿಲ್ಲ, ಅಳುಕಿ
ಡುತ್ತಿಲ್ಲ. ಹಗಲಿನೆಲ್ಲಿಯೇ ಬೆಳಕಿನಲ್ಲಿಯೇ ನಾವು ಕೆಲಸ ಮಾಡುತ್ತೇವೆ. ಆದ
ಂತೆಯೇ ನಮ್ಮ ವೈಯಕ್ತಿಕ ಜೀವನದಲ್ಲಿ ಕೂಡ ಹಗಲಿನೊಡನೆ ನಾವು ಗೆಳೆ
ನ ಮಾಡಿ ಬೆಳಕಿನಲ್ಲಿಯೇ ಕೆಲಸ ಮಾಡಬೇಕಲ್ಲದೆ ಮುಚ್ಚು ಮರೆಯಲ್ಲಿ
ಂಜುತ್ತಂಜುತ್ತ ಯಾವದನ್ನೂ ನಾವು ಮಾಡಬಾರದು. ಏಕಾಂತದಲ್ಲಿ ನಾವಿರ
ಹುದು; ಏಕಂದರೆ ಏಕಾಂತವೆಂಬದು ಎಲ್ಲರಿಗೂ ಬೇಕೆಬೇಕು. ಆದರೆ
ಏಕಾಂತವು ಬೇರೆ; ಮುಚ್ಚುಮರೆಯು ಬೇರೆ. ಹೀಗೆ ನೀನು ಮಾಡಿದ್ದಾದರೆ ಏನು
ಂದರೂ ನಿರ್ಭೀತಳೂ ನಿಶ್ಚಲಳೂ ಗಂಭೀರಳೂ ನೀನಾಗಿ ಬೆಳಕಿನ ಮಗುವು
ೀನಾಗುವೆ.

ನಿನಗೆ ನಾನು ಅತಿ ಉದ್ದ ಪತ್ರವನ್ನು ಬರೆದಂತಾಯಿತು; ಆದರೂ
ನಿನಗೆ ಹೇಳಬೇಕೆನ್ನುವದು ಇನ್ನೂ ಎಷ್ಟೋ ಉಂಟು. ಪತ್ರದಲ್ಲಿ ಅದನ್ನೆಲ್ಲವನ್ನು
ೀಗೆ ಬರೆಯಲಿ?

ನಮ್ಮ ದೇಶದಲ್ಲಿ ನಡೆದ ಸ್ವಾತಂತ್ರ್ಯದ ಸಂಗ್ರಾಮದಲ್ಲಿ ನೀನು ಸಾಕ್ಷಿಯಾ
ಿರುವೆಯೆಂದು ಈಮೊದಲೇ ಹೇಳಿದ್ದೇನಷ್ಟೆ! ಆ ಅಗಾಧ ವೀರನಾರೀಮಣಿಯ
ಕೂಟ್ಟಿಯಲ್ಲಿ ನೀನು ಹುಟ್ಟಿರುವರಿಂದ ನೀನು ಬಹಳೇ ಭಾಗ್ಯಶಾಲಿಯಾಗಿರುವೆ.
ಂದಾದರೂ ನಿನಗೆ ಸಂಶಯವಾಗಲಿ ತೊಂದರೆಯಾಗಲಿ ಬಂದರೆ ಅಕೆಗಿಂತ
ಹೆಚ್ಚಿನ ಮಿತ್ರಳು ನಿನಗೆ ಯಾರೂ ಸಿಗಲಿಕ್ಕಿಲ್ಲ.

ನನ್ನ ಕಂದಾ ಮತ್ತೆ ಬರುವೆನು. ಹಿಂದುದೇಶದ ಸೇವೆಯೊಳಗಿನ ಸೈನಿಕಳಾಗಿ ಆಯುಷ್ಮಂತಳಾಗು.

ನನ್ನೆಲ್ಲ ಪ್ರೀತಿ ಆಶೀರ್ವಾದಗಳೂ ನಿನಗಾಗಿ ಇರುವವು.

ಜವಾಹರಲಾಲ ನೆಹ

ಭಾರತದ ಕ್ರಾಂತಿಕಾರಕ ಪುರುಷ

ಮಹಾತ್ಮಾ ಗಾಂಧಿ.

ಲೇಖಕ:- ಆದ್ಯ ರಾಘು (೪

ಯಾರೋ? ಆ ಮುದುಕರು? ಭಾರತಕ್ಕೆ ಸ್ವಾತಂತ್ರ್ಯವ ಕೊಡಿಸುವದಕ್ಕೆ ಎಷ್ಟು ಕಷ್ಟಪಡುತ್ತಿದ್ದಾರೆ! ತಮ್ಮ ಮನೆಮಾರುಗಳ ತೊರೆದು ಎಲ್ಲ ಭಾರತೀಯರ ಸ್ವಾತಂತ್ರ್ಯಕ್ಕಾಗಿ ಹೆಣಗುತ್ತಿದ್ದಾರೆ. ಮನೆ ಪ್ರಪಂಚವನ್ನು ಬಿಟ್ಟು ಸನ್ಯಾಸಿಗಳಂತೆ ತಿರುಗುತ್ತಿದ್ದಾರೆ. ಇಷ್ಟಾದರೂ ಅ ಭಾರತೀಯರಿಗೆ ಪೂಜ್ಯರಾಗಿದ್ದಾರೆ. ಈಗ್ಗೆ ಅವರಿಗೆ ಸುಮಾರು ೭೧ ವ ಇಷ್ಟು ಮುಪ್ಪಿನಿಂದ ಹೆಣ್ಣಾದರೂ ತಾಯಿ ನಾಡಿಗೆ ಸೇವೆ ಸಲ್ಲಿಸುವದ ಬಿಟ್ಟಿಲ್ಲ. ಇವರು ಹರಿಜನೋದ್ಧಾರದಲ್ಲಿ ತೊಡಗಿದಾಗ ಇವರಿಗೆ ಎಷ್ಟೋ ಚಣಿಗಳು ಒದಗಿದರೂ ಇವರು ಕೊನೆಗೆ ವಿಜಯಿಗಳಾದರು. ೧೯೨೯ ರ ೧೯೩೩ ರ ವರೆಗೆ ಹಿಂದುಸ್ತಾನದಲ್ಲಿ ನಡೆದ ಚಳವಳಿಯ ಕಾರಣವು ಎಲ್ಲರಿ ಗೊತ್ತಿದೆ. ಆಗ್ಗೆ ಭಾರತೀಯರು ವಿಜಯಿಗಳಾಗಿ ಕೆಲವು ಹಕ್ಕುಗಳನ್ನು ಮಾ ಸಂಪಾದಿಸಿದರು. ಈ ಚಳವಳಿಯನ್ನು ಮುಂದೆ ನಡೆಯಿಸಿದವರು ಈ ಮು ಕರೇ. ಇಂಥ ಮುದುಕರು ಭಾರತೀಯರಿಗೆ ದೊರಕಿದ್ದು ಸುದೈವವೇ ಸರಿ. ಇ ಮಗನನ್ನು ಹೆತ್ತ ಭೂದೇವಿಯೇ ಧನ್ಯಳು. ಈ ಪ್ರಕಾರ ಸೇವೆಯನ್ನ ತಾಯಿನಾಡಿಗೆ ಸಲ್ಲಿಸಿ ಧರ್ಮಭೇದಗಳನ್ನು ಕಿತ್ತೊಗೆದು ಎಲ್ಲ ಧರ್ಮಗಳ ಅಹಿಂಸೆಯೇ ಉತ್ತಮವಾದ ಧರ್ಮವೆಂದೂ, ಶಾಂತಿಯಿಂದಲೇ ಗೆಲವು ಎಂದ ಅನ್ನುತ್ತಿರುವ ಆ ಮುದುಕರು ಯಾರು ಗೊತ್ತೇ? ಮಹಾತ್ಮಾ ಗಾಂಧಿ ಎಂದು ಕರೆಯಲ್ಪಡುವ ಮೋಹನದಾಸ ಕರಮಚಂದ ಗಾಂಧಿಯವರು!

——

ಚೆಲುವು

(ಶನೆಯು ಬ ವರ್ಗದವರು ನಡೆಯಿಸುತ್ತಿರುವ "ಚೆಲುವು" ಎಂಬ ಪತ್ರಿಕೆಗಾಗಿ ಬರೆದ ಶುಭಚಿಂತನೆ.)

ಮಹಾ ಕವಿ ಪಂಪನು ತನ್ನ ಇಷ್ಟ ದೈವತವಾದ ಶ್ರೀ ಜಿನನನ್ನು ತಿಸುವಾಗ ದೇವತ್ವದ ಎಡೆಯೆಲ್ಲಿ ಎಂಬ ಪ್ರಶ್ನೆಗೆ ಹೀಗೆ ಉತ್ತರವಿತ್ತಿದ್ದಾನೆ.

ತನ್ನಿರ್ದೆಡೆಯದೆ ಮೇರುವಿ-
ನುನ್ನತಿ, ಜಳನಿಧಿಯ ಗುಣ್ಪು ನಭದ ವಿಭುತ್ವಂ |
ನಿನ್ನ ಗುಣೋನ್ನತಿ ಸಕಳ ಜ-
ಗನ್ನುತ ಭುವನಾಂತರಾಳಮಂ ಪರ್ಬಿರ್ಕುಂ

ವನದ ಅಂತರಾಳದಲ್ಲಿ ಆತನ ಗುಣೋನ್ನತಿ ಹಬ್ಬಿದೆಯೆಂದು ಹೇಳುತ್ತಾನೆ. ಮಾತನ್ನೆ ಶ್ರೀಕೃಷ್ಣನು ಗೀತೆಯಲ್ಲಿ ಕೆಳಗಿನಂತೆ ಹೇಳಿದ್ದಾನೆ.

ಯದ್‌ಯದ್ ವಿಭೂತಿ ಮತ್‌ಸತ್ತ್ವಂ ಶ್ರೀಮದ್ ಊರ್ಜಿತಮೇವ ವಾ|
ತತ್ತದೇವಾವಗಚ್ಛ ತ್ವಂ ಮಮ ತೇಜೋಂಶಸಂಭವಮ್.

ಲ್ಲಿ ಸೌಂದರ್ಯವುಂಟೋ ಎಲ್ಲೆಲ್ಲಿ ಉನ್ನತಿಯುಂಟೋ ಅಲ್ಲಲ್ಲಿ ತನ್ನ ತೇಜೋಂಶ ಟೆಂದೂ ಅದೇ ವಿಭೂತಿ ಮತ್‌ಸತ್ತ್ವವೆಂದೂ ಉಸುರಿದ್ದಾನೆ. ಕನ್ನಡಿಗರು ದೇ ಒಂದು ಬೀಜ ಶಬ್ದದಿಂದ 'ಚೆನ್ನಮಲ್ಲ'ನೆಂದು ಹೇಳುತ್ತಾರೆ. ಚೆನ್ನನಾದ ು ಮಲ್ಲನಿರಲೇಬೇಕು. "ಚೆನ್ನ ಮಲ್ಲಿಕಾರ್ಜುನನು" ಕನ್ನಡಿಗರ ಕುಲದೈವ ೃ. "ಚೆನ್ನಕೇಶವನು" ಕನ್ನಡಿಗರ ಆರಾಧ್ಯದೈವತವು. ಯೌವನವು ಂದರ್ಯದಿಂದಲೂ ಸತ್ತ್ವದಿಂದಲೂ ಕೂಡಿಕೊಂಡಿದೆ. ರತ್ನಾಕರವರ್ಣಿಯು ವನನ್ನು "ಚೆಲುವರ ಚೆಲ್ವ, ಚಿನ್ನಿಗರ ಚೆನ್ನ, ಸುವೀರರ ವೀರ, ಸತ್ಕಲಾಧರರ ಾಪ, ಬಲ್ಲಿದರ ಬಲ್ಲಹ" ನೆಂದು ಹೊಗಳುತ್ತಾನೆ.

ಚೆಲುವು ಬಲುಹಿನೊಂದೊಡಗೂಡಿದೆ. ಚೆಲುವಿದ್ದಲ್ಲಿ ನಲಿವು ಉ
ರತ್ನಾಕರವರ್ಣಯು

" ತೆರೆಯಮೇಲ್ ತೆರೆಗಳ ತೋರುವಿಂಗಡಲಂತೆ ||
ಸಿರಿಯ ಮೇಲ್ ಸಿರಿಯ ಸೂಚಿಸುವ
ಚರಿತಾರ್ಥ ನನ್ನಂತರಂಗದೊಳಿರು ಮನೋ-
ಹರನೆ ಚಿದಂಬರ ಪುರುಷಾ "

ಉನ್ನತವಾದ ತೆರೆಗಳು ಉನ್ನತವಾದ ಸಿರಿಯನ್ನು ಸೂಚಿಸುತ್ತವೆಯೆ
ಹೇಳುತ್ತಾನೆ. ಸೌಂದರ್ಯವೂ ಸಮುನ್ನತಿಯೂ ಕೂಡಿಕೊಂಡಿವೆ.

" ಈ ಪರಿಯ ಸೊಬಗಾವ ದೇವರಲಿ ಕಾಣೆ " ಎಂದು ಪುರಂದರ
ಸರು ಹೊಗಳುವ ಪದ್ಯದಲ್ಲಿ ಎಲ್ಲ ಸದ್ಗುಣಗಳ ಸಮುನ್ನತಿಯೇ ದೇವನಲ್ಲಿ ಇ
ದೆಂದೂ ಆತನು ಸೊಬಗುಗಾರನೆಂದೂ ಹೇಳಿದ್ದಾರೆ. ಚಿಕ್ಕೆ ಚಂದ್ರರಿಂದೊಡ
ಡಿದ ಮುಗಿಲು ಉನ್ನತವಾದಷ್ಟೇ ಸುಂದರವಾಗಿದೆ. ಅಂತೆಯೇ " It is t
eternal law that the first in Beauty must be first
might " ಎಂದು ಆಧುನಿಕ ಋಷಿವರ್ಯನಾದ ಇಮರ್ಸನ್ನನು ಉಸುರಿದ್ದಾ
ಇಂಥ ಬಲ್ಲಿದರೂ ಬಲ್ಲಹರೂ ಆಗಿ ಚೆಲುವಿನ ಗೆಲವನ್ನು ನಮ್ಮ ಎಳೆಗೆಳೆಯ
ಆರಾಧಿಸಲಿ.

ಪ್ರ. ಬ. ನರೇಗಲ್ಲ.

ಹಾಸ್ಯದ ಹರಟೆ

(ಕುಮಾರ ವಾಸುದೇವ-ಹಿನೇ ವಗ

ರಾಮರಾಯಃ-ನೋಡ್ರಿ ನಾಡಹಬ್ಬ ಬಂತು ಅಂದ್ರ ಪಟ್ಟಿ ಪಟ್ಟಿ.
ನಮ್ಮ ನವರಾತ್ರೀನs ನಿಂತ ಹೋಗೇದ.
ಗುರುರಾಯಃ- ನಮ್ಮನಿ ನವರಾತ್ರಿಗೆ ನಾಳೆ ನಾವ ಪಟ್ಟಿ ಎತ್ತಲಿಕ್ಕೆ ಹೋಗೋ

ಸೀತಮ್ಮಃ- ಯಾಕೊ ಇಷ್ಟ್ಯಾಕೆ ಕಟ್ಟಿಗೆ ದಪ್ಪ ಒಡೆದಿರೊ ?
ಕಟ್ಟಿಗೆಯವಃ- ಕಟ್ಟಿಗೆ ಒಡೆಯುವವ ದಪ್ಪ ಇದ್ದ ಕಾರಣ.

'ಬೆಳಕು'

>ಶಾಲೆಯ ಪತ್ರಿಕೆಯನ್ನು ಕುರಿತು

<>(ಶ. ಷ.)<>

ತ್ತಿಗೆ ರೂಪದಿ । ಮುತ್ತಿನ ಹೊಳಪಿನ ।
ತ್ತಿಗೆ ತಪ್ಪದೆ ಬರುತಿಹುದು ॥
ತ್ತನು ಕೀಳುತೆ । ಚಿತ್ತವ ಬೆಳಗುತೆ ।
ತ್ತರಿ ಕಂಪನು ಬೀರುವದು ॥ ೧ ॥

ಹರುಷವ ಬೀರುತ । ಹುರುಪನು ತೂರುತ ।
ನಿರುತದಿ ಬರುತಿದೆ ಬಾಲರಲಿ ॥
ಮರುನುಡಿಯಾಡದೆ । ಕಿರುನಗೆಯೊಲವಿಂ ।
ದರಳಿಸಿ ಜಗದಲಿ ಸುಮನವನು ॥ ೨ ॥

ಳಕಿನ ನಾಮದಿ । ಬೆಳಕನು ಬೀರುತ ।
ಗಳ ರುಚಿಯನು ತೋರುವದು ॥
ಗಳ ಬೀಡಿದು | ನಲುಮೆಯ ನಾಡಿದು ।
ಲುವತಿ ಕನ್ನಡವೆನ್ನುವದು ॥ ೩ ॥

ತಾಯಿಯ ಸೇವೆಯ । ಗೈಯಲು ಬಾಲರ ।
ಕಾಯಕೆ ಬಲವನು ಕೊಡುತಿಹುದು ॥
ಕಾಯುವ ದೇವನ । ಮಾಯೆಯ ತಿಳಿಸುತ
ಕಾಯಲು ಬಾಲರ, ಬೇಡುವದು ॥ ೪ ॥

ರಣಗಳೆಲ್ಲೆಡೆ । ಎರಚಲಿ ಬೆಳಕಿದು ।
ರಿಯರ ಮನಸುಮವರಳಿಸಲಿ ।
ರುಕುಲವೆಮ್ಮದು । ಮೆರೆಯಲಿ ಧರೆಯೊಳು ।
ರಿವರ ಕರುಣೆಯ ಬೆಳಕಿನಲಿ ॥ ೫ ॥

— ಸುಬ್ಬಣ್ಣ (ವಿ. ಬಿ. ಹೊಸೂರ
೭ನೇ ವರ್ಗ)

ರನ್ನಗನ್ನಡಿ

(ಒನೇ ವರ್ಗದವರ " ರನ್ನಗನ್ನಡಿ " ಎಂಬ ಪತ್ರಿಕೆಯನ್ನು ಕುರಿತು

ಮುಳಗುಂದ ಬಿಂಬವಾ

ನುಡಿತಾಯಿಯಡಿಗೆ ಗೆಲವನು ತರುವ ಕನ್ನಡಿಯು ।
ಒಡನುಡಿಯನೊಡಮೂಡಿಸುವ ರನ್ನಗನ್ನಡಿಯು ॥
ಆರನೆಯ ವರ್ಗದ ವಿಚಾರಗಳ ಕನ್ನಡಿಯು ।
ವಾರದಲಿ ಒಂದು ಸಲ ತೋರುತಿಹ ಕನ್ನಡಿಯು ॥
ಕನ್ನಡವ್ಮನ ಸೇವೆಗೈಯುತಿಹ ಕನ್ನಡಿಯು ।
ಕನ್ನಡದ ಕಂದರನು ಕುಣಿಸುತಿಹ ಕನ್ನಡಿಯು ॥
ಚಿಣ್ಣ ಚೆನ್ನರ ಚೆನ್ನ ಚಿನ್ನಗನ್ನಡಿಯು ।
ಕನ್ನಡಕೆ ರನ್ನಗನ್ನಡಿ ನವ್ಮ ಕನ್ನಡಿಯು ॥ ೧ ॥

ನಾನು ಕಂಡ ಕವೀಂದ್ರ ಬೇಂದ್ರೆಯವರು

ಲೇಖಕಃ- ಗುಡಿ ಶಾಮಸುಂದರ.

ಶ್ರೀಯುತ ಬೇಂದ್ರೆಯವರನ್ನು ನೋಡಬೇಕೆಂಬ ಕುತೂಹಲವು ನನ್ನ ಎಂದಿನಿಂದಲೂ ಕೊರೆಯುತ್ತಿತ್ತು. ನನ್ನ ಸುದೈವದಿಂದ ಬೆನ್ನೆ ಂದ್ರೆಯವರು ನಮ್ಮ ಶಾಲೆಗೇ ಒಂದು ಬಿಟ್ಟರು. ಮೊದಲು ಅವರು ನಮ್ಮ ರ್ದ ಮುಂದೆಯೇ ಹಾಯ್ದು ಹೋದರು, ಆದರೆ ನನಗೆ ಅವರು ಯಾರೆಂಬುದು ಯಲಿಲ್ಲ. ಹಿಂದುಗಡೆ ಬೇಂದ್ರೆಯವರೆಂದು ಗೊತ್ತಾಯಿತು. ಬೇಂದ್ರೆ ವರೆಂದರೆ ನಾಲ್ಕು ಕೈಗಳುಳ್ಳ ಒಬ್ಬ ದೇವರೆಂಬ ನನ್ನ ಭಾವನೆಯು ವ್ಯರ್ಥ ಯಿತು. ಅವರೂ ನಮ್ಮಂತೆಯೇ ಒಬ್ಬ ಮನುಷ್ಯರು. ಇಷ್ಟೇ, ಅವರ ದ್ಧಿಯು ನಮ್ಮ ಕಿಂತಲೂ ಬಹಳ ವಿಶಾಲ. ಅವರು ನಮ್ಮ ವರ್ಗವ ಮುಂದೆ ಯ್ದು ನಮ್ಮ ಶಾಲೆಯ ನೆರೆಯಲ್ಲರುವ ಪ್ರಾಯ್ಮರಿ ಸ್ಕೂಲಿಗ ಹೊದರು. ನಾನು ರ್ದ ಮಾಸ್ತರರ ಅಪ್ಪಣೆ ಪಡೆದು ಬೇಂದ್ರೆಯವರನ್ನು ನೋಡಲು ಪ್ರಾಯ್ಮರಿ ಸ್ಕೂಲಿಗೆ ಹೋದೆನು. ಅಲ್ಲಿ ಅವರು ನಾಲ್ಕನೇ ತರಗತ್ತಿಯಲ್ಲಿ ಕವಿತೆ ನ್ನು ಅನ್ನಿಸಿಕೊಳ್ಳುತ್ತಿದ್ದರು. ಮತ್ತು 'ಹಾಗೆ, ಹೀಗೆ' ಏನೇನೋ ಹೇಳುತ್ತ ದ್ದರು. ನಾನು ಕಿಟಕಿಯಲ್ಲಿ ಇಣಿಕಿ ನೋಡಿದೆನು. ಅವರು ಒಂದು ಬದಿಯ ದೋತರ, ಮೈಯಲ್ಲಿ ಒಂದು ಖಾದಿ ಅಂಗಿ, ಮೇಲೊಂದು ಕೋಟು ಸಿದ್ದರು. ಮತ್ತು ಕೈಯಲ್ಲಿ ಒಂದು ಚೀಲವನ್ನು ಹಿಡಿದಿದ್ದರು. ನಾನು ಷ್ಟೆಲ್ಲ ನೋಡುವಷ್ಟರಲ್ಲಿಯೇ ನಮ್ಮ ಶಾಲೆಯ ಹೆಡ್‌ಮಾಸ್ತರರು ಬಂದರು. ರರು ಬೈಯುವರೆಂಬ ಭಯದಿಂದ ನಾನು ವರ್ಗದಲ್ಲಿ ಸೇರಿದೆನು. ಮತ್ತು ಾಸ್ತರರಿಗೆ ನಡೆದ ಸಂಗತಿಯನ್ನೆಲ್ಲ ಹೇಳಿ ಸಮಾಧಾನ ಮಾಡುವಷ್ಟರಲ್ಲಿಯೇ ಟೆಯಾಯಿತು. ಕೂಡಲೇ ನಾನು ಮನೆಗೆ ಜಿಗಿದುಬಿಟ್ಟೆನು.

ಮಾತೃಭೂಮಿಯ ಸೇವೆ

[ಶ್ರಾವಣ ಎನೇ ಸೋಮವಾರ ಶಾಲೆಯಲ್ಲಿ ಜರುಗಿದ ವಿದ್ಯಾರ್ಥಿಗಳ ವಿಚಾರ ವಿನಿಮಯ
ಯಲ್ಲಿ ಆ ವರ್ಗದ ಕುವಾರಿ ತಾರಾ ಅವಧಾನಿಯು ಮಾಡಿದ ಭಾಷಣ]

ನಾವು ಮಾತೃಭೂಮಿಯ ಸೇವೆಯನ್ನು ಹೇಗೆ ಮಾಡಬೇಕು? ಮಾತೃಭೂಮಿಯ ಸೇವೆಯನ್ನು ಹೇಗೆ ಮಾಡುತ್ತೀರಿ? ಎಂದು ಎರಡನೇ ದವರನ್ನು ಕೇಳಿದರೆ ಇವರ ಉತ್ತರಕ್ಕೂ ನಮ್ಮ ಉತ್ತರಕ್ಕೂ ಬಹಳ ಅ ಉಂಟಾಗುವದು. ಏಕೆಂದರೆ ಅವರಿಗೆ ಪೂರ್ಣ ಸ್ವಾತಂತ್ರ್ಯವಿರುವದು; ಇಚ್ಛೆಗಳೆಂದರೆ ತಮ್ಮ ದೇಶವು ಊರ್ಜಿತ ಸ್ಥಿತಿಗೆ ಬರಬೇಕು ಮತ್ತು ತ ದೇಶದಲ್ಲಿಯ ಪ್ರತಿಯೊಬ್ಬ ಮನುಷ್ಯನು ಸುಖವಾಗಿರಬೇಕು ಇವೇ ಮೊದಲಾ ಗಳು. ಆದರೆ ನಮ್ಮದು ಹಾಗಲ್ಲ. ನಮಗೆ ಎಲ್ಲಕ್ಕೂ ಮೊದಲು ಸ್ವತಂ ಬೇಕು. ಆದ್ದರಿಂದ ಅದನ್ನು ದೊರಕಿಸಲು ಪ್ರಯತ್ನ ಮಾಡುವದು ಅತ ಅವಶ್ಯವೆಂದು ಹೇಳಬಹುದು. ಪೂರ್ವಕಾಲದಲ್ಲಿ ನಮ್ಮ ದೇಶವು ಹೇಗಿತ ಅದರ ವೈಭವವನ್ನೂ ಸಂಪತ್ತನ್ನೂ ಲಕ್ಷ್ಯಕ್ಕೆ ತಂದರೆ ನಮ್ಮ ಮೈಮೇಲೆ ರೋ ಮಾಂಚಗಳೇಳುವವು. ಆಗಿನ ಕಾಲದಲ್ಲಿಯ ಶಿಲ್ಪಿಗಳು ಅತ್ಯಂತ ಜಾಣರಾ ರೆಂಬದು ಅವರ ಕಲೆಗಳ ಸಾಕ್ಷಿಗಳಾದ ಗುಡಿ-ಗೋಪುರಗಳು, ಇವಾರತಿ ಇವೇ ಮೊದಲಾದವುಗಳಿಂದ ತಿಳಿಯುವದು. ಸಾಹಿತ್ಯದ ವಿಷಯವಾಗಿ ನೆ ದರೆ ಕವಿರತ್ನರಾದ ಪಂಪ-ಹೊನ್ನ-ರನ್ನರು ನೆನಪಿಗೆ ಬರುವರು. ಆಗಿನ ದಲ್ಲಿ ಹಿಂದುಸ್ತಾನದಲ್ಲಿಯ ಜನರು ಅತ್ಯಂತ ಸುಖದಲ್ಲಿದ್ದರು. ಸುವರ್ಣ ಭೂ ಎನಿಸಿಕೊಂಡ ಆಗಿನ ಹಿಂದುಸ್ತಾನವೆತ್ತ? ಪಾರತಂತ್ರ್ಯದಲ್ಲಿ ತೊಳಲುತ್ತಿ ಈಗಿನ ಹಿಂದುಸ್ತಾನವೆತ್ತ? ಇದನ್ನು ತಿಳಿದು ನೋಡಿದ ಯಾವ ಭಾರತೀಯ ಹೃದಯವು ತಳಮಳಗೊಳ್ಳಲಿಕ್ಕಿಲ್ಲ? ಸಂಖ್ಯವಾಗಿ ಪ್ರತಿಯೊಬ್ಬ ಭಾರತೀಯ ಮಾತೃಭೂಮಿಯ ಸೇವೆಯನ್ನು ಮಾಡಲೇಬೇಕೆಂಬದು ಸ್ಪಷ್ಟವಾಗುತ್ತದೆ.

ಪೂರ್ವಕಾಲದಲ್ಲಿ ಹಾಲಂಡ ದೇಶದಲ್ಲಿ ಪೀಟರನೆಂಬ ಹುಡುಗನಿದ್ದ ಅವನು ಒಂದು ದಿವಸ ಸಂಧ್ಯಾಕಾಲದಲ್ಲಿ ಹಾಲಂಡದ ಒಡ್ಡಿನಲ್ಲಿ ಒಂದು ತೂತ ನೋಡಿದನು ಆ ಕ್ಷಣವೇ ಅತನು ಅಲ್ಲಿಗೆ ಹೋಗಿ ಆ ತೂತನ್ನು ಗಟ್ಟಿಯ ಹಿಡಿದು, ಅದು ದೊಡ್ಡದಾಗದಂತೆಯೂ ನೀರು ಪಟ್ಟಣದೊಳಗೆ ಹೋಗದಂತೆ ಮಾಡಿದನು. ಹೀಗೆ ಅವನು ಸತತ ರಾತ್ರಿಯಂ ಮುಗಿದು ಬೆಳಗಾಗುವವರೆ ಕುಳಿತನು. ಚಳಿಯು ಎಷ್ಟಿದ್ದರೂ ಅವನು ಅಲ್ಲಿಂದ ಕದಲಲಿಲ್ಲ. ಬೆಳಗ ಮೇಲೆ ಜನರು ಬಂದು ನೋಡಿ ಅವನನ್ನು ಮನೆಗೆ ಕಳಿಸಿದರು. ಅವನು ಅವ ರಕ್ಷಿಸದಿದ್ದರೆ ಹಾಲಂಡವೆಲ್ಲ ಹಾಳಾಗುತ್ತಿತ್ತು. ಇಂಥ ಚಿಕ್ಕ ಬಾಲಕನು ಸ

ವನ್ನೂ ಜನಂನ್ನೂ ರಕ್ಷಿಸಿದನು. ಇದನ್ನು ನೋಡಿದರೆ ನಾವು ಮಾತೃ-ಮಿಯ ಸೇವೆಯನ್ನು ಮಾಡಲೇಬೇಕೆಂಬದು ವ್ಯಕ್ತವಾಗುತ್ತದೆ. ಇದು ಒಬ್ಬನೇ ಡುವ ಕೆಲಸವಲ್ಲ. ಆದ್ದರಿಂದ ನಮ್ಮಲ್ಲಿ ಒಕ್ಕಟ್ಟು ಬೆಳೆಯಬೇಕು. ಹಿಂದು ನದಲ್ಲಿ ಹಳ್ಳಿಗಳು ಹೆಚ್ಚಿದ್ದು, ಅಲ್ಲಿಯ ಜನರಿಗೆ ಸ್ವಾತಂತ್ರ್ಯದ ಅರ್ಥ ಕೂಡ ತ್ತಿಲ್ಲ. ಆದ್ದರಿಂದ ಗ್ರಾಮೋದ್ಧಾರವನ್ನು ಕೈಕೊಳ್ಳಬೇಕು ಮತ್ತು ಸಿಸ್ತಿನಿಂದ ದು ಸ್ವಾತಂತ್ರ್ಯ ಗಳಿಸಲು ಪ್ರಯತ್ನ ಮಾಡಬೇಕು. ಹೀಗೆ ನಾವು ನಮ್ಮ ವ್ಯವನ್ನು ಮಾಡಿದರೆ ಸ್ವಾತಂತ್ರ್ಯವು ಖಂಡಿತವಾಗಿ ಸಿಕ್ಕುವದೆಂದು ನಾನು ಬಲ್ಲೆನು.

ವಂದೇ ಮಾತರಂ!



*

ಹೃದಯದ ಹಕ್ಕಿ

೧

, ಕಡಲಗಳಾಚೆ
ರು ಪರ್ವತದಾಚೆ
ದ ಮಧ್ಯದಲೊಂದು
ಕೂಗುತಿದೆ

ಹೃದಯದಾಳದಿ ಇದ್ದು
ಮೀರಿ ಆಶೆಗೆ ಇದ್ದು
ಆಶೆ ತೋರುತ ಜನವ
ಎಳೆಯುವದು ಬಳಿಗೆ

೨

ೋಗಿಗಳು ತೊಳಲಿದರು
ಲಿದರು ರಾಜರು
ಯಹೋಗಲು ಆವದು
ಣ್ಣು ಮುಕ್ಕಿದರು

ಬಳಲುವರು ಬಾಡುವರು
ಹೇ! ಹೃದಯಹಕ್ಕಿಯೇ
ಬಾ ಎನ್ನ ಮನದ ಹಕ್ಕಿ
ಸ್ವಾತಂತ್ರ್ಯಹಕ್ಕಿಯೇ

— ಭೀಮಸೇನ ಒಡೆಯರ

संस्कृतभाषा

भोः प्रियवाचकाः, इयं संस्कृतभाषा भारते पुरा आगता आर्याणां, अस्ति। इयं भाषा अधुना अस्माकं देशे प्रवृत्तानां अनेकाः भाषाणां मूलभूता। संस्कृत भाषा सुंदरा रमणीया च भवति। पठितुं सुमनोहरा सुलभा च। सत्यमेव आर्याः संस्कृतं विना न अन्यभाः वदन्ति स्म। परन्तु संप्रति इमां भाषां ज्ञातुं अपि वयं असमर्थाः

अस्याम् भाषायाम् एव प्राचीन-कवयः विविधान् विषया उद्दिश्य बहून् ग्रंथान् काव्यानि च रचितवन्तः। अनया भाषया अस्मा जातु ज्ञानाभिवृद्धिः भवति। पुरा संस्कृत-भाषाभ्यासः बहुदुस्त आसीत्। सर्वे विद्यार्थिनः विद्यार्जनाय गुरोः. आश्रमं एव गच्छन्ि स्म.। तत्र च ते सर्वे गुरुमुखेनैव द्वादशवर्षपर्यंतं संस्कृताध्यय कुर्वान्ति स्म। (अपूर्ण)

अयं निबंधः **एस. सि. बबलेश्वरेण** प्रणीतः

(षष्ठः वर्गः)

स्मृति !

(मालिनी)

सहज सुमन सृष्टें ! घेतले म्यां खुडूनी ।
हृदयिं धरुन त्याला, ठेवले गोंजरूनी ॥

परिमल मधु येई, ठेवले दाबूनिया ।
हळुं हळुं सुकले ते, वास तो जाउंनिया ।
जनमन धरणी गे ! निर्मिशी मोदवाया ।
कितीतरी कुसुमांच्या मालिका मोहवाया ॥

परि उणिव फुलाची, भासते या क्षणाला ।
स्मृति मम पर देई वेदना या मनाला ॥
किती तरि जन जगाच्या धर्मशाळेत येती ।
जनमनिं चटका ते, लावुनी दूर जाती ॥

.....सौमद्र

"फुलपाखरू"

*

बागड रे तूं बागड रे
फुलपाखरू, तूं बागड रे,

क्षणांत उडशीं वायु भासशीं
क्षणांत बसशीं चित्रित होशीं
रंगि दंग तव झालो रे, ॥ १

आशेनें तुज धरण्या येतां
तुरी देशि तूं बघतां बघतां
शिवाशिवी मशि खेळत रे ॥ २

बोच न लागें तुज काट्यावर
भास फुलांचा मृदु, खडकांवर
समाधान घडि दावित रे ॥ ३ ।

लागतांच झणि अमुच्या हाता
धैर्य मेरु तूं गमसी चित्ता
शांत वृत्ति तव पाहुन रे ॥ ४ ॥

तव आनंदी तल्लिन होता
कान-मंत्र तूं दिधला हसतां
"आनंदानें बागड रे" ॥ ५ ॥

मा. ना. कट्टी.
B. A; B. T.

शाळेची घंटा

सकाळीं गुलाबी थंडी पडती होती.

मुर्थातच मी एका रग्‌मध्यें चांगलीच गुरफटून निजलें होतें. नेहमीची उठावयाची वेळ झाली होती खरी; पण मला कांहीं अंथरूण सोडावेसें वाटेना. तोंच बोर्डिगची उठण्याची घंटा झाली. चरफडतच उठलें मी अंथरुणांतून सकाळची---आणि तीही अशा थंडीच्या दिवसांतील ---साखर झोप मोडल्याबद्दल मला त्या घंटेचा अस्सा राग आला म्हणून सांगू!

आज तिसरा तास होता भूगोलाचा. ॲमेझॉन नदीचें विस्तीर्ण पात्र, तिच्यांतील जलचर प्राणी, आणि तिच्या कांठावरतीं भयंकर अरण्यें यांची वर्णनें ऐकण्यांत मी अगदीं तल्लीन होऊन गेलें होतें. तितक्यांत तास संपल्याची घंटा झाली आणि आमच्या बाई एकाद्या यंत्राप्रमाणें आपली पुस्तकें आवरून व चॉकची कांडीं टेबलावर ठेऊन दुसऱ्या वर्गाला शिकविण्याकरतां म्हणून निघून गेल्या.

आमच्या एका मैत्रिणीचें घर शाळेच्या जवळच होतें अगदीं. तिथून शाळेची घंटा सहज ऐकूं येत असें. एकदा मधल्या सुट्टींत आम्हीं तिच्या इथें सहज 'ब्रिज्' खेळत बसलों होतो. मी *Trump Suit* डिक्लेअर केला होता. डाव अगदी रंगांत आला होता

इतक्यांत.... .... ठण्! ठण्! ठण्!

घंटेचे ठोके स्पष्टपणें ऐकूं आले आम्हांला.

परवां रात्रीही असेंच झालें. खांडेकरांची 'दोन ध्रुव' ही कादंबरी वाचीत बसले होतें मी. रमाकांताच्या वागणूकीमुळें वैतागून घराबाहेर पडलेली वत्सला आतां कुठें जातें हें मी अगदीं उत्कंठेनें वाचीत होतें. तितक्यांत झोंपण्याच्या सूचनेची घंटा झाली. सुंदर संगीत चाललेलें असावें आणि श्रोतृवर्गांतून एकदम खोकल्यांची सांथ यावी त्या प्रमाणें मला झालें.

दुसरें एकें वेळीं इतिहासाचा तास चालला होता. इतिहास तील खून, लढाया, रक्तपात वगैरेंचा मला अगदीं मनापासून तिरस्कार. तास केव्हां संपेल असें मला होऊन गेलें होते. पण आतां लवकर घंटा होईल तर शपथ!

या घंटेनें माझ्या विरुद्ध मुद्दाम उभा दावा धरलाय कीं काय असें मला वाटलें. इच्छित वेळेवर न वाजणारी आणि अवेळीं वाजून रंगाचा बेरंग करुन टाकणारी अशी ही घंटाच जर काढून टाकली तर..... ?

— कुमारी मालिनी जोशी. (Std VII)

Our School.... ....

IN the year 1933, Mr Hirekerur R. V. B. A (1st class Hons.) tranferred the management and ownership of the school, then known as the Krishnaraj High-School, to a local committee, consisting of Messrs. S. S. Deshpande, B A. Retired D. D. C. (Chairman), V. V. Albal B. A; LL B. (Vice Chairman). G. R. Jahagirdar M. A; LL. B. Hirachand Shah (A leading local merchant). N. V Jorapur, B. A; LL. B. (Jt. Sec), and H. B. Konnur M. A. (Jt. Secy. and Headmaster) with a view to ensuring the stability and permanancy of the School. Then the committee organised a Society called the Vidya Vardhaka Sangha and started running the School under its auspices.

ರಾಜದ್ರೋಹದಾಪಾದನೆಯಲ್ಲಿ ಎರಡೂವರೆ ವರುಷ ಭಯಂಕರ ಕಠಿಣ ಶಿಕ್ಷೆಯನ್ನನುಭವಿಸಿ ತಮ್ಮ ಬಾಹ್ಯ ಸಂಪಾದನೆಯನ್ನೂ ಸಂಪತ್ತನ್ನೂ ಎರಡು ಹಸ್ತಗಳಿಂದ ತೂರಿ ಮುಂದೆ ಸಾಗಿರುವ ಸನ್ಮಾರಣ್ಯ ಶ್ರೀ. ಕೆ. ರಾಮ ಸ್ವಾಮಿಯವರು ದಳಪತಿಗಳಾಗಿಯೂ, ವಿದ್ಯಾರ್ಥಿ ಪ್ರಪಂಚದಲ್ಲಿ ಪ್ರೌಢ ವಿದ್ಯಾರ್ಥಿಯಾಗಿದ್ದರೂ ಗಳಿತ ಚಲೋ ಮೈಸೂರ್ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವಿದ್ಯಾರ್ಥಿಕರಭೂಷಣ ಶ್ರೀ. ಎಲ್. ಎಸ್. ರಾಮ ಲಿಂಗಯ್ಯನವರು ಕಾರ್ಯದರ್ಶಿಗಳಾಗಿಯೂ ಮತ್ತು ಮೈಸೂರು ಕಾಂಗ್ರೆಸ್ ಒನ್ಮತಾಳುವ ಪೂರ್ವ ಜನಜಾಗೃತಿ ಸಂಘ ಎಂಬ ಉಜ್ವಲ ಸಂಸ್ಥೆಯನ್ನು ಸ್ಥಾಪಿಸಿ ಅದರ ಸನ್ಮಾನ್ಯ ಅಧ್ಯಕ್ಷ ಮಹಾಶಯರಾಗಿದ್ದು ತನು, ಮನ, ಧನ ಸಮೇತ ಸ್ವಾರ್ಥತ್ಯಾಗಬಲದಿಂದ ಜನತೆಯಲ್ಲಿ ನವಚೈತನ್ಯ ಸಂಚಾರವಿಗೆಯನ್ನು ಹತ್ತಿಸಿ ಜವಾಬ್ದಾರಿ ಸರ್ಕಾರದ ಶಾಂತಿ ಹೋರಾಟದಲ್ಲಿ ಹಲವುಸಾರಿ ನರಕಸದೃಶ ಸೆರೆಮನೆವಾಸವನ್ನನುಭವಿಸಿರುವ ದೇಶಕಾರ್ಯಧುರೀಣ ಶ್ರೀ. ಬಿ.ಎಂ.ಶ್ರೀನಪ್ಪನವರುಸಹ ಮೇಲ್ಕುಂಡ ಸಂಸ್ಥೆಗೆ ಪೋಷಕರಾಗಿಯೂ ಜೀವನ್ಮೂಲೆಯಾಗಿಯೂ ತ್ರಿಕಾಲಗಳಲ್ಲೂ ಕಾಯಾ, ವಾಚಾ, ಮನಸಾ ದುಡಿಯುತ್ತಲಿರುವರು.

ಕೊನೆಯದಾಗಿ ಈ ಜವಾಬ್ದಾರಿಯುತ ನಗರ ಸೇವಾದಳವು ಕೇವಲ ಹೆಸರಿನ ದಳವಾಗದೆ ತನ್ನ ಧ್ಯೇಯ ಸಾಧನೆಯಲ್ಲಿ ಮುಂದುವರಿದು ಕೀರ್ತಿಶ್ಲೇಷ ಗಾಂಧೀಜಿಯವರ ಅಮರ ಕೃಪಾಶೀರ್ವಾದಬಲದಿಂದ ಚಿರಕಾಲ ಬೆಳೆದು ಬಾಳಿ ಬೆಳಗಲಿ.

ಗಾಂಧಿ ಜಯಂತಿ ಲಾವಣಿ ಕಾಣಿಕೆಗೆ ಸಹಾಯನೂಡಿದ ಉದಾರ ಹೃದಯರ ಸೂಕ್ಷ್ಮ ಪರಿಚಯ

ಶ್ರೀಮಾನ್ ಎಚ್. ಸಿದ್ದಯ್ಯ, ಬಿ.ಎ., ಬಿ.ಎಲ್.,

ಮೈಸೂರು ಸಂಸ್ಥಾನದ ರೆವಿನ್ಯೂ ಸಚಿವರು.

ಇವರು ಪಡುವಣ ಪ್ರಕೃತಿ ಮಾತೆಯ ಶಿವಮೊಗ್ಗ ಜಿಲ್ಲೆಯ ವೀರಶೈವಾಗಮ ಶಿವಾನುಭವಯುತ ಜಂಗಮ ಮನೆತನದಲ್ಲಿ ಜನ್ಮ ತಳೆದು ಆಷ್ಟಾವರಣ ಶೀರ್ಷಿಕೆ ಧರಿಸಿ ಪಂಚಾಚಾರ ಪರಾಯಣರಾಗಿ ಪ್ರಪಂಚ ದೃಷ್ಟಿಯಲ್ಲಿ ಬಡವರಾದರೂ ಪರಮಾರ್ಥದಲ್ಲಿ ಶ್ರೀಮಂತರೆನಿಸಿ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗಮಾಡಿ ೧೯೩೩ರಲ್ಲಿ ಬಿ.ಎ., ಪದವೀಧರರಾದಾಗ ಇವರ ಸುವರ್ಣನೀಯ ತೇಜಸ್ಸನ್ನವಲೋಕಿಸಿದ ಆಗಿನ ನಿವೃತ್ತ ವೈಸ್‌ಛಾನ್ಸಲರ್ ಕೀರ್ತಿಶೇಷ ರಾಜಕಾರ್ಯಪ್ರಸಕ್ತ ಶ್ರೀಮಾನ್ ಎಸ್.ಎಸ್. ಸುಬ್ಬರಾಯರವರು, ಶ್ರೀ ಸಿದ್ದಯ್ಯನವರನ್ನು ಕುರಿತು ನೀವು ಕಾಲಕ್ರಮೇಣ ಪ್ರಗತಿಪ್ರಪಂಚದಲ್ಲಿ ಕೀರ್ತಿವೊಂದುವಿರೆಂದು ಶಾಶ್ವತ ಭವಿಷ್ಯ ನುಡಿದುದಲ್ಲದೆ ಅದೇ ಪ್ರಕಾರ ಒಂದು ಅಮೋಘ ಪ್ರಶಸ್ತಿಪತ್ರವನ್ನೂ ಸಹ ದಯಪಾಲಿಸಿದರು. ಆ ಮಾನ್ಯ ಮಹನೀಯರ ದಿವ್ಯಾಶೀರ್ವಾದ ಭವಿಷ್ಯದಂತೆ ಇಂದು ಶ್ರೀ ಸಿದ್ದಯ್ಯನವರು ನಮ್ಮಗಳ ಅಪರೋಕ್ಷ ಮೈಸೂರ್ ಕಾಂಗ್ರೆಸ್ ಕವಚ ತೊಟ್ಟು ಮಹಾತ್ಮ ಗಾಂಧಿಜಿಯವರ ಕೃಪಾವಲಂಬನ ಅಹಿಂಸಾಮಯ ತ್ಯಾಗಶಿಖರವನ್ನೇರಿ ಮೈಸೂರು ಸಂಸ್ಥಾನದರೆವಿನ್ಯೂ ಮಂತ್ರಿ ಪದವಿಯನ್ನಲಂಕರಿಸಿ ಅಖಂಡ ಕರ್ನಾಟಕದ ಹೃದಯಾಂತರಂಗ ಸಾರ್ವ ಭೌಮರಾಗಿ ರಾರಾಜಿಸುತ್ತಿರುವರು.

ಇವರು ಹಿಂದೆ ವಕೀಲ್ ವೃತ್ತಿಯಲ್ಲಿದ್ದಾಗ ತ್ರಿಕಾಲಗಳಲ್ಲೂ ಯಾವರೀತಿ ಅಥಿತಿ ಸತ್ಕಾರವನ್ನು ಪತ್ನೀ ಸಮೇತರಾಗಿ ನಡೆಸುತ್ತಿದ್ದರೋ, ಹಾಗೆಯೇ ಇಂದು ಮಂತ್ರಿಪದವಿಯಲ್ಲಿದ್ದರೂ ಸಹ ಅದೇ ರೀತಿ ಅಥಿತಿ ಸೇವೆಯನ್ನು ಕೈಗೊಂಡಿರುವರು. ಇವರದು ಪುಣ್ಯ ಶರೀರವೆಂದರೆ ಅತಿಶಯೋಕ್ತಿಯಾಗಲಾರದು.

ಶ್ರೀಮಾನ್ ಡಾಕ್ಟರ್ ಎಂ. ಅಣ್ಣಾಜಪ್ಪನವರು,

ಮಾಡರ್ನ್ ಫಾರ್ಮಸಿ, ಧನ್ವಂತರಿ ರೋಡ್, ಮೈಸೂರು.

ಇವರು ಮೂಗೂರಿನ ಐಸಿರಿ ಮನೆತನದಲ್ಲಿ ಶ್ರೀಗರು ಮಲ್ಲೇಶಸ್ವಾಮಿಗಳವರ ಅನುಗ್ರಹದಿಂದ ಧನ್ವಂತರಿಯು ದಿಸಿದ ಜನ್ಮನಕ್ಷತ್ರದಲ್ಲಿ ಧನ್ವಂತರಿಯ ಹಾಗೆಯೇ ದೇವನೂರಿನಲ್ಲಿ ಜನ್ಮತಾಳಿ ಮಾತೆಯ ಕೃಪಾವಿಶೇಷದಿಂದ ವೈದ್ಯ ವಿದ್ಯಾಭ್ಯಾಸದಲ್ಲಿ ಡಾಕ್ಟರ್ ಪದವಿ ಪಡೆದು ತಮ್ಮ ಅಸಾಧಾರಣ ಬುದ್ಧಿ ಸಾಮರ್ಥ್ಯದಿಂದಲೂ ನಿರ್ಮಲ ಹಸ್ತ ಶುದ್ಧಿಯಿಂದಲೂ ಶುದ್ಧ ದ್ರವ್ಯಾರ್ಜನೆಯ ಮೂಲಕ ಬಡವ-ಬಲ್ಲಿದರ ಆಪದ್ಬಂಧುವೆನಿಸಿ ಫಾರವಾಡದ ಶಿವಯೋಗಿ

ಸುರುಗರಾಜೇಂದ್ರಪ್ಪನವರಾದ ನಿಲಯದ ಶ್ರೀ ಮೃತ್ಯುಂಜಯ ಸ್ವಾಮಿಗಳವರ ನೇತ್ರಚಿಕಿತ್ಸೆನಡೆಸಿದ ಸ್ಮರಣಾರ್ಥವಾಗಿ ಯೂ ತಮ್ಮ ಮಾತೃಶ್ರೀ ಕೆಂಪಮ್ಮಣ್ಣಿಯವರ ಇಷ್ಟಾರ್ಥಸಿದ್ಧಿಗಾಗಿಯೂ ಮೈಸೂರಿನ ಹಳೇ ಅಗ್ರಹಾರದಲ್ಲಿ ಶ್ರೀ ಮೃತ್ಯುಂಜಯಾಶ್ವತ್ಥ ದೇವಸ್ಥಾನವನ್ನು ಕಟ್ಟಿಸಿ ಸಂಸ್ಥಾನದ ರೆವಿನ್ಯೂ ಸಚಿವರಾದ ಶ್ರೀಮಾನ್ ಎಚ್. ಸಿದ್ದಯ್ಯನವರ ಅಮೃತಹಸ್ತದಿಂದ ಆರಂಭೋತ್ಸವ ನಡೆಸಿ ಸರ್ವಮತಧರ್ಮಾನುಭವಿಗಳಾಗಿರುವರು.

ಇವರ ಇಷ್ಟಲಿಂಗ ಪೂಜೆಯು ವರ್ಣನಾತೀತವಾದುದುಯೆಂದರೆ ಉತ್ಪ್ರೇಕ್ಷೆಯಲ್ಲವು.

ಶ್ರೀಮಾನ್ ಆರ್. ಬಿ. ಪುಟ್ಟಬಸಪ್ಪನವರು ರೈಸ್ ಅಂಡ್ ಫ್ಲೋರ್ ಮಿಲ್ಸ್ ಒಡೆಯರು. ಕೃಷ್ಣರಾಜನಗರ.

ಇವರು, ಆತ್ಮವತ್ಸರ್ವಭೂತಾನಿ ಎಂಬ ಆರ್ಯೋಕ್ತಿಗೆ ಸಾಕ್ಷಿಭೂತರು. ಇವರ ಆದರ್ಶಪ್ರಾಯವಾದ ಚಿತ್ತ ಸ್ಥೈರ್ಯ, ವ್ಯವಹಾರ ಚತುರತೆ, ದಾನಶೀಲತೆ, ದೇಶಪ್ರೇಮ ಮತ್ತು ಕಾಂಗ್ರೆಸ್ ಭಕ್ತಿ ಮೊದಲಾದವುಗಳು ಅಪಾರ್ಥಿತವಾಗಿ ಇವರನ್ನು ಶ್ರೀಮಂತ ಶಿಖರಕ್ಕೂ ವರ್ತಕ ಶಿರೋಮಣಿ ಪದವಿಗೂ ಮುಟ್ಟಿಸಿರುವುವು. ತುಂಬಿದ ಕೊಡ ತುಳುಕುವುದಿಲ್ಲ ಎಂಬ ನಾಣ್ನುಡಿಯು ಇಂಥಾ ಮಹಾನುಭಾವರುಗಳಿಗಾಗಿಯೇ ನಿರ್ಮಿತವಾಗಿರುವುದೆಂದರೇ, ಅತಿಶಯೋಕ್ತಿಯಲ್ಲ.

ಶ್ರೀಮಾನ್ ಕೆ. ನಂಜುಂಡಪ್ಪ ಅಂಡ್ ಸನ್ಸ್ ಪ್ರಭುದೇವ ಟಾಕೀಸ್ ಮೈಸೂರು.

ಇವರು, ದೈವಬಲವೇ ಬಲ ಎಂಬುದಕ್ಕೆ ನಿದರ್ಶನಪ್ರಾಯರು. ಮತ್ತು ಶರಣಾಗ್ರೇಸರರು. ಪ್ರಜೆಗಳ ಹಿತಕ್ಕೆ ಅಗತ್ಯವೆಂದು ಕಂಡು ಬರುವ ಪ್ರತಿಯೊಂದು ಕಾರ್ಯಕ್ಕೂ ಇವರ ತನು, ಮನ, ಧನ ಸಹಾಯವು ಎಂದಿನಂತೆ ಆಗಿರುವುದು,

ಶ್ರೀಮಾನ್ ಪಿ. ಶಿವಣ್ಣ ಕಂಟ್ರಾಕ್ಟರ್ ಧನ್ವಂತರಿ ರಸ್ತೆ ಮೈಸೂರು.

ಇವರು, ಮೊದಲಿಗೆ ಪರದೇಶ ವಸ್ತ್ರಧಾರಿಗಳು. ೧೯೧೮ ರಲ್ಲಿ ಕಾರ್ಯಗೌರವದ ಚೆನೆಯಿಂದ ಮದರಾಸ್ ಪಟ್ಟಣಕ್ಕೆ ಹೋಗಿದ್ದವರು ಖಾದಿ ವಸ್ತ್ರಧಾರಿಗಳಾಗಿ ಹಿಂದಿರುಗಿದರು. ಅಂದಿನಿಂದಲೂ ಖಾದಿ ವಸ್ತ್ರಧಾರಿಗಳಾಗಿರುವರಲ್ಲದೇ ಕಾಂಗ್ರೆಸ್ಸಿನ ಅಂತರಂಗಭಕ್ತರಾಗಿಯೂ ಇರುವರು.

ಶ್ರೀಮಾನ್ ಬಂಡಯ್ಯ ಕಲ್ಲುಮಠ ಜಮೀನ್ದಾರ್ ದರೋಜಿ, ಬಳ್ಳಾರಿ ಜಿಲ್ಲೆ.

ಇವರು, ವಯೋಧರ್ಮದಲ್ಲಿ ಕಿರಿಯರಾದರೂ ವಿದ್ಯೆ, ಗುಣ, ಮತ್ತು ವಿನಯ ಸಂಪತ್ತುಗಳಲ್ಲಿ ಹಿರಿಯರು. ಅಖಂಡ ಕರ್ನಾಟಕ ಏಕೀಕರಣವು ನಮ್ಮ ಆಜನ್ಮಸಿದ್ಧ ಹಕ್ಕು ಎಂದು ಏಕಪ್ರಕಾರ ದುಡಿಯುತ್ತಿರುವ ತರುಣ ಮುಖಂಡರು.

ಶ್ರೀಮಾನ್ ಎ. ಎಸ್. ಕೃಷ್ಣಮೂರ್ತಿ ಮಹಾತ್ಮ ಕಾಫಿ ವರ್ಕ್ಸ್ ಮೈಸೂರು.

ಇವರು, ಕಾಂಗ್ರೆಸ್ ತತ್ವಾನುಯಾಯಿಗಳು. ಪೂಜ್ಯ ಗಾಂಧಿಜಿಯವರು ನಾರಿರುವ ರಚನಾತ್ಮಕ ಕಾರ್ಯಗಳಲ್ಲಿ ಆಸಕ್ತಿಯುಳ್ಳವರು. ಮತ್ತು ಸೆರೆಮನೆ ವಾಸಾನುಭವಿಗಳು.

ಶ್ರೀಮಾನ್ ಪಿ. ಎಚ್, ಜವರಪ್ಪಗೌಡ ಪಾಲಗ್ರಹಾರ, ನಾಗಮಂಗಲ ತಾಲ್ಲೂಕು.

ಇವರು, ಕಾಂಗ್ರೆಸ್ ಕಾರ್ಯಕರ್ತರು, ಇವರ ಗೌರವಪೂರಿತ ಹಾಸ್ಯಮಯ ಭಾಷಣಗಳಿಂದರೆ ಜನರಿಗೆ ಮಹಾ ಸಂತೋಷ.

ಶ್ರೀಮಾನ್ ಜೆ. ವಿ. ರಾಮಚಂದ್ರ ಸೆಂಟ್ರಲ್ ಟಿಫಿನ್‌ರೂಮ್ ಅವಿನ್ಯೂರೋಡ್ ಬೆಂಗಳೂರು ಸಿಟಿ.

ಇವರು, ಬೆಂಗಳೂರಿನ ಪ್ರಸಿದ್ಧ ಜಯಭಾರತ ವ್ಯಾಯಾಮಶಾಲೆಯ ಸಂಚಾಲಕರು. ೧೯೩೯ ರಲ್ಲಿ ಹಿಂದೂ ಸ್ಥಾನದಲ್ಲಿ ನಡೆದ ಸತ್ಯಾಗ್ರಹಕ್ಕೆ ಬೆಂಗಳೂರಿಂದ ಹೋಗಿದ್ದ ವೀರ ಸತ್ಯಾಗ್ರಹಿಗಳು ಅನೇಕ ಸತ್ಯಾಗ್ರಹಗಳಲ್ಲಿ ಭಾಗವಹಿಸಿ ದುಡಿದು ಅನಂತ ಕಷ್ಟನಷ್ಟಗಳನ್ನು ಅನುಭವಿಸಿ ಈಗಲೂ ದುಡಿಯುತ್ತಿರುವ ಕಾಂಗ್ರೆಸ್ ಕಾರ್ಯಕರ್ತರು.

ಶ್ರೀಮಾನ್ ಗೌಡರ ಶಿದ್ದಪ್ಪ ಅಂಡ್ ಸನ್ಸ್ ಜನರಲ್ ಮರ್ಚೆಂಟ್ ಹಳೇ ಅಗ್ರಹಾರ, ಮೈಸೂರು.

ಇವರು, ಕಾಂಗ್ರೆಸ್ಸಿನ ಶ್ರದ್ಧಾನ್ವಿತ ಪರಮ ಹಿತೈಷಿಗಳು.

ಶ್ರೀಮಾನ್ ಎಲ್. ದೊಡ್ಡಯ್ಯ ಶ್ರೀ ವಿಶ್ವನಾಥ ಬಸ್ ಸರ್ವಿಸ್, ಮೈಸೂರು.

ಇವರು, ಕಾಂಗ್ರೆಸ್ಸಿನ ನಿಷ್ಠಾವಂತ ಅಂತರಂಗ ಭಕ್ತರು. ಮತ್ತು ಉದಾರಿಗಳು.

ಲಾವಣಿ ಸಾಹಿತ್ಯ ಸಿಂಹಾವಲೋಕನ

ಲಾವಣಿ ಸಾಹಿತ್ಯದ ಜನನವು ಮತ್ತು ವಿಷಯವು ಸಾಮಾನ್ಯವಾದದ್ದೇ ಪುರಾತನವಾದದ್ದೂ ಪ್ರಸಿದ್ಧವಾದದ್ದೂ. ಇದರ ಲಾವಣ್ಯಮಯ ಶೈಲಿಯಿಂದಲೇ ಇದಕ್ಕೆ ಲಾವಣಿ ಎಂದು ಹೆಸರು ಬಂದಿರುವುದು. ಇದರ ಹೆಚ್ಚುಕಡಿಮೆ ಷಟ್ಪದಿ ಛಂದಸ್ಸಿಗೆ ಹೋಲುವುದೆಂದರೆ ತಪ್ಪಾಗಲಾರದು. ಲಾವಣಿ ಸಾಹಿತ್ಯವು ಪೂರ್ವದ ಸಂಸ್ಕೃತ ಅರಬ್ಬಿ ಉರ್ದು ಹಿಂದೀ ಭಾಷೆಗಳಲ್ಲಿದ್ದಿತು. ಅದನ್ನು ಒಂದು ಶತಮಾನದ ಹಿಂದೆ ಮೈಸೂರಿ ಶ್ರೀಮತ್ಪರಮಹಂಸ ಪುಟ್ಟಣ್ಣನವರೆಂಬುವರು ಈಗ ನಾವು ವ್ಯಾಕರಣಬದ್ಧವಾಗಿ ಹಾಡುತ್ತಿರುವ ಹಾಗೆ ಸೊ ಕನ್ನಡದಲ್ಲಿ ರಚಿಸಿ ಪ್ರಚಾರದಲ್ಲಿ ತಂದರು. ಅಂದಿನಿಂದ ಇಂದಿನವರೆಗೂ ಪ್ರಪಂಚಾದರ್ಶ ನಮ್ಮ ಮೂಡ ಮೈಸೂರು ದೇಶದಲ್ಲಿ ಪುರಾಣ, ತರ್ಕ, ಇತಿಹಾಸ, ರಾಜಕೀಯ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ದೇಶ, ಕಾಲ ವರ್ತಮಾನಗಳಿಗನುಸಾರವಾಗಿ ಲಾವಣ ಸಾಹಿತ್ಯ ಸೇವೆಯು ನಮ್ಮ ಗುರುಹಿರಿಯರಿಂದ ಸಲ್ಲಿಸಲ್ಪಟ್ಟಿರುವುದು.

ಈಗ ನಾನಾದರೂ ಸಹ ಅಖಂಡ ಕರ್ಣಾಟಕದಲ್ಲಿ ಸಾರ್ವಜನಿಕ ಕಾರ್ಯಕ್ಷೇತ್ರಗಳಲ್ಲಿ ಮೈಸೂರ ಕಾಂಗ್ರೆಸ್ ಲಾವಣಿ ವಿದ್ವತ್ಸೇವಕನಾಗಿ ಅನೇಕ ವರ್ಷಗಳಿಂದಲೂ ಈ ಸೇವೆಯನ್ನು ಸಲ್ಲಿಸುತ್ತಿರುವೆನು.

ಈಗ ಅನೇಕ ಸಂವತ್ಸರಗಳಿಂದ ಲಾವಣಿ ಸಾಹಿತ್ಯ ಸೇವೆಯ ವಿಶಿಷ್ಟ ಭಾರವನ್ನು ನಾನೊಬ್ಬನೇ ಹೊತ ಕಂಗಾಲಾಗಿದ್ದೆನು. ಈ ಮಧ್ಯೆ ಅದರ ಜೊತೆಗೆ ಕೆಲವು ಅನಿಷ್ಠ ಪ್ರಸಂಗಗಳು ಒದಗಿದುದರಿಂದ ಮತ್ತಷ್ಟೂ ಜರ್ಜರಿತನಾಗಿ ಈ ಸಾಹಿತ್ಯ ಸೇವಾಪ್ರಪಂಚದಿಂದ ಆದಷ್ಟೂ ದೂರ ಸರಿಯುತ್ತಿರುವೆನು. ಆದರೆ ಈ ಸಾ ಮಹಾತ್ಮ ಗಾಂಧಿಯವರ ೮೧ ನೇ ಜಯಂತಿ ಬಗ್ಗೆ ಸಣ್ಣ ಕಾಣಿಕೆಯನ್ನು ಸಮರ್ಪಿಸಬೇಕೆಂಬ ಮಹದಾಕಾಂಕ್ಷೆ ಯಿಂದ ಆಪ್ತ ಹಿತೈಷಿಗಳಾದ ಜಗತಾಪಿ ಶ್ರೀಮಾನ್ ಎಂ. ವಿ. ರಾಮರಾಜು ಅವರಲ್ಲೂ, ಮೈಸೂರು ಜ್ಯೋಯಿಲ ಅಸೋಸಿಯೇಷನ್ ಕಾರ್ಯದರ್ಶಿ ರಾಜಾ ಸೂರ್ಯನಾರಾಯಣ ಶ್ರೇಷ್ಠಿಯವರಲ್ಲೂ ನನ್ನ ಆಶಯವನ್ನು ಮುಂದ ಮಾಡಿದೆನು. ಆ ಮಹನೀಯರು ನನ್ನ ಪ್ರಾರ್ಥನೆಯನ್ನು ಪ್ರೇಮಾದರದಿಂದ ಅಂಗೀಕರಿಸಿ ಹೆಚ್ಚಿನ ದ್ರವ ಸಹಾಯವನ್ನು ಮಾಡಿಸಿದರಲ್ಲದೆ ತಾವೂ ಸಹಾಯಮಾಡಿ ಈ ಜಯಂತಿ ಲಾವಣಿ ಕಾಣಿಕೆಯು ಮಹಾ ಪೋಷ ರೆನಿಸಿಕೊಂಡು ಉಪಕಾರಸ್ಮರಣೆಗೆ ಪಾತ್ರರಾಗಿರುವರು.

ಈ ಜಯಂತಿ ಲಾವಣಿ ಕಾಣಿಕೆಗೋಸ್ಕರ ನನ್ನ ಬೈನ್ಯ ಮನವಿಯನ್ನು ಲಾಲಿಸಿ ತಮ್ಮ ವಿದ್ವತ್ ಪೂರಿತ ಮೇಧಾಶಕ್ತಿಯಿಂದ ವಿಚಾರ ಪರಿಪ್ಲುತ ಲೇಖನವನ್ನು ಬರೆದುಕೊಟ್ಟ ಶ್ರೀಮಾನ್ ಅಗರಂ ರಂಗಯ ನವರಿಗೂ ಇದರಲ್ಲಡಕವಾಗಿರುವ ಲಾವಣಿಗಳನ್ನು ಪರಿಶೋಧಿಸಿಕೊಟ್ಟಂಥ ಸಂಸ್ಕೃತ, ಕನ್ನಡ ಭಾಷಾವಿಶಾರದ ಮೈಸೂರು ಆಸ್ಥಾನ ಮಹಾಪಂಡಿತ ನಂಜನಗೂಡು ವೇ|| ಬ್ರಂ|| ಶ್ರೀ|| ಶ್ರೀಕಂಠಶಾಸ್ತ್ರಿಗಳವರಿಗೂ ಮತ್ತು ಜಾಹಿರಾತುಗಳ ಮುಖಾಂತರ ಹೆಚ್ಚಿನ ಸಹಾಯ ನೀಡಿ ಇದು ಜನಪ್ರಿಯವಾಗುವಂತೆ ಮಾಡಿದ ಸ್ವಾತಂತ್ರ್ಯ ಪ್ರಿಯ ವರ್ತಕಮಹಾಶಯರಿಗೂ ನನ್ನ ಹೃತ್ಪೂರ್ವಕ ನಮಸ್ಕಾರಗಳು.

೨. ಈ ಪವಿತ್ರಕಾರ್ಯಕ್ಕೆ ನನ್ನ ನಮ್ರ ಪ್ರಾರ್ಥನೆಯನ್ನು ಮನ್ನಿಸಿ ಹಲವು ಸೌಜನ್ಯಪೂರ್ಣ ಪತಿಯುಚ್ಛ ಗಳನ್ನು ದಯಪಾಲಿಸಿದ ವಿಶ್ವಕರ್ಣಾಟಕ ಮತ್ತು ಸಾಧ್ವಿ ರಾಷ್ಟ್ರಮತ ದಿನಪತ್ರಿಕೆಗಳ ಪ್ರಧಾನ ಸಂಪಾದಕರ ಗಳವರಿಗೂ ಮಾನ್ಯ ಮಿತ್ರರಾದ ಶ್ರೀಮಾನ್ ನಾ. ವೀರಭದ್ರಯ್ಯನವರಿಗೂ ನನ್ನ ಸಪ್ರೇಮಹಾರ್ದಿಕ ವಂದನೆಗಳು.

೩, ಮುದ್ರಣ ಕಾರ್ಯದಲ್ಲಿಯೂ ಆಯುರ್ವೇದದಲ್ಲಿಯೂ ಅದ್ವಿತೀಯರೆನಿಸಿಕೊಂಡಂಥ ಶ್ರೀ ಸೀತ ರಾಘವ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ ಅಧಿಪತಿಗಳಾದ ವೇ|| ಬ್ರಂ|| ಶ್ರೀ|| ಪಾಳ್ಯದ ವೆಂಕಟರಾಜಲು ಪಂಡಿ ರವರು ಈ ಲಾವಣಿ ಕಾಣಿಕೆಯು ಸರ್ವಾಂಗ ಸುಂದರವಾಗಿರುವಂತೆ ಶ್ರಮವಹಿಸಿ ಸಕಾಲಕ್ಕೆ ಸರಿಯಾಗಿ ಮುದ್ರಿ ಕೊಟ್ಟಿರುವರು. ಪರಮಾತ್ಮನು ಅವರುಗಳ ಸಾತ್ವಿಕ ಉದಾರ ಭಾವನೆಗಳನ್ನು ಮತ್ತಷ್ಟೂ ಹೆಚ್ಚಿಸಿ ಜನಾರ್ದ ರೂಪಿ ಜನತಾಸೇವೆಯನ್ನು ಹೆಚ್ಚು ನಿಷ್ಕಾಮಬುದ್ಧಿಯಿಂದ ಮಾಡುವ ಪವಿತ್ರ ಚೈತನ್ಯವನ್ನು ಕೊಟ್ಟು ಕಾಪಾಡ ಎಂದು ಹಾರೈಸಿ ಆ ಪರಮಾತ್ಮನಿಗೆ ಅನಂತಾನಂತ ಸ್ಮರಣಾಮಗಳನ್ನು ಅರ್ಪಿಸುತ್ತೇನೆ.

ಇದ್ದಿಲು ಪುಡಿಗೆ ಸೆಂಟ್ ಮಿಶ್ರ ಮಾಡಿದರೆ? ಊದಬತ್ತಿಗಳೆನಿಸಿಕೊಳ್ಳುವುದಿಲ್ಲ.

ಪುರಾತನ ಮಹರ್ಷಿಗಳಿಂದ ಉಕ್ತವಾದ ಆಯುರ್ವೇದ ಶಾಸ್ತ್ರೀತ್ಯಾ ತಯಾರಿಸಿದ ಬತ್ತಿಗಳು ಆರೋಗ್ಯವನ್ನು ಹೆಚ್ಚಿಸಿ ಮನಸ್ಸಂತೋಷಪಡಿಸುತ್ತವೆ. ಇಂತಹ ಬತ್ತಿಗಳನ್ನು ತಯಾರಿಸಲು ಉತ್ತಮ ಕಲೆಗಾರರಿಂದಲೇ ಸಾಧ್ಯ. ಅನೇಕ ವರ್ಷಗಳ ನುರಿತ ಅನುಭವದಿಂದ.

ಕೆ. ರಂಗಪ್ಪನವರ

ನೇತೃತ್ವದಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸಿದ ಈ ಕೆಳಗೆ ಕಂಡ ಊದಬತ್ತಿಗಳು ನಿಮ್ಮ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತವೆ.

ಪ್ರಭಾತ ಅಗರ್ ಬತ್ತಿ

ಈವಿನಿಂಗ್ ಇನ್ ಮೈಸೂರು ಸುಗಂಧ ಬತ್ತಿ

ನಾಟ್ಯರಾಣಿ ಅಗರ್ ಬತ್ತಿ

ಅಸಲಿ ಶಕುಂತಲಾ ನರ್ಗಿಸ್ ಬತ್ತಿ

ಇವುಗಳಿಂದ ಬರುವ ಧೂಮವು ಸುಗಂಧಯುಕ್ತವಾಗಿಯೂ, ಆರೋಗ್ಯಕರವಾಗಿಯೂ ಮತ್ತು ಕ್ರಿಮಿನಾಶಕ ಗುಣವುಳ್ಳದ್ದಾಗಿಯೂ ಇರುತ್ತವೆ.

ವಿವರಗಳಿಗೆ:— **ಪೋಸ್ಟ್‌ಬಾಕ್ಸ್ ನಂ ೪೭. ಬೆಂಗಳೂರು ೨**

ಗಟ್ಟಿಬಣ್ಣದ ಮತ್ತು ಬಹಳ ಕಾಲ ಬಾಳಿಕೆ ಬರುವ

ಜಮಖಾನೆಗಳೂ, ಉಲನ್ ರತ್ನ ಕಂಬಳಿಗಳೂ,

ಮೋಟರ್ ಕಾರುಗಳಿಗೂ, ಮನೆಗಳಿಗೂ, ಬಂಗಲೆಗಳಿಗೂ ಹಾಸಲು ಅಂದವಾಗಿಯೂ, ಲಕ್ಷಣವಾಗಿಯೂ ಇವೆ.

ಕುರ್ಚಿಗಳಿಗೆ ಹಾಕುವ ಬಹು ಸಣ್ಣ ಸೈಜಿನಿಂದ ಹಿಡಿದು ನಡುಮನೆಗಳಿಗೆ ಹಾಸುವ ಬಹು ದೊಡ್ಡ ಸೈಜಿನ ವರೆಗೂ ನಿಮಗೆ ಬೇಕಾದ ಅಳತೆಯಲ್ಲಿ ತಯಾರು ಮಾಡಿಕೊಡುತ್ತೇವೆ.

ಬಾಹುಸಾರ್ ಕಂಪೆನಿ, ಓಲ್ಡ್ ಮೈಸೂರ್ ಬ್ಯಾಂಕ್ ರೋಡ್, ಮೈಸೂರು

ಶ್ರೀವೈಷ್ಣವ ವಂಶೀಯರಾದ

ಕುಟುಂಬ

ಜಗತ್ಪಾವನ

ಎಂಬ ಮಾಸಪತ್ರಿಕೆ

ಎಂ. ಎಸ್. ಲಿಂಗಪ್ಪ ಎಡಿಟರ್.

ಸಂಪುಟ ೧. { ಅಕ್ಷಯ ಸಂ॥ ಕಾರ್ತೀಕ. } ಸಂಚಿಕೆ ೧.



ವಿಷಯಾನುಕ್ರಮಣಿಕೆ

ಜಗತ್ಪಾವನವು, ನಮ್ಮ ದೇಶಪಾಲಕರೂ	...	...	1
ಪತ್ರಿಕಾ ಕರ್ತರ ಕರ್ತವ್ಯ	...	...	11
ಈ ಪತ್ರಿಕೆಯಿಂದಾಗುವ ಮಹತ್ಪ್ರಯೋಜನ	...	...	17
ಈ ಪತ್ರಿಕೆಯ ಮುಖ್ಯೋದ್ದೇಶ	...	...	22
ಸ್ವವಿಷಯ	...	...	25
ಕುರುಬರ ಮಹಾಜನಗಳಲ್ಲಿ ವಿಜ್ಞಾಪನೆ	...	...	32

ಸುಲಭ ಬೆಲೆ ! ಪರಮಾವಶ್ಯಕ ! !

ಕನ್ನಡ ಪುಸ್ತಕಗಳು.

ಈಗಿನ ಜನರು ಕೋರ್ಟು ವ್ಯವಹಾರಗಳನ್ನು ತಿಳಿಯದೆ ಅಯ್ಯೋ ಮೋಸವಾಯಿತಲ್ಲ ಚತುರತೆಗೆ ಮರುಳಾಗಿ ಬಂದು ಸರ್ವಸ್ವವನ್ನೂ ಕಳೆದುಕೊಂಡು ಪರರ ಸರ್ವಸ್ವವನ್ನೂ ತೆತ್ತು ಬರಗೈಯಾಗುತ್ತಿದ್ದಾರೆ. ಇಂಥವರ ಉಪಕಾರಕ್ಕಾಗಿ ಕನ್ನಡ ಇಂಡಿಯನ್ ಪೆನಲ್‌ಕೋಡು ೨-೮-೦ ರೂ ಕನ್ನಡ ಕ್ರಿಮಿನಲ್ ಪ್ರೊಸೀಜರ್‌ಕೋಡು ೩-೦-೦ ರೂ. ಹಿಂದು ಲಾ ೨-೪-೦ ರೂ. ಪಟೇಲರ ಮ್ಯಾನ್ಯೂಯಲ್ ೧-೦-೦ ಟಪಾಲ ಖರ್ಚು ಬೇರೆ.

"ಜಗತ್ಪಾವನ" ಪತ್ರಿಕೆಯ ಚಂದಾದಾರರಿಗೆ ರೂ. ಗೆ ೩ ಆಣೆ ಯಂತೆ ಡಿಸ್ಕೌಂಟು ! !

ಬಿ. ನರಸಿಂಗರಾವ

ಪಬ್ಲಿಷರ್ ಆಫ್ ಗೆಜಿಟ್, ಬೆಂಗಳೂರು ಸಿಟಿ

॥ ಶ್ರೀರಸ್ತು ॥



ಅಕ್ಷಯ ಸಂ॥ ಕಾರ್ತಿಕ 1926 ನೆ ನವಂಬರ್.

"ಅಹಿಂಸಯೈವಭೂತಾನಾಂ ಕಾರ್ಯಂ ಶ್ರೇ
ಯೋನು ಪಾಲನಮ್ ॥ ವಾಕ್ಚೈವ ಮಧುರಾ
ಕ್ಷಣಾಪ್ರಯೋಜ್ಯಾ ಧರ್ಮಮಿಚ್ಛತಾ(ಮನು)

ಮೈರಬುದ್ಧಿಯನ್ನು ಬಿಟ್ಟು, ಎಲ್ಲರಿಗೂ ಕಲ್ಯಾಣಕಾರಕ ವಿಷಯಗಳನ್ನು ಉಪದೇಶಿಸುತ್ತಾ, ಸಮಾ ಮಧುರ, ಸುಶೀಲತಾ ಯುಕ್ತವಾದ ವಾಕ್ಯವನ್ನೇ (ಧರ್ಮವನ್ನು ಅಪೇಕ್ಷಿಸುವವನು) ಹೇಳುತ್ತಾ ಇರಬೇಕು.

ಜಗತ್ಪಾವನವೂ ನಮ್ಮ ದೇಶಪಾಲಕರೂ.

ಈ "ಜಗತ್ಪಾವನ" ಪತ್ರಿಕೆಯು ನಮ್ಮ ಮೈಸೂರು ರಾಜ್ಯದಲ್ಲಿ ಅವತರಿಸಿದ್ದು ಅತ್ಯಂತ ಶುಭಸೂಚನೆಯು. 'ಜಗದ್ಗುರು' ಎಂಬ ಶಬ್ದದಂತೆ ಈ ಜಗತ್ ಎಂಬುದಕ್ಕೆ ಕನ್ನಡರಾಜ್ಯವೆಂದು ವಿವಕ್ಷಿತವಾಗಿದೆ. ಅದಕ್ಕಾಗಿ ಈ ಮೈಸೂರು ರಾಜ್ಯದ ವಿಷಯದಲ್ಲಿ ಸ್ವಲ್ಪ ಮಾತ್ರ ತಿಳಿಸಲಪೇಕ್ಷಿಸುವೆವು

ಈ ದೇಶವು ದಕ್ಷಿಣಹಿಂದೂಸ್ಥಾನದ ಮೈದಾನದಲ್ಲಿ—ಪೂರ್ವ ಪಶ್ಚಿಮ ಘಟ್ಟಗಳು ನೀಲಗಿರಿಯಲ್ಲಿ ಸಂಧಿಸಿದ ಮಾಲೆಯಲ್ಲಿ ವ್ಯಾಪಿಸಿರುವದ

ರಿಂದ, ಇದು ಇದರ ಸುತ್ತಣ ಪ್ರದೇಶಕ್ಕಿಂತ ಎಷ್ಟೋ ಸಾವಿರಾರು ಅಡಿಗಳ ಎತ್ತರವಾದ ಸಮಭೂಮಿ (ಟೇಬಲ್ ಲ್ಯಾಂಡ್) ಯಾಗಿದ್ದುಕೊಂಡು, ಈ ತ್ರಿಪರ್ವತ ಸಾಲುಗಳನ್ನಾಶ್ರೈಸಿರುವ, ಬಾಬಾಬುಡನ್ ಬೆಟ್ಟ, ವೀರಭದ್ರಬೆಟ್ಟ, ನಂದಿಬೆಟ್ಟ ಮುಂತಾದ ಪರ್ವತಾವಳಿಗಳಿಂದ ವ್ಯಾಪ್ತವಾಗಿ, ಅಲ್ಲಲ್ಲಿ ಗುಡ್ಡಸಾಲುಗಳಿಂದ ಕಂಗೊಳಿಸುತ್ತಲಿದೆ. ಇದರಿಂದ ಈದೇಶವು ತ್ರಿಗರ್ತವೆಂದು ಎಣಿಸಲ್ಪಟ್ಟಿದೆ. * ಈಶ್ವರಸೃಷ್ಟಿಯೆಲ್ಲಿ ನೆವ್ಮ ಭರತಖಂಡದಲ್ಲಿ ಇಂತಹ ಜಲನಾಡಿಗಳಿಂದ ವ್ಯಾಪ್ತವಾಗಿರುವ ಭೂಪೃಷ್ಠವು ಮತ್ತೆಲ್ಲಿಯೂ ಇಲ್ಲವೆಂದರೂ ಸಲ್ಲವದು. ಕೈಲಾಸ (ಮಾನಸಸರೋವರ) ವು ಸಿಂಧೂ, ಗಂಗಾ, ಬ್ರಹ್ಮ ಪುತ್ರಗಳೆಂಬ ೩ ದಿವ್ಯನದಿಗಳ ಉಗಮಸ್ಥಾನವೆಂದು ಪ್ರಸಿದ್ಧವಾಗಿರುವಂತೆ, ಈ ನೆವ್ಮ ದೇಶವು—ಪೂರ್ವಘಟ್ಟ, ಪಶ್ಚಿಮ ಘಟ್ಟ, ನೀಲಗಿರಿ ಬೆಟ್ಟಗಳ ಮೆಲಿನ ಸ್ಥಾನವಾಗಿರುವದರಿಂದ ಸಮುದ್ರಮಟ್ಟಕ್ಕಿಂತ ಸರಾಸರಿ ೩ ಸಾವಿರ ಅಡಿಗಳಿಗೆ ಕಡಿಮೆಯಿಲ್ಲದ ಎತ್ತರ ಪ್ರದೇಶವಾಗಿರುತ್ತಾ, ಕದಂಬ, ಕಾವೇರಿ, ಕಪಿಲ, ಲಕ್ಷ್ಮಣತೀರ್ಥ, ಅರ್ಕಾವತಿ, ಹಗರಿ ನದಿ, ಶರಾವತಿ, ತುಂಗಾ, ಭದ್ರಾ, ವರದಾ ಮುಂತಾದ ಸರ್ವೋತ್ತಮ ಮಹಾನದಿಗಳ ತೌರುಮನೆಯಾಗಿರುವದಲ್ಲದೆ, ನೆವ್ಮ ದೇಶದ ಯಾವ ಕಡೆಯಲ್ಲಿ ನೋಡಿದರೂ ೫-೪-೩-೬ ಮಟ್ಟದೊಳಗಾಗಿ ಅಶೋಷ್ಯವಾದ ಜಲನಾಡಿಗಳ ಸಂಪತ್ತನ್ನು ಪಡದಿರುವದು. ಈ ಭಾಗ್ಯವು ಪ್ರಾಯಶಃ ಜಗತ್ತಿನ ಮತ್ಯಾವ ಭಾಗದಲ್ಲಿಯೂ ಇಲ್ಲವೇ ಇಲ್ಲವೆನ್ನಬಹುದು. ಇಂತಹ ಭೂ ಪರಿಪಾಕದಿಂದ ನೆವ್ಮ ದೇಶದ ನಡುಮಧ್ಯ ಭಾಗದಲ್ಲಿ ೫೦-೬೦ ಮೈಲಿ ಉದ್ದ, ೪೦-೫೦ ಮೈಲಿ ಅಗಲ ಪ್ರದೇಶವಾದ ಮೂಲೇ ಕಲ್ಲು ತಿರುಪತಿಯ ಆಸಪಾಸು ಪ್ರಾಂತವು ಹೆಜ್ಜೆಹೆಜ್ಜೆಗೆ ತೆಂಗಿನ ಮರಗಳ ತೋಟಕ್ಕವಕಾಶವನ್ನಿತ್ತಿರುವದಲ್ಲದೆ, ಅದರ ಪಶ್ಚಿಮ ಭಾಗದಲ್ಲಿ

---

* ಈಕನ್ನಡ ನಾಡು ಗೋವಾವರಿಯಿಂದ ದಕ್ಷಿಣ ವಕ್ಕೆಮಾರ್ಗ ಭಾಗವನ್ನಾವರಿಸಿದೆ. ಇದರಿಂದ ಆರ್ಕಾಡು ನವಾಬರ ರಾಜ್ಯಕ್ಕೆ ಕರ್ನಾಟಕವೆಂದು ಹೆಸರಿದೆ. ವಿಜಯನಗರದ ಎಜಪರಿಗೆ ಕರ್ನಾಟಕ ಸಿಂಹಾಸನಾಧಿಪತಿಗಳೆಂದು ಹೆಸರಿತ್ತು. ಮುಸಲ್ಮಾನರ ಕೈವಶಲ್ಲಿದ್ದರೂ, ಶೂರನಾದ ಟೀಪುವೂ ದಕ್ಷಿಣ ಸಚಿವದ ದಿವಾನರೂ ಮೈಸೂರಿಗೆ ಸೇರಿದವರು.

ನೂರಾರು ಮೈಲಿಗಳು ಭಾಗವು ಅಡಕೆ, ಬಾಳೆಗಳ ತೋಟಗಳಾಗಿಯೂ ಪೂರ್ವ ಮತ್ತು ದಕ್ಷಿಣಭಾಗವು ದಿವ್ಯವಾದ ರಾಗಿ, ತೊಗರಿ, ಅವರೆ ಮುಂತಾದ ಖುಷ್ಕಿಬೈರಿಗೆ ಅವಾಸಸಾಧನವಾಗಿಯು ಇದೆ. ಇದೂ ಅಲ್ಲದೆ ಈ ದೇಶವು ಶ್ರೀಗಂಧ, ಯಾಲಕ್ಕಿ, ಮೆಣಸು, ಕಾಫಿ, ಕೊಬ್ಬರಿ, ಅಡಕೆ ಮುಂತಾದ ಅತೀವೋತ್ತಮ ವಸ್ತುಗಳ ಜನ್ಮಭೂಮಿಯಂದು ಜಗತ್ತಿನಲ್ಲಿ ಅನುಪಮ ಕೀರ್ತಿಯನ್ನು ಪಡದಿರುವದು.

ಹೀಗೆ ಜಗನ್ನಿಯಂತನ ಅಪಾರ ಚಾತುರೀ ಧುರೀಣತೆಗೆ ಕಾರಣ ಭೂತವಾದ ನಮ್ಮ ನಾಡು ಪರಮಪ್ರತಾಪಾನ್ವಿತ ಮಹರ್ಷಿಯಾದ ಪರಶು ರಾಮನ ಆಶ್ರಮವಾದ ಮಹೇಂದ್ರ ಪರ್ವತದ ತಟವಾಗಿದ್ದುಕೊಂಡು, ತನ್ನಲ್ಲಿರುವ ಪ್ರಜೆಗಳ ಧರ್ಮಬುದ್ಧಿ, ಉದಾರತ್ವ ಗಾಂಭೀರ್ಯತ್ವ ಮುಂತಾದ ಕಲ್ಯಾಣಗುಣಗಳಿಗೆ ಆಶ್ರಯಸಾಧನವಾಗಿರುವದೆಂಬದನ್ನರಿತು— ಶ್ರೀಮಚ್ಛಂಕರಾಚಾರ್ಯರವರು ಇದೇ ಪ್ರಾಂತವನ್ನು ತಮ್ಮ ಗುರುಪೀಠಕ್ಕೆ ಮುಖ್ಯಸ್ಥಾನವಾಗಿ ಮಾಡಿಕೊಂಡರು. ಶ್ರೀಮದ್ರಾಮಾನುಜಾಚಾರ್ಯರವರು ತಮ್ಮ ಜನ್ಮಸ್ಥಾನವನ್ನು ಸಹ ತ್ಯಜಿಸಿ, ಈ ನಾಡನ್ನೇ ಆಶ್ರಯಿಸಿ, ತಮ್ಮ ಮತ ಪ್ರಚುರಕ್ಕಾರಂಭಿಸಿದರು. ಶ್ರೀಮನ್ಮಧ್ವಾಚಾರ್ಯರವರು ಈ ದೇಶದಲ್ಲಿಯೇ ಅವತರಿಸಿ, ತಮ್ಮ ಮತವನ್ನು ಸರ್ವತ್ರ ವಿಸ್ತರಿಸಿದರು. ಹಾಗೆಯೇ ಕಲ್ಯಾಣವ ಶ್ರೀಬಸವೇಶ್ವರರು ಸಹ ತಮ್ಮ ಮತ ಪ್ರಚಾರಕ್ಕೆ ಈ ನಮ್ಮ ಕನ್ನಡನಾಡನ್ನೇ ಮುಖ್ಯಸ್ಥಾನವನ್ನಾಗಿ ಮಾಡಿಕೊಂಡರು. ಇವರಂತೆ ದಿಗಂಬರ ಜೈನಮತಾಚಾರ್ಯರೂ ಈ ನಾಡನ್ನೇ ತಮ್ಮ ಮತಪ್ರಚಾರಕ್ಕೆ ಮುಖ್ಯವನ್ನಾಗಿ ಮಾಡಿಕೊಂಡಿದ್ದಾರೆಂಬುದು ಸ್ಪಷ್ಟವು. ಇಂತಹ ನಮ್ಮ ಕನ್ನಡ ನಾಡಿನ ಸಾತ್ವಿಕ ಪ್ರಜೆಗಳ ಧರ್ಮ ಪರತ್ವವನ್ನು ತಿಳಿದು, ನಮ್ಮನ್ನಾಳಲು ಶ್ರೀ ಯಶೋದಾನಂದನಾದ ಶ್ರೀಕೃಷ್ಣಸ್ವಾಮಿಯ ಅಂಶಾಂಶೀಭೂತರಾದ, ಮತ್ತು ವಂಶೀಕಾರ ಯಾದವ ಕ್ಷತ್ರಿಯವಂಶದ ಮಹಿಪಾಲರೇ ವಂಶಾನುಸ್ಯೂತವಾಗಿ ಆಳುತ್ತಾ ಬರುತ್ತಿರುವಂತೆ ದೈವಸಂಘಟನೆಯುಂಟಾಗಿರುವದಂತೂ ನಮ್ಮ ಅಪಾರಭಾಗ್ಯವೆಂದೆನ್ನಲಡ್ಡಿ ಇಲ್ಲ. ಮಧ್ಯಕಾಲದಲ್ಲಿ ದಕ್ಷಿಣ ದೇಶದಲ್ಲಿ ಮುಸಲ್ಮಾನ್ ಪಾಹಿದೆರೆಗಳು, ಹೈದರಾಬಾದಿನ ನೈಜಾಮನೂ,

ಮುರಾಟೆಯುವರೂ ಪ್ರಬಲರಾಗಿ, ತಮ್ಮ ತಮ್ಮ ದೇಶಗಳನ್ನು ಸರ್ವತೋ ಮುಖವಾಗಿ ವಿಸ್ತರಿಸಲಾರಂಭಿಸಿದ್ದ ಕಾಲದಲ್ಲಿ—ಜಗನ್ನಿಯಾಮಕನಾದ ಭಗವಂತನು ಈ ನಮ್ಮ ರಾಜ್ಯವು ಅಂತಹ ವೈರಿ ರಾಜರುಗಳ ಉಪಪ್ಲವ ದಿಂದ ನಾಶವಾಗದೆ, ಸ್ಥಾಯಿಯಾಗಿ ನಿಲ್ಲಲನುವಾಗುವಂತೆ ಹೈದರಲ್ಲೀಖಾನ್ ಮತ್ತು ಟೀಪು ಸುಲ್ತಾನ್ ಎಂಬ ಇಂಡಿಯಾ ನಪೋಲಿಯನ್‌ಗಳ ಪರಮ ಶಾಸನಮುಖಕ್ಕೆ ದೊರಕಿಸಿ, ತನ್ಮೂಲಕ ಈ ದೇಶದ ಸಂಪತ್ತು ಇನ್ನೂ ಅಧಿಕವಾಗಿ ಬೆಳೆಯುವಂತೆ ಮಾಡಿದ್ದನ್ನು ತಿಳಿಯುವದು ಪರಮಾವಶ್ಯಕವು.

ಹೀಗೆ ವಿಜಯಕೃಷ್ಣರೆಂಬ ನಮ್ಮ ಶ್ರೀಮನ್ಮಹಾರಾಜರವರ ಮೂಲ ಪಿತೃಗಳಿಂದ ಈವರಿಗೂ ಯಾವದೊಂದು ಪರಚಕ್ರದ ಉಪಹತಿಗೂ ಒಳಗಾಗದೆ ನಮ್ಮ ರಾಜ್ಯವು ಶಾಶ್ವತಾನಂದಭಾಗಿಯಾಗಿರುವದಲ್ಲದೆ, ಈಗಿನ ನಮ್ಮ ಶ್ರೀಮನ್ಮಹಾರಾಜರವರು, "ಇಂದ್ರಾನಿಲಯಮಾರ್ಕಾ ಣಾಂ ವಹ್ನೀನಾಂ ವರುಣಸ್ಯಚ ॥ ಚತಂದ್ರವಿತ್ತೇಶಯೋಶ್ಚೈವ ಮಾತ್ರಾ ನಿರ್ಹೃತ್ಯ ಶಾಶ್ವತೀಃ ॥ ಎಂಬ ಮನೂಕ್ತಿಯಂತೆ—ಇಂದ್ರ—ಪರಮೈಶ್ವರ್ಯಕರ್ತನಾಗಿಯೂ, ವಾಯು—ಪ್ರಾಣಾವತ್ಪ್ರಿಯನೂ, ಪರಹೃದಯಭೇದಕನೂ, ಯಮ—ನ್ಯಾಯಾನ್ಯಾಯಗಳನ್ನು ಲಕ್ಷಿಸುವದರಲ್ಲಿ ಸಮರ್ಥನೂ, ಅರ್ಕ—ಸೂರ್ಯನಂತೆ ಧರ್ಮವಿದ್ಯಾಪ್ರಕಾಶಕನೂ, ಅಧರ್ಮ ಅವಿದ್ಯಾಧ್ವಂಸಕನೂ, ಅಗ್ನಿ—ದುಷ್ಟರನ್ನು ಧ್ವಂಸಮಾಡುವವನೂ, ವರುಣ—ದುಷ್ಟರನ್ನು ಬಂಧಿಸುವವನೂ, ಚಂದ್ರ—ಶ್ರೇಷ್ಠಪುರುಷರನ್ನು ಆನಂದಗೊಳಿಸುವವನೂ, ವಿತ್ತೇಶ—ಧನಕೋಶಗಳಿಂದ ಪೂರ್ಣನೂ ಆಗಿರುವರು.

"ತ್ರೈವಿದ್ಯೇಭ್ಯಸ್ತ್ರಯೀವಿದ್ಯಾಂ ದಂಡನೀತಿಂ ಚ ಶಾಶ್ವತೀಮ್ ॥ ಆನ್ವೀಕ್ಷಕೀಂ ಚಾತ್ಮವಿದ್ಯಾಂ ವಾರ್ತಾರಂಭಾಂಶ್ಚ ಲೋಕತಃ" ಈ ನಮ್ಮ ಮಹಾರಾಜರವರೂ, ಇವರ ದಿವಾನ (ಮಂತ್ರಿ) ಯವರೂ, ಸಭಾಸದರೂ, ಸೇನಾ—ಸೇನಾಪತಿಯವಾದ ದಂಡನೀತಿ, ನ್ಯಾಯವಿದ್ಯಾ, ಆತ್ಮವಿದ್ಯಾಗಳೆಂಬ ತ್ರಿ ವಿದ್ಯೆಗಳನ್ನೂ ತಿಳಿದವರಾಗಿರುವರು.

(ಇಂದ್ರಿಯಾಣಾಂ ಜಯೇ ಯೋಗಂ ಸಮಾತಿಷ್ಠೇದ್ದಿವಾನಿಶಮ್ ॥ ಜಿತೇಂದ್ರಿಯೋ ಹಿ ಶಕ್ನೋತಿ ವಶೇ ಸ್ಥಾಪಯಿತುಂ ಪ್ರಜಾಃ) ॥

ಈ ಎಲ್ಲಾ ಪ್ರಜಾಪಾಲಕರೂ ತಂತಮ್ಮ ಇಂದ್ರಿಯಗಳ ಜಯಿಸಿ, ಅವುಗಳನ್ನು (ನಮ್ಮ ಶ್ರೀಮನ್ಮಹಾರಾಜರಂತೆ) ತಮ್ಮ ವಶದಲ್ಲಿಟ್ಟುಕೊಂಡು, ಸದಾ ಧರ್ಮಪರರಾಗಿ, ತಮ್ಮ ತಮ್ಮ ವ್ಯವಹಾರಗಳನ್ನು ಮಾಡುತ್ತಿರಬೇಕಾದ್ದರಿಂದ ಅಧರ್ಮದಿಂದ ದೂರವಾಗಿರುವದು ಪರಮಾವಶ್ಯಕವು. ಇದಕ್ಕಾಗಿ ಸದಾಸಮಾಧಿಸ್ಥರಂತೆ ತಮ್ಮ ಇಂದ್ರಿಯ ಅಂದರೆ-ಮನಸ್ಸು, ಪ್ರಾಣ ಮತ್ತು ಶರೀರ) ಗಳನ್ನು ಜಯಿಸಿರಬೇಕು. ಇವುಗಳನ್ನು ಜಯಿಸುವವನೇ ಪ್ರಜೆಗಳನ್ನು ವಶವರ್ತಿಗಳನ್ನಾಗಿಟ್ಟುಕೊಳ್ಳಲು ಸಮರ್ಥನೆಂದು ಶಾಸ್ತ್ರಗಳು ಉದ್ಘೋಷಿಸುತ್ತಾ ಇರುವವು.

ನಾವು ಏನು ಧನ್ಯರೋ? ಸಕಲ ಕಲ್ಯಾಣಕಾರಕ ಧರ್ಮವೇ ಮೂರ್ತೀಭವಿಸಿರುವಂತೆ ಪ್ರಕಾಶಿಸುತ್ತಿರುವ ನಮ್ಮ ಶ್ರೀಮನ್ಮಹಾರಾಜರವರನ್ನೂ, ಅವರಂತೆಯೇ ಸದ್ಗುಣಾಲಂಕೃತರಾದ ಶ್ರೀಮದ್ಯುವರಾಜರು ಶ್ರೀಮಜ್ಜಯ ಚಾಮರಾಜೇಂದ್ರ ವಡೆಯರವರು ಮುಂತಾದ ಪ್ರಭುವರ್ಗವನ್ನು ಹೊಂದಿ, ಪರಮಾನಂದ ಭಾಗಿಗಳಾಗಿರುವೆವಾದ್ದರಿಂದ ನಮ್ಮ ದೇಶದ ಪ್ರಜೆಗಳ ಭಾಗ್ಯವು ಅನ್ಯಾದೃಶವಾಪದ್ದು.

ಇಂತಹ ಪಾರಿಶುದ್ಧ್ಯವ್ರತ ವಿಭೂಷಿತರಾದ ನಮ್ಮ ಶ್ರೀಮನ್ಮಹಾರಾಜರವರ ಗುಣ ಕಥನೆಯನ್ನು ಮಾಡುವ ಭಾಗ್ಯವು ಈ 'ಜಗತ್ಪಾವನೆ'ಕ್ಕೆ ದೊರಕಿದ್ದು ಬಹು ಪುಣ್ಯಾಪರಿಪಾಕವೆಂದೆನ್ನಲಡ್ಡಿಯೇಯಿಲ್ಲ.

ನಮ್ಮ ರಾಜ್ಯದ ಮುಖ್ಯಮಂತ್ರಿವರ್ಯ (ದಿವಾನ್) ರವರು ಸಹ ಶ್ರೀಮನ್ಮಹಾರಾಜರವರಂತೆ ಅಸಾಧಾರಣ ಪ್ರಶಸ್ತಗುಣಾಲಂಕೃತಮಹಾಮಹಿಮರೇ ಆಗಿರುವದೂ ಸಹ ಇತೋಪ್ಯಧಿಕಶೋಭಾಸ್ಪದವಾಗಿದೆ.

"ಮೌಲಾನ್ ಶಾಸ್ತ್ರವಿದಃ ಶೂರಾನ್ ಲಬ್ಧಲಕ್ಷಾನ್ ಕುಲೋದ್ಗತಾನ್ ॥ ಸಚಿವಾನ್ ಸಪ್ತ ಚಾಷ್ಟೌ ವಾ ಪ್ರಕುರ್ವೀತ ಪರೀಕ್ಷಿತಾನ್ ॥

ಟೀಕು: ಸ್ವರಾಜ್ಯ, ಸ್ವದೇಶದಲ್ಲಿ ಜನಿಸಿರುವಂತಹ, ಸಕಲ ಶಾಸ್ತ್ರಕೋವಿದರಾದ, ಶೂರವೀರರಾದ, ಹಾಗೂ ಯಾರ ಲಕ್ಷ್ಯ (ವಿಚಾರ) ವು ನಿಷ್ಫಲವಾಗತಕ್ಕದ್ದಲ್ಲವೊ ಅಂತಹ ಸತ್ಕುಲೋತ್ಪನ್ನರಾದ, ಬಳ್ಳೇ

ರೀತಿಯಿಂದ ಪರೀಕ್ಷಿತರಾದವರನ್ನೇ ಸಚಿವ (ಮಂತ್ರಿ) ಯರನ್ನಾಗಿ ೭-೮ ಜನರನ್ನು ನೇಮಿಸಿಕೊಳ್ಳಬೇಕೆಂತಲೂ—

"ಅಪಿ ಯತ್ಸುಕರಂ ಕರ್ಮ ತದಪ್ಯೇಕೇನ ದುಷ್ಕರಮ್ ॥ ವಿಶೇಷತೋಽಸಹಾಯೇನ ಕಿಂತು ರಾಜ್ಯಂ ಮಹೋದಯಮ್ ॥ ವಿಶೇಷ ಸಹಾಯದ ಜೊತೆಗೆ ಯಾವ ಅತ್ಯಂತ ಸುಗಮವಾದ ಕಾರ್ಯವೂ ಒಬ್ಬನೇ ಮಾಡುವದಾದರೆ ಕಠಿಣವಾಗತಕ್ಕದ್ದು ಲೋಕಸ್ವಭಾವವು! ಹೀಗಿರುವಲ್ಲಿ ಮಹಾ ವ್ಯಾಪಾರವಾದ ರಾಜ್ಯ ಧುರಂಧರತ್ವವು ಬಬ್ಬರಿಂದಲೇ ಹೇಗೆ ಸಾಧ್ಯವಾದೀತು? ಇದಕ್ಕಾಗಿ ಇಂತಹ ರಾಜ್ಯವ್ಯವಸ್ಥೆಯ ದೊಡ್ಡ ಕೆಲಸವನ್ನು ಬಬ್ಬ ಮಂತ್ರಿಯ ನಿರ್ಭರದಲ್ಲಿ ಬಿಡುವಿಕೆಯು ನ್ಯಾಯವಾಗಲಾರದೆಂತಲೂ ಮನ್ವಾದಿ ಸ್ಮೃತಿಗಳು ಬೋಧಿಸುತ್ತಾ ಇವೆ.

* ನಮ್ಮ ದೇಶದ ರಾಜ್ಯವ್ಯವಸ್ಥೆ (Administration) ಯನ್ನು ಈ ಶಾಸ್ತ್ರಗಳಿಗನುಸಾರವಾಗಿ—ದಿವಾನ್ ರವರು, ಕೌನ್ಸಿಲ್ ಮೆಂಬರುಗಳು, ಚೀಫ್ ಸೆಕ್ರಿಟೇರಿ, ಲೋಕಲ್ ಮತ್ತು ಲೇಜಿಸ್ಲೇಟಿವ್ ಸೆಕ್ರಿಟೆರಿ, ರವಿನ್ಯೂ ಸೆಕ್ರಿಟೇರಿ, ಫೈನಾನ್ಷಿಯಲ್ ಸೆಕ್ರಿಟೆರಿ, ಪಬ್ಲಿಕ್ ಸೆಕ್ರಿಟೇರಿ, ಎಲೆಕ್ಟ್ರಿಕಲ್ ಸೆಕ್ರಿಟೇರಿ, ರೈಲ್ವೇ ಸೆಕ್ರಿಟೇರಿ, ಕಂಟ್ರೊಲರ್, ರೆವಿನ್ಯೂ ಕಮಿಷನರ್, ಸರ್ವೆ ಸೂಪರಿಂಟೆಂಡೆಂಟ್, ಫಾರೆಸ್ಟ್ ಕನ್ಸರ್ವೇಟರ್, ಎಕ್ಸೈಜ್ ಕಮಿಷನರ್, ಯೂನಿವರ್ಸಿಟಿ ವೈಸ್ ಛಾನ್ಸಲರ್, ವಿದ್ಯಾಭ್ಯಾಸದ ಇನ್ಸ್ಪೆಕ್ಟರ್ ಜನರಲ್, ವ್ಯವಸಾಯದ ಡೈರೆಕ್ಟರ್, ಕೈಗಾರಿಕೆ, ವಾಣಿಜ್ಯದ ಡೈರೆಕ್ಟರ್, ಚೀಫ್ ಕಮಾಂಡರ್, ಭೂಗರ್ಭ ಇಲಾಖಾ ಡೈರೆಕ್ಟರ್, ಗಣಿಗಳ ಮುಖ್ಯಾಧಿಕಾರಿ ಮುಂತಾದ ಎಷ್ಟೋಜನ ಪ್ರಧಾನೋದ್ಯೋಗಿಗಳನ್ನು ಇಟ್ಟುಕೊಂಡಿರುವರು.

ಮೇಲಿನ ಶಾಸ್ತ್ರದಂತೆ ಸ್ವದೇಶೋತ್ಪನ್ನರಾದ, ಶಾಸ್ತ್ರಜ್ಞಾನ ಚಣರಾದ, ಶೂರವೀರರಾದ, ಮತ್ತು ಯಾರ ಲಕ್ಷ್ಯವು ನಿಷ್ಫಲವಾದದ್ದಾಗಲಾರದೋ ಅಂತಹ ಅವೇಕ್ಷಬುದ್ಧಿಬಲರಾದ, ಕುಲೀನರಾದ, ಹಾಗೆಯೇ ವಶೀಭೂತೇಂದ್ರಿಯ ಗಾತ್ರವುಳ್ಳವರಾದ, ಧರ್ಮಾಚರಣೆಯಲ್ಲಿ ತತ್ಪರರಾದ,

ಹೊನ್ನು ಹೆಂಣು ಮಂಣುಗಳೆಂಬ ದುರ್ವಸನೆಗಳನ್ನು ಸ್ವಪ್ನದಲ್ಲಿಯೂ ಹತ್ತಿರಕ್ಕೆ ಸೇರಿಸದಿರುವ, ಸತ್ಯಸಂಧಾಗ್ರಗಣ್ಯರಾದ, ದೇಶಸೇವಾದಲ್ಲಿ ಬದ್ಧಪರರಾದ, ರಾಜ್ಯದ ಪ್ರಜೆಗಳನ್ನು ಸರ್ವವಿಧದಲ್ಲಿಯೂ ಪ್ರಜಾವೃದ್ಧಿಪಡಿಸುವದೇ ಮೂಲಮಂತ್ರವನ್ನಾಗಿಳುಳ್ಳೆ, ಮಹಾ ಮಹಿಮರಾದ ನಮ್ಮ ಶ್ರೀಮಂತ ದಿವಾರ್ಜಿರವರನ್ನು ಈ ಮಹತ್ಪದವಿಯಲ್ಲಿಟ್ಟುಕೊಂಡಿರುವ ನಮ್ಮನ್ನಾಳುವ ಮಹಾಸ್ವಾಮಿಯವರ ಪರಮಪ್ರಜ್ಞಾಬಲವು ಅಸಾಧಾರಣವಾದದ್ದೆಂಬದರಲ್ಲಿ ಅಡ್ಡಿಯಲ್ಲ.

ಹಿಂದೆ ನಮ್ಮ ದೇಶದ ಈ ಮುಖ್ಯಾಮಾತ್ಯ (ದಿವಾರ್ಜಿ) ಪದವಿಯಲ್ಲಿ ಶೋಭಿಸುತ್ತಿದ್ದವರೆಲ್ಲರೂ—ನಮ್ಮ ದೇಶೀಯರ ಕಲ್ಯಾಣಕ್ಕಾಗಿ ಯಾವ ಯಾವ ಪ್ರಯೋಜನಕರ ಕಾರ್ಯಗಳು ಅಗತ್ಯಗಳೆಂದು ತಿಳಿದರೋ—ಆವುಗಳನ್ನು ಶ್ರದ್ಧಾಪೂರ್ವಕವಾಗಿ ಅನುಷ್ಠಿಸುತ್ತಾ ಬಂದರಾದ್ದರಿಂದ—ಇಂಡಿಯಾ ದೇಶದಲ್ಲಿರುವ ಎಲ್ಲಾ ನೇಟಿವ್ ರಾಜ್ಯಗಳಲ್ಲೆಲ್ಲಾ ಈ ನಮ್ಮ ಮೈಸೂರು ರಾಜ್ಯವೇ ಮಾದರಿ ಸಂಸ್ಥಾನ (Modal State) ಎಂಬದಾಗಿ ಕೀರ್ತಿಪ್ರತಿಷ್ಠೆಗಳಿಂದ ಪ್ರತೀತಿಯನ್ನು ಪಡದಿರುವದು. ಯೂರೋಪಿನ ನಾಗರಿಕ ರಾಜ್ಯಗಳಲ್ಲಿ ಪ್ರಜಾಧರ್ಮ ಪ್ರೊತ್ಸಾಹಕ್ಕಾಗಿ ಪ್ರಚಾರದಲ್ಲಿರುವ ಪಾರ್ಲಿಮೆಂಟ್ ಸಭೆಯ ಸದುದ್ದೇಶವೂ ನಮ್ಮ ದೇಶೀಯರ ಅವಗಾಹನೆಗೆ ಬಂದು—ಇಲ್ಲಿನ ಪ್ರಜೆಗಳು ಸಹ ತಮ್ಮ ಹಕ್ಕು ಬಾಧ್ಯತೆಗಳನ್ನು ಸಾಧಿಸಿಕೊಳ್ಳುವದರಲ್ಲಿ ನಿರ್ಭೀಕರಾಗಿ ಮಹಾಸ್ವಾಮಿಗಳವರಲ್ಲಿ ನಮ್ರತೆಯಿಂದ ಪ್ರಜಾಪ್ರತಿನಿಧಿಸಭೆಯಮೂಲಕ ಅರಿಕೆ ಮಾಡಿಕೊಂಡು, ತಮಗೆ ಬೇಕಾಗುವ ನ್ಯಾಯವಾದ, ಹಾಗೂ ತಮ್ಮ ಪುರೋವೃದ್ಧಿಸಾಧಕಗಳಾದ ಕಾರ್ಯಗಳನ್ನು ಸರಕಾರದ ಸಹಾಯದಿಂದ ಈಡೇರಿಸಿಕೊಳ್ಳೆಲು ಸಾಧ್ಯವಾಗುವಂತಹ ಪ್ರಜಾಪ್ರತಿನಿಧಿಸಭೆ, ಯ ಸ್ಥಾಪನೆಯೂ—ಆದನ್ನು ದಿನೇ ದಿನೇ ಅಭಿವೃದ್ಧಿಸ್ಥಿತಿಗೆ ತಂದ ಪ್ರಜೋನ್ನತಿಕರ ಪ್ರವರ್ತನೆಯೂ—ಹಿಂದಿನ ಎಲ್ಲಾ ದಿವಾನರುಗಳ ರಾಜ್ಯಕಾರ್ಯ ನಿರ್ವಾಹ ಕಾಲಗಳಲ್ಲಿ ನಡಿಸುತ್ತಾ ಬಂದಿರುವದಲ್ಲದೆ, ಶ್ರೀಮಂತರಾದ ಪೂರ್ವದ ದಿವಾರ್ಜಿ ಮಿ॥ ವಿಶ್ವೇಶ್ವರ್ಯಯ್ಯನವರ ಅಧಿಕಾರ ಕಾಲದಲ್ಲಿ ಸಂಪದಭಿವೃದ್ಧಿ (ಎಕ್ನಾಮಿಕಲ್) ಯ ಶಾಖೆಯೊಂದು ಸ್ಥಾಪಿತವಾದದ್ದು

ಲ್ಲದೆ, ಭದ್ರಾವತೀ ಐರ್ನ್‌ವರ್ಕ್ಸ್, ಭಟ್ಕಳದ ರೇವನ್ನು ಏರ್ಪಡಿಸುವ ಪ್ರಯತ್ನ ಮುಂತಾದ ಎಷ್ಟೋ ಮಹತ್ಪ್ರಯೋಜನಕರ ಕಾರ್ಯಗಳು ಏರ್ಪಡಿಸಲ್ಪಟ್ಟವು.

ಇಂತಹ ಪ್ರಜಾಹಿತ ಪ್ರಕ್ರಿಯೆಗಳು ಪೂರ್ವದ ದಿವಾನರುಗಳ ಕಾಲಗಳಲ್ಲಿ ಆಚರಿತಗಳಾಗುತ್ತಾ ಬಂದಿವೆ. ಆದರೂ—ಕೆಲವು ನಾಕರರು ದಡ್ಡರಾದ, ಶಾಂತರಾದ ರೈತರುಗಳಿಂದ ಲಂಚ ತೆಗೆಯುವಿಕೆ ಮುಂತಾದ ಅಧರ್ಮ ಪ್ರವರ್ತನೆಗಳು ಸರಕಾರದ ಘನವಾದ ಕೀರ್ತಿಗೆ ಕಳಂಕಪ್ರಾಯುಗಳಾಗಿ ಇನ್ನೂ ಲುಪ್ತವಾಗದೆ ಉಳಿದಿರುವವು.

ನಮ್ಮ ದೇಶದ ಪ್ರಜೆಗಳಲ್ಲಿ ಹಿಂದೂಗಳಂತೆ ಮಹಮ್ಮದೀಯರೂ ಸರಿಬೆರಕೆಯಲ್ಲಿದ್ದಾರೆ. ಈ ಎರಡು ಕೋಮಿನವರನ್ನೂ ಸಮದೃಷ್ಟಿಯಿಂದ ಕಾಪಾಡುತ್ತಾ, ದರ್ಪದಿಂದ ಪ್ರಜಾಸಾಮಾನ್ಯಕ್ಕೆ ಹಿಂಸಾ, ದ್ರೋಹ ಮುಂತಾಗಿದವು ಉಂಟಾಗದಂತೆ, ಪ್ರಜಾಸುಕರಕಾರ್ಯಗಳು ಲೀಲಾಜಾಲವಾಗಿ ಲಭ್ಯರಣೆಗೆ ಬರುವಂತೆ ಮಾಡುತ್ತಾ—ಮಹತ್ಪ್ರತಿಭಾಶಾಲಿಗಳೂ, ಸಮರ್ಥರೂ, ಸರ್ವತಂತ್ರಸ್ವತಂತ್ರರೂ ಆಗಿರುವ ಈ ನಮ್ಮ ಶ್ರೀಯುತ ದಿವಾನ್ ರವರು—ತಮ್ಮ ಅಪ್ರತಿಹತ ಪ್ರಜ್ಞಾಸಾಮರ್ಥ್ಯಗಳನ್ನು ನಮ್ಮ ದೇಶದ ಪ್ರಜೆಗಳ ಪೋಷಣೆಗಾಗಿ ವಿನಿಯೋಗಿಸುತ್ತಾ—ಇನ್ನೂ ಹತ್ತೆಂಟುವರ್ಷಕಾಲ ಈ ಮಹತ್ಪದವಿಯಲ್ಲಿನಿಯೇ ನೆಲಸಿರುವಂತೆ ಅನುಗ್ರಹಿಸುವದಕ್ಕಾಗಿ ಭಗವಂತನನ್ನು ಸರ್ವರೂ ಭಕ್ತಿಯಿಂದ ಪ್ರಾರ್ಥಿಸೋಣ.

ಲೋಕದಲ್ಲಿ ರಾಜ, ಮಂತ್ರೀ (ದಿವಾನ್), ಪ್ರಜೆಗಳು ಈ ಮೂರರ ಸಮ್ಮೇಲನವೇ ರಾಷ್ಟ್ರವು! ಪ್ರಜೆಗಳೇ ರಾಷ್ಟ್ರಕ್ಕೆ ಮೂಲವಾದ ನೆಲಗಟ್ಟು! ಈ ಪ್ರಜೆಗಳ ಹಿತಕರ ಕಾರ್ಯಗಳ ವ್ಯವಸ್ಥಾಲಯವೇ ಪ್ರಜಾಪ್ರತಿನಿಧಿಗಳ ಸಭಾಸ್ಥಾನವು.

ನ ಸಾ ಸಭಾ ಯತ್ರ ನ ಸಂತಿ ವೃದ್ಧಾಃ । ನ ತೇ ವೃದ್ಧಾ ಯೇ ನ ವದಂತಿ ಧರ್ಮಮ್ ॥ ನ ತದ್ಧರ್ಮಂ ಯತ್ರ ನ ಸತ್ಯ ಮಸ್ತಿ । ನ ತತ್ಸತ್ಯಂ ಯಚ್ಛಲೇನಾಭ್ಯುಪೇತಮ್ ॥

ವೃದ್ಧರಿಲ್ಲದ್ದು ಸಭೆಯೇ? ಧರ್ಮವನ್ನರಿಯದವರು ವೃದ್ಧರೇ? ಸತ್ಯವಾಗಿಲ್ಲದ್ದು ಧರ್ಮವೇ? ಛಲದಿಂದ ಬಲಾತ್ಕಾರಕ್ಕಾಗಿ ಅಂಗೀಕೃತವಾದದ್ದು ಸತ್ಯವೇ? ಇವು ಎಂದಿಗೂ ಅಲ್ಲವೆಂದು ಶ್ರೀ ಭೀಷ್ಮನು ಧರ್ಮರಾಯನಿಗೆ ಉಪದೇಶಿಸಿದ್ದಾನೆ.

ಪ್ರಜೆಗಳೂ, ಪ್ರಜಾನಿಧಿಗಳೂ ಎಲ್ಲರೂ—ಜಿತೇಂದ್ರಿಯರೂ ಧರ್ಮಜ್ಞರೂ ಆಗಿರಬೇಕೆಂದು—

" ಇಂದ್ರಿಯಾಣಾಂ ವಿಚರತಾಂ ವಿಷಯೇಷ್ವ ಪಹಾರಿಷು ॥
ಸಂಯಮೇ ಯತ್ನ ಮಾತಿಷ್ಠೇ ದ್ವಿದ್ವಾನ್ ಯನ್ತೇವ ವಾಜಿನಾಮ್ " ॥

ಇಂದ್ರಿಯಗಳನ್ನು ಚಿತ್ತಹರಣಗೊಳಿಸತಕ್ಕ ವಿಷಯಗಳಲ್ಲಿ ತಗಲದಂತೆ ತಡದುಕೊಂಡು, (ತಮ್ಮ ವಶದಲ್ಲಿಟ್ಟುಕೊಂಡು) ಶುದ್ಧವಾದ ಧರ್ಮಮಾರ್ಗದಲ್ಲಿ ಸದಾ ಪ್ರವೃತ್ತಗಳಾಗುವಂತೆ ಮಾಡಬೇಕು.

" ಇಂದ್ರಿಯಾಣಾಂ ಪ್ರಸಂಗೇನ ದೋಷಮೃಚ್ಛತ್ಯ ಸಂಶಯಮ್ ॥
ಸನ್ನಿಯಮ್ಯ ತು ತಾನ್ಯೇವ ತತಃ ಸಿದ್ಧಿಂ ನಿಯುಚ್ಛತಿ " ॥

ಯಾಕಂದರೆ ಇಂದ್ರಿಯಗಳನ್ನು ಅಧರ್ಮಮಾರ್ಗದಲ್ಲಿ ಬಿಡುವದರಿಂದ ದೋಷವುಂಟಾಗುವದೆಂಬದು ಎಲ್ಲರಿಗೂ ಗೊತ್ತೇ ಇದೆ. ಅದಕ್ಕಾಗಿ ಅವುಗಳನ್ನು " ಸಾರಥಿಯು ದುಷ್ಟಾಶ್ವಗಳನ್ನು ತನ್ನ ವಶದಲ್ಲಿಯೇ ನಡಿಸುತ್ತಾ ಇರುವನೋ " ಹಾಗೆ ಡಿಸನುತ್ತಾ ಅಭೀಷ್ಟವನ್ನು ಪಡಿಯಬೇಕು ಎಂಬ ಧರ್ಮಸೂಕ್ಷ್ಮವನ್ನರಿತುಕೊಂಡು ಧರ್ಮಜ್ಞರಾಗಿರಬೇಕು. ಅದಕ್ಕಾಗಿ ನಮ್ಮನ್ನಾಳುವ ಮಹಾ ಸ್ವಾಮಿಗಳೂ, ಶ್ರೀಯುತ ದಿವಾಕರವರೂ ಹೇಗೆ ಧರ್ಮಮೂರ್ತಿಗಳಾಗಿದ್ದುಕೊಂಡು—ಪ್ರಜೆಗಳಲ್ಲಿ ಪುತ್ರಭಾವನೆಯನ್ನಿಟ್ಟುಕೊಂಡು ಅಹರ್ನಿಶಿಯಲ್ಲಿಯೂ ಇವರ ಕ್ಷೇಮ ಚಿಂತನೆಯಲ್ಲಿಯೇ ಇರುವರೋ ಅದರಂತೆಯೇ ಪ್ರಜೆಗಳೂ, ಪ್ರಜಾಪ್ರತಿನಿಧಿಗಳೂ ನಮ್ಮನ್ನಾಳುವ ಶ್ರೀಮನ್ಮಹಾರಾಜರಲ್ಲಿಯೂ, ಶ್ರೀಮಂತ ದಿವಾನರವರಲ್ಲಿಯೂ ಅನುಪಮ ಪ್ರೀತಿವಿಶ್ವಾಸಗಳನ್ನಿಟ್ಟುಕೊಂಡು ಭಕ್ತಿಭಾವದಿಂದ ವರ್ತಿಸುವದು ಪರಮಾವಶ್ಯಕವು. ಈ ಮೂವರಲ್ಲಿಯೂ,

ಪರಸ್ಪರ ಮೈತ್ರಿ, ಪ್ರೀತಿಗಳಲ್ಲದಿದ್ದರೆ ರಾಜ್ಯದಾಡಳಿತವೆಂಬ ಮಹಾನ್ ವ್ಯಾಪಾರವು ಜೀಗೆತಾನೆ ಸಾಗೀತು?

" ಪಾಷಂಡಿ ನೋ ವಿಕರ್ಮಸ್ಥಾನ್ ಬೈಡಾಲ ವ್ರತಿಕಾನ್ ಶಠಾನ್ ॥
ಹೈತುಕಾನ್ ಬಕವೃತ್ತೀಂಶ್ಚ ವಾಂಗ್ಮಾತ್ರೇಣಾ ಪಿ ನಾರ್ಚಯೇತ್ ॥

ಧರ್ಮನಿಂದಕ, ದುಷ್ಟಾತ್ಮಿ, ಬಿಡಾಲವ್ರತಿ, ಶಠ, ದೊಡ್ಡ ಮನುಷ್ಯನಂತೆ ವೇಷಧಾರಿ, ಬಕವೃತ್ತಿಯುವ ಇಂತವರಿಂದ ಯಾವ ಮಹತ್ಕಾರ್ಯವೂ ಸಾಧ್ಯವಾಗಲಾರದು.

" ಅಭಿವಾದನ ಶೀಲಸ್ಯ ನಿತ್ಯಂ ವೃದ್ಧೋಪ ಸೇವಿನಃ ॥
ಚತ್ವಾರಿ ತಸ್ಯ ವರ್ಧಂತೇ ಆಯುರ್ವಿದ್ಯಾಯಶೋಬಲಮ್ ॥

ಪರರಲ್ಲಿ ಅಭಿವಾದನ ಶೀಲ (ವಿನಯಾನ್ವಿತ) ನಾಗಿಯೂ, ಸದಾ ಹಿರಿಯರಾದ ವೃದ್ಧರ ಸೇವಾಸಕ್ತನಾಗಿಯೂ ಇರುವವನಿಗೇನೆ— ಆಯು, ವಿದ್ಯಾ, ಯಶಸ್ಸು, ಬಲ ಪರಾಕ್ರಮಗಳು ಲಭಿಸುವವೆಂದು ಮನುಶಾಸನವಿದೆ.

ನಮ್ಮ ಶ್ರೀಮನ್ಮಹಾರಾಜರವರೂ, ಶ್ರೀಮಂತ ದಿವಾನರವರೂ ಹೇಗೆ ಸಕಲ ಕಲ್ಯಾಣಗುಣಗಳಿಂದಲೂ, ಧರ್ಮ ವಿಷಯಜ್ಞಾನದಿಂದಲೂ ಪರಿಪೂರ್ಣರಾಗಿರುವರೋ ಹಾಗೆಯೇ ನಮ್ಮ ಪ್ರತಿಯೊಬ್ಬ ಪ್ರಜಾಪ್ರತಿನಿಧಿಯು ಹಾಶಯನೂ ಪೂರ್ಣ ಪ್ರಜಾವತ್ಸಲನಾಗಿರಬೇಕಲ್ಲದೆ, ತಮ್ಮನ್ನು (ಪ್ರಜಾಪ್ರತಿನಿಧಿ) ಎಂದು ಗೌರವ ಪಡಿಸಿದವಮಾತ್ರಕ್ಕೇ ತಮಗೆ ಮಿಂಚಿದ ಜ್ಞಾನಿಗಳೂ, ಶ್ರೀಮಂತರೂ, ವೇಧಾವಿಗಳೂ. ರಾಜಕೀಯ ವ್ಯವಹಾರ ಜ್ಞರೂ ಯಾರೂ ಇಲ್ಲವೆಂದು ಹಿಗ್ಗಿ, ಉಬ್ಬುವದು ಅನುಚಿತವು. ಎಲ್ಲರೂ ರಾಜಧರ್ಮ, ಪ್ರಜಾಧರ್ಮಗಳನ್ನು ತಿಳಿದುಕೊಂಡೇ ರಾಜಸಭಾಸದರಾಗುವದು ಪರಮಾವಶ್ಯಕವಲ್ಲದೆ—

" ನ ವೇತ್ತಿ ಯೋ ಯಸ್ಯ ಗುಣಪ್ರಕರ್ಷಂ ಸ ಯಸ್ಯ ನಿಂದಾಂ ಸತತಂ ಕರೋತಿ ॥ ಯಥಾಕಿರಾತೀ ಕರಿಕುಂಭ ಜಾತಾ ಮುಕ್ತಾಃ ಪರಿತ್ಯಜ್ಯ ಬಿಭರ್ತಿ ಗುಂಜಾಃ ॥

ಯಾವನೇ ಆಗಲಿ ಪರರ ಉತ್ಕೃಷ್ಟಗುಣಗಳನ್ನು ಕಾಣುಕೊಳ್ಳಲಾರದೆ—ಅಹಂಕಾರದಿಂದಲಾಗಲೀ, ಅಸೂಯಾದಿಗಳಿಂದಲಾಗಲೀ ಯಾವ ಅಂತಹ ಮಹನೀಯರನ್ನು ನಿಂದಿಸುವದಕ್ಕೆ ಕಳಸುವನೋ ಅಂತವನು ಅರಣ್ಯಗಳಲ್ಲಿ ಉಪುರಿರುವ ಆನೆಗಳ ಕುಂಭಸ್ಥಳದಮುತ್ತುಗಳನ್ನು ತ್ಯಜಿಸಿ, ಗುಲಗಂಜಿಗಳನ್ನು ಧರಿಸುತ್ತಾ ಇರುವ ಕಾಡಿನ ಕಾಡು ಜಾತಿಯ ಸ್ತ್ರೀಯರಂತೆ ಹೇಳನಕ್ಕೆ ಪಾತ್ರನಾಗುವನೆಂಬದು ಸ್ವಭಾವವು.

ವಿದ್ವಾಂ, ಜ್ಞಾನೀ, ಧಾರ್ಮಿಕ, ಸತ್ಪುರುಷರು ಇಂತವರ ಸಂಗದಿಂದಲೇ ಸದ್ಗುಣಗಳುಂಟಾಗಬೇಕು. ಇದಕ್ಕಾಗಿ ನಮ್ಮ ಪ್ರಜೆಗಳೂ ಸಹ ನಮ್ಮನ್ನಾಳುವ ಪ್ರಭುಗಳಂತೆ ಸದ್ಗುಣಾಲಂಕೃರಾಗಿರಬೇಕಾದ್ದು ಪರಮಾವಶ್ಯಕವು.

ಪ್ರಕೃತಕ್ಕೆ ನಮ್ಮ ದಿವಾಣ ಸಾಹೇಬರವರಾದ ಅಮೀರ್ ಉಲ್ ಮುಲ್ಕ್ ಮಿರ್ಜಾ ಮಹಮ್ಮದ್ ಇಸ್ಮಾಯಿಲ್ ಬಿ. ಎ., ಸಿ. ಐ. ಇ., ಬಿ. ಬಿ. ಇ. ಯವರು ಶ್ರೇಷ್ಠವಾದ ಸತ್ಯಧರ್ಮ, ವಿವೇಕ, ಸದಾಚಾರ, ರಾಜಭಕ್ತಿ, ದೇಶಸೇವಾ ಮುಂತಾದವುಗಳನ್ನು ನಮ್ಮ ದೇಶೀಯರಲ್ಲಿ ಬೇರೂರುವಂತೆ ಮಾಡಲು—ನಮ್ಮ ದಿವಾಣ ಪದವಿಯನ್ನು ಅಲಂಕರಿಸಿರುವದರ ಸಂತೋಷವನ್ನು ವ್ಯಕ್ತಗೊಳಿಸುವದಕ್ಕಾಗಿ ನಮ್ಮ ದೇಶೀಯವಾದ ಕುರುಬ ಮಹಾಜನರ ಪರವಾದ ಈ "ಜಗತ್ಪಾವನ" ವೆಂಬ ಮಾಸಪತ್ರಿಕೆಯು ಅವತಾರವಾಗಿದೆ. ಇದನ್ನು ಸರ್ವೋತ್ತಮ ಸ್ಥಿತಿಗೆ ತಂದು ನಮ್ಮ ದೇಶೀಯರಿಗೆ ಉಪಕಾರವಾಗುವಂತೆ ಅನುಗ್ರಹಿಸಲು ನಮ್ಮ ಪ್ರಭುಗಳನ್ನೂ, ದಿವಾಣರವರನ್ನೂ, ನಮ್ಮ ದೇಶೀಯ ಪ್ರಜಾ ಪ್ರತಿನಿಧಿಗಳನ್ನೂ ಭಕ್ತಿಯಿಂದ ಪ್ರಾರ್ಥಿಸುವೆವು.

ಪತ್ರಿಕಾ ಕರ್ತರ ಕರ್ತವ್ಯ.

ಲೋಕದಲ್ಲಿ ಬೊರೆಗಳೆಂದರೆ—ದೇಶ, ಅಶೋಷ್ಯವಾದ ಧನ ಕೋಶ, ಅಧಿಕಾರಿವರ್ಗ,' ಇವೆಲ್ಲಕ್ಕೂ ಅಶ್ರಯವಾಗಿ ರಂಜಿಸುತ್ತಿರುವ

ಫೆನವಾದ ಅರಮನೆ, ಲೋಕೈಕ ಸುಂದರಿಯರಾದ ಅಂತಃಪುರಸ್ಥ ರಾಣೀ ಮುಂತಾದ ಮಹಿಳೆಯರು, ನವರತ್ನ ಖಚಿತವಾದ ಸಕಲಾಭರಣಗಳು, ಗಜಶಾಲೆ, ಅಶ್ವಶಾಲೆ ಮುಂತಾದವುಗಳಲ್ಲಿ ದೇವೀಪ್ಯಮಾನಗಳಾಗಿರುವ ಆನೆಗಳು, ಕುದುರೆಗಳು ಮುಂತಾದ ಪಶುವರ್ಗ, ಸದಾ ಬಾಯಿಯಿಂದ ಹೊರಡುವ ಅಪ್ಪಣೆಯನ್ನೇ ಕಾದಿದ್ದು ಅದನ್ನು ಶಿರಸಾವಹಿಸಿ, ನಡಿಸುತ್ತಿರುವ ಊಳಿಗದವರು, ವಿಧವಿಧವಾದ ಆಯುಧಪಾಣಿಗಳಾಗಿರುತ್ತಾ ಯುದ್ಧಕಾಲವನ್ನೇ ಪ್ರತೀಕ್ಷಿಸುತ್ತಿರುವ ಸೈನ್ಯದ ಪದಾತಿಗಳು, ರಾವುತರು, ಶೂರರು ಮುಂತಾದವರು, ಈ ಎಲ್ಲಾ ಆಡಳಿತಗಳನ್ನೂ ನೋಡುಕೊಳ್ಳುತ್ತಿರುವ ಅಧಿಕಾರಿ ವರ್ಗಗಳು—ದೇಶದಲ್ಲೆಲ್ಲಾ ಸುಖದಿಂದ ಬಾಳುತ್ತಿರುವ ಪ್ರಜೆಗಳು, ಅವರುಗಳಿಗೆ ಯಾವ ಉಪಹತಿಯೂ ಉಂಟಾಗದಂತೆ ಕಾಪಾಡುವದಕ್ಕೇ ನಿಯಮಿತರಾಗಿರುವ ಗ್ರಾಮ ರಕ್ಷಕರು, ದೇಶ ರಕ್ಷಕರು, ನ್ಯಾಯ ರಕ್ಷಕರು ಮುಂತಾದ ಮುಖ್ಯಾಧಿಕಾರಿಗಳು ಇವೇ ಮೊದಲಾದ ಸಕಲಾಟ್ಟಹಾಸಗಳೂ ಇದ್ದೇ ಇರಬೇಕಾದದ್ದು ಪರಮಾವಶ್ಯಕವು.

ಈ ಮೇಲಿನ ಎಲ್ಲಾ ಪರಿವಾರವರ್ಗವಿದ್ದರೂ—ರಾಜನು ತನ್ನ ದೇಶದ ಸುವರ್ಣಾದಾಯದಲ್ಲಿ ಪ್ರಜೆಗಳಿಗೆ ಹಿತಕರವಾದ—ನಗರ ಗ್ರಾಮಾದಿಗಳನ್ನು ಶುಚಿಯಾಗಿಡುವಿಕೆ, ಅದಕ್ಕೆ ಕಾಲಾನುಸಾರವಾಗಿ ಆಗಬೇಕಾದ ಕಾಮುಗಾರಿ ಮುಂತಾದವು, ಗ್ರಾಮಗಳ ಕೆರೆ, ಕಾಲ್ವೆ ದಾರಿ ಮುಂತಾದವುಗಳ ರಿಪೇರಿ, ವಿದ್ಯಾಪ್ರಸಾರಕ್ಕಾಗಿ ಬೇಕಾದ ಅನುಕೂಲತೆ, ಅವರಿಗೆ ಬರುವ ರೋಗ ನಿವಾರಣಾರ್ಥವಾದ ವೈದ್ಯ ವ್ಯವಸ್ಥೆ ಮುಂತಾದ್ದಕ್ಕೆಲ್ಲ ಆಗಬೇಕಾದ ದ್ರವ್ಯವನ್ನು ಅಗತ್ಯವಾಗಿ ವೆಚ್ಚ ಮಾಡಿಯೇ ಮಿಕ್ಕದ್ದರಲ್ಲಿ ತನ್ನ ಮತ್ತು ತನ್ನ ಅಧಿಕಾರಿಗಳ ಪರಿಪೋಷಣೆಯ ಹಣವನ್ನು ತೆಗೆದುಕೊಳ್ಳುವದು ಮುಖ್ಯವಾದ ರಾಜಧರ್ಮವಾಗಿದೆ.

ಪ್ರಜೆಗಳಲ್ಲಿ ಯಾರಾದರೂ ತಮ್ಮ ಎದುರಾಳಿಗಳೊಡನೆ ಜಗಳವಾಡಿಕೊಂಡು ನ್ಯಾಯಸ್ಥಾನಕ್ಕೆ ಆ ವ್ಯಾಜ್ಯವನ್ನು ಹಾಕಿ, ಅಲ್ಲಿ ಧರ್ಮಜ್ಞಾನಾದ, ಪಕ್ಷ ಪರಪಕ್ಷ ಪ್ರಭೇದವಿಡದೆ ನ್ಯಾಯವನ್ನೇ ವ್ಯವಸ್ಥೆ ಮಾಡುವ

ದರಲ್ಲಿ ನಿಸ್ಸೀಮನಾದ ನ್ಯಾಯಾಧೀಶನ ಇದಿರಿನಲ್ಲಿ ವಾದಿ ಪ್ರತಿವಾದಿಗಳೂ, ಅಥವಾ ಫಿರ್ಯಾದಿ ಅಪರಾಧಿಗಳೂ ತಮ್ಮ ತಮ್ಮ ಪಕ್ಷ ಪೋಷಣೆಗೆ ಸಾಧಕವಾದ ಸಾಕ್ಷಿಗಳೊಡನೆ ತಮ್ಮ ತಮ್ಮ ವಾಂಗ್ಮೂಲಗಳನ್ನು ಹೇಳಿಕೊಳ್ಳೆುವದು ಸ್ವಭಾವವಷ್ಟೆ?

ಇಷ್ಟಾದರೂ ಈ ರಾಜ್ಯದ ಉಭಯಪಾರ್ಟಿಗಳೂ ತಮ್ಮ ತಮ್ಮ ಪರವಾಗಿ ವ್ಯವಹಾರ ಧರ್ಮವನ್ನು ನ್ಯಾಯಾಧೀಶನ ಇದಿರಿನಲ್ಲಿ ಆತನ ಅವಗಾಹನೆಗೆ ಬರುವಂತೆ ತಿಳಿಯಪಡಿಸುವಕ್ಕಾಗಿ ವಕೀಲ್, ಅಡ್ವೋಕೇಟ್, ಬ್ಯಾರಿಷ್ಟರ್ ಮುಂತಾದ ಪದವೀಧರರನ್ನು ನಿಯೋಜಿಸಲೇ ಬೇಕಾಗುತ್ತದೆ. ಹಾಗಲ್ಲದಿದ್ದರೆ ಆ ಪಾರ್ಟಿಯ ವ್ಯವಹಾರವು ಎಷ್ಟೇ ನ್ಯಾಯಪಕ್ಷವಾಗಿದ್ದರೂ ಅದಕ್ಕೆ ಪ್ರಾಶಸ್ತ್ಯವುಂಟಾಗುವ ಸಂಭವವೇ ಇಲ್ಲವೆಂಬುದನ್ನು ಈ ಕಾಲದಲ್ಲಿ ಎಲ್ಲರೂ ತಿಳಿದೇ ಇರುವರು.

ಲೋಕದಲ್ಲಿ ರಾಜನಾಗಿರುವವನೂ, ಅಥವಾ ರಾಜ್ಯದ ಮುಖ್ಯಾಧಿಕಾರಿಯಾದವನೂ ಧರ್ಮಕರವಾದ ತನ್ನ ಕರ್ತವ್ಯ ಕರ್ಮಗಳನ್ನು ಕ್ರಮವಾಗಿ ಆಚರಿಸದಿರುವಿಕೆ - ಪ್ರಜೆಗಳಿಗೆ ವಿನಿಯೋಗವಾಗತಕ್ಕ ಧನವನ್ನು ಅನ್ಯಾಯವಾಗಿ ತಾನೇ ಅಕ್ರಮಿಸುತ್ತಿರುವಿಕೆ, ಅಥವಾ ಇನ್ನೂ ಅನ್ಯಾಯಕರವಾಗಿ ಏನೆನ್ನಾದರೂ ಆಚರಿಸುವಿಕೆ- ಇವೇ ಮುಂತಾದ ಅಧರ್ಮಪ್ರವರ್ತನೆಗಳಲ್ಲಿ—"ಬೇಲಿಯೇ ಎದ್ದು ಹೊಲ ಮೇಯಿದರೆ ತಪ್ಪಿಸುವವರ್ಯಾರು?" ಎಂಬ ನಾಣ್ನುಡಿಯಂತೆ — ರಾಜರೂ, ಮುಖ್ಯಾಧಿಕಾರಿಗಳೂ, ಮುಂತಾದವರು ಧರ್ಮೋಲ್ಲಂಘನೆಮಾಡಿದಭಾಗದಲ್ಲಿ ಇಂತವರ ಕರ್ತವ್ಯಾಕರ್ತವ್ಯಗಳ ಪರ್ಯಾಲೋಚನೆಯನ್ನು ಮಾಡಿ ಯಾರು ಇದೆನ್ನೆಲ್ಲಾ ಸರಿಮಾಡಬಲ್ಲರು? — ಎಂಬ ಮಹತ್ವವಾದ ಪ್ರಶ್ನೆಗೆ ಯಾರು ನಿಮ್ಮಲ್ಲಿ ಉತ್ತರವನ್ನು ಕೊಡಬಲ್ಲರು?

ಈ ಮೇಲಿನಂತೆ ಉಚ್ಚೃಂಖಲ ವೃತ್ತಿಯಿಂದ (ಅದುನ್ಯಾಯವಾಗಿರಲಿ, ಅನ್ಯಾಯವಾಗಿರಲಿ ಎಣಿಸದೆ) ತಮ್ಮ ಮನಸ್ಸು ಬಂದಂತೆ ನಡಿಸುತ್ತಾ ಪ್ರಜಾಕಂಟಕರಾಗಿದ್ದ ದೊರೆಗಳನ್ನು ಮೂಢಸಮಯವಾಗಿದ್ದ ಪೂರ್ವಕಾಲಗಳಲ್ಲಿ ನಿರಂಕುಶರಾಜರೆಂದು ತಿಳಿದು,—ಅವರ ಚಿತ್ರ ಹಿಂಸೆಗಳನ್ನು ಪ್ರಜೆಗಳು ಶಾಂತತೆಯಿಂದ ತಾಳಿಕೊಳ್ಳುತ್ತಾ ಇದ್ದರು.

ಎಲ್ಲಾ ಇಂತಹ ಅತಿವೋತ್ತಮ ಮತ್ತು, ದೇಶಹಿತಕರವಾದ ಕಠಿಣವ್ಯವಹಾರಗಳಲ್ಲಿಯೂ ಔತ್ತರೀಯರೇ ದಾಕ್ಷಿಣಾತ್ಯರಿಗಿಂತಲೂ ಶ್ರೇಯಸ್ಕರ ಕಾರ್ಯಗಳನ್ನಾಚರಿಸುವದರಲ್ಲಿ ಸಮರ್ಥರು! ಉಷ್ಣ ವಲಯದಲ್ಲಿ ವಾಸಿಸುತ್ತಿರುವಂಥಾ ಉಷ್ಣಾಧಿಕ ಪ್ರಕೃತಿಯು ದಾಕ್ಷಿಣಾತ್ಯರಲ್ಲಿ ಅಲ್ಲಿನ ಅತ್ಯುಷ್ಣಪ್ರಕೃತಿಯು ವಾತಾವರಣದಲ್ಲಿ ಬೆಳದಿದ್ದ ದೇಹವು ಬಹುಬೇಗ ಪಕ್ವವಾಗುತ್ತಾ ಬಂದು—ಜ್ಞಾನ ಶಕ್ತಿ, ಪರಾಕ್ರಮ, ದೇಹದ ಬೆಳವಳಿಗೆ, ಮನೋವ್ಯಾಪಾರ ಮುಂತಾದವೆಲ್ಲಾ ವ್ಯವಹಾರಗಳಲ್ಲಿಯೂ ಅದಷ್ಟುತೀವ್ರತೆಯೇ ಉಂಟಾಗುತ್ತಿರುವದಾದ್ದರಿಂದ ಇವರಿಗಿಂತ ಸಮಶೀತೋಷ್ಣವಲಯದ, ಹಾಗೂ ಶೀತವಲಯದ ವಾಸಿಗಳಲ್ಲಿ ಅವರ ದೇಹವು ಬೇಗ ಪ್ರಬೃದ್ಧಿಯೊಗದೆ ಬಹು ನಿದಾನವಾಗಿ ಬೆಳಿಯುತ್ತಾ—ಅವರ ಬುದ್ಧಿ, ಶಕ್ತಿ, ಜ್ಞಾನಶಕ್ತಿ, ಪರಾಕ್ರಮ, ದೇಹದ ಬೆಳವಳಿಗೆ, ಮಾನಸಿಕವ್ಯಾಪಾರ ಈ ಮುಂತಾದವೆಲ್ಲವೂ, ದಾಕ್ಷಿಣಾತ್ಯರಿಗಿಂತಲೂ ಅತ್ಯಂತ ಗಂಭೀರವಾಗಿಯೂ, ಶಾಂತವಾಗಿಯೂ, ಸ್ಥಿರಭಾವ ವುಳ್ಳವುಗಳಾಗಿಯೂ ಆಗುವವೆಂಬದು ಶಾಸ್ತ್ರಜ್ಞರ ಮತವು.

ದೃಷ್ಟಾಂತಕ್ಕಾಗಿ ನಮ್ಮ ಇಂಡಿಯಾದಲ್ಲಿಯೇ ನೋಡೋಣ—ಮದ್ರಾಸಿಗಿಂತ ದಕ್ಷಿಣಭಾಗದ ಅತ್ಯುಷ್ಣಪ್ರದೇಶದ ಜನರಲ್ಲಿನ ಪ್ರಜಾಸಾಮಾನ್ಯದಲ್ಲಿ ಹೆಂಣು ೧೦–೧೨ ವರ್ಷದೊಳಗಾಗಿ ಯೌವನವತಿಯಾಗುತ್ತಿರುವದು ನ್ಯಾಯವಾದ್ದಷ್ಟೆ? ಪೂನಾ, ಬೊಂಬಾಯಿ, ರಾಜಪುಟಾನಾ, ಪಂಜಾಬ್, ಕಾಶ್ಮೀರಗಳ ಕಡೆಗೆ ಉತ್ತರಕ್ಕೆ ಹೋದ ಹೋದ ಹಾಗೆಲ್ಲ ಸ್ತ್ರೀಯು ಋತುಮತಿಯಾಗಲು—ಅಂದರೆ ಅವಳ ಶಾರೀರಕ ಧರ್ಮವು ಫಲಿತವಾಗಲು ೧೪–೧೫ ಕ್ಕೆ ಕಡಮೆಯಾಗಲಾರದು. ಎಲ್ಲದಕ್ಕೂ ಉತ್ತರದ ಸೈಬೀರಿಯಾದಲ್ಲಿ ಇದೇ ವ್ಯವಹಾರಕ್ಕೆ ೪೦ ವರ್ಷವೂ, ಅವರ ಆಯುರ್ಭಾವವು ೧೫೦ ರಿಂದ ೧೫೫ ರ ವರಿಗೂ ಇರುವದಕ್ಕಡ್ಡಿಯಿಲ್ಲ! ಅಂದರೆ ಔತ್ತರೀಯರಲ್ಲಿಯೇ - ದೇಹವ್ಯಾಪಾರ, ಜ್ಞಾನವ್ಯಾಪಾರ, ಮಾನಸಿಕ ವ್ಯಾಪಾರಗಳಲ್ಲಿ ದೃಢತ್ವ, ಅಚಂಚಲತಾ, ಶೌರ್ಯ, ಧೈರ್ಯ, ಸಾಹಸಾದಿಗಳಲ್ಲಿ ಅಕೃತ್ರಿಮ ಸ್ವಭಾವವು ಪೂರ್ಣತಯಾ ಫಲಿಸುತ್ತದೆಂಬದು ಸರ್ವತ್ರ ನಿರ್ವಿವಾದಾಂಶವೆಂದರಿಯಬೇಕು.

ಇದರಿಂದ ನೋಡಿದರೆ - ದೇಶ ಸಾಮಾನ್ಯಕ್ಕೆ ಬಂದು ದೃಢ ಪ್ರತಿ ಜ್ಞಾ ಮೂಲಕ ಕಾರ್ಯಸಾಧನೆ ಯಾಗಬೇಕಾದರೆ ಔತ್ತರೀಯರಿಂದಲೇ ಆಗಬೇಕು. ನಮ್ಮ ದೇಶವನ್ನಲಂಕರಿಸುತ್ತಿರುವ ಪ್ರಸಿದ್ಧರಾದ ಸಿಖ್, ಘೂರ್ಕಾ, ರಾಜಪುತ್ರರು ಮುಂತಾದವರ ಧೈರ್ಯೋತ್ಸಾಹಗಳೇ ಇಂಡಿಯಾಕ್ಕೆ ಮುಖ್ಯವಾಗಿರುವದನ್ನು ಸರ್ವ ವಿಷಯಗಳಲ್ಲಿಯೂ ಉದಾಹರಣಾರ್ಥವಾಗಿ ತೆಗದುಕೊಳ್ಳಬಹುದು.

ಈಗ ಮೇಲಿನ ಪ್ರಕೃತ ಪ್ರಕರಣವನ್ನು ವಿಚಾರಿಸೋಣ,

ಮೇಲೆ ವಿವರಿಸಿರುವಂತೆ ರಾಜರಾದವರು ನಿರಂಕುಶಪ್ರವರ್ತಕರಾಗಿ, ತಮ್ಮ ಪ್ರಜೆಗಳನ್ನು ಹಾಳುಮಾಡುವದರಲ್ಲಿಯೇ ತಮ್ಮ ಬಲಪರಾಕ್ರಮಗಳನ್ನು ವಿನಿಯೋಗಿಸಲಾರಂಭಿಸಲು—ಯೂರೋಪ್ ಖಂಡದ ಸ್ಥಿರಪ್ರಕೃತಿಯ ಪ್ರಜೆಗಳು ಇಂತಹ ರಾಜರ ಕ್ರೌರ್ಯಾಚರಣೆಗಳಿಗೆ ಜಗ್ಗದೆ, ಅದರಿಂದುಂಟಾಗುವ ಸಕಲ ದುಃಖಗಳನ್ನೂ ಶಾಂತತೆಯಿಂದ ತಾಳಿಕೊಳ್ಳುತ್ತಾ ಬಂದು—ಪ್ರಿಂಟಿಂಗ್ (ಛಾಪಾ) ಕಲೆಯು ಪ್ರಸಾರವಾದನಂತರ ಕ್ರಮ ಕ್ರಮವಾಗಿ ತಮ್ಮ ಜ್ಞಾನಶಕ್ತಿಯನ್ನು ಲೋಕೋಪಕಾರ ರಾಜಕೀಯ ವ್ಯವಹಾರಕ್ಕೆ ತಿರುಗಿಸುತ್ತಾ ಬಂದರಲ್ಲದೆ, ಎಲ್ಲಾ ಪ್ರಜಾಸಾಮಾನ್ಯವು ಈ ವ್ಯವಹಾರಗಳಲ್ಲಿ ಸಮಾನವಾದ ಭಾಗವನ್ನು ಹೊಂದಬಹುದೆಂಬದನ್ನು ತಿಳಿಸುತ್ತಾ—ಹೀಗೆ ನಿರಂಕುಶರಾಜರು ಆಚರಿಸುತ್ತಿರುವ ವ್ಯವಹಾರಗಳಲ್ಲಿ ಉಂಟಾಗುತ್ತಿರುವ ನ್ಯೂನಾತಿರೇಕಗಳನ್ನು ವರ್ತಮಾನ ಪತ್ರಿಕಾಧಿಪರು ಬಾಹಟವಾಗಿ ಉದ್ಘೋಷಿಸುತ್ತಾ, ಆ ವಿಷಯವನ್ನು ಪ್ರಜಾಸಾಮಾನ್ಯಕ್ಕೆ ತಿಳಿಯಪಡಿಸಿ, ತನ್ಮೂಲಕ ಅವರ ಕರ್ತವ್ಯಗಳಲ್ಲಿನ ದೋಷಗಳನ್ನು ತಪ್ಪಿಸುವದಕ್ಕಾಗಿ ಪ್ರವರ್ತಿಸುತ್ತಾ - ಅಣುರೇಣು ಪರಿಪೂರ್ಣನಾಗಿ ಅಖಂಡ ಬ್ರಹ್ಮಾಂಡ ಮಧ್ಯದಲ್ಲಿ ವ್ಯಾಪಿಸಿ, ಸರ್ವಸಾಕ್ಷಿಯಾಗಿರುವ ಭಗವಂತನ ಕೋರ್ಟ್‌ನಲ್ಲಿ ಈ ವ್ಯವಹಾರದ ನಿರ್ಣಯಕ್ಕಾಗಿ ಪ್ರಯತ್ನಶೀಲರಾಗಿರುವರು. ಪತ್ರಿಕಾಧಿಪರೆಂಬ ಕಿರೀಟವಿಲ್ಲದ ಪ್ರಜಾಪಾಲಕರು ಪ್ರಜಾಸಾಮಾನ್ಯಕ್ಕೆ ನ್ಯಾಯ ದೊರೆಯಲೆಂಬ ಹೇತುವಿನಿಂದ ತಮ್ಮ ಪತ್ರಿಕೆಗಳೆಂಬ ಅಸ್ತ್ರಹಸ್ತರಾಗಿ, ಈ ಧರ್ಮಯು

ದ್ಧದಲ್ಲಿ ನಿಂತು, ಪ್ರಜಾಪಕ್ಷವನ್ನಾಶ್ರಯಿಸಿ ಸತ್ಯ ಧರ್ಮನ್ಯಾಯಗಳೆಂಬ ಸ್ವಾರಾಜ್ಯ ಸಾಧನೆಗೆ ಸದಾ ಪ್ರಯತ್ನಿಸುತ್ತಿರುವರು. ಇಂತಹ ಸತ್ಯ ಸಂಧರಾದ, ವೀರಾಗ್ರೇಸರರ ಪಕ್ಷವೇ ಮೊದಲಿನಿಂದಲೂ ಜಯವನ್ನೇ ಪಡಿಯುತ್ತಾ ಬರುತ್ತಿರುವನ್ನೆರಿತು—ಪೂರ್ವಕಾಲದಲ್ಲಿ ನಮ್ಮ ದೇಶದಲ್ಲಿ ಗವರ್ನರ್ ಜನರಲ್ ಆಗಿದ್ದ ಲಾರ್ಡ ಬೆಂಟಿಂಕ್ ಮಹಾಶಯನು ಈ ಪತ್ರಿಕಾಸಂಪಾದಕತ್ವದ ಮಹತ್ಫಲವನ್ನು ನಮ್ಮ ದೇಶೀಯರೂ ಹೊಂದುವಂತೆ ಎಸಗಿದನು. ಹೀಗಾಗಿ ಪತ್ರಿಕಾಧಿಪರು ಸರಕಾರದವರ ನ್ಯೂನಾತಿರಿಕ್ತಗಳನ್ನು ತಮ್ಮ ಪತ್ರಿಕೆಗಳ ಮೂಲಕ ಉದ್ಘೋಷಿಸುತ್ತಾ—ಸಮಯಬಂದರೆ ಸರಕಾರದವರಿಂದ ಧಂಡಿಸಲ್ಪಟ್ಟವರಾಗಿ ಈ ಮಹತ್ತರವಾದ ದೇಶಸೇವೆಯು ಫಲರೂಪವಾದ ಕಾರಾಗೃಹವಾಸ ಶಿಕ್ಷೆಯನ್ನು ಸಹ ಅನುಭವಿಸುತ್ತಾ ಈ ಯಾವದಕ್ಕೂ ಅಂಜದೆ, "ಸತ್ಯಮೇವೋ ದ್ಧರಾಮ್ಯಹಮ್" ಎಂಬಂತೆ ಎಷ್ಟೇ ಕಷ್ಟಪಟ್ಟಾದರೂ ಸತ್ಯ ಧರ್ಮವನ್ನೇ ಉದ್ಧರಿಸುವೆನು ಎಂಬ ಘನವಾದ ಪ್ರತಿಜ್ಞಾ ಪುರಸ್ಸರವಾಗಿ ಈ ಮಹತ್ಪದವಿಯಲ್ಲಿ ನಿರತರಾಗಿರುತ್ತಿದ್ದಾರೆ.

ಇಂತಹ ನ್ಯಾಯಪೂರ್ಣ ನ್ಯಾಯಧರ್ಮ ಪಾಲಕರಾದ ಪತ್ರಿಕಾ ಸಂಪಾದಕರು ಈ ಕಾಲದಲ್ಲಿ ನಮ್ಮ ಇಂಡಿಯಾ ದೇಶದ ಮುಖ್ಯ ಮುಖ್ಯ ಭಾಷೆಗಳೆಲ್ಲೆಲ್ಲಾ ಪ್ರಬಲಿಸಿರುವರು. ಅವರಲ್ಲಿ ನಮ್ಮ ಕನ್ನಡ ನಾಡಿನ ಮೈಸೂರಲ್ಲಿ, ಸಾಧ್ವಿ, ಮತ್ತು ಸಂಪದಭ್ಯುದಯಗಳ ಕರ್ತರೂ - ಮೈಸೂರು ಸ್ಟಾರ್ ಪತ್ರಿಕಾಧಿಪರೂ, — ವೃತ್ತಾಂತ ಪತ್ರಿಕಾಧಿಪರೂ, ಬೆಂಗಳೂರಲ್ಲಿ—ಬಕ್ಕಲಿಗರ ಪತ್ರಿಕಾಕರ್ತರೂ, ವಿಶ್ವಕರ್ನಾಟಕ ಪತ್ರಿಕಾಧಿಪರೂ, — ಪ್ರಜಾಮಿತ್ರನೆಂಬ ದೈನಿಕ ಪತ್ರಕರ್ತರೂ,- ವಿದ್ಯಾದಾಯಿನಿ (ಮೈಸೂರು) ಪತ್ರಪ್ರವರ್ತಕರೂ - ನಮ್ಮ ಮೈಸೂರು ರಾಜ್ಯದಲ್ಲಿ ಸರ್ವತ್ರ ತಮ್ಮ ಜಯಭೇರಿಯನ್ನು ಘೋಷಿಸುತ್ತಾ, ಅಪ್ರತಿಹತವಾದ ಪ್ರಯತ್ನಗಳಿಂದ ದೇಶಸೇವೆಯಲ್ಲಿ ದತ್ತಚಿತ್ತರಾಗಿರುತ್ತಾ ದೇದೀಪ್ಯಮಾನರಾಗಿರುವರು.

ಬೀಜಾಪುರದ ಕರ್ನಾಟಕವೈಭವ, ಧಾರ್ವಾಡದ ಕರ್ನಾಟಕವೃತ್ತ ಮತ್ತು ಧನಂಜಯ, ಸ್ವಧರ್ಮ, ಕರ್ಮವೀರ, ಜಯಕರ್ನಾಟಕಗಳು

ಮುಂತಾದ ಪತ್ರಿಕಾಕರ್ತರೂ ತಮ್ಮ ಆವೋಘವಾದ ಬರವಣಿಗೆಗಳಿಂದ ಜಗತ್ತನ್ನೇಬೆಳಗುತ್ತಿರುವರು. ಬಾಗಲಕೋಟೆಯ ನವೀನಭಾರತ, ಮುಕ್ತ ಕನ್ನಡಿಗವೂ, ಕುಮುಠಾದ ಕಾನಡಾವೃತ್ತವೂ, ಮುಡಕೆರೆಯ ಕೊಡಗೂ, ಆನೆಂದವನದ ಸದ್ಬೋಧ ಚಂದ್ರಿಕೆಯೂ ಮಹತ್ವವುಳ್ಳ ಪತ್ರಿಕೆಗಳಾಗಿವೆ. ಮುಂಗಳೂರಿನಲ್ಲಿ—ಸ್ವದೇಶಾಭಿಮಾನಿ, ಕಂಠೀರವ, ನವಯುಗಗಳೂ, ಪುತ್ತೂರಿನ ಕನ್ನಡ ಸಹಕಾರಿಪತ್ರವೂ ತಮ್ಮ ಅತ್ಯುದಾತ್ತವಾದ ಬರವಣಿಗೆಯಿಂದ ನಮ್ಮ ಕನ್ನಡ ರಾಜ್ಯದಲ್ಲಿ ಯಶಶ್ಯಾ ಲಿಗಳಾಗಿವೆ. ಹಾವೇರಿಯ ಸದ್ಬೋಧವೂ ತನ್ನ ಅತುಲಿತವಾದ ಬರವಣಿಗೆಯಿಂದ ಸ್ತುತ್ಯವಾದ್ದಾಗಿದೆ.

ಇಂತಹ ಬಂಧುವರ್ಗದ ಮಧ್ಯದಲ್ಲಿ ಹುಟ್ಟಿರುವ ನಮ್ಮ ಈ ಬಡ "ಜಗತ್ಪಾವನ" ವನ್ನು ಇವರೆಲ್ಲರೂ ಆದರದಿಂದ ಸನ್ಮಾನಿಸುವರೆಂದು ಕೋರುವೆವು.

ಅಭ್ಯಾಗತ ಸತ್ಕಾರವು ನಮ್ಮ ದೇಶೀಯರಿಗೆ ಪರಮೋತ್ಕೃಷ್ಟ ಧರ್ಮವೆಂಬದನ್ನು ಎಲ್ಲರೂ ತಿಳಿದಿರುವಲ್ಲಿ ಈ ಸಂಗತಿಯನ್ನು ನಾವು ಬಿಚ್ಚಿ ಹೇಳಬೇಕಾದಿಲ್ಲವಷ್ಟೆ?

ಈ ಪತ್ರಿಕೆಯಿಂದಾಗುವ ಮಹತ್ಪ್ರಯೋಜನ

ಸೃಷ್ಟಿಕರ್ತನನ್ನು ಜಿಯಾಲಜಿ ಮುಂತಾದ ಶಾಸ್ತ್ರಗಳಿಂದ ನಿರ್ಣೈಸಿರುವ ಪ್ರಕಾರ—ಭೂಮಿ, ಓಷಧಿ ವನಸ್ಪತಿಗಳು, ತರುಗುಲ್ಮ ಲತಾದಿಗಳು, ಮತ್ಸ್ಯಗಳೂ, ಪಶುಪಕ್ಷಿ ಕ್ರಿಮಿ ಕೀಟ ಪತಂಗಾದಿಗಳೂ, ಸೃಜಿಸಲ್ಪಟ್ಟನಂತರವೇ—ನರನಾರೀ ರೂಪಿನಿಂದ ಮಾನವ ಸೃಷ್ಟಿಯಾಗಿರುವದೆಂತಲೂ, ಅದೂ ಸಹ ಆಫ್ರಿಕಾವದೋ ಒಂದು ಮಹತ್ವವುಳ್ಳ ಪ್ರದೇಶದಲ್ಲಿ ಸೃಷ್ಟಿಸಲ್ಪಟ್ಟು, ಅಲ್ಲಿಂದಲೇ ಜಗತ್ತಿನ ಎಲ್ಲಾ ದೇಶಗಳಿಗೂ ಮನುಷ್ಯರ ಪ್ರಸಾರವುಂಟಾಗಿರುವದೆಂತಲೂ ಮಹಾಮಹಾ ವಿದ್ವಾಂಸರು ನಿರ್ಣೈಸಿರುತ್ತಾರೆ.

ಯೂರೋಪಿನ ನಾಗರಿಕ ಪ್ರಜೆಯೂ, ಪಾರ್ಸಿ (ಇರಾನ್) ದೇಶದ, ಭರತಖಂಡದ ಆರ್ಯಸಂತತಿಯೂ ತಮ್ಮ ತಮ್ಮ ಭಾಷೆಗಳ ಪರಸ್ಪರ ಸಂಬಂಧದಿಂದ ಬಂದೇ ವಂಶೀಕರಂಬದು ಸ್ಪಷ್ಟವಾಗುತ್ತಲಿದೆ.

ಆದಿಕಾಲದ ಜನರು ಪರಸ್ಪರ ಯಾವ ವಿಧವಾದ ತಾರತಮ್ಯವೂ ಇಲ್ಲದೆ ಎಲ್ಲಾ ಸಮಾನವಾಗಿದ್ದರು. ಬರಬರುತ್ತಾ ಉತ್ತಮ, ಮಧ್ಯಮ, ನಿಕೃಷ್ಟತೆಯು ಅವರ ಗುಣ ಕರ್ಮ ಸ್ವಭಾವಗಳಿಂದೇರ್ಪಟ್ಟು, ವೇದಕಾಲದಲ್ಲಿ ಆರ್ಯರು, ದಸ್ಯುಗಳೆಂಬೆರಡು ಪ್ರಭೇದವೇರ್ಪಟ್ಟಿತು. ಇವರೂ ಸಹ ಕಾಲಾಂತರದಲ್ಲಿ ಪರಸ್ಪರ ಮಿಳಿತರಾಗುತ್ತಾ ಮಿಶ್ರತೆಯನ್ನು ಪಡೆದರು. ಆದಿಯಲ್ಲಿ ಆರ್ಯರೆಂಬ ಸರ್ವೋತ್ತಮಗುಣವುಳ್ಳ ಪಂಗಡವು ತಮಗಿಂತ ಮೂಢರಾದವರನ್ನು ದಸ್ಯುಗಳೆಂದು ಕರೆಯುತ್ತಿದ್ದಂತೆ ತೋರುತ್ತದೆ. ಈ ದಸ್ಯುಗಳೇ ಪೂರ್ವದ ಪುರಾಣಾದಿಗಳಲ್ಲಿ ರಾಕ್ಷಸರೆಂಬದಾಗಿಯೂ, ದಾನವರೆಂಬದಾಗಿಯೂ, ಕರೆಯಲ್ಪಟ್ಟಿರುವರು. ದ್ರಾವಿಡರೆಂಬ ಬಂದು ಪಂಗಡದವರನ್ನು ಕೆಲವು ಇತಿಹಾಸ ಕರ್ತರು = ದೇಶದ ಮೂಲನಿವಾಸಿಗಳೆಂದು ಹೇಳುತ್ತಿರುವರು, ಈ ಹೇಳಿಕೆಯು ನಿರಾಧಾರವಾದದ್ದು. ಈ ಆರ್ಯರು ಮಟ್ಟವೊದಲು ವಿಷ್ಣ್ವಾಮೈನರಿನಲ್ಲಿದ್ದು, ಅಲ್ಲಿ ತಮ್ಮ ಮತ್ತು ತಮ್ಮ ಕುರಿ ಮೇಕೆಗಳ, ಹಸುಗಳ ಪೋಷಣೆಗೆ ತಕ್ಕಷ್ಟು ಅನುಕೂಲ ದೊರಕದೆ ತಮ್ಮ ಜೀವನಕ್ಕೆ ಭಂಗಬಂದದ್ದರಿಂದ—ಸೃಷ್ಟ್ಯಾದಿಕಾಲದಿಂದಲೂ ಬಂದೇ ಮನೆತನದವರಾಗಿದ್ದ ಆರ್ಯರೊಡನೆ ಬಡದಾಡಲು ಬಲಹೀನರು ಬಲಿಷ್ಟರ ಹೊಡತಕ್ಕೆ ತಾಳಲಾರದೆ ಹಿಮಾಲಯದ ಕಣಿವೆಗಳಿಂದ ಈ ಭರತ ಖಂಡಕ್ಕೆ ಓಡಿ ಬಂದು ನೆಲಸಿದರು. ಹೀಗೆ ಓಡಿಸಲ್ಪಟ್ಟವರಾದ್ದರಿಂದ ‘ದ್ರವಿಗತೌ’ ಎಂಬ ಧಾತುವಿನಿಂದ ಹುಟ್ಟಿರತಕ್ಕ ದ್ರಾವಿಡ ವೆಂಬ ಪೆಸರು ಈ ಸಮುದಾಯಕ್ಕೆ ರೂಢಿವಾಚಕವಾಗಿ ಬಂತೆಂದು ವಿಚಾರಪರರಾಗಿಯೂ ನಿಸ್ಪೃಹರಾಗಿಯೂ ಮತ್ತು ಪಕ್ಷಪಾತರಹಿತರಾಗಿಯೂ ಇರತಕ್ಕ ಪಂಡಿತೋತ್ತಮರು ಸಾರುತ್ತಿರುವರು. ಇವನ್ನೆರಿಯಲು ರೂಪು, ಬಣ್ಣ, ಶರೀರದ ಆಕೃತಿ ಮುಂತಾದವುಗಳಿಂದ ಬಂದೇ ಜನಸಮುದಾಯವನ್ನು ಎ-ಜಿ-ಶ ತೆರನಾಗಿ ವಿಂಗಡಿಸಿ ಮನಸ್ವೀ ವಿಧ ವಿಧವಾದ ಹೆಸರುಗಳಿಂದ ಭೇದ

ಗಳನ್ನು ಕಲ್ಪಿಸುತ್ತಾ, ಈ ವಿಧವಾದ ವಿಚಾರಹೀನತೆಯಿಂದ ಪರಸ್ಪರ ಬಡದಾಡುತ್ತಾ ಬುದ್ಧಿಹೀನರಾಗಿ ಹಾಳಾಗುತ್ತಿರುವರು.

ಕಾಲಾಂತರದಲ್ಲಿ ಏಷ್ಯಾಮೈನರಿನಲ್ಲಿದ್ದ ಬಲಿಷ್ಠರಾದ ಆರ್ಯರು ತಮ್ಮ ಪಶುಪಾಲನೆಗೆ ಮತ್ತು ಜೀವನಕ್ಕೆ ಸುಖವಾಧ ರಾಜ್ಯವೆಂದು ತಿಳಿದು ಈ ದೇಶಕ್ಕೆ ಗುಂಪುಗುಂಪಾಗಿ ಬಂದು - ಇಲ್ಲಿನ ಫಲವತ್ತಾದ ಪ್ರದೇಶಗಳಲ್ಲಿನೆಲಸಿದ್ದ ಬಲಹೀನರಾದ ಆರ್ಯದ್ರಾವಿಡರ ಪ್ರದೇಶಗಳನ್ನು ಆಕ್ರಮಣವಾಡುತ್ತಾ ತಮ್ಮ ಎದುರಾಳಿಗಳಾದ ಆ ದ್ರಾವಿಡರನ್ನು ಚಿತ್ರ ವಿಚಿತ್ರ ಹಿಂಸೆಗಳಿಂದ ಓಡಿಸಿ, ಅವರ ದೇಶಗಳನ್ನು ಲೀಲಾಜಾಲವಾಗಿ ವಶಪಡಿಸಿಕೊಂಡರು. ಅಲ್ಲಿಗೆ ಆರ್ಯಾವರ್ತವೆಂತಲೂ, ಬ್ರಹ್ಮಾವರ್ತವೆಂತಲೂ, ಬ್ರಹ್ಮರ್ಷಿದೇಶವೆಂತಲು ಹೆಸರಿಟ್ಟರು. ಕಾಲಾಂತರದಲ್ಲಿ ಕಾರಣಾಂತರಗಳಿಂದ ಮೊದಲು ಏಷ್ಯಾಮೈನರಿನಿಂದ ಓಡಿಬಂದು ನೆಲಸಿದ್ದ ಬಲಹೀನರಾದ ಆರ್ಯ (ದ್ರಾವಿಡ) ರೂ ಹಿಂದೆ ಬಂದ ಬಲಿಷ್ಠರಾದ ಆರ್ಯರೂ ಬಂದೇ ಮನೆತನದವರೆಂಬದಾಗಿ ಭಾವಿಸಿಕೊಂಡು ಅವರವರಲ್ಲಿದ್ದ [illegible] ಗಳನ್ನು ತ್ಯಜಿಸಿ ಕೂಡಿಹೋಗುತ್ತಾ ಬಂದರು.

ಹೀಗೆ ಈ ಎರಡು ಪಂಗಡದವರೂ ಸಂಮಿಳಿತರಾಗುತ್ತಾ ಬಂದು, ಇವರಲ್ಲಿ ತಮ್ಮ ತಮ್ಮ ಜೀವನೋಪಾಯಕ್ಕಾಗಿ ವಿಧ ವಿಧವಾದ ವೃತ್ತಿಗಳನ್ನವಲಂಬಿಸುವದಕ್ಕಾಗಿ ಪ್ರಾರಂಭಿಸಿದರು. ಈ ಕಾಲದಲ್ಲಿ ಈ ವೃತ್ತಿಗಳೇ ಬಂದೊಂದು ಜಾತಿಗಳಾಗಿ ಪರಿಣಮಿಸಿ, ಪ್ರತಿಯೊಂದಕ್ಕೂ ಚಿತ್ರ ವಿಚಿತ್ರವಾದ ಕಪೋಲ ಕಲ್ಪನೆಗಳ ಕಟ್ಟುಕಥೆಗಳಿಂದೊಡಗೂಡಿದ ಗ್ರಂಥಗಳನ್ನು ರಚಿಸಿಕೊಂಡು ಹಿಗ್ಗುತ್ತಾ ಇರುವರು.

ಸಚ್ಛಾಸ್ತ್ರಗಳಲ್ಲಿ ವೃತ್ತಿಸೂಚಕವಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಮತ್ತು ಶೂದ್ರರೆಂಬ ಶಬ್ದಗಳನ್ನು ನಾಲ್ಕು ಜಾತಿಗಳನ್ನಾಗಿ ಮಾಡಿಕೊಂಡು, ಅವುಗಳು ಉಚ್ಚತ್ವ, ನೀಚತ್ವಗಳ ಗುರ್ತೆಂದು ತಿಳಿಯುತ್ತಾ ಬಂದು - ಈ ಕಾಲದಲ್ಲಿ ವಿಧವಿಧವಾದ ವೃತ್ತಿಗಳಮೇಲೆ ಹಿಂದೆ ಹೇಳಿದ ನಾಲ್ಕು ಜಾತಿಗಳಿಗೆ ಬದಲಾಗಿ ೪೦ ಸಾವಿರ ಜಾತಿಗಳಾಗಿವೆ. ಈ ಜಾತಿಗಳ ವೈಪರೀತ್ಯದ ಕೊಲಾಹಲದಿಂದ ನಮ್ಮ ಪಾವನವಾದ ಈ ಪುಣ

ಭೂಮಿಯು ನರಕ ಭೂಮಿಯಾಗಿ ಪರಿಣಮಿಸುತ್ತಾ ಬರುತ್ತಿರುವುದನ್ನು ನೋಡಿ ಉದಾರ ಚರಿತರಾದವರು ಸಂಕಟಪಡುತ್ತಿರುವರು

ಈ ವೃತ್ತಿಯು ಮೇಲೆ ಹುಟ್ಟಿದ ಈ ಜಾತಿಯಂಬುದನ್ನು ಶಾಸ್ತ್ರ ಕ್ರಮದಿಂದ ವಿಚಾರಮಾಡಿದರೆ—,, ಸಮಾನೆ ಪ್ರಸವಾತ್ಮಿಕಾ ಜಾತಿಃ ,, (ಪ್ರಸವವೆಂಬ ಗರ್ಭಕೋಶದಿಂದ ಹೊರಕ್ಕೆ ಬರುವ ಧರ್ಮವು ಯಾವ ಯಾವ ಪ್ರಾಣಿಗಳಿಗೆ ಸಮಾನವಾಗಿರುವದೋ ಅವೆಲ್ಲ ಒಂದೇ ಜಾತಿಯವು) ಎಂದು ಶಾಸ್ತ್ರವಿದೆ. ಕೊರಮ. ಕೊರಚ, ಲಂಬಾಣಿ ಎಂಬವರು ಬೇರೆ ಬೇರೆ ಜಾತಿಯವರೆಂದರೆ ಇವರುಗಳು ಹುಟ್ಟಿಬರುವ ಗರ್ಭವು ಕ್ರತೆ (ಪ್ರಸವ) ಯೂ ಬೇರೆ ಬೇರೆಯಾಗಿರಬೇಕಾಯಿತಷ್ಟೆ? ಹಾಗಿಲ್ಲವೆ ಅವರೆಲ್ಲರೂ ಸಾಮಾನ್ಯವಾಗಿ ಮಾನುಷ ಸ್ಥಿತಿಯವರಾದ್ದರಿಂದ ಬೇರೆ ಬೇರೆ ಜಾತಿಯವರಾಗಲಾರರು. ಮನುಷ್ಯ, ಮೃಗ, ಪಕ್ಷಿ, ಕ್ರಿಮಿ, ಕೀಟ, ಪತಂಗ, ಮತ್ಸ್ಯಗಳು ಪರಸ್ಪರ ವ್ಯತಿರೇಕ ಸ್ವಭಾವವುಳ್ಳ ಪ್ರಸವಧರ್ಮವನ್ನುಳ್ಳವುಗಳಾಗಿರುವದರಿಂದ ಇವು ಬೇರೆ ಬೇರೆ ಜಾತಿಯವುಗಳೆನ್ನಲಡ್ಡಿಯಿಲ್ಲ!!

ಆದರೆ—,, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಪ್ರಭೇದಗಳನ್ನು ವೇದದ ಪುರುಷಸೂಕ್ತದಲ್ಲಿ ತಿಳಿಸುತ್ತದಲ್ಲಾ? ಇದಾದರೂ ಜಾತಿಯಲ್ಲವೆ? ,, ಎಂದರೆ—ಇದು ಜಾತಿಯಲ್ಲ: ಬ್ರಾಹ್ಮಣಾದಿ ವರ್ಣಗಳೆಂದರಿಯಬೇಕು. ಇಲ್ಲಿ ,, ವರಯತೀತಿವರ್ಣಃ ,, ಯಾವನು ಯಾವ ಯಾವ ವೃತ್ತಿಯನ್ನು ವರಿಸು (ಕೈಕೊಳ್ಳು) ವನೋ ಅವನು ಆವರ್ಣದವನೆಂದು ತಿಳಿಯಬೇಕು.

ಈರೀತಿಯಾಗಿ ವೃತ್ತಿಗಳನ್ನು ಅವಲಂಬಿಸುವದರಲ್ಲಿ ಇತರ ದೇಶೀಯರಂತೆ ನಾವೂ ಸಹ-ತಂದೆಯದೇ ಒಂದು ವೃತ್ತಿ, ಮಕ್ಕಳಲ್ಲಿ ಬ್ಬಬ್ಬೊಬ್ಬನದು ಒಂದೊಂದು ವೃತ್ತಿಯಾಗಿರುವಲ್ಲಿ ಏನೂ ಅಡ್ಡಿಯಿಲ್ಲ! ಹಾಗಲ್ಲದೆ ತಂದೆಯು ಮೋಚಿಯಾಗಿದ್ದರೆ, ಮಗನು ಬಾರಿಸ್ಟರ್, ಜಡ್ಜ್, ಮುಂತಾದ ಅತ್ಯುತ್ತಮ ವೃತ್ತಿಯನ್ನು ಕೈಕೊಳ್ಳಬಾರದೆಂಬ ಮಾತು ಕೇವಲ ಮೂಢತನದ್ದಾಗಿರುವದು!!!

ಹೀಗೆ ನಮ್ಮ ಆರ್ಯಾವರ್ತ ದೇಶವನ್ನು ಅಧೋಗತಿಗೆ ತರುತ್ತಲಿರುವ ಈ ಜಾತಿಭೇದವೆಂಬ ಮೂಢತ್ವವು ಅನೇಕ ಮಹಾ ಮಹಿಮರಾದ ಆರ್ಯಸಂತತಿಯವರನ್ನು ಸಹ ನಿಕೃಷ್ಟಜಾತಿಯವರೆಂದು ತಿರಸ್ಕರಿಸುವಂತಹ ಅವಿವೇಕಕ್ಕೆ ಆಕರವಾಗಿದೆ. ಇದನ್ನು ಮೂಲತಃ ನಿವಾರಣೆ ಮಾಡಿ, ಯಾವ ಯಾವ ಪಂಗಡವರ "ಜಾತಿಯು" ಆದಿ ಕಾಲದಿಂದ ಹೇಗೆ ಹೇಗೆ ವುಂಟಾಗುತ್ತಾ ಬಂದಿರುವದೆಂಬುದನ್ನು—ವೇದಗಳು, ಶಾಸ್ತ್ರಗಳು, ಪುರಾಣಗಳು, ಇತಿಹಾಸಗಳು, ಐತಿಹ್ಯಗಳು, ಶಿಲಾ ಲೇಖನಗಳು ಮುಂತಾದ ಸಾಧನಿಗಳಿಂದ ನಿರ್ಧರಿಸಲು—ಕೆಲವು ಜಾತಿಯವರ ವಿಷಯದಲ್ಲಿ ಸಾಧನಾ ಗ್ರಂಥಗಳನ್ನು ಸಂಪಾದಿಸಿರುವೆವು.

ನಮ್ಮ ಕನ್ನಡದೇಶದಲ್ಲಿ ಮುಖ್ಯವಾಗಿ ಪ್ರಬಲಿಸಿರುವ ಈ ಕೆಳಗೆ ವಿವರಿಸಿರುವ ಜಾತಿಯವರಲ್ಲಿ ಅನೇಕ ಜಾತಿಯು ಭದ್ರಪುರುಷರು ಪೂರ್ವ ಕಾಲದಲ್ಲಿ ರಾಜತ್ವವನ್ನು ಸಹ ಮಾಡುತ್ತಲಿದ್ದಂತೆ ದಾಖಲೆಗಳಿರುವೆವು. ವೀರಶೈವರೆಂಬ ಲಿಂಗಾಯಿತರು, ಒಕ್ಕಲಿಗರೆಂಬ ಒಂದೇಜಾತಿಯಲ್ಲಿ ಅನೇಕ ಒಳಪ್ರಭೇದಗಳು, ಗೊಲ್ಲರು, ನಾಯಿಂದರೆಂಬ ನಯನಜರು, ಕುಂಚಿಗರು, ಗಂಗಾಪುತ್ರರೆಂಬ ಬೆಸ್ತರು, ಪತಗಾರರು, ಕೊಟ್ಟಕಾರರು, ಬೇಡರೆಂಬ ನಾಯಿಕರ ಜಾತಿಯವರು, ಹೂವಾಡಿಗರು, ಮರಾಠಿಗರು, ರಡ್ಡಿಗರು, ಬೀಜರು, ದೇವಾಂಗದವರು, ವಿಶ್ವಕರ್ಮರೆಂಬ ಅಕ್ಕಸಾಲಿಗರು

ಈ ಮುಂತ್ರಾವ ಜಾತಿಯವರ ಉತ್ಪತ್ತಿ, ಪ್ರಭೇದಗಳು ಮುಂತ್ರಾಪ ನ್ನು ಸಂದರ್ಭವಶಾತ್ ಆಗಾಗ್ಗೆ ವಿವರಿಸುತ್ತಾ-ಇವರೂ ಸಹ ಮೂಲತಃ ಆರ್ಯಸಂಗಡದವರೇ ಆಗಿದ್ದು, ಕಾಲಾಂತರದಲ್ಲಿ ಈ ಸ್ಥಿತಿಗೆ ಬಂದರೆಂಬುದರ ವಿವರವನ್ನು ಬರಿಯಲುಪಕ್ರಮಿಸುವೆವು. ಇಂತಹ ನಮ್ಮಭ್ರಾತೃವರ್ಗದವರು ತಮ್ಮಲ್ಲಡಗಿರತಕ್ಕ ಅವಿಚಾರ ಪರಂಪರಗಳಿಂದ ಮುಕ್ತರಾದರೆ ಸರ್ವರೂ ಸಮಾನರೆಂಬ ಸರ್ವೋತ್ತಮ ಭಾವನೆಯು ಅವರುಗಳಲ್ಲಿ ಬೇರೂರಲಡ್ಡಿಯಿಲ್ಲ ! ಈ ಮಹತ್ಕಾರ್ಯವನ್ನು ಮಾಡುವದಕ್ಕಾಗಿಯೇ ಈ ಶುನವುಳ್ಳ (ಜಗತ್ಪಾವನೆ) ಪತ್ರಿಕೆಯು ಆವಿರ್ಭವಿಸಿರುವದು.

ಈ ಪತ್ರಿಕೆಯ ಮುಖ್ಯೋದ್ದೇಶ.

ಜಗದಾದಿಕಾಲದಿಂದಲೂ—ಐಶ್ವರ್ಯ, ವಿದ್ಯಾ, ವಿವೇಕ, ವಿನಯ, ಐಕ್ಯತೆ, ಶುನತೆ, ಪಾರಿಶುದ್ಧತೆ, ಸಕಲಶಾಸ್ತ್ರವಿಜ್ಞಾನ ಸಂಪನ್ನತೆ ಮುಂತಾದ ಅತ್ಯುಚ್ಚ ತಮ ನಾಗರಿಕತೆಯ ಶಿಖರಕ್ಕೇರಿ ಮೆರೆಯುತ್ತಿದ್ದ ಈ ಭರತಖಂಡಸ್ಥ ಆರ್ಯೋತ್ತಮರಾದ ಕುರುಬ ಜನರು ತಮ್ಮ ಧೈರ್ಯ, ಸ್ಥೈರ್ಯ, ಸಾಹಸ, ಪರಾಕ್ರಮಗಳಿಂದ ಈ ದೇಶದ ಮೂಲ ನಿವಾಸಿಗಳಾದ ದಸ್ಯುಗಳೆಂಬ ಕಾಡುಜನರನ್ನು ಮೂಲೋತ್ಪಾಟನೆಮಾಡಿ, ಗಿರಿಗುಹ್ಯಗಳಿಗೆ ಓಡಿಸಿ,—ಸಿಂಧು, ಗಂಗಾ, ಬ್ರಹ್ಮಪುತ್ರ ನದಿಗಳ, ಮತ್ತು ಅವುಗಳ ಉಪನದಿಗಳ ಮಹಾ ಪವಿತ್ರ ಜಲದಿಂದ ಪ್ರಕ್ಷಾಳಿತವಾಗುತ್ತಿರುವ ಆರ್ಯಾವರ್ತವೆಲ್ಲವನ್ನೂ ಸ್ವಾಧೀನಪಡಿಸಿಕೊಂಡು—ಎಲ್ಲೆಲ್ಲಿಯೂ ಗ್ರಾಮ

ಗಳನ್ನೂ, ಊರುಗಳನ್ನೂ, ದೊಡ್ಡ ದೊಡ್ಡ ಪಟ್ಟಣಗಳನ್ನೂ ಕಟ್ಟಿ
ಈ ದೇಶವೆಲ್ಲವನ್ನೂ ಇಂದ್ರನ ದೇವಲೋಕದಂತೆಸಗಿ, ಈ ಭರತಖಂಡ
ವೇ ಸಕಲೈಶ್ವರ್ಯನಿಧಿ ಎಂಬದಾಗಿ ಜಗತ್ಪ್ರಸಿದ್ಧವಾಗಲು ಅನುಕೂಲಪಡಿ
ಸಿದರೆಂಬದು ಅತ್ಯುಕ್ತಿಯಲ್ಲ! ಇವರೇ ವೇದೋತ್ಪತ್ತಿ ಕಾಲದಿಂದಲೂ
ಇಲ್ಲಿನವಾನವರಿಗೆ ಹುಟ್ಟು ಗುಣವಾಗಿರುವ ಸಾಮಾಜಿಕ, ರಾಜಕೀಯ,
ಕೌಟುಂಬಿಕ ವ್ಯವಹಾರಗಳನ್ನು ಜೀರೂರಿಸಿದವರು! ಇಂತಹ ಈ ಜನರ
ಆದ್ಯ ಪಿತೃಗಳೇ ಎಲ್ಲೆಲ್ಲಿಯೂ ಪೃಥ್ವೀಪಾಲಕರಾಗಿಯೂ, ಚಕ್ರವರ್ತಿ
ಗಳಾಗಿಯೂ ಮೆರೆಯುತ್ತಿದ್ದರು. ಅಂತಹ ಪರಮ ಪ್ರತಾಪಾನ್ವಿತರಾಗಿ
ದ್ದವರ ವಂಶೀಕರಾದ ಈ ಕಾಲದ ಕುರುಬರು ತಮ್ಮ ವಿದ್ಯಾ ವಿನಯಾದಿ
ಗಳನ್ನೂ, ಧೈರ್ಯ ಸ್ಥೈರ್ಯ ಪರಾಕ್ರಮಾದಿಗಳನ್ನೂ, ಐಕ್ಯತೆಯನ್ನೂ
ಸಾಮಾಜಿಕ ವ್ಯವಸ್ಥೆಗಳನ್ನೂ, ಸಂಪತ್ತನ್ನೂ ಹಾಳುಮಾಡಿಕೊಂಡು
ಕೇವಲ ಹೀನಸ್ಥಿತಿಗಿಳಿದಿರುವರು. ಇಷ್ಟುಮಾತ್ರವಲ್ಲದೆ-ಮೊದಲು ಹುಲಿ
ಯಾಗಿದ್ದದ್ದು ಈಗ ಇಲಿಯಾಯಿತೆಂಬ ನಾಣ್ನುಡಿಯಂತೆ ವಿದ್ಯಾರಾಹಿತ್ಯ
ದಿಂದ ತಮ್ಮ ಆದ್ಯಪಿತೃಗಳು ಮಹಾರಾಜಾಧಿರಾಜರುಗಳಾಗಿದ್ದರೆಂಬ
ವಂತಹ ಅರುವನ್ನೂ ಸಹ ತಿಳಿಯದೆ,—ನಿಕೃಷ್ಟತಮವಾದ ಶೂದ್ರವರ್ಣ
ದವರೆಂದು ಪರಿಗಣಿಸಲ್ಪಡುವಂತಹ ಹೀನಸ್ಥಿತಿಯನ್ನಾ ಶ್ರೈಸಿರುವರು.

ಹೀಗೆ ಹಾವಸೆಕಟ್ಟಿ, ಜಡ್ಡುಹಿಡಿದು, ತಕ್ಕ ಸೌಲ್ಯಕರ್ಯವಾ
ಗದೆ, ಮೂಲೆಯ ಕಸದ ರಾಶಿಯಲ್ಲಿ ಬಿದ್ದಿರುವ ವಜ್ರದ ತುಂಡುಗಳನ್ನು
ಸಾಣೆಗೆಹಿಡಿದು, ಅದರ ಸ್ವಭಾವಸೌಂದರ್ಯಕರವಾದ ಪೂರ್ವಸ್ಥಿತಿಯನ್ನೆ ವ
ಲಂಬಿಸಲು ಯತ್ನಿಸುವದೇ ಈ "ಆರ್ಯನೃಪವಂಶೀಯರಾದ ಕುರುಬ
ಜಗತ್ಪಾವನ" ವೆಂಬ ಈ ಪತ್ರಿಕೆಯ ಮುಖ್ಯಕರ್ತವ್ಯ ವ್ಯಾಪಾರವು.

ಇದಕ್ಕಾಗಿ ಅಗತ್ಯವಾದ ಪ್ರಯತ್ನಗಳಲ್ಲಿ—

೧. ಈ ಜನಗಳ ಜ್ಞಾನವು ವಿಕಾಸಾವಸ್ಥೆಗೆ ಬಾರದಂತೆ, ಮತ್ತೂ
ಮತ್ತೂ ಮೌಲಿನ್ಯವನ್ನೇ ಎಸಗುತ್ತಿರುವ—ಕಲ್ಪನಾ ಗ್ರಂಥಗಳಲ್ಲಿ
ಇವರಿಗಿರುವ ಶ್ರದ್ಧೆಯನ್ನು ತಪ್ಪಿಸುವಿಕೆ.—

(೯) ನಮ್ಮ ಕುರುಬಜಾತಿಯ ಮಹೀಪಾಲಕರುಗಳಲ್ಲಿ ಪ್ರತಿಯೊಬ್ಬರ ನ್ಯಾಯವಾದ ಚರಿತ್ರೆಗಳನ್ನು ಪ್ರಕಟಿಸುವದರಮೂಲಕ, ನಮ್ಮ ಜನರ ಮನೋಮಾಲಿನ್ಯವನ್ನು ತೊಳೆಯುವಿಕೆ.—

(೫) "ಸ್ವಾರ್ಥತೆ, ಸ್ವಪ್ರತಿಷ್ಠೆಂ ಇತರರು ನೀಚರು, ನಾವು ಉಚ್ಚತಮರೆಂದು ಮುಂತಾದ ,, ದುಷ್ಪ್ರವ್ಯವಹಾರ ಪ್ರೇರಿತರಾದ ಅನೇಕರಿಂದ ರಚಿತಗಳಾಗಿರುವ, ವೇದಾದಿಸರ್ವಾಸ್ತ್ರ ವಿರುದ್ಧಗಳಾದ ಕ್ಷುದ್ರ ಗ್ರಂಥಗಳ ಪ್ರಾಬಲ್ಯದಿಂದ ನಮ್ಮ ದೇಶೀಯರು ಪರಸ್ಪರ ಭೇದಭಾವ ಬುದ್ಧಿಯಿಂದ ಪ್ರೇರಿತರಾಗಿ ಬಡದಾಡುತ್ತಾ, ನಮ್ಮ ಭಾರತಭೂಮಿಯನ್ನೇ ಅಧೋಗತಿಗೆ ಬರುವಂತೆ ಮಾಡಿದ್ದಾರೆ. ಇದನ್ನು ತಪ್ಪಿಸಲು ಸಕಲ ಮಾನವಸಮುದಾಯವೂ ಸಹೋದರರಂತಲೂ, ಇವರೆಲ್ಲರಿಗೂ ಜಗದೀಶ್ವರನೇ ತಂದೆಯಂತಲೂ ನ್ಯಾಯವಾದ ಜ್ಞಾನವು ಉದಯವಾಗಬೇಕಾಗಿದೆ ಇಂತಹ ಸರ್ವೋತ್ತಮ ಪ್ರಯತ್ನ ಮೂಲಕ ನಮ್ಮ ದೇಶದ ಬ್ರಾಹ್ಮಣ ಬ್ರಾಹ್ಮಣೇತರರ ವೈರಭಾವವು ನಿವೃತ್ತಿಯಾಗಿ ಪರಸ್ಪರ ಸೌಹಾರ್ದವನ್ನು ಸರ್ವತ್ರ ಪ್ರಚಾರಕ್ಕೆ ತರುವಿಕೆ—

(೪) "ಸರಕಾರದ ನೌಕರಿಯೇ ಜೀವನಕ್ಕೆ ಮುಖ್ಯಾಧಾರ, ವೆಂಬ ಈಗಿನ ಕಾಲದವರ ಮಹಾ ಪ್ರತೀಕ್ಷೆಯನ್ನು ತಪ್ಪಿಸುದರ ಮೂಲಕ—ಕೃಷಿ, ಕೈಗಾರಿಕೆ, ವ್ಯಾಪಾರ ಮುಂತಾದ ಅತಿವೋತ್ತಮ ಜೀವನೋಪಾಯ ಪ್ರಯತ್ನಗಳು ಸರ್ವತ್ರ ಪ್ರಚಾರಕ್ಕೆ ಬರಲು ಉತ್ತೇಜನ ಕೊಳಿಸುವಿಕೆ—

ಈ ಮುಂತಾದ ಘನತರವಾದ ದೇಶಹಿತ ಕಾರ್ಯಗಳೇ ಈ "ಜಗತ್ಪಾವನ" ಪತ್ರಿಕೆಯ ಮುಖ್ಯೋದ್ದೇಶವಾಗಿದೆ.

ಸ್ವವಿಷಯ.

ಈ ಜಗತ್ಪ್ರಾವನೆ ಪತ್ರಿಕೆಯನ್ನಾರಂಭಿಸಿರುವ ನಾನು ಯಾರೆಂಬುದನ್ನು ನಮ್ಮ ಮಿತ್ರಾಭಿಮಾನಿಗಳಿಗೂ, ಗ್ರಾಹಕ ಮಹಾಶಯರಿಗೂ ವಿಜ್ಞಾಪಿಸಿಕೊಳ್ಳುವದು ಪ್ರಕೃತಕ್ಕೆ ಅಗತ್ಯವಿಷಯವಷ್ಟೆ? ಯಾಕೆಂದರೆ ಜೀವನಾರ್ಥವಾಗಿ ಇಂತಹ ಪತ್ರಿಕೆಯನ್ನು ಭಾಪಿಸುತ್ತಾ, ಗ್ರಾಹಕರಿಂದ ಧನಾಕರ್ಷಣೆಯೇ ಮುಖ್ಯವಾದ ಆಭೀಷ್ಟವಾಗುಳ್ಳವರು ಯಾರಾದರೂ ಆಗಬಹುದು. ಇದಕ್ಕಾಗಿ ನನ್ನ ಆತ್ಮಚರಿತೆಯನ್ನು ಇಲ್ಲಿ ಪ್ರಕಟಿಸುವದು ಸುಸಂಗತವು.

ಮಹನೀಯರೆ! ಈ ಪತ್ರಿಕೆಯ ಸಂಪಾದಕನಾದ ತಮ್ಮ ಸೇವಕನು ನಮ್ಮ ಕನ್ನಡ ನಾಡಿನಲ್ಲಿಹುವ ಕುರುಬ ಬಂಧುವರ್ಗದ ಪ್ರೇಮುಖರಿಗೆ ಚಿರಪರಿಚಿತನೂ ಹಾಗೂ ಎಷ್ಟೋ ವರ್ಷಗಳಿಂದ ನಮ್ಮ ಮಿತ್ರಾಭಿಮಾನವೆಂಬ ಮಹತ್ತರವಾದ ಮನೋವ್ಯಾಪಾರದಿಂದ ಬಂಧಿಸಲ್ಪಟ್ಟವನೂ ಎಂಬುದನ್ನು ತಾವೆಲ್ಲರೂ ಸಹಜವಾಗಿ ಗ್ರಹಿಸಿರಿ.

ನನ್ನ ಮಾತಾಪಿತೃಗಳ ಮನೋವೃತ್ತಿಯೂ, ನನ್ನೆ ವಿದ್ಯೋಪಾರ್ಜನೆಯ ಪರಿಪಾಕನ್ನೂ, ನನಗೆ ದೊರಕಿದ ಗುರುಗಳ, ಹಾಗೂ ಸ್ನೇಹಿತರ ಸುಸರ್ಗದಿಂದುಂಟಾದ ಸಂಸ್ಕಾರವೂ—ನೆನ್ನೆನ್ನು ನಿಮ್ಮಂತೆ—"ಏನಾದರೊಂದು ಕಸಬಿನಿಂದ ದ್ರವ್ಯವನ್ನಾರ್ಜಿಸಿ, ಹೊಟ್ಟೆ ಹೊರೆಯುತ್ತಾ ಇರುವದೇ ಸಾಕು"—ಎಂಬ ಹೀನತರವಾದ ಆಭೀಷ್ಟದಲ್ಲಿ ಬಿಡದೆ—ನಮ್ಮ ಕುರುಬ ಜನರಮೂಲವಂತ ವ್ಯಾವದು? ಜನಾದಿ ಕಾಲದಿಂಪಲೂ ಇವರು ಇದೇ ತರಹ ನಿಕೃಷ್ಟತಮ ವ್ಯಾಪಾರದಲ್ಲಿಯೇ ಇದ್ದರೇ? ಜಗತ್ತಿನಲ್ಲಿರುವ ಇತರ ಜನಾಂಗಗಳು—ವಿದ್ಯಾ ಬುದ್ಧಿ, ವಿವೇಕ, ಜ್ಞಾನೋತ್ಕೃಷ್ಟಕವ್ಯವಹಾರಗಳು, ಪರಿಶುದ್ಧತೆ, ದೃಢಪ್ರಯತ್ನಗಳಿಂದ ದಿನೇ ದಿನೇ ತಮ್ಮ ತಮ್ಮ ಸಂಘಗಳನ್ನು ಅತ್ಯುಚ್ಚ ಸ್ಥಿತಿಗೆ ತರುತ್ತಿರುವಂತೆ ವೇದಾದಿ ಸಚ್ಛಾಸ್ತ್ರಗಳೂ, ಹಾಗೂ ಪರಮಜ್ಞಾನದಾಯಕವಾದ ಸಂಸ್ಕೃತ ಭಾಷೆಯೂ ನಮ್ಮ ಜನರಪಾಲಿಗೆ ಬರಲೇಇಲ್ಲವೆ? ಎಂದು ಮುಂತಾದ ಉದಾತ್ತಭಾವನೆಗಳನ್ನು ಅಹರ್ನಿಶಿಯಲ್ಲಿಯೂ ಮನಸ್ಸಿನಲ್ಲಿ ಬೇರೂರಿಸಿಕೊಂಡು, ಇದೇ ವಿಷಯಗಳ ಶೋಧ

ನಗಾಗಿ—ಪ್ರಯತ್ನಪಡುತ್ತಾ ನಾನು ಬಾಲಕನಾಗಿರುವಾಗಲೇ ದೇಶ ದೇಶಾಂತರುಗಳಲ್ಲಿರುವ ವಿದ್ವಾಂಸರುಗಳೊಡನೆ ಕಲಿಯುತ್ತಾ, ಈ ವಿಧವಾದ ಪ್ರಶ್ನೆಗಳಿಂದ ನನ್ನ ಅಭೀಷ್ಟಸಾಧನೆಗೆ ಪ್ರಯತ್ನಿಸುತ್ತಾ ಬರುತ್ತಿದ್ದೆನು. ಹುಚ್ಚನಂತೆ ಇದೇ ವಿಷಯಗಳ ಶೋಧನಾಕಾರ್ಯದಲ್ಲಿ ಮಗ್ನನಾಗಿದ್ದ ನನಗೆ ನಮ್ಮ ಜಾತಿಯಲ್ಲಿ—ವೃದ್ಧರೂ, ತಿಳುವಳಿಕೆಯು ವರೂ, ಪೌರ್ವಾಪರಜ್ಞರೂ ಆದ ಎಷ್ಟೋ ಜನರು ದೊರಕಿ, ನಮ್ಮ ಕುರುಬವುತದ ಉತ್ಪತ್ತಿ ಮುಂತಾದ್ದರವಿಷಯಗಳಲ್ಲಿ ಅವರ ಅಲ್ಪವಾದ ತಿಳುವಳಿಕೆಗೆ ಪ್ರಾಪ್ತವಾಗಿದ್ದ, ಉಂತಾಡಪದ್ಯ, ಅದಿಗೊಂಡ ಮುಂತಾದವರ ಕಟ್ಟು ಕಥೆಗಳನ್ನು ಬಹು ಆದರದಿಂದಲೂ, ಗೌಪ್ಯವಾಗಿಯೂ ಉಪದೇಶ ಮಾಡಿದರು. ಇಂತಹ ನಾನಾಸ್ಯ ಮತ್ತು ಕ್ಷುಲ್ಲಕ ವಿಷಯಗಳನ್ನು ತಿಳಿದಮಾತ್ರಕ್ಕೆ ನನಗೆ ತೃಪ್ತಿಯಾಗದೆ—ಇದೇ ವ್ಯಾಪಾರಕ್ಕಾಗಿ ಧಾರವಾಡ ಜಿಲ್ಲೆ, ಮೈಸೂರು ರಾಜ್ಯವುಂತಾದ ಎಲ್ಲಾ ಪ್ರಾಂತಗಳಲ್ಲಿಯೂ ಸಂಚರಿಸುತ್ತಾ, ಅಲ್ಲಿನ ವಿವೇಕಿಗಳಾದ ಮತಾಭಿವಾನಿಗಳ ಈ ವಿಚಾರದ ಅಭಿಪ್ರಾಯವೇನು ದೊರಕೀತೋ ನೋಡೋಣವೆಂಬ ಆತೆಯಿಂದಿದ್ದೆನು.

ಅಷ್ಟರಲ್ಲಿ — ಕುರುಬರಿಗೂ, ನಮ್ಮ ಪ್ರಿಯಸಹೋದರರಾದ ಬಕ್ಕಲಿಗರಿಗೂ ಜಾತಿಸಂಬಂಧ ವಾಜ್ಯವುಂಟಾದಾಗ—ನಾನು ಸ್ವಾರ್ಥವ ತ್ಯಾಗಬುದ್ಧಿಯಿಂದ ಈ ಪ್ರಪಂಚಸುಖವನ್ನೇ ತೃಣೀಕರಿಸಿ, ನಮ್ಮ ದೇಶ ಮತ್ತು ಪರದೇಶದಲ್ಲಿರುವ ಕುರುಬರ ಗ್ರಾಮಾದಿಗಳಲ್ಲಿ ಸಂಚರಿಸುತ್ತಾ—ಈ ವ್ಯಾಜ್ಯಕ್ಕಾಗಿ ಧನಸಂಚಯವನ್ನು ಮಾಡುವವರ ಮುಖ ಅಲ್ಲಲ್ಲಿ ದೊರಿಯುವ ಹಿರಿಯರು, ಗುರುಗಳಲ್ಲಿ ಈ ಮೇಲಿನ ಮುಖ್ಯವಿಷಯ ಶೋಧನೆಯನ್ನೇ ಮಾಡುತ್ತಲಿದ್ದೆನು. ನಾನು ಕಷ್ಟಪಟ್ಟ ತಂದ ಹಣದಿಂದ ಈ ವ್ಯಾಜ್ಯವು ಮುಕ್ತಾಯವಾದರೂ—ನನ್ನ ಮನೆ ವ್ಯಾಪಾರವು ಶಾಂತವಾಗಲೇಇಲ್ಲ, ಇನ್ನು ಅತಿಶಯ ಪ್ರವೃದ್ಧಿಯು ಗುತ್ತಲೇ ಬಂತು

ಹೀಗೆ ನಮ್ಮ ಜಾತಿಯ ಪುರೋವೃದ್ಧ್ಯರ್ಥವಾಗಿ ಯತ್ನಿಸುತ್ತಿದ್ದ ನನಗೆ ಕಾಣಿಕಲು ತಾಲ್ಲೂಕು ಉತ್ತರಿಯಲ್ಲಿದ್ದ ಮು|| ರಾ|| ಶ್ರೀ ಬೀರಪ್ಪ

ನೆಂಬವರೂ, ಇವರ ಅಳಿಯ ಮು॥ ರಾ॥ ಶ್ರೀ ಮುದ್ದೇಗೌಡ ಮುಂತಾ ದವರೂ ಬಂದು ಸಭೆ ಶೇರಿಸಿ, ೪ ತೊಲೆ ಬಂಗಾರದ ಬಿಲ್ಲೆಯಲ್ಲಿ ,, ಕುಲಚಿಂತಾಮಣಿ ,, ಎಂಬ ಬಿರುದನ್ನು ದಯಪಾಡಿಕೊಟ್ಟರು. ಇದರಿಂದ ನನ್ನ ಮಾನಸಿಕ ವ್ಯಾಪಾರವು ಮತ್ತೂ ಪ್ರಬಲವಾದ್ದರಿಂದ—ನಮ್ಮ ಕುರುಬ ಜನರದ್ದಾಗಿ ಒಂದುವಾರ ಪತ್ರಿಕೆಯನ್ನು ಪ್ರಕಟಿಸಲು ಯತ್ನಿಸಿ—ನಮ್ಮ ಹಿರಿಯರಾದ ಶ್ರೀಮಂತರಲ್ಲಿ ನನ್ನ ಅಭಿಪ್ರಾಯವನ್ನು ತಿಳಿಸಲು—ಬೆಂಗಳೂರು ವಾಸಸ್ಥರಾದ ಮು॥ ರಾ॥ ಬೋಜಪ್ಪನವರು, ಮು॥ ರಾ॥ ಶ್ರೀರಂಗಪ್ಪನವರು, ಸಾಹುಕಾರ್ ಮು॥ ರಾ॥ ಮರಿಯಪ್ಪನವರು, ಮು॥ ರಾ॥ ಕೀರ್ತಿಶೇಷರಾಗಿರುವ ಕಂಟ್ರಾಕ್ಟರ್ ಪಿಳ್ಳೆಪ್ಪನವರು ಇವರೆಲ್ಲರೂ ತಲಾ ೧೫೦ ರೂ. ಗಳಂತೆ ೬೦೦ ರೂ. ಗಳನ್ನು ಕೊಡಿಸಿ ಕುರುವಿಜಯವೆಂಬ ವಾರಪತ್ರಿಕೆಯನ್ನಾರಂಭಿಸಿದೆನು. ಈ ಪತ್ರಿಕೆಯು ನಮ್ಮ ಜನರ ಆದರಕ್ಕೆ ಪಾತ್ರವಾಗಿತ್ತು. ಅಷ್ಟರಲ್ಲಿಯೇ ಯೂರೋಪಿನ ಯುದ್ಧವಿಂದ ಕಾಗದ ತುಟ್ಟಿಯಾಗಲು ಆ ಪತ್ರಿಕೆಯು ನಿಂತು ಬಿಟ್ಟಿತು. ಆ ಸಮಯದಲ್ಲಿ ಮು॥ ರಾ॥ ಕೀರ್ತಿಶೇಷರಾದ ಕಂಟ್ರಾಕ್ಟರ್ ಪಿಳ್ಳೆಪ್ಪನವರು ನನಗಾಗಿ ಒಂದು ಛಾಪಖಾನೆಯನ್ನೇ ಕೊಂಡುಕೊಟ್ಟರು. ಆ ಪ್ರೆಸ್ ಸೂಪರ್‌ರಾಯಲ್ ಆಗಿದ್ದರಿಂದ ಕೆಲಸಗಾರರು ದೊರಿಯೆಲಾರರೆಂದು ತಿಳಿಸಲು, ಅದನ್ನು ಸಾಲಗಾರನಾ ನಾರಾಯಣ ಶಾಸ್ತ್ರಿಗಳಿಗೆ ಮಾರಿ, ಆ ಹಣವಾಗಿ ೩೦೦ ರೂ. ಗಳನ್ನು ನನಗೆ ಛಾಪಖಾನೆ ಇಡುವಾಗ ದಯಪಾಲಿಸಬೇಕೆಂದು, ಅವರ ತಮ್ಮಂದಿರು ಮು॥ ರಾ॥ ಶ್ರೀ ಮೈಸೂರು ಕಂಟ್ರಾಕ್ಟರ್ ಸಿದ್ದಪ್ಪನವರಿಗೆ ಹೇಳಿದ್ದಾರೆ. ಆ ಮಹಾ ಮಹಿಮರಾದ ಕಂಟ್ರಾಕ್ಟರ್ ಸಿದ್ದಪ್ಪನವರು ಸಹ ಮೊದಲಿಗಿಂತ ಮಹೋನ್ನತಪದವಿಯಲ್ಲಿರುವದರಿಂದ ಅವರು ನನ್ನ ಈ ಪ್ರಯತ್ನಕ್ಕೆ ಅವಶ್ಯ ತಲೂ ಅತಿಶಯವಾಗಿ ಸಹಾಯ ಮಾಡುವರೆಂಬ ಭರವಸೆ ಇದೆ.

ಈ ಮಧ್ಯಕಾಲದ ನನ್ನ ಪ್ರಯತ್ನಗಳಿಂದ—ಪೂರ್ವಕಾಲದ್ದು ನಮ್ಮ ದೇಶದ ಅನೇಕ ಭಾಗಗಳಲ್ಲಿ ದವಲತ್ತು ಮಾಡುತ್ತಿದ್ದ ಕದಂಬರು ಪಲ್ಲವರು, ಯಾದವರು, ಹೊಯಿಸಳ ಬಳ್ಳಾಳರು, ವಿಜಯನಗರದ ರಾಜವಂಶಸ್ಥರು, ಶಿವಾಜಿ ಮಹಾರಾಜರು, ಇಂದೋರ್ ಮಹಾರಾಜರ ವಂಶ

ಕರು ಮುಂತಾದವರು ಜನ್ಮತಃ ಕುರುಬರೇ ಆಗಿರುವರೆಂಬದಾಗಿ ಮಹಾ ಮಹಾ ಚರಿತ್ರಲೇಖಕರ ನಂಬಲರ್ಹವಾದ ಬರವಣಿಗೆಗಳು ನನಗೆ ದೊರ ಕಲು—ನನ್ನ ಮನಸಾಭೀಷ್ಟವು ಶ್ರೀ ಭಗವಂತನ ಕೃಪೆಯಿಂದ ಸಫಲ ವಾದದ್ದಕ್ಕಾಗಿ ಆತನಿಗೆ ಶತಶಃ ವಂದನಗಳನ್ನು ಸಮರ್ಪಿಸಿ, ಇನ್ನೂ ಈ ನಮ್ಮ ಜಾತಿಯವರ ವಿಷಯಕ ಗ್ರಂಥಗಳು ಎಲ್ಲೆಲ್ಲಿರುವವ್ವೋ ನೋಡಬೇಕೆಂಬ ಕುತೂಹಲವು ನನ್ನಲ್ಲಿ ಪ್ರಬಲವಾಯಿತು.

ಈ ಮಧ್ಯೆಕಾಲದಲ್ಲಿ—" ಕುರುಬರ ಕೈಪಿಡಿ ,, " ಆಚಾರ ಕಲಾ ನಿಧಿ ,, ಎಂಬ ಪುಸ್ತಕಗಳನ್ನು ನಮ್ಮ ಜನರ ಹಿತಾರ್ಥವಾಗಿ ಪ್ರಕಟಿ ಸಿದೆನು. ಈ ಆಚಾರ ಕಲಾನಿಧಿಯಲ್ಲಿ—ಈಗ ಕುರುಬರ ಪೂರ್ವಜ ರಾದ ಕದಂಬರು ಪಲ್ಲವರು ಮುಂತಾದ ರಾಜ್ಯಪಾಲಕರ ವಿಷಯಗಳನ್ನು ಸಂಕ್ಷೇಪವಾಗಿ ಪ್ರಕಟಿಸಿದೆನಾದ್ದರಿಂದ, (ಈ ಪುಸ್ತಕವು ಪ್ರಚಾರಕ್ಕೆ ಬರುವಮೊದಲು ನಮ್ಮ ಜನರು ತಮ್ಮ ಉತ್ಪತ್ತಿಯ ವಿಷಯಕವಾಗಿ ನಿರಾಧಾರವಾದ ಕಟ್ಟು ಕಥೆಗಳನ್ನು ಸಭೆಗಳಲ್ಲಿಯೂ, ಬರವಣಿಗೆಗಳ ಲ್ಲಿಯೂ ಉಪನ್ಯಾಸಾದಿಗಳಲ್ಲಿ ಹೇಳಿಕೊಳ್ಳುತ್ತಿದ್ದವರು,) ಈ ನಮ್ಮ " ಆಚಾರಕಲಾನಿಧಿ ,, ಯು ೧೯೦೭ ನೇ ಇಸವಿಯಲ್ಲಿ ಪ್ರಚಾರಕ್ಕೆ ಬಂದನಂತರ—ನಾವೆಲ್ಲರೂ ಕದಂಬರು, ಪಲ್ಲವರು, ಯಾದವರು ಮುಂತಾದ ಮಹೀಪಾಲರ ವಂಶೀಕರೆಂದು ನಂಬಿಕೊಳ್ಳುತ್ತಾ, ಇದೇವಿಷ ಯವನ್ನೇ ಪ್ರಕಟಿಸುತ್ತಾ ಬರುತ್ತಾರಲ್ಲದೆ ಆ ಸಂಬಂಧವಾದ ಎಲ್ಲಾ ನಂಬಲರ್ಹವಾದ ಲೇಖನಗಳನ್ನು ತಿಳಿಯಬೇಕೆಂದು ಅತ್ಯಾಶೆಯಿಂದ ನನ್ನ ಪ್ರಕಟಣೆಯನ್ನೇ ಎದುರು ನೋಡುತ್ತಾ ಇದ್ದಾರೆ.

ನಮ್ಮ ಜಾತಿಯ ಪರವಾದ ಇನ್ನೂ ಏನೇನು ಗ್ರಂಥಗಳು ಮರಾ ಟಿ, ಗುಜರಾತಿ, ಹಿಂದೀ ಮುಂತಾದ ಔತ್ತರೀಯರ ಭಾಷೆಗಳಲ್ಲಿರು ವವ್ವೋ ? ಹಾಗೆಯೇ ಅಲ್ಲಿರುವ ನಮ್ಮ ಕುರುಬ ಜನರು ಆ ದೇಶದಲ್ಲಿ ಯಾವ ಸ್ಥಿತಿಯಿಂದಿರುವರೋ ಎಂಬದನ್ನು ಕಣ್ಣಾರೆ ನೋಡಿ ತಿಳಿದು ಬರಲು ನಾನು ಉತ್ತರದೇಶಕ್ಕೆ ಪ್ರಯಾಣ ಮಾಡಿದೆನು.

ಅಲ್ಲಿನ ನನ್ನ ಸಂಚಾರವು ಬಹು ಪ್ರಯೋಜನಕಾರಿಯಾಯಿತು. ಆಗ ನಾನು " ಕುರುಬ ಕುಲದರ್ಪಣ ,, ವೆಂಬ ಒಂದು ನಮ್ಮ

ಮತದ ಮಹದ್ವಿಷಯಗಳನ್ನು ಪುಸ್ತಕಾಕಾರವಾಗಿ ಬರೆದು, ಅದನ್ನು ಪ್ರಕಟಿಸಲು ಯತ್ನಿಸಿ ನಮ್ಮ ದೇಶಕ್ಕೆ ಬರುತ್ತಿರಲು, ದಾರಿಯಲ್ಲಿ ದೊರಕಿದ ಈ ಕೆಳಗಿನ ಮಹನೀಯರು ಈ "ಕುರುಬ ಕುಲದರ್ಪಣ" ದ ಪ್ರಕಟಣೆಗೆಂದು ಸಹಾಯ ಪ್ರಭ್ಯವನ್ನು ಕೊಟ್ಟಿದ್ದಾರೆ.

ಮು॥ ರಾ। ಶ್ರೀ ಗದಗ ತಾಲ್ಲೂಕು ಹಳ್ಳಿಪುರದ ಸೋಮನ ಗೌಡರವರು ೨೫-೦-೦ ರೂ. ಗಳನ್ನೂ,

ನವಲಗುಂದ ತಾಲ್ಲೂಕು ನ್ಯಾವಳ್ಳಿಲಿರುವ ಮು॥ ರಾ॥ ಶ್ರೀ ಭೀಮಣ್ಣನವರು, ೨೫-೦-೦ ರೂ. ಗಳನ್ನೂ,

ಅಲ್ಲಿಯೇ ಹಿರೇಮುರಾಪುರದ ಪಟೇಲರ ಶಿವಪ್ಪನವರ ಪ್ರೋತ್ಸಾಹದಿಂದ ಮು॥ ರಾ॥ ಶ್ರೀ ಬಸವೇ ಗೌಡರು ೨೫-೦-೦ ರೂ. ಗಳನ್ನೂ,

ಗದಗ ತಾ॥ ಹುಲಕೋಟೆ ಮು॥ ರಾ॥ ಕರಿಯಪ್ಪನವರು ೧೦-೦-೦ ರೂ. ಗಳನ್ನೂ,

ಬಂಕಾಪುರದ ಮು॥ ರಾ॥ ಶ್ರೀ ರಾಣೋಜಿಲಿಂಗಪ್ಪನವರು ೧೦-೦-೦ ರೂ. ಗಳನ್ನೂ,—ಈ ರೀತಿ ದಯಪಾಲಿಸಿರುತ್ತಾರೆ.

ನಮ್ಮ ಕುರುಬ ಜಾತಿಯವರು ಪ್ರತಿಭೆಯೋತ್ಪನ್ನರಾದ ರಾಜ್ಯಾಧಿಪತಿಗಳ ಸಂತತಿಯವರೆಂದು ನಮ್ಮಲ್ಲಿ ಮಹಾ ಮಹಾ ರೀಸರ್ಚ್ ರಿಪೋರ್ಟುಗಳು, ಶಿಲಾಲೇಖಗಳು ಮುಂತಾದ ನೂರಾರು ನಂಬಿಕೆಗೆ ಅರ್ಹವಾದ ದಾಖಲೆಗಳಿರುತ್ತವೆ. ಇವೆಲ್ಲವನ್ನೂ "ಕುರುಬ ಕುಲದರ್ಪಣ" ವೆಂಬ ಪುಸ್ತಕದಲ್ಲಿ ಸವಿಾದೇಶವಾಡಿದ್ದೇನೆ. ಆ ಪುಸ್ತಕವು ಸಾವಿರಾರು ರೂಪಾಯಿಗಳ ವೆಚ್ಚದಿಂದ ಛಾಪಾ ಅಗತಕ್ಕ ಪುಸ್ತಕವಾದ್ದರಿಂದ ಇದರ ಅಭಿಪ್ರಾಯಗಳನ್ನು ಸವಿಾವೇಕವಾಡುವದರ ಮೂಲಕ, ನಮ್ಮ ಕುರುಬರಾದ ನೃಪಲಲಾಮರಲ್ಲಿ ಒಬ್ಬೊಬ್ಬರ ಚರಿತ್ರೆಯನ್ನಾಗಿ ಪ್ರಕಟಿಸಲಾರಂಭಿಸುವೆವು.

ಈಗ ಕೃತಯುಗದಲ್ಲಿ ಕುರುಬರ ವೀರಪುರುಷನಾಗಿದ್ದ ಶ್ರೀಕಂಠಕುಮಾರನೆಂಬ ಸಾರ್ವಭೌಮನ ಚರಿತ್ರೆಯನ್ನು ಅಪೇಕ್ಷ್ಯ ತೀರ್ವವಾಗಿ ಪ್ರಕಟಿಸಲಾರಂಭಿಸುವೆವು.

ಇದರ ಕ್ರಯ ನಮ್ಮ ಚಂದಾದಾರರಿಗೆ ಮಾತ್ರ ೪ ಆಣೆ! ಇತರರಿಗೆ ೧ ರೂ. ಆಗುವದು. (ಟ. ಹಾ. ಬೇರಿ)

ಈಗ ಮೇಲಿನ ವಿಷಯವನ್ನಾರಂಭಿಸೋಣ—ಉತ್ತರ ದೇಶದಿಂದ ಬಂದನಂತರ ನನಗೆ ತುಂಬಾ ಕಾಯಿಲೆಯಾಯಿತು. ಆ ಕಾಲದಲ್ಲಿ ನಮ್ಮ ಮುತಾಭಿಮಾನಿಗಳು ಬಂದು—ನಿಮಗೆ ಗುಣವಾದ ನಂತರ ನಮ್ಮ ಜಾತಿಯ ಪುರೋವೃದ್ಧಿಗೆ ಸಾಧಕವಾದ ಪ್ರಕಟಣೆಗಳನ್ನು ಪ್ರಕಟಿಸಿರಿ, ನಾವು ತುಂಬಾ ಸಹಾಯಮಾಡುತ್ತೇವೆಂದು ಹೇಳುತ್ತಿದ್ದರು. ನಾನು ಸೌಖ್ಯವನ್ನು ಪಡದನಂತರ ನೋಡಲು—ಮೊದಲು ನನಗೆ ಭರವಸೆಯನ್ನಿತ್ತಿದ್ದ ಮಹನೀಯರ ಸುಳುವೇ ಇಲ್ಲದಂತಾಗಿದೆ!!

ನಮ್ಮ ಕುರುಬಜಾತಿಯ ವಿಷಯಕವಾದ ಎಲ್ಲಾ ದಾಖಲೆಗಳನ್ನೂ ಪ್ರಕಟಿಸುವದಕ್ಕಾಗಿ, ಹುಟ್ಟಿರುವ ಈ "ಜಗತ್ಪಾವನ" ಪತ್ರಿಕೆಯನ್ನು ಹೊರಡಿಸಲು ಪ್ರಯತ್ನಿಸಿದ ವಿಷಯವು ನಮ್ಮ ಮುತಾಭಿಮಾನಿಗಳಿಗೆ ತುಂಬಾ ಸಂತೋಷಪ್ರದವಾಗಿದೆ ಯಂಬದರಲ್ಲಿ ಅಡ್ಡಿಯಿಲ್ಲ!

ಇದಕ್ಕೆ ಈ ಬೆಂಗಳೂರು ಸಿಟಿ ಯಲಹಂಕ ಬಾಗಿಲು ಬಳಿ ಇರುವ ಗಂಗಾಧರಪ್ಪನವರ ಗುರುಮೂರ್ತಪ್ಪನವರ ಮುಕ್ಕಳು ಮು॥ ರಾ॥ ಶ್ರೀ ವೀರಪ್ಪನವರೂ, ಮು॥ ರಾ॥ ಶ್ರೀ ರೇಷ್ಮಕೋಠೀ ಭೋಜಪ್ಪನವರೂ, ಇವರ ತಮ್ಮಂದಿರ ಮುಕ್ಕಳಾದ ಮು॥ ರಾ॥ ಶ್ರೀ ಜೀವಲಪ್ಪನವರೂ, ಮು॥ ರಾ॥ ಶ್ರೀ ಜೀವಮಂಣನವರೂ ತುಂಬಾ ಸಹಾಯಕರಾಗಿರುವರು. ಇವರಬಗ್ಗೆ ನಾನು ಕೃತಜ್ಞನಾಗಿದ್ದೇನೆ.

ಈ ಪತ್ರಿಕೆಯನ್ನು ಹೊರಡಿಸುವದಾದರೆ ತಮ್ಮ ಆಸುಪಾಸು ಇರತಕ್ಕ ನಮ್ಮ ಮುತಾಭಿಮಾನಿಗಳಿಂದಲೂ, ತಮ್ಮ ಸ್ವಹಸ್ತದಿಂದಲೂ ಪೂರ್ಣತಯಾ ಸಹಾಯಮಾಡುತ್ತೇವೆಂದು ಚಿತ್ರದುರ್ಗ ಪ್ರಾಂತ್ಯದ ಕುರುಬರ ಕುಲಗುರುಗಳಾದ ಶ್ರೀ ಶ್ರೀ ಶ್ರೀ ಕರಿಸಿದ್ಧಪ್ಪಯ್ಯ ವಡೆಯರವರು ಕಾಗದಗಳಮೇಲೆ ಕಾಗದಗಳು ಬರಿಯುತ್ತಾ ಇದ್ದಾರೆ. ಅವರಂತೆಯೇ ಕೊಳ್ಳೇಗಾಲ ಪ್ರಾಂತದ ಕುರುಬರ ಕುಲಗುರುಗಳಾದ ಶ್ರೀ ಶ್ರೀ ಶ್ರೀ ರೇವಪ್ಪಯ್ಯ ವಡೆಯರವರು ಕಾರ್ಯಧಾರಿಗಳಾಗಿ ನಿಂತಿರುವರು

ಇವರಿಬ್ಬರಲ್ಲಿ ಯಾರು ಮೊದಲು ತಮ್ಮ ಸಹಾಯ ಪ್ರವ್ಯವನ್ನು ಕೆಳಗಿಸುವದರಮೂಲಕ ಈ ನಮ್ಮ "ಜಗತ್ಪ್ರಾವನ" ವನ್ನು ಉದ್ಧರಿಸುವರೋ ಅವರ ಪೋಟೋವನ್ನೂ, ಅವರ ವಾರಂವರ್ಯ ವಂಶ ಚರಿತ್ರೆಯನ್ನೂ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುತ್ತಾ ಬರುವೆವು. ಹೀಗೆ ಭರವಸೆಯನ್ನು ಕೊಟ್ಟಿರುವರಲ್ಲಿ ತಪ್ಪಿದ ಮತಪ್ರೋಹಿಗಳ ವಿಷಯವನ್ನೂ ಸಹ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ಈ ಪತ್ರಿಕೆಯನ್ನು ಮತಾಭಿಮಾನಿಗಳೂ, ಭಾಷಾಭಿಮಾನಿಗಳೂ ಮತ್ತು ದೇಶಾಭಿಮಾನಿಗಳೂ ಸಹ ಆದರದಿಂದ ಪ್ರೋತ್ಸಾಹಿಸಿ, ತಮ್ಮ ತಮ್ಮ ಪ್ರಾಂತಗಳಲ್ಲಿ ಇದು ಸರ್ವರ ಆದರಕ್ಕೆ ಪಾತ್ರವಾಗುವಂತೆ ಅನುಗ್ರಹಿಸಲು ಬೇಡುತ್ತೇನೆ.

ಈ ಪತ್ರಿಕೆಯಿಂದ ನಮ್ಮ ಜನರಿಗೆ ಹೇಗೋ ಇತರರಿಗೂ ಪ್ರಯೋಜನವಾಗಲೇ ಬೇಕಾಗಿದೆ. ಯಾಕಂದರೆ,

"ಅಯಂ ನಿಜಃ ಪರೋವೇತಿ ಗಣನಾ ಲಘುಚೇತಸಾಮ್"
ಉದಾರ ಚರಿತಾನಾಂ ತು ವಸುಧೈವ ಕುಟುಂಬಕಮ್॥

ಇವನು ನಮ್ಮ ಜಾತಿಯವನು, ಇವನು ಪರಜಾತಿಯವನು ಎಂಬ ಅಲ್ಪ ಬುದ್ಧಿಯಿಂದಿರುವಿಕೆಯು ತುಚ್ಛರ ವಿಷಯವು! ಉದಾರ ಚರಿತರಾದ ಮಹನೀಯರಿಗೆ ಈ ಇಡೀ ಜಗತ್ತೇ ಮನೆಯಂತಿರುವದು. ಎಂಬ ಮಹಾ ಕವಿಯ ಉಕ್ತಿಯಂತೆ ಅದಿಕಾಲದಲ್ಲಿ ಆರ್ಯಾವರ್ತ ಕಾಲಾನಂತರದಲ್ಲಿ ಹೀನಸ್ಥಿತಿಗಿಳಿದಿರುವ ಎಲ್ಲಾ ಜಾತಿಯವರಿಗೂ ಉದ್ಧಾರಾರ್ಥಗಳಾದ ಆಧಾರ ಗ್ರಂಥಗಳ ಬರವಣಿಗೆಗಳನ್ನು ಆಗಾಗ್ಗೆ ಇಧರಲ್ಲಿ ಪ್ರಕಟಿಸುತ್ತಾ ಬರುವೆವು. ಈ ಪತ್ರಿಕೆಯ ಸದುದ್ದೇಶವನ್ನು ತಿಳಿದು ಬೆಂಗಳೂರು ಸಿಟಿ ಗುಂಡೋಪಂತರ ರೋಡಿನಲ್ಲಿರುವ ಸೂಯಿಂಗ್ ವಿಷ್ಣಪಾಪಿನ ಪ್ರೊಪ್ರೈಟರಾದ ಮು॥ ರಾ॥ ಮುನಿಶಾಮಪ್ಪನವರೂ, ಕಿಳ, ಪತ್ರಿಕೆಯ ಎಡಿಟರಾಗಿದ್ದ ಮು॥ ರಾ॥ ಬಾಲಸುಂದರಮಯ್ಯನವರು ಈ ಪತ್ರಿಕೆಯ ಪುರೋವೃದ್ಧಿಗಾಗಿ ಎಲ್ಲಾ ವಿಷಯದಲ್ಲಿಯೂ ಸಹಾಯಕರಾಗಿರುವದರಿಂದ ಅವರಿಗೆ ತುಂಬಾ ಕೃತಜ್ಞನಾಗಿರುವೆನು.

ಕುರುಬರ ಮಹಾ ಜನರಲ್ಲಿ ವಿಜ್ಞಾಪನೆ.

ಮಹನೀಯರೆ!

ಆದಿಕಾಲದ ಆರ್ಯರಲ್ಲಿ ಪೃಥ್ವೀಪಾಲಕರಾಗಿದ್ದವರು ನಮ್ಮ ಕುರುಬ ಜಾತಿಯವರೇ ಎಂಬುದನ್ನು ವೇದಾದಿ ಸಚ್ಛಾಸ್ತ್ರಗಳು ಉದ್ಘೋಷಿಸುತ್ತಾ ಇರುವುದಲ್ಲದೆ ಇತ್ತಲಾಗಿ ಇದೇ ವಿಷಯವನ್ನು ಮಹಾಮಹಾ ವಿದ್ವಾಂಸರಾದವರು ಪರಿಶೋಧಕ ಬುದ್ಧಿಯಿಂದ ಹುಡುಕಿ ಬರೆದ ರೀಸರ್ಚ ರಿಪೋರ್ಟುಗಳಲ್ಲಿ ಸಹ ನಮ್ಮ ಕುರುಬರೇ ಜಗದಾದಿಕಾಲದಿಂದಲೂ ಎಲ್ಲಾ ದೇಶಗಳಲ್ಲಿಯೂ ರಾಜ್ಯ, ಮತ್ತು ಧರ್ಮ ಇವುಗಳ ಸಂಸ್ಥಾಪಕರಾಗಿದ್ದರೆಂಬುದನ್ನು ತಿಳಿಸುತ್ತಾ ಇರುವರು.

ಇಂತಹ ಅತಿಪ್ರೋತ್ತಮ ವಿಷಯಗಳನ್ನು ಈಗಿನ ಕಾಲದ ನಮ್ಮ ಮತಾಭಿಮಾನಿಗಳಾದ ತಮ್ಮ ಸನ್ನಿಧಿಯಲ್ಲಿ ನಿವೇದಿಸುವದರ ಮೂಲಕ—ನಮ್ಮ ಜನರಿಗೆ ಕಾಲ ಗತಿಯಿಂದ ಪ್ರಾಪ್ತವಾಗಿರುವ ಈಗಿನ ಹೀನತ್ವವು ನಿವೃತ್ತಿಯಾಗಲು ಪ್ರಯತ್ನಿಸುವದಕ್ಕಾಗಿ ಈ ನಮ್ಮ ಈ "ಜಗತ್ಪಾವನ" ವೆಂಬ ಮಾಸ ಪತ್ರಿಕೆಯು ತಮ್ಮಗಳ ಸನ್ನಿಧಿಗೆ ಬಂದಿರುವುದು. ತಾವು ಧರ್ಮಾತ್ಮರು, ಅತಿಥಿ ಅಭ್ಯಾಗತ ಸೇವಾ ಧುರಂಧರರು! ಇಂತಾದ್ದರಲ್ಲಿ ಈ ಬಡ ಜಗತ್ಪಾವನವನ್ನು ಆದರದಿಂದ ಸತ್ಕರಿಸುವದಲ್ಲಿ ಸ್ವಲ್ಪವೂ ಕುಂದು ಕೊರತೆಗಳನ್ನು ತೋರಿಸಲಾರಿರೆಂದು ದೃಢವಾಗಿ ಬಗೆಯುವೆವು.

ಇದರ ಮುಂದಿನ ಎಲ್ಲಾ ಸಂಚಿಕೆಗಳಲ್ಲಿಯೂ ಮೇಲಿ ಹೇಳಿರುವ ವಿಷಯಗಳ ವಿಚಾರವೇ ವಿಸ್ತಾರವಾಗಿ ಪ್ರಕಟಿಸಲ್ಪಡುವದೆಂಬುದರಲ್ಲಿ ಅಡ್ಡಿಯಿಲ್ಲ. ಪ್ರಕೃತಕ್ಕೆ ಈ ಪತ್ರಿಕೆಯನ್ನು ತಾವು ಸಂಭಾವನೆಯಿಂದ ಸತ್ಕರಿಸಿದ್ದಕ್ಕೂ ಇಂತಹ ದೈವಪ್ರೇರಿತ ಪತ್ರಿಕೆಗೆ ತಾವೆ ಮುಖ್ಯ ಪೋಷಕರಾಗಿ ನಿಲ್ಲುವುದಕ್ಕೂ ಉಂಟಾದ ತಮ್ಮ ಸದುದ್ದೇಶವನ್ನು ಪತ್ರಮೂಲಕ ಅರ್ಪಣೆ ಮಾಡಲು ಬೇಡುವ—

ತಮ್ಮ ಸಹೋದರರಲ್ಲಿ ಒಬ್ಬನಾದ,

ಎಂ. ಎಸ್. ಲಿಂಗಪ್ಪ,

ಎಡಿಟರ್, "ಜಗತ್ಪಾವನ", ಚಿಂಗಳೂರು.

ರೇಷ್ಮೆ ವ್ಯಾಪಾರಿಗಳಲ್ಲಿ ವಿಜ್ಞಾಪನೆ.—

ನಾವು ಬೆಂಗಳೂರಿನವರಿಗೂ ಪರಸ್ಥಳದವರಿಗೂ ರೇಷ್ಮೆಗೂಡು ಬಿಕರಿ ಮಾಡುತ್ತೇವೆ. ಹಳ್ಳಿಯ ರೇಷ್ಮೆ ವ್ಯಾಪಾರಿಗಳಿಗೆ ತೂಕವಾದ ಕೂಡ್ಲೆ ಹಣಪಾವತಿ ಮಾಡುತ್ತೇವೆ, ಮತ್ತು ನಮ್ಮಲ್ಲಿ ಸವರ್ಣ, ಬೆಳ್ಳಿ, ಸಹ ದೊರೆಯುತ್ತೆ.

ಶೀತಾರಾಂ ಮದನೆಗೋಪಾಲ್,
ಅವಿನ್ಯೂರೋಡ್, ಬೆಂಗಳೂರು ಸಿಟಿ.

ಅಪುರೂಪ ! ಎಲ್ಲೆಲ್ಲಿಯೂ ಇಲ್ಲ !!

ಸಚಿತ್ರಮೂಲಿಕಾಕೋಶ.

ಮಹಾಶಯರೇ !

ಶಾಸ್ತ್ರಗಳಲ್ಲಿರುವ ಮೂಲಿಕೆಗಳ ಗುರ್ತು, ಗುಣ, ಉಪಯೋಗ ವಿಧಾನಗಳು ತಿಳಿಯದೆ ಅನೇಕ ವೈದ್ಯರು ಪೇಚಾಡುತ್ತಿದ್ದಾರೆ. ನಾವಿರಾರು ರೂ. ವೆಚ್ಚದಿಂದ ಅಪರೂಪ ಮೂಲಿಕೆಗಳ ನ್ಯಾಯವಾದ ಚಿತ್ರಗಳನ್ನು ತಯಾರಿಸಿದ್ದೇವೆ. ನಾವಿರಾರು ಮೂಲಿಕೆಗಳ ಗುಣ, ಉಪಯೋಗಿಸುವ ವಿಧಾನದೊಂದಿಗೆ "ಮೂಲಿಕಾವೈದ್ಯಪ್ರಕಾಶ" ವೆಂಬ ಕೋಶದ ೧ನೇ ಭಾಗವು ಬಿಕರಿಗೆ ಸಿದ್ಧವಾಗಿದೆ. ಪ್ರತಿಮೂಲಿಕೆಯ ಸಂಸ್ಕೃತ, ಹಿಂದಿ, ಮರಾಟಿ, ಕನ್ನಡ, ತೆಲಗು, ಲ್ಯಾಟಿನ್ ಮುಂತಾದ ಭಾಷಾ ಹೆಸರುಸಹ ವಿವರಿಸಿದ್ದೇವೆ. ಇಂತಹ ಪುಸ್ತಕವು ನಮ್ಮ ದಕ್ಷಿಣ ಇಂಡಿಯಾದಲ್ಲಿ ಎಲ್ಲಿಯೂ ಇಲ್ಲ! ಈ ೧ನೇ ಭಾಗದ ಕ್ರಯ ೩ ರೂಪಾಯಿ. (ಟಪಾಲು ಖರ್ಚು ಬೇರೆ.)

ಈ 'ಜಗತ್ಪಾವನ' ಪತ್ರಿಕೆಯ ಚಂದಾದಾರರಿಗೆ ಮಾತ್ರ ರೂ. ೧ಕ್ಕೆ ನಾಲ್ಕಾಣೆ ಡಿಸ್ಕೌಂಟ್ !!

ರಾ. ಸೂ. ವೆಂಕಟಕೃಷ್ಣಯ್ಯ,
ನಂ. ೨೦ ಮುರಗೇಶವೊದಲಿಗಲ್ಲಿ,
ನಗರ್ತಪೇಟೆ, ಬೆಂಗಳೂರು ಸಿಟಿ.

"ಜಗತ್ಪಾವನ"

BANGALORE CITY

(ಮಾಸಪತ್ರಿಕೆ)

ಜಾಹಿರಾತು ವಿವರ

ವರ್ಷಕ್ಕೆ ಸ್ಥಳದವರಿಗೂ ಪರಸ್ಥಳದವರಿಗೂ ಸಹ

(೨-೦-೦) ರೂಪಾಯಿ ಮಾತ್ರ! ಟಪ್ಪಾಲ್ ವೆಚ್ಚ ಮಾಫಿ!

ಈ ಪತ್ರಿಕೆಯು ಶಾಶ್ವತವಾಗಿ ನಡಿಯಲೇ ಬೇಕೆಂಬ ಮತ್ತಾ ಮಾನಿಗಳೂ, ದೇಶಾಭಿಮಾನಿಗಳೂ, ಭಾಷಾಭಿಮಾನಿಗಳೂ ೧೦೦೦ ರೂ. ಗಳನ್ನು ಕೊಟ್ಟರೆ ಅವರನ್ನು ಶಾಶ್ವತ ಪೋಷಕರೆಂದು ಭಾವಿಸಿ ಅವರ ಭಾವಚಿತ್ರ (ಫೋಟೊ) ಸಮೇತ, ಅವರ ವಂಶಪಾರಂಪರ್ಯ ಚರಿತ್ರೆಯನ್ನು, ವರ್ಷಕ್ಕೆ ಒಂದು ಸಲದಂತೆ ೫ ವರ್ಷ ಪ್ರಕಟಿಸುವೆವು.

೫೦೦-೦-೦ ರೂ. ಗಳನ್ನು ಕೊಡತಕ್ಕ ಮಹನೀಯರನ್ನು ಮಹಾ ಪೋಷಕರಾಗಿ ಭಾವಿಸಿ, (ಅವರ ಫೋಟೋ ಛಾಪಿಸದೆ) ಅವರ ವಂಶ ಚರಿತ್ರೆಯನ್ನು ಫೀಲಿನಂತೆ ಛಾಪಿಸುವೆವು.

ಈ ಫೀಲಿನವರಿಗೆ ನಾವು ಛಾಪಿಸತಕ್ಕ ಕುರುಬರ ಪ್ರಾಚೀನೋತ್ತಮ ಪುಸ್ತಕಗಳನ್ನು ಉಚಿತವಾಗಿ ಒಂಭೊಂದು ಪ್ರತಿ ಕಳುಹಿಸುವೆವು.

೨೫೦-೦-೦ ರೂ. ಗಳನ್ನು ಕೊಡತಕ್ಕವರನ್ನು ಪೋಷಕರನ್ನಾಗಿ ಭಾವಿಸಿ, ಅವರ ಜೀವಮಾನ ಚರಿತ್ರೆಮಾತ್ರ ವರ್ಷ ೧ ಸಲದಂತೆ ೫ ವರ್ಷ ಛಾಪಿಸುವೆವು.

೧೦೦-೦-೦ ರೂ. ಗಳನ್ನು ಕೊಡತಕ್ಕವರನ್ನು ಉಪಪೋಷಕರನ್ನಾಗಿ ಭಾವಿಸಿ ಅವರು ಈ ಮಹಾಕೃತ್ಯಕ್ಕೆ ಸಹಾಯಮಾಡಿದ ವಿಷಯವನ್ನು ೧ ಸಲ ಪ್ರಕಟಿಸುವೆವು.

ಜಗತ್ಪಾವನ, ಆಫೀಸ್ ಬೆಂಗಳೂರು ಸಿಟಿ

Printed at the Sowrastra Press, Bangalore City

ತಿರುನೆಲ್ವೇಲಿ ಕುರುಬರ

ಜಗತ್ಪಾವನ

ಎಂಬ ಮಾಸಪತ್ರಿಕೆ

ಎಂ. ಎಸ್. ಲಿಂಗಪ್ಪ ಎಡಿಟರ್.

ಸಂಪುಟ ೧. { ಅಕ್ಷಯ ಸಂ॥ ಮಾರ್ಗಶಿರ. } ಸಂಚಿಕೆ ೯

1926

ರಿ. ನಂ.—M. 2377.
ಮೈಸೂರು ಸ್ಕೌಟಿನ ಕನ್ನಡಭಾಗವು ಇದರೊಡನೆ ಸಮಾವಿಷ್ಟವಾಗಿದೆ.

ಮೈಸೂರು ಮಕ್ಕಳು

॥ ಓದುವ ಹೆಣ್ಗಳು ಗಂಡುಗಳುಲಿವರು, ಹರುಷವಬೀರುತ ಓಡ್ಯಾಡಿ ॥
॥ ನಾಲ್ಮಡಿ ಕೃಷ್ಣನ ಕೊಂಡಾಡಿ ॥

ನೆಯ ವರ್ಷ.] ವಿಭವ ಸಂ॥ ದ ಆಶ್ವಯ್ಜುಜದ ಹುಣ್ಣಿವೆ—ಅಕ್ಟೋಬರ್ ೧೯೩೮ [೧೧ನೆಯ ಹೆಜ್ಜೆ.

ಮೈಸೂರು ಸ್ಕೌಟುಮಂಡಳಿಯ ಕನ್ನಡ ಮಾಸಪತ್ರಿಕೆ.

ಒಕ್ಕಣೆಯ ವಿಭೆ

೧ ಮೈಸೂರು ಮಕ್ಕಳ ಚಿತ್ರಪರಿಚಯ—
ಶ್ರೀ॥ ಚಾಮರಾಜಒಡೆಯರವರದು
೩ ಮೈಸೂರು ಮಕ್ಕಳ ಜೀವನಚರಿತ್ರೆ—
ಶ್ರೀ॥ ಚಾಮರಾಜಒಡೆಯರವರದು
೪ ನಮ್ಮ ನಾಯಕರ ಸಂದೇಶ
೬ ಕರ್ತವ್ಯ ಕಟ್ಟು —ಜೀವದೂಟ ಕಚ
ಅಜ್ಞಾ ಕರ್ತವ್ಯ—ಎ ಕ ಕರ್
— ಎ ನ ರಾಜ ಬರೆದಿಪ್ಪು
ಎಪಿಪ ಎ ಎ
೬ ಕಬ್‌ಗಳೊಡನೆ ನಮ್ಮದೊಂದು ಹರಟೆ,
೭. ಹಿರಿಯಣ್ಣಂದಿರಿಗಾಗಿ, ಸ್ವೀಕಾರಗಳು
೮ ಕಬ್‌ಗಳು ಕಲಿಯಬೇಕಾದುದು ವಿಮರ್ಶೆಗಳು
೯ ಶಿಬಿರಾಗ್ನಿ (ಕ್ಯಾಂಪ್ ಫೈರ್)
೧೦ ಆದರ್ಶಪ್ರಾಯವಾದ ಒಂದು ಸ್ಕೌಟು ದಳ
೧೧ ಗೃಹಶಿಕ್ಷಣ—ಅಂಕ ೫
೧೨ ಸ್ಕೌಟು ಸುದ್ದಿಗಳು

ಅಲ್ಲಲ್ಲಿ ಕೆಲಕೆಲವು

ಸಂಪಾದಕರು
ಬಿಸಿ ಬಿಸಿ ನಾರಾಯಣಶಾಸ್ತ್ರಿ, ಬಿ ಎ
ಅರ್ ಕೆ ಲಕ್ಷ್ಮೀರಾ.

ವಾರ್ಷಿಕಚಂದಾ ೧—೦—೦
(ಅಂಚೆಹಾಸಲು ವಿನಾ)
ಸ್ಕೂಲು ಮತ್ತು ವಾಚನಾಲಯ
ಗಳಿಗೆ ರೂ. ೨.

ಮೈಸೂರು ಮಕ್ಕಳು ಆಫೀಸ್,
ಮೈಸೂರು.

ದೇವಭೂಜ

ಈ ಮಾಸಪತ್ರಿಕೆಯಲ್ಲಿ ಪೌರಾಣಿಕ, ಐತಿಹಾಸಿಕ, ಕಾದಂಬರಿಗಳೂ, ಚಿಕ್ಕ ಕಥೆಗಳೂ, ವೈದ್ಯಭಾಗ, ಗೃಹಶಾಸ್ತ್ರ ಮುಂತಾದ ವಿಷಯಗಳೂ, ಉತ್ತಮ ಲೇಖಗಳೂ, ವರ್ತಮಾನಸಂಗ್ರಹವೂ, ಪ್ರತಿ ತಿಂಗಳದ ಕನ್ನಡ ಕ್ಯಾಲೇಂಡರವೂ ಕ್ರಮಶಃ ಪ್ರಕಟವಾಗುವವು.

ವಾರ್ಷಿಕಚಂದಾ—ಮುಂಗಡ ೧-೪-೦, ವ್ಹಿ.ಪಿ.ಯಿಂದ ೧-೮-೦.

ವಿಳಾಸ:—**"ದೇವಭೂಜ" ಆಫೀಸ,**
ಪೋಸ್ಟ ರೋಣ, ಡಿ|| ಧಾರವಾಡ.

ಕಥೆ! ಕಾದಂಬರಿ! ನಾಟಕ!
ಕವಿತೆ! ಲೇಖನ! ಹಾಸ್ಯ!

ದೊಡ್ಡ ಆಕಾರದ ೨೪ ಪುಟಗಳು!

ವರ್ಷಾಂತ್ಯಕ್ಕೆ ವಿಶೇಷಾಂಕ!!

ಸವಿಸ್ತರವಾದ ಉದಯಭಾರತ.

ವಿಶೇಷಾಂಕ ರವಿತ ೧-೮-೦

ವಿಶೇಷಾಂಕ ಸಹಿತ ೨-೦-೦

ಉದಯ ಭಾರತ ಕಾರ್ಯಾಲಯ,
ಕೊಡಿಯಾಲ್‌ಬೈಲ್

THE SCHOOL FLOK

(A BRIGHT LIVELY ENLIGHTENING MONTHLY FOR YOUNG AND OLD)

10th YEAR BEGINS FROM JUNE 1928.

Rupee 1—8—0 only per Year.

Apply to —

THE MANAGER,
SCHOOL FOLK,
TUMKUR.

THE BOY SCOUT YEAR BOOK

The First of its Kind published in India

A very **Intersting**, **Instructive** and **Useful** Boo For all Scouts and Scouters—Contains a Histor of Scouting in India during the last decade information about Youth Movements, Enjoyabl Stories, Popular Scientific articles, discussion c problems on Scouting, Progress in the Province and States of India, How to make things a Home—**AND,**

MANY OTHER FEATURES.

Our contributors are among the most emmi nent People at Home and Abroad.

YES, YOU WILL LIKE THE BOOK.
ITS SUCCESS AND POPULARITY ARE GUARANTEE!

A Hundred Pictures and One or Two colou plates All for Re. 1, (One Rupee) only—Postag extra. It is worth at least 10 times its value.

AN IDEAL DASARA, CHRISTMAS OR NEW YEAR PRESENTATION BOOK.

Make Sure of Your Copy

Book your orders to-day, with,
The Organising Commissioner,
The Boy Scouts of Mysore,
Fort, Bangalore City.

ಕರ್ನಾಟಕ ಟಾಯಿಮ್ಸ್

ವಾರಪತ್ರಿಕೆ

ಹಿಂದುಳಿದ ಜಾತಿಯವರ ಉನ್ನತಿಗಾಗಿ ಎಲ್ಲ ಒಗೆಯಿಂದಲೂ ಶ್ರಮಿಸಬೇಕೆಂದು ಹವಣಿಸುವ ಪತ್ರಿಕೆಯು ಕರ್ನಾಟಕದಲ್ಲಿ ಇದೇ ಒಂದು

—ಸಂಪಾದಕರು—

ಶ್ರೀ|| ಎಚ್. ಎಸ್. ಶಿವಲಿಂಗಶಾಸ್ತ್ರಿಗಳು.

ವಾರ್ಷಿಕ ಚಂದಾ ೩—೮—೦. ವಿ. ಪಿ. ಯಿಂದ ೩—೧೨—೦

—ವ್ಯವಸ್ಥಾಪಕರು—

ಕರ್ನಾಟಕ ಟಾಯಿಮ್ಸ್, ಧಾರವಾಡ.

ಮೈಸೂರು ಮಕ್ಕಳು

ಆಳಿದ ಮಹಾಸ್ವಾಮಿ ಶ್ರೀ ಚಾಮರಾಜ ಒಡೆಯರ್ ಬಹದ್ದೂರವರು.

ಆಳಿದ ಮಹಾಸ್ವಾಮಿ ಶ್ರೀಮನ್ ಮಹಾರಾಜ ಶ್ರೀ ಚಾಮರಾಜ ಒಡೆಯರವರು.

ಮಗೂ, ಇದುವರೆಗೆ ನಾನು ನಿನಗೆ ಕೆಲವರು ಮೈಸೂರು ಮಕ್ಕಳ ಪರಿಚಯವನ್ನು ಮಾಡಿಕೊಟ್ಟಿರುವೆನು. ಇನ್ನೂ ಬಂತಹ ಮಹಾನೀಯರನ್ನು ಈ ನಮ್ಮ ತಾಯ್ನಾಡು ಪಡೆದಿದ್ದಳೆಂದು ನಿನಗೆ ತೋರಿಸಲು ಗತಿಸಿರುವ ಕೆಲವರು ಮೈಸೂರು ಮಕ್ಕಳ ಪರಿಚಯವಾಗಿ ಬರೆಯಬೇಕೆಂದಿದ್ದೇನೆ. ಈ ನಲ, ಸುಪ್ರಸಿದ್ಧರೂ, ಪ್ರಖ್ಯಾತರೂ ಆಗಿದ್ದ ಆಳಿದ ಸುಮಹಾಸ್ವಾಮಿ ಚಾಮರಾಜ ಒಡೆಯರವರ ವಿಷಯವಾಗಿ ನಿನಗೆ ನಾಲ್ಕು ಮಾತುಗಳನ್ನು ಹೇಳುತ್ತೇನೆ.

ಮಗೂ ಆಳಿದ ಮಹಾಸ್ವಾಮಿಯವರು ಬಹು ಪ್ರಖ್ಯಾತವಾದ ವಂಶದಲ್ಲಿ ಹುಟ್ಟಿದರು. ವೆಟ್ಟಿದಕೋಟೆಯು ವಂಶೀಕರು ಯಾವಾಗಲೂ ಸುಹಾ ಗುಣವಂತರೆಂದೂ, ಶೂರರೆಂದೂ ಹೆಸರುಪಡೆದಿದ್ದರು. ಈ ವಂಶದಲ್ಲಿ ಈಗ್ಗೆ ಸುಮಾರು ೬೧ ವರ್ಷಗಳ ಹಿಂದೆ ಶ್ರೀ ಚಾಮರಾಜ ಒಡೆಯರವರು ಹುಟ್ಟಿದರು. ಆಗ ಆಳುತ್ತಿದ್ದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರಿಗೆ ಸಂತಾನವಿರಲಿಲ್ಲ. ಅವರು ಚಾಮರಾಜ ಒಡೆಯರಿಗೆ ಸುಮಾರು ಒಂಭೂವರೆ ವರ್ಷವು ತುಂಬಿದ ಮೇಲೆ ದತ್ತುವನ್ನಾಗಿ ಮಾಡಿಕೊಂಡರು. ಹಾಗೆ ರಾಜಮನೆತನವಲ್ಲದ ಯಾವುದೋ ಒಂದು ವಂಶದಲ್ಲಿ ಹುಟ್ಟಿದರೂ ಭಗವಂತನ ಕೃಪೆಯಿಂದ ಈ ಪ್ರಖ್ಯಾತ ಶಿಶುವು ರಾಜಶಿಶುವಾಯಿತು.

ಚಾಮರಾಜ ಒಡೆಯರವರ ದತ್ತು ಸ್ವೀಕಾರವಾದ ಕೆಲವು ತಿಂಗಳುಗಳಲ್ಲಿಯೇ ಶ್ರೀ ಮುಮ್ಮಡಿ ಕೃಷ್ಣಭೂಪತಿಗಳು ಸ್ವರ್ಗಸ್ಥರಾದರು. ಆದರೆ ಸಾರ್ವಭೌಮರಕಾರದವರು ಅರ್ಹರೀಯವಾಗಿ ನಡೆದು ಬಂದ ಮೈಸೂರು ಸಿಂಹಾಸನವನ್ನು ಕಾಡಿಟ್ಟು ಚಾಮರಾಜ ಒಡೆಯರವರು ಮನಸಂಬಂಧವರ್ಷದವರಾದ ಕೂಡಲೇ ಸಂಸ್ಥಾನದ ರಾಜ್ಯಭಾರವನ್ನು ಸಮಿತಿಕೊಟ್ಟರು. ಈ ಕಾಲದಲ್ಲಿ ಚಾಮರಾಜಒಡೆಯರವರು ಸ್ವಯಾತರಾದ ದೇಶೀಯ ಮತ್ತು ಸರಕೀಯ ಉಪಾಧ್ಯಾಯರುಗಳ ಕೈಲಿ ಶಿಕ್ಷಣವನ್ನು ಪಡೆದರು. ಕೇವಲ ಬಾಲಕರಾಗಿದ್ದಾಗಲೇ ಅವರು ಇಂಗ್ಲಿಷ್, ಕನ್ನಡ, ಮರಾಠಿ ಈ ಭಾಷೆಗಳಲ್ಲಿ ಸುಲಭವಾಗಿ ಬರೆಯುವದಕ್ಕೂ ಓದುವದಕ್ಕೂ ಕಲಿತಿದ್ದರು.

ಚಾಮರಾಜಒಡೆಯರವರಿಗೆ ಅವರ ೧೬ ನೆಯ ವರ್ಷದಲ್ಲಿ ಸಕ್ಕ ಲಸ್ವರೂಪರೂ ಸಕಲಗುಣಪರಿಪೂರ್ಣರೂ, ವಿದ್ಯಾವಿನಯಸಂಪನ್ನರೂ, ಸೌಂದರ್ಯ ಕಾಂತಿಗಳಿಂದ ಒಡಗೂಡಿದವರೂ ಆದ ಕಂಪುಸಂಜಮ್ಮ ಣಿ ಅವರನ್ನು ಕೊಟ್ಟು ವಿವಾಹವಾಯಿತು. ಆವಾಗ ಒಂದು ವರ್ಷಗ ಳಲ್ಲಿ ಚಾಮರಾಜಒಡೆಯರವರು ಸಂಸ್ಥಾನದ ರಾಜ್ಯಭಾರವನ್ನು ಕೈ ಕೊಂಡರು.

ಚಾಮರಾಜಒಡೆಯರವರು ಭರತಖಂಡವನ್ನೆಲ್ಲಾ ಸಂಚರಿಸಿ ಅತಿ ಪ್ರಖ್ಯಾತವಾದ ಪುಣ್ಯಸ್ಥಳಗಳನ್ನೂ ಪರಾಂಬಿಸಿದ್ದರು. ದೇಶದೇಶದ ಸಮಸ್ತರಿಗೂ ಮಹಾಸ್ವಾಮಿಯವರಲ್ಲಿ ಬಹಳ ಪ್ರೇಮವೂ ಆಭಿಮಾನವೂ ಇದ್ದಿತು. ಇವರು ಪ್ರಜೆಗಳಿಗೆ ಹೇಗೆ ರಾಜರಾಗಿ ಪ್ರಖ್ಯಾತಿಯನ್ನು ಹೊಂದಿದರೋ ಹಾಗೆಯೇ ರಾಜಕುಟುಂಬದಲ್ಲಿಯೂ ಎಲ್ಲರ ಪ್ರೇಮಪಾತ್ರರಾಗಿದ್ದರೆಂದು ತಿಳಿಯಬರುತ್ತದೆ. ಮೂವರು ಪುತ್ರಿಯರಿಂದಲೂ ಈರ್ವರು ಪುತ್ರರಿಂದಲೂ ಕೂಡಿದ್ದ ಈ ರಾಜಸಂಸಾರವು ಮಹಾಸ್ವಾಮಿಗಳಿಗೆ ಅತಿಶಯಸುಖದಾಯಕರಾಗಿರಬೇಕು. ಆದರೆ ತನ್ನ ಸಂಸಾರವು ಈ ಚಿಕ್ಕ ಸಂಸಾರವಲ್ಲವೆಂದೂ, ರಾಜ್ಯವೇ ತನ್ನ ಸಂಸಾರವೆಂದು ಮಹಾಸ್ವಾಮಿಯವರು ತಿಳಿದಿದ್ದರು.

ಪ್ರಜೆಗಳನ್ನು ತಮ್ಮ ಮಕ್ಕಳಿಗಿಂತಲೂ ಹೆಚ್ಚಾಗಿ ಪ್ರೀತಿಸಿದ್ದರಿಂದ ಪರಿಪಾಲನೆಮಾಡಬೇಕೆಂದು ಸಂಕಲ್ಪಿಸಿ ಮಹಾರಾಜರು ರಾಜ್ಯದ ಆಡಳಿತಗಳಲ್ಲಿ ಅನೇಕ ಹೊಸ ಏರ್ಪಾಡುಗಳನ್ನು ಮಾಡಿದರು. ವಿದ್ಯಾಸಂಪತ್ತೇ ಅತಿ ಘನವಾದುದೆಂದು ದೇಶದಲ್ಲಿ ಪಾಠಶಾಲೆಗಳನ್ನು ವಿಶೇಷವಾಗಿ ಹೆಚ್ಚಿಸಿದರು. ಹೀಗೆ ಅತಿ ಪ್ರೇಮದಿಂದಲೂ ದಕ್ಷತೆಯಿಂದಲೂ ರಾಜ್ಯಭಾರವನ್ನು ನಿರ್ವಹಿಸುತ್ತಿದ್ದುದನ್ನು ಕಂಡು ಸಾರ್ವಭೌಮಸರ್ಕಾರದವರು ಜಿ. ಸಿ. ಎಸ್. ಐ ಎಂಬುದೇ ಮೊದಲಾದ ಬಿರುದುಗಳಿಂದ ಮಹಾರಾಜರನ್ನು ಸತ್ಕರಿಸಿದರು.

ಹೀಗಿರಲು ಸಮ್ಮೆಲ್ಲರ ದುರದೃಷ್ಟದಿಂದ ಮಹಾಸ್ವಾಮಿಯವರು ಕಲ್ಕತ್ತಾಸಗರದಲ್ಲಿ 1898 ನೆಯ ಇಸವಿಯಲ್ಲಿ ಕ್ರೂರವಾದ ಗಂಟಲು ರೋಗದಿಂದ ಸ್ವರ್ಗಸ್ಥರಾದರು. ಆಗ್ಗೆ ಅವರಿಗೆ ಕೇವಲ ಮೂವತ್ತೇ ವರ್ಷ ವಯಸ್ಸಾಗಿತ್ತು. ಮಗೂ, ಅಷ್ಟು ಅಲ್ಪ ಆಯುಸ್ಸು ಇದ್ದುದರಿಂದಲೇ ಏನೋ ಭಗವಂತನು ಸಾಧಾರಣರಿಗೆ ಶತಮಾನಗಳಲ್ಲಿಯೂ ಸಾಧ್ಯವಾಗದ ಕೆಲಸಗಳನ್ನು ಇವರ ಕೈಯಲ್ಲಿ ಮಾಡಿಸಿದನು. ಮಗೂ, ನೀನು ದೊಡ್ಡವನಾದ ಮೇಲೆ ಅವರ ಚರಿತ್ರೆಯನ್ನು ಓದಿ ತಿಳಿದುಕೊಳ್ಳಿನು. ಆದರೆ ಅವರಂತಹ ದೈವಿಕಪುರುಷರೆಂದರೆ ಹೇಳುವುದಕ್ಕಾಗುವುದಿಲ್ಲ. ನೋಡು, ಮಗೂ, ಈಗ ನಮ್ಮ ದೇಶವುದೆಯಲ್ಲ—ಈ ದೇಶವು ಇಷ್ಟು ಮುಂದುವರಿದು, ಎಲ್ಲರಿಗೂ ಆದರ್ಶವಾಗಿರುವಂತೆ ಮಾಡಿದವರೆಂದರೆ ಆಳಿದ ಮಹಾಸ್ವಾಮಿ ಚಾಮರಾಜ ಒಡೆಯರವರು. ಅವರು ಸೆಟ್ಟ ಪಬವೇ ಕಲ್ಪವೃಕ್ಷವಾಗಿ ಬೆಳೆದು ಅಭಿವೃದ್ಧಿಯಾಗುತ್ತಿದೆ.

ನೀವು ಮೈಸೂರು ಮಕ್ಕಳು ಚಿತ್ರಮಾಲೆಯನ್ನು ತರಿಸಿಕೊಂಡಿಲ್ಲವೆ? ತಡಮಾಡಬೇಡಿ. ಕೂಡಲೇ ತರಿಸಿಕೊಳ್ಳಿ.

ನಮ್ಮ ನಾಯಕ

ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರವರು ಸ್ಕೌಟುಗಳಿಗೆ ದಯಪಾಲಿಸಿದ ಸಂದೇಶ.

ಭ್ರಾತೃಗಳೇ!

ಇಂದು ಮೈಸೂರು ಸಂಸ್ಥಾನದ ಸ್ಕೌಟು ಚಳುವಳಿಯ ಹತ್ತನೆಯ ವಾರ್ಷಿಕೋತ್ಸವ ಸಮಾರಂಭವಾಗಿರುತ್ತದೆ. ನಮ್ಮ ಸಂಸ್ಥಾನದಲ್ಲಿ ಈ ಚಳುವಳಿಯು ಇಷ್ಟು ಜಾಗ್ರತೆಯಾಗಿ ಅಭಿವೃದ್ಧಿಗೆ ಬಂದುದನ್ನು ನೋಡಿ ನನಗೆ ತುಂಬಾ ಸಂತೋಷವಾಗುತ್ತದೆ. ಈ ದಿನವೇ ಪ್ರಚಾರವಾಗುವ **ಮೈಸೂರು ಸ್ಕೌಟ್ ವಾರ್ಷಿಕ ವಹಿ**ಯಲ್ಲಿ ಪ್ರಕಟಿಸಿರುವ, ಈ ಸ್ಕೌಟು ಚಳುವಳಿಯ ಅಭಿವೃದ್ಧಿಯ ಚರಿತ್ರೆಯನ್ನು ನೀವೆಲ್ಲರೂ ಆತಿಶಯ ಆಸ್ಥೆರುಚಿಯಿಂದಲೂ, ಆಭಿಮಾನದಿಂದಲೂ ಓದುವಿರೆಂದು ನಾನು ನಂಬುತ್ತೇನೆ. ಈ ಸಮಯದಲ್ಲಿ ನಿಮ್ಮೆಲ್ಲರ ಉತ್ಸಾಹವೂ, ದೃಢಮನಸ್ಸೂ ಸಾಧ್ಯವಾಗಿರುವ ಈ ಪ್ರತಿಫಲಕ್ಕೋಸ್ಕರವಾಗಿ ನಾನು ನಿಮ್ಮೆಲ್ಲರನ್ನೂ ಪೂರ್ಣಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ.

ಈಗಾಗಲೇ ಹೊಂದಿರುವ ಪ್ರತಿಫಲಗಳಿಂದ ನೀವು ತೃಪ್ತರಾಗಬಾರದೆಂದು ನಾನು ಹಾರೈಸುತ್ತೇನೆ. ಸ್ಕೌಟುಗಳು ಯಾವಾಗಲೂ ಸಂಚರಿಸುವ—"ಉತ್ಕೃಷ್ಟವಾಗಿರುವುದು ಇನ್ನೂ ಬರುವುದಿದೆ"—ಎಂಬ ನಿಯಮವನ್ನು ಅನುಸರಿಸಿ, ನೀವು ಈಗಾಗಲೇ ಹೊಂದಿರುವ ಫಲಗಳಿಂದಲೇ ಉತ್ಸಾಹಿತರಾಗಿ, ಈ ಚಳುವಳಿಯ ಪ್ರಚಾರಕ್ಕಾಗಿಯೂ, ಫಲತೆಗಾಗಿಯೂ ಇನ್ನೂ ಹೆಚ್ಚು ಪ್ರಯತ್ನ ಪಡುವಿರೆಂದು ನಾನು ಆಶಿಸುತ್ತೇನೆ.

ಪಾಶ್ಚಿಮಾತ್ಯ ದೇಶಗಳಲ್ಲಿ ಸ್ಕೌಟು ಚಳುವಳಿಯನ್ನೂ ಮತ್ತು ಅಂತಹ ಚಳುವಳಿಯನ್ನು ಸಾಧ್ಯವನ್ನಾಗಿ ಮಾಡುವ ಮತ್ತು ಉತ್ಪತ್ತಿಯಾದ ಯೋಗ್ಯತೆಯ ಹೆಗ್ಗುರುತುಗಳಾದ ಪ್ರಯಾಸಾಕಾಂಕ್ಷೆ, ಸಹೃದಯತ್ವ ಮತ್ತು ಸುಶಿಕ್ಷಿತತೆ ಎಂಬ ಈ ಗುಣಗಳನ್ನೂ ನೋಡಿ ನಾನು ಸಂತಸಗೊಂಡಿರುವೆನು. ಸಹಿತವೇಶಗಳಲ್ಲಿ ಈ ಚಳುವಳಿಯು ಹೇಗೆ ಫಲಪ್ರದವಾಗಿರುವುದೋ ಹಾಗೆಯೇ ನಮ್ಮ ದೇಶದಲ್ಲಿಯೂ ಫಲಪ್ರದವಾಗುವಂತೆ ಮಾಡಲು ನೀವೆಲ್ಲರೂ ಪ್ರಯತ್ನಿಸುವಿರೆಂದು ನಾನು ನಂಬುತ್ತೇನೆ.

ಸಮ್ಮದ, ಸ್ವಾಮಿಭಕ್ತಿಯಿಂದಲೂ ಮತ್ತು ಜನತೆಯ ಸ್ವಾಭಾವಿಕವಾದ ಆದರದಿಂದಲೂ ಸಾಧಿಸಲ್ಪಟ್ಟ, ಪ್ರಪಂಚದ ಬೇರಾವ ಪರಿವಾರವೂ ಹೊಂದಿರದ ಒಂದು ವಿಶೇಷವಾದ ಶಕ್ತಿಸ್ಫೂರ್ತಿಯನ್ನು ನಮ್ಮ ಪರಮೋದ್ದೇಶವಾದ **"ಪರಸೇವೆ"** ಎಂಬುದೇ ನಮ್ಮ ಆತ್ಮಶಕ್ತಿಯು ಔದ್ಯೋಗಿಕ ಕಾರ್ಯದಲ್ಲಿ ಬಾಲಕರ ಸ್ವಾವಲಂಬನೆಯೆಂಬ ಉತ್ಕೃಷ್ಟಸಾಧನವನ್ನೂ ಮತ್ತು ಬಾಲಕರ ಧ್ಯೇಯವಾದ "ಪರಸೇವೆ" ಎಂಬುದನ್ನೂ ನಾವು ಅಗತ್ಯವಾಗಿ ಸಂಪಾದಿಸಬೇಕು. ನಮ್ಮ ಬಾಲ್ಯಕೃತ್ಯವೆಂಬ ಧ್ಯೇಯವನ್ನು ಸಾಧಿಸುವುದಕ್ಕೂ ಮತ್ತು ಆದರ ಧರ್ಮವನ್ನು ಸಂಸ್ಥಾಪಿಸಿವುದಕ್ಕೂ ಸರಸಾಲ್ಪನು ನಮ್ಮೆಲ್ಲರಿಗೆ ಕಾಯಶಕ್ತಿಯನ್ನೂ ಮನೋಶಕ್ತಿಯನ್ನೂ ಕೊಡಲೆಂದು ನಾನು ಪ್ರಾರ್ಥಿಸುತ್ತೇನೆ.

(ಸಹಿ) **ಕೆ. ಎಸ್. ಆರ್. ಒಡೆಯರ್.**

ಕಥೆಗಳ ಕಟ್ಟು

೧೧. ದೇವದೂತ ಕಚ.

ದೇವತೆಗಳ ಗುರುವು ಯಾರು ? ಬೃಹಸ್ಪತಿಯು. ಬೃಹಸ್ಪತಿಗೆ ಕಚನೆಂಬ ಒಬ್ಬ ಮಗನಿದ್ದನು. ಬೃಹಸ್ಪತಿಯು ತಾನೇ ಮಗನಿಗೆ ಎಲ್ಲಾ ವಿದ್ಯೆಯನ್ನೂ ಹೇಳಿಕೊಟ್ಟನು. ಮುಖ್ಯವಾಗಿ ಕಚನಿಗೆ ತನ್ನ ಬ್ರಹ್ಮಚರ್ಯವನ್ನು ಕಾಪಾಡಿಕೊಂಡಿರಬೇಕೆಂದು ಹೇಳಿದ್ದನು. ಯಾಕೆಂದರೆ ಯಾವನು ಬ್ರಹ್ಮಚರ್ಯವನ್ನು ಕಾಪಾಡಿಕೊಂಡಿದ್ದಾನೋ ಅವನು ವಜ್ರದೇಹಿಯು.

ಹೀಗಿರುವಲ್ಲಿ ದೇವತೆಗಳಿಗೂ ರಾಕ್ಷಸರಿಗೂ ಯುದ್ಧವು ಪ್ರಾರಂಭವಾಯಿತು. ರಾಕ್ಷಸರಿಗೆ ಯಾವ ತೊಂದರೆಯೂ ಯುದ್ಧದಲ್ಲಿ ಸಂಭವಿಸುತ್ತಿರಲಿಲ್ಲ. ಯಾಕೆಂದರೆ ರಾಕ್ಷಸರಲ್ಲಿ ಯಾರಾದರೂ ಸತ್ತರೆಂದರೆ ಕೂಡಲೇ ರಾಕ್ಷಸರ ಗುರುವಾದ ಶುಕ್ರಾಚಾರ್ಯನು ಅವರನ್ನು ಬದುಕಿಸಿಬಿಡುತ್ತಿದ್ದನು. ಶುಕ್ರಾಚಾರ್ಯನಿಗೆ ಸತ್ತವರನ್ನು ಬದುಕಿಸುವ ಸಂಜೀವನೀ ವಿದ್ಯೆಯು ಬರುತ್ತಿದ್ದಿತು. ಅದುದರಿಂದ ದೇವತೆಗಳಿಗೆ ಒಹಳ ತೊಂದರೆಯಾಗುತ್ತಿತ್ತು. ಹೇಗಾದರೂ ಮಾಡಿ ಆ ಶುಕ್ರಾಚಾರ್ಯನಿಂದ ಸಂಜೀವನೀ ವಿದ್ಯೆಯನ್ನು ಕಲಿತುಕೊಂಡು ಬಂದರೆ ಸಾಕೆಂದು ದೇವತೆಗಳು ಯೋಚಿಸುತ್ತಿದ್ದರು. ಆದರೆ ಶುಕ್ರಾಚಾರ್ಯನು ಶತ್ರುಗಳಾದ ದೇವತೆಗಳಿಗೆ ಖಂಡಿತವಾಗಿಯೂ ವಿದ್ಯೆಯನ್ನು ಹೇಳಿಕೊಡುವುದಿಲ್ಲವೆಂದು ಎಲ್ಲರಿಗೂ ಗೊತ್ತಿತ್ತು.

ಆಗ ಕಚನು 'ತಾನು ಹೋಗಿ ಕಲಿತುಕೊಂಡು ಒರುತ್ತೇನೆ' ಬಂದನು. ಅದಕ್ಕೆ ಅನುಸಾರವಾಗಿ ರಾಕ್ಷಸರಂತೆ ವೇಷವನ್ನು ಹಾಕಿಕೊಂಡು ಶುಕ್ರಾಚಾರ್ಯರಲ್ಲಿಗೆ ಹೋಗಿ ವಿದ್ಯೆಯನ್ನು ಕಲಿಯಲು ಪ್ರಾರಂಭಿಸಿದನು. ಆಚಾರ್ಯರಿಗೆ ಇವನ ಬುದ್ಧಿಶಕ್ತಿಯನ್ನು ನೋಡಿ ಒಳ್ಳೆ ಸಂತೋಷವಾಯಿತು. ಇವರು ಸಂಜೀವನೀ ವಿದ್ಯೆಯೊಂದನ್ನು ಹೊರತು ಮಾಕಿಯದೆನ್ನೆಲ್ಲಾ ಹೇಳಿಕೊಟ್ಟರು. ಹೀಗಿರುವಾಗ ಈ ಕಚನಲ್ಲಿ ಶುಕ್ರಾಚಾರ್ಯರ ಸುಂದರವಾದ ದೇವಯಾನಿ ಎಂಬುವಳಿಗೆ ಒಳ್ಳೆ ಸ್ನೇಹವುಂಟಾಯಿತು. ಅವಳಿಗೆ ಇವನನ್ನು ಕಂಡರೆ ಪ್ರಾಣ. ಆದರೆ ಅಲ್ಲಿದ್ದ ರಾಕ್ಷಸರಿಗೆ ಇವನ ಮೇಲೆ ಹೊಟ್ಟೆಕಿಚ್ಚು ಹುಟ್ಟಿತ್ತು. ಅವರು ಇವನನ್ನು ಕೊಲ್ಲಬೇಕೆಂದು ಹವಣಾಸುತ್ತಿದ್ದರು.

ಒಂದು ದಿನ ಕಚನು ಗುರುಗಳ ಪಶುಗಳನ್ನು ಮೇಯಿಸುವ ನಿಮಿತ್ತ ಹೋಗಿರುವಾಗ ರಾಕ್ಷಸರಲ್ಲಿ ಕೆಲವರು ಇವನನ್ನು ಕೊಂದು ಕಾಡುಮೃಗಗಳಿಗೆ ಹಂಚಿದರು. ಸಾಯಂಕಾಲ ಇವನು ಒರಿಲ್ಲದ್ದನ್ನು ನೋಡಿ ದೇವಯಾನಿಯು ತಂದೆಯನ್ನು ಕುರಿತು ಬಹಳವಾಗಿ ಹೇಡಿಸಲು ಪ್ರಾರಂಭಿಸಿದಳು. ಆಗ ಶುಕ್ರಾಚಾರ್ಯರು ಸಂಜೀವನೀ ವಿದ್ಯೆಯ ಸಹಾಯದಿಂದ ಅವನನ್ನು ಬದುಕಿಸಲು ಅವನು ಮೃಗಗಳ ಹೊಟ್ಟೆಯನ್ನು ಒಗೆದುಕೊಂಡು ಹೊರಗೆ ಬಂದನು. ಮತ್ತೊಂದು ದಿನವೂ ಹೀಗೆಯೇ ಆಯಿತು. ಕಚನು ದೇವಯಾನಿಗೋಸ್ಕರ ಹೂವ ಕೊಯ್ಯಲು ಹೋಗಿದ್ದನು. ಆಗ ರಾಕ್ಷಸರು ಕೆಲವರು ಇವನನ್ನು ಕೊಂದು ಸುಟ್ಟು ಬೂದಿಯನ್ನು ಮದ್ಯದಲ್ಲಿ ಕದಡಿ ಶುಕ್ರಾಚಾರ್ಯರಿಗೆ ಕುಡಿಯಲು ಕೊಟ್ಟರು. ಶುಕ್ರಾಚಾರ್ಯರು ಅದನ್ನು ಕುಡಿಯಲು ಕಚನು ಅವರ ಹೊಟ್ಟೆಯಲ್ಲಿ ಸೇರಿದನು. ಅಂದೂ ಸಾಯಂಕಾಲ ಕಚನು ಬರದಿರಲು ದೇವಯಾನಿಯು ಗೊಳಿಡಲು ಪ್ರಾರಂಭಿಸಿದಳು. ಶುಕ್ರಾಚಾರ್ಯರು ಸಮಾಚಾರವೆಲ್ಲವನ್ನೂ ತಿಳಿದುಕೊಂಡು. ಮೊದಲು ಹೊಟ್ಟೆಯಲ್ಲಿದ್ದ ಕಚನಿಗೆ ಸಂಜೀವನೀ ವಿದ್ಯೆಯನ್ನು ಉಪದೇಶಿಸಿ, ಆ ಮೇಲೆ ಅವನನ್ನು ಬದುಕಿಸಿದರು. ಅವನು ಇವರ ಹೊಟ್ಟೆಯನ್ನು ಬಗೆದುಕೊಂಡು ಹೊರಗೆ ಬಂದನು. ಆಗ ಶುಕ್ರಾಚಾರ್ಯರು ಸತ್ತುಹೋದರು. ಕಚನು ಸಂಜೀವನೀ ವಿದ್ಯೆಯ ಸಹಾಯದಿಂದ ಆಚಾರ್ಯರನ್ನು ಬದುಕಿಸಿದನು.

ಇದಾದ ಕೆಲವು ದಿನಗಳ ಮೇಲೆ ಕಚನು ಊರಿಗೆ ಹೋಗುತ್ತೇನೆಂದು ಹೇಳಿದನು. ಆಗ ದೇವಯಾನಿಯು ತನ್ನ ಮನಸ್ಸನ್ನು ಬಿಚ್ಚಿ, ಕಚನನ್ನು ತಾನು ಪ್ರೀತಿಸುತ್ತಿರುವುದಾಗಿ ಹೇಳಿದಳು. ಆದರೆ ಕಚನು ತಂದೆಯು 'ಬ್ರಹ್ಮಚರ್ಯವನ್ನು ಕಾಪಾಡಿಕೊಂಡು ಬಾ' ಎಂಬುದಾಗಿ ಹೇಳಿದ್ದನ್ನು ಜ್ಞಾಪಿಸಿಕೊಂಡು ದೇವಯಾನಿಯೊಡನೆ ಲಗ್ನಕ್ಕೆ ಒಪ್ಪಲಿಲ್ಲ. ಎಲ್ಲರೂ ಬಲಸಂತಮಾಡಿದರು. ಆದರೆ ಕಚನಿಗೆ ತಾನು ಆಡಿದ ಮಾತೇ ಹೆಚ್ಚಾಗಿ ತೋರಿತೇ ವಿನಾ ಇವರ ಆಗತ್ಯವು ಅಷ್ಟು ಪ್ರಬಲನೆನಿಸಲಿಲ್ಲ. ಆದುದರಿಂದ ಅವನು ಖಂಡಿತವಾಗಿಯೂ ಲಗ್ನವನ್ನು ಮಾಡಿಕೊಳ್ಳುವುದಿಲ್ಲವೆಂದೂ ಗುರುಪುತ್ರಿಯಾದ ದೇವಯಾನಿಯು ತನಗೆ ಸೋದರಿಯೆಂದೂ ತಾನೂ ಸಹ ಶುಕ್ರಾಚಾರ್ಯರ ಹೊಟ್ಟೆಯಿಂದ ಪುನಃ ಬದುಕಿಬಂದವನಾದುದರಿಂದ ಅವರಿಗೆ ಮಗನಾದನೆಂದೂ ಹೇಳಿದನು. ಅದನ್ನು ಕೇಳಿ ದೇವಯಾನಿಯು ಸಿಟ್ಟಿನಿಂದ "ನೀನು ಮೋಸಗಾರ. ನೀನು ಕಲಿತ ಈ ಸಂಜೀವನೀ ವಿದ್ಯೆಯು ನಿನಗೆ ನಿನಾ ಪ್ರಯೋಜನವಾಗದಿರಲಿ" ಎಂದು ಶಾಪಕೊಟ್ಟಳು.

ಕಚನು ಪುನಃ ದೇವಲೋಕಕ್ಕೆ ಬಂದನು. ದೇವತೆಗಳೆಲ್ಲಾ 'ಏನಪ್ಪಾ, ಸಂಜೀವನೀ ವಿದ್ಯೆಯನ್ನು ಕಲಿತುಕೊಂಡು ಬಂದೆಯಾ' ಎಂದು ಕೇಳಿದರು. ಕಚನು ನಡೆದ ಸಂಗತಿಯನ್ನೆಲ್ಲಾ ಹೇಳಿದನು. ಆಗ ಬೃಹಸ್ಪತಿಯು "ಪರವಾಗಿಲ್ಲ, ಮಗೂ ವಿದ್ಯೆಯಿಂದ ನಿನಗೆ ಪ್ರಯೋಜನವಾಗದಿದ್ದರೂ ಆಡಿದ ಮಾತಿಗೆ ತಪ್ಪದೆ ಎಂತಹ ಕಷ್ಟದಲ್ಲಿಯೂ ನೀನಾಡಿದ ಮಾತನ್ನು ಉಳಿಸಿಕೊಂಡೆಯಲ್ಲ, ಆದುದರಿಂದ ನೀನು ಹೇಳಿಕೊಟ್ಟವರಿಗೆ ಈ ವಿದ್ಯೆ ಫಲಿಸುತ್ತದೆ" ಎಂದನು.

ಅಜ್ಜನ ಕನ್ನಡಕ.

(ಒಂದು ಸಣ್ಣ ಕಥೆ)

ಬೆಂಗಳೂರಿನಲ್ಲಿ ವಿಶ್ವೇಶ್ವರಪುರವಿದೆಯಲ್ಲ—ಅಲ್ಲಿ ರಾಮಸ್ವಾಮಿಯವರು ಎಂಬ ಒಬ್ಬ ಮುದುಕರಿದ್ದರು. ಇವರು ಮುದುಕರಾಗಿದ್ದರೂ ಕಣ್ಣಿಗೆ ಅಷ್ಟು ಕೆಟ್ಟಿರಲಿಲ್ಲ. ಇವರು ದೂರ ನೋಡಬೇಕಾದರೆ ಮಾತ್ರ ಕನ್ನಡಕವನ್ನು ಹಾಕಿಕೊಳ್ಳುತ್ತಿದ್ದರು. ಇವರು ಓದುವಾಗ ಮಾತ್ರ ಹಾಕಿಕೊಂಡ ಕನ್ನಡಕವನ್ನು ಹಾಗೆಯೇ ಹಣೆಯ ಮೇಲಕ್ಕೆ ಸರಿಸಿಕೊಳ್ಳುತ್ತಿದ್ದರು. ಹೀಗೆ ನೂಡುವುದು ಇವರಿಗೆ ವಾಡಿಕೆಯಾಗಿ ಬಂದುಬಿಟ್ಟಿತು ಒಂದು ದಿನ ಇವರು ಏನನ್ನೋ ಓದಬೇಕಾಗಿತ್ತು ಆವಾಗ ಕನ್ನಡಕವನ್ನು ಹಣೆಯಮೇಲೆ ಇಟ್ಟುಕೊಂಡಿದ್ದರು. ಇವರಿಗೆ ಒಹಳ ಮರವು. ಅದನ್ನು ಹಾಗೆ ಇಟ್ಟುಕೊಂಡಿದ್ದನ್ನು ಮರೆತುಬಿಟ್ಟರು.

ಒಡಿ ಆಯಿತು. ಕನ್ನಡಕಕ್ಕೆಂದು ಹತ್ತಿರವೆಲ್ಲಾ ಹುಡುಕಿದರು. ಆವರಿಗಲ್ಲೀನು ಸಿಗುತ್ತೆ? ದೇವರಮನೆಯಲ್ಲಿ ಹುಡುಕಿದರು, ಸಿಗಲಿಲ್ಲ. ಸ್ನಾನಮಾಡಿದ ಜಾಗದಲ್ಲಿ ಹುಡುಕಿದರು, ಸಿಗಲಿಲ್ಲ. ಮಂಜದಮೇಲೆ ಹುಡುಕಿದರು, ಅಲ್ಲಿಯೂ ಸಿಗಲಿಲ್ಲ. ಇವರಿಗೆ ನಾಲ್ಕು ಜನ ಮೊಮ್ಮಕ್ಕಳಿದ್ದರು. ಅವರ ಹೆಸರು ರಾಮು, ಕೃಷ್ಣಮೂರ್ತಿ, ನರಸಿಂಹ, ಶಂಕರ ಎಂದು. ರಾಮಸ್ವಾಮಿಯವರು ಏನುಮಾಡಿದರು ಅಂದರೆ, ನಾಕು (ನಾಲ್ಕು) ಜನರಲ್ಲಿ ಯಾರು ಅದನ್ನು ಹುಡುಕಿಕೊಡುವರೊ ಅವರಿಗೆ ಒಂದು ರೂಪಾಯಿಯನ್ನು ಕೊಡುತ್ತೇನೆಂದು ಹೇಳಿದರು. ಅವರಲ್ಲಿ ಚಿಕ್ಕವನಾದ ಶಂಕರನು ಹೊರತು ಇನ್ನೆಲ್ಲರೂ ಹುಡುಕಿದರು. ಆ ಮೂರು ಜನರೂ ನಾನು ಹುಡುಕುತ್ತೀನೆ "ನಾನು ಹುಡುಕುತ್ತೀನಿ" ಎಂದು ರಾಮನು ಸರಿಯಾಗಿ ಮಣೆಯನ್ನೇ ನೋಡದೆ ಓಡಿದರು. ಶಂಕರ ಅದನ್ನು ಕಂಡನು. ಅವರೆಲ್ಲರೂ ಹುಡುಕುವುದಕ್ಕೆ ಹೋದಮೇಲೆ 'ಇವನು ನನಗೆ ಕನ್ನಡಕ ತಂದಿತ್ತ' ಎಂದನು. ಆದಕ್ಕೆ ರಾಮಸ್ವಾಮಿಯವರು [illegible] ಎಂದರು. ಆದಕ್ಕೆ ಶಂಕರನು ರೂಪಾಯಿ ಕೊಡು [illegible]. ಆಗ ಕನ್ನಡಕ ಕೊಡುತ್ತೇನೆ ಎಂದನು. ಆಗ ಅವರು ರೂಪಾಯಿ [illegible] ಕೊಟ್ಟರು. ಅವನು "ಅಗೋ ನೋಡು, ಅಲ್ಲಿ! ನಿನ್ನ ಹಣೆಯ [illegible] ಇರಲಿ" ಎಂದನು. ಎಲ್ಲರೂ ಸಂತೋಷಪಟ್ಟರು.

ಲ. ಎಸ್. ನಾಗರಾಜ (೪ ಸಹರ್ಷ ವಯಸ್ಸು)
II ಪರ್ವದ ತರಗತಿ, ಶಿವಮೊಗ್ಗ.

[**ಸೂಚನೆ:**—ನಮ್ಮ ವಾಚಕರಲ್ಲಿ ಬಾಲಕರು ಈ ರೀತಿ ಸ್ವಾರಸ್ಯವಾದ ಪುಟ್ಟ ಕಥೆಗಳನ್ನು ಬರೆದು ಕಳುಹಿಸಬೇಕೆಂದು ನಿಮಂತಿ. ಕಥೆಯೊಡನೆ ನಿಮ್ಮ ಹೆಸರು, ತರಗತಿ, ವಯಸ್ಸು ಇವೆಲ್ಲವನ್ನೂ ಬರೆದು ಕಳುಹಿಸಬೇಕು. ಕಾಲಕ್ರಮೇಣ ಸೊಗಸಾದ ಕಥೆಯನ್ನು ಬರೆದವರಿಗೆ ಬಹುಮಾನವನ್ನು ಕೊಡುತ್ತೇವೆ. ಸಂಪಾದಕರು.]

ಆಟದ ಬೈಲು.

ಅಳಿಲಿನ ಆಟ.

ಗುಂಪಿನ ಬಾಲಕರೆಲ್ಲರನ್ನೂ ಐದೈದು ಬಾಲಕರ ಗುಂಪಿನಂತೆ ಚಿಕ್ಕ ಚಿಕ್ಕ ಗುಂಪುಗಳಾಗಿ ನಿಂಗಡಿಸಬೇಕು. ಆಟದಬೈಲಿನಲ್ಲಿ ಸುತ್ತಲೂ ಒಂದೊಂದು ಚಿಕ್ಕ ಗುಂಪು ನಿಂತುಕೊಳ್ಳಬೇಕು. ಬಳಿಕ ಆಟದ ಬೈಲಿನ ಮಧ್ಯದಲ್ಲಿ ಒಬ್ಬನು ನಿಂತುಕೊಳ್ಳಬೇಕು. ಈಗ ಈ ಚಿತ್ರದಲ್ಲಿ ನಕ್ಷತ್ರದ ಗುರುತುಗಳು ಚಿಕ್ಕ ಚಿಕ್ಕ ಗುಂಪಿನಲ್ಲಿರುವ ಬಾಲಕರನ್ನು ಸೂಚಿಸುತ್ತವೆ. ಆದುದರಿಂದ ಪ್ರತಿಯೊಂದು ಚಿಕ್ಕಗುಂಪಿನಲ್ಲಿಯೂ ನಾಲ್ಕು ಜನರು ನಾಲ್ಕು ಮೂಲೆಯಲ್ಲಿ ನಿಂತುಕೊಳ್ಳುವರು, ಒಬ್ಬನು ಮಧ್ಯದಲ್ಲಿ ನಿಂತುಕೊಳ್ಳುವನು. ಚಿತ್ರದಲ್ಲಿ ಇವನನ್ನು "ಅ" ಎಂದು ಗುರುತಿಸಿದೆ. ನಕ್ಷತ್ರದ ಗುರುತುಗಳಿರುವ ಸ್ಥಳದಲ್ಲಿ ನಿಂತುಕೊಳ್ಳುವರೆಲ್ಲಾ ಹಾಗೆಯೇ ನಿಂತುಕೊಂಡಿರಬೇಕೇ ಏನಾ ಚಲಿಸಬಾರದು. ನಮ್ಮ ಚಿತ್ರದಲ್ಲಿ ನಾಲ್ಕು ಚಿಕ್ಕ ಗುಂಪಿರುವ ಒಂದು ಬಾಲಕರ ಗುಂಪನ್ನು ಸೂಚಿಸಿದ್ದೇವೆ. ಈಗ ಅ-ಆ-ಇ-ಈ-ಉ, ಈ ಐವರೂ, ಶೀಟಿಯನ್ನು ಊದಿದಕೂಡಲೇ ತಮ್ಮ ತಮ್ಮ ಸ್ಥಳವನ್ನು ಬಿಟ್ಟು ಓಡಬೇಕು. ಹಾಗೆ ಓಡಿ ಬೇರೆ ಸ್ಥಾನದಲ್ಲಿ ಹೋಗಿ ನಿಂತುಕೊಳ್ಳಬೇಕು. ಅಂದರೆ, ಈ ಚಿಕ್ಕ ಚಿಕ್ಕ ಗುಂಪುಗಳೇ ಪಂಜರಗಳು. ಅ-ಆ-ಇ-ಈ ಎಂಬ ನಾಲ್ಕು ಅಳಿಲುಗಳು ಆ ಪಂಜರಗಳಲ್ಲಿವೆ. ಉ ಎಂಬ ಅಳಿಲಿಗೆ ಸ್ಥಳವಿಲ್ಲ. ಆದುದರಿಂದ ಶೀಟಿಯನ್ನು ಊದಿದೊಡನೆಯೇ ಎಲ್ಲಾ ಅಳಿಲುಗಳೂ ತಮ್ಮ ತಮ್ಮ ಜಾಗವನ್ನು ಬಿಟ್ಟು ಬೇರೆ ಸ್ಥಳವೆಲ್ಲಿ ಸಿಗುತ್ತೊ ಅಲ್ಲಿಗೆ ಹೋಗಬೇಕು. ಇರುವುದು ನಾಲ್ಕು ಪಂಜರಗಳು ಮಾತ್ರ, ಅಳಿಲುಗಳಾದರೋ ಐದು. ಆದುದರಿಂದ ಎಲ್ಲರಿಗಿಂತಲೂ ನಿಧಾನವಾಗಿರುವವನು ಹೊರಗೆ ಬೀಳುವನು ಇವನು 'ಉ' ಸ್ಥಳದಲ್ಲಿ ನಿಲ್ಲಬೇಕು. ಪುನಃ ಮೊದಲಿನಂತೆಯೇ ಆಟವಾಗಬೇಕು.

[ಈ ಆಟವನ್ನು ಲಕ್ಷ್ಮೀಪುರಂ ವೈಮರಿ ಪಾಠಶಾಲೆಯಲ್ಲಿ ಹಿರಿಯಣ್ಣರಾದ ಮ|| ಬಿ. ಎಸ್. ವೆಂಕಟರಾಮಯ್ಯನವರು ಮತ್ತು ಮ|| ರಾಜೀವರಶಿನವರು ತಮ್ಮ ಗುಂಪಿನಲ್ಲಿ ಮೊದಲು ಆಡಿಸಿರುವರು ಹೀಗೆಯೇ ಸ್ವಾರಸ್ಯವಾದ ಕೆಲವು ಆಟಗಳನ್ನು ಇವರು ಬರೆದು ಕಳುಹಿಸುವುದಾಗಿ ಹೇಳಿರುತ್ತಾರೆ. ಸಂಪಾದಕರು.]

ಕಬ್ಬಿಗಳೊಡನೆ ನಮ್ಮದೊಂದು ಹರಟೆ.

ಸಂಕೇತ ಸಂಜ್ಞೆಗಳು.

ನುಗೂ—ಹಿಂದೊಂದು ಸಲ ನೀನು ಕಲಿಯಬೇಕಾದ ಕೆಲವು ವಿಷಯಗಳನ್ನು ಹೇಳುವಾಗ ಸಂಕೇತ ಸಂಜ್ಞೆಗಳನ್ನು ತಿಳಿಸಿದ್ದೇನೆ. ಅದರ ಉಪಯೋಗವನ್ನೇನೆಂದು ನೀನು ಕೇಳಿದ್ದಿ, ಈಗ ಈ ಹರಟೆಯನ್ನು ಅದಕ್ಕಾಗಿ ಒರೆಯುತ್ತೇನೆ.

"ಒಂಟೆಯೂ, ದರ್ಜೀಶನು" ಎಂಬ ಆರಬ್ಬೀ ಕಥೆಯನ್ನು ನಿನ್ನ ಹಿರಿಯಣ್ಣನು ನಿನಗೆ ಹೇಳಿರಬೇಕು. ಇಲ್ಲದಿದ್ದರೆ, ಕೇಳು ಹೇಳುತ್ತೇನೆ. ಬಂದು ಒಂಟೆಯು ತಪ್ಪಿಸಿಕೊಂಡು ಹೋಗಿರುತ್ತದೆ. ಅದನ್ನು ನೋಡಬೆಯೇ ಇದ್ದ ಒಬ್ಬ ಸನ್ಯಾಸಿಯು ಅದರ ಜಾಡನ್ನು ಹೇಳಿದ್ದನ್ನು ಕೇಳಿ ಒಂಟೆಯನ್ನು ಅವನೇ ಕಳ್ಳನೆಂದು ಅವನನ್ನು ಖಾಜಿಯ ಬಳಿ ಕರೆದುಕೊಂಡುಹೋದರು. ಆಗ ಅವನು ಒಂಟೆಯು ಓಡಿಹೋದಾಗ ಬಿಟ್ಟ ಗುರ್ತುಗಳಿಂದ ತಿಳಿದನೆಂದು ಹೇಳಿ ಅವುಗಳನ್ನು ವಿವರಿಸಿದನು. ಇದೆಲ್ಲವೂ ಅವನು ತನ್ನ ಕಣ್ಣನ್ನು ತೆರದುನೋಡಿ ಬುದ್ಧಿಯಿಂದ ವಿಚಾರಮಾಡಲಾಗಿ ತಿಳಿದುಬಂದಿತಲ್ಲವೆ?

ಇದೇ ರೀತಿಯಲ್ಲಿ ಕಬ್ಬಿಗಳೂ ಸಹ ತಮ್ಮ ಕಣ್ಣುಮುಂದಿರುವ ವಸ್ತುವಿನಲ್ಲಾ ಸರಿಯಾಗಿ ನೋಡಿ ವಿಚಾರಮಾಡಬೇಕು. ಅನೇಕರು ಕಣ್ಣುಗಳನ್ನು ತೆರದು ನೋಡುತ್ತಿದ್ದರೂ ಕುರುಡರಂತೆ ತಮ್ಮ ಕಣ್ಣಿಗೆ ಅದು ಬೀಳಲೇ ಇಲ್ಲವೆನ್ನುತ್ತಾರೆ. ಕಬ್ಬಿಗಳು ಅಂತಹವರಲ್ಲ.

ರಾಬಿನ್‌ಸನ್ ಕ್ರೂಸೋವಿನ ಕಥೆಯನ್ನು ಹಿರಿಯಣ್ಣನಿಂದ ಕೇಳಿ ತಿಳಿದುಕೊ. ಅನಾಲ್ಲ ಮನುಷ್ಯರೇ ವಾಸವಾಗಿಲ್ಲದ ದ್ವೀಪದಲ್ಲಿ ತಾನೊಬ್ಬನೇ ಇದ್ದ ಕ್ರೂಸೋವು ತನ್ನ ಹೆಜ್ಜೆಯ ಗುರ್ತಿಗೆ ವ್ಯತ್ಯಾಸವಾಗಿದ್ದ ಬಂದು ಹೆಜ್ಜೆಯ ಗುರ್ತನ್ನು ಕಂಡನು. ಅದನ್ನು ಚಿತ್ರದಲ್ಲಿ ನೋಡಿ ನಿನ್ನ ಗೆಳೆಯರ ಹೆಜ್ಜೆಯ ಗುರ್ತುಗಳನ್ನೆಲ್ಲವನ್ನು ಹೋಲಿಸಿ ನೋಡಿ ಒಬ್ಬೊಬ್ಬರದೂ ಎಷ್ಟು ವ್ಯತ್ಯಾಸವಾಗಿರುತ್ತದೆಂದು.

ಶಿಕಾರಿಮಾಡತಕ್ಕವರೂ ಸಹ ಪ್ರಾಣಿಗಳ ಹೆಜ್ಜೆ ಗುರ್ತುಗಳನ್ನು ನೋಡಿ ಅಭ್ಯಾಸಮಾಡಿಕೊಂಡಿರುವುದರಿಂದ ಪ್ರಾಣಿಗಳ ಜಾಡನ್ನು ಸುಲಭವಾಗಿ ಗುರ್ತಿಸುತ್ತಾರೆ.

ಇಷ್ಟೇ ಅಲ್ಲ—ವಾಸನೆಗಳಿಂದಲೂ ವಿಚಾರಗಳು ಸರಿಯಾಗಿ ತಿಳಿಯದವುಗಳಾಗಿದ್ದರೂ ತಿಳಿಯಬಹುದು. ಮೂಕಪ್ರಾಣಿಗಳು ತಮ್ಮ ಜಾತಿಯವುಗಳನ್ನು ವಾಸನೆಯಿಂದಲೇ ತಿಳಿಯುತ್ತವೆ. ಮಕ್ಕಳೂ ಸಹ ತಮ್ಮ ತಾಯಿಯರ ಗುರ್ತನ್ನು ವಾಸನೆಯಿಂದಲೇ ತಿಳಿಯುತ್ತವೆ.

ಪೋಲೀಸಿನವರು ಕಳ್ಳರನ್ನು ಪತ್ತೆಮಾಡಲು ಕಳ್ಳರು ಬಿಟ್ಟ ಹೋಗಿರುವ ಸಾಮಾನುಗಳಿಂದಲೂ, ಅದರ ಮೇಲೆ ಇರುವ ಅಥವ ಇತರ ಗುರ್ತುಗಳಿಂದಲೂ, ಕಳ್ಳರನ್ನು ಪತ್ತೆಮಾಡುತ್ತಾರೆ. ಬೆರಳಚ್ಚನ್ನು ಉಪಯೋಗಿಸದ ಹೊರತು ಇವುಗಳನ್ನು ತಿಳಿಯುವುದಕ್ಕೆ ಆಗುವುದೇ ಇಲ್ಲ.

ನಿನ್ನ ಕಿವಿಗಳನ್ನೂ ಸಹ ಸರಿಯಾಗಿ ಉಪಯೋಗಮಾಡಿ ಶಬ್ದಗಳ ಭೇದವನ್ನೂ ಅವುಗಳ ಅರ್ಥಗಳನ್ನೂ ಚೆನ್ನಾಗಿ ಅಭ್ಯಾಸಮಾಡಬೇಕು.

ಸಂಕೇತಗಳನ್ನು, ಸಂಜ್ಞೆಗಳನ್ನು, ಕಣ್ಣು, ಮೂಗು, ಕಿವಿ ಉಪಯೋಗವನ್ನೂ ಸಾಧಿಸುವ ಆಟಗಳನ್ನು ಹಿರಿಯಣ್ಣನಿಂದ ಕೇ ತಿಳಿದುಕೊ.

ರಾಬಿನ್‌ಸನ್ ಕ್ರೂಸೋವು ಹೆಜ್ಜೆಯ ಗುರ್ತುಗಳು.

ಹಿರಿಯಣ್ಣಂದಿರಿಗಾಗಿ.

ಅಂಕ ೫.

ದೀಕ್ಷಾವಿಧಿ.

ದೀಕ್ಷಾವಿಧಿಯಕಾಲದಲ್ಲಿ ಬಾಲಕರು ಕಬ್ ಭಾಷೆಯನ್ನು ಕೊಡಬೇಕು. ದೀಕ್ಷೆಯನ್ನು ಕೊಡತಕ್ಕ ಕಾಲವು ಗಂಭೀರವಾಗಿರಬೇಕು. ಕಬ್ ಭಾಷೆ ಮತ್ತು ಪ್ರತಿಜ್ಞೆಗಳ ಅರ್ಥವನ್ನು ಸರಿಯಾಗಿ ಹೇಳಿಕೊಟ್ಟಲ್ಲದೆ ಬಾಲಕರಿಗೆ ದೀಕ್ಷೆಯ ಮಹತ್ವವನ್ನು ತಿಳಿಯವುದಿಲ್ಲ.

ಬಾಲಕರು ತಮ್ಮ ದೀಕ್ಷೆಯನ್ನು ತೆಗೆದುಕೊಂಡ ಕೂಡಲೆ— ಹಿರಿಯಣ್ಣನು ಅಥವಾ ದೀಕ್ಷೆಯನ್ನು ಕೊಡುವುದಕ್ಕೆ ಬಂದ ಹಿರಿಯರು, ಬಾಲಕರನ್ನು ಕುರಿತು ಒಂದೆರಡು ಮಾತುಗಳನ್ನು ಸಮಯೋಚಿತವಾಗಿ ಹೇಳಬೇಕಾಗಿದೆ. ದಿಕ್ಷೆಯಾದಸಂತರ ಆ ಬಾಲಕರು ನಿಜವಾದ ಕಬ್ ಗಳೆಂದೂ, ಪ್ರಪಂಚದ ಎಲ್ಲಾ ಭಾಗದ ಸಾವಿರಾರುಜನ ಬಾಲಕರೊಡನೆ ಅವರೂ ಸಹ ಆದಿನ ಹೊಸೆದಾಗಿ ಸೇರಿ ಅಣ್ಣತಮ್ಮಂದಿರ ಗುಂಪನ್ನು ದೊಡ್ಡದನ್ನಾಗಿ ಮಾಡಿರುವರೆಂದೂ, ಕಬ್‌ಗಳಾಗಿ ಕಬ್ ಸಂಸ್ಥೆಗೆ ಯಾವರೀತಿಯಲ್ಲಿಯೂ ಕೆಟ್ಟಹೆಸರನ್ನು ತರದಂತೆ ಇರಬೇಕೆಂದೂ, ಅಂದಿನಿಂದ ಕಬ್ ಉಡುಪನ್ನು ಧರಿಸಲು ಅರ್ಹತೆಯು ಅವರಿಗೆ ದೊರಕಿರುವ ಹಾಗೆಯೂ, ಆ ಉಡುಪನ್ನು ಮೊಗಟದಂತೆ ಕಾಪಾಡಿಕೊಂಡು, ಹೊಗಟೆಯನ್ನು ಕ್ಲಿಪ್ತಕಾಲದಲ್ಲಿಯೂ, ದೇವಕಾರ್ಯದತಿರುವ ಘನಕಾರ್ಯಗಳಲ್ಲಿಯೇ ಉಪಯೋಗಿಸುವಂತೆಯೂ, ಹಿರಿಯಣ್ಣನ ಆಜ್ಞೆಯಂತೆ ಉಪಯೋಗಿಸಬೇಕೆಂದೂ ಹೇಳತಕ್ಕದಾಗಿದೆ.

೧ನೇ ದರ್ಜೆಯ ಕೆಲಸ.

ಕೋವಿಲ ಪಾದದ ಶಿಕ್ಷಣವು ಮುಗಿದ ತರುವಾಯ ದೀಕ್ಷೆಯೂ ಸಹೆಯಿತೆಂದರೆ, ೧ ನೇ ದರ್ಜೆಯ ಕೆಲಸಕ್ಕೆ ಪ್ರಾರಂಭಿಸಬೇಕು. ಸಾಧಾರಣವಾಗಿ ಈ ಕೆಲಸವು ಮೂರು ತಿಂಗಳಕಾಲ ಹಿಡಿಯುತ್ತದೆ. ಬಾಲನಾಯಕರನ್ನೂ ಅವರ ಜೊತೆಯಲ್ಲಿ ಅವರನರ ಗುಂಪಿನ ಒರಡನೆಯವರನ್ನೂ ಕರೆಸಿ ಮೊದಲನೇ ದರ್ಜೆಯ ಶಿಕ್ಷಣವನ್ನು ಕೊಡಬೇಕು. ನಂತರ ಇವರು ತಮಗೆ ತಮ್ಮ ತಮ್ಮ ಗುಂಪುಗಳಿಗೆ ಹೇಳಿಕೊಡಬೇಕು. ಇವರು ತಮ್ಮ ಜೊತೆಗಾರರಿಗೆ ಹೇಳುತ್ತಿರುವಾಗ ಹಿರಿಯಣ್ಣನು ಅವರೊಡನೆಯೇ ಇದ್ದು ಶಿಕ್ಷಣವು ಸರಿಯಾಗಿದೆಯೋ ಇಲ್ಲವೋ ಎಂಬುದನ್ನು ಗಮನಿಸುತ್ತಿರಬೇಕು. ಹೀಗೆ ಮಾಡುವುದರಿಂದ ಹಿರಿಯಣ್ಣನು ಸುಲಭದಿಂದ ಹಿರಿಯಣ್ಣಂದಿರನ್ನು ತರಬೇತಿ ಮಾಡುತ್ತಿದ್ದಾನೆ. ಇಲ್ಲದೆ ಬಾಲನಾಯಕರ ನಾಯಕರಿಗೆ ಒಂದು ಘನತೆಯನ್ನು ಕೊಟ್ಟಂತಾಯಿತು. ಬಾಲಕರ ನಾಯಕನಿಗೆ, ಉಪಾಧ್ಯಾಯನೂ, ಏಳೇಯಂತೆಯ ಉಪಾಧ್ಯಾಯನನ್ನೂ ಬಾಲಕರು ಕಲಿತಂತಾಗುತ್ತದೆ.

ಮುಂಚಿನಿಂದಲೂ ಹಿರಿಯಣ್ಣನು ಆಯಾ ದಿವಸದಲ್ಲಿ ತಾನು ಮಾಡಬೇಕಾಗಿದ್ದ ಕೆಲಸಗಳನ್ನು ಗುರ್ತುಹಾಕಿಕೊಂಡು ಬಂದಿರಬೇಕು ಆ ಪಟ್ಟಿಯಲ್ಲಿ ಆಯಾದಿನದಲ್ಲಿ ಎಷ್ಟು ಕೆಲಸವು ಜರಗಿತೆಂದೂ ಗುರ್ತುಹಾಕಿಕೊಳ್ಳಬೇಕು ಈ ಎರಡು ಪುಸ್ತಕಗಳೇ ಹಿರಿಯಣ್ಣನಿಗೆ ಮುಖ್ಯವಾದ ವ್ಯಗಳು. ಗುರ್ತು ಹಾಕಿಕೊಂಡು ಬರದೇ ಇದ್ದಲ್ಲಿ, ಹಿರಿಯಣ್ಣನು ತನ್ನ ಕ್ಲಾಸುಗಳಲ್ಲಿ "ಮುಂದೆ ಇನ್ನೇನು ಮಾಡುವ" ಎಂದು ಬಾಲಕರನ್ನು ಪದೇ ಪದೇ ಕೇಳುತ್ತಿರುತ್ತಾನೆ. ಅಲ್ಲವೆ? ಆದರೆ ಆ ಪ್ರಶ್ನೆಯನ್ನು ಕೇಳಬೇಕಾದ ಸಂದರ್ಭವೂ ಬರುವುದುಂಟು. ಯಾವ ಕಾಲದಲ್ಲಿ ಬಾಲಕರೇ ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತಿರುತ್ತಾರೆಯೋ, ಯಾವ ಸಂದರ್ಭದಲ್ಲಿ ಹಿರಿಯಣ್ಣನು ಅಕಸ್ಮಾತ್ತಾಗಿ ಬಾಲಕರೊಡನೆ ಸೇರಬೇಕಾಗುತ್ತದೆಯೋ ಆಗ ಅಲ್ಲಿನ ಕೆಲಸಗಳನ್ನೂ ಆಟಗಳನ್ನೂ ಬಾಲಕರೇ ನಡಿಸಿಕೊಳ್ಳಬೇಕಾಗುತ್ತದೆ. ಇಲ್ಲ ಹಿರಿಯಣ್ಣನು ತನ್ನ ಬುದ್ಧಿಯನ್ನು ಪಯೋಗಿಸಿ ಹಳೇಸರಕನ್ನು ಹೊರಗೆ ತೆಗೆಯಬೇಕಾಗುತ್ತದೆ.

ಕಾಲು ಗಂಟೆಗಿಂತಲೂ ಹೆಚ್ಚಾಗಿ ಯಾವ ವಿಚಾರವನ್ನೂ ಹೇಳಬೇಡಿ ಕಾಲು ಕಾಲು ಗಂಟೆಯಕಾಲ, ಆಟ, ಪಾಟ, ಕಥೆ ಮುಂತಾದವುಗಳನ್ನು ಹೇಳಿದರೆ ಸಾಕು. ಇದರಿಂದ ಬಾಲಕರು ವಿವಿಧವಿಷಯದಲ್ಲಿಯೂ ತರಬೇತಾಗುತ್ತಾರೆ. ಒಂದೇ ವಿಷಯವನ್ನು ಆ ಗಂಟೆಯಲ್ಲಾ ಹೇಳುತಿದ್ದರೆ ಬಾಲಕರಿಗೆ ಬೇಜಾರುಂಟಾಗುತ್ತದೆ. ಕ್ಲಿಪ್ತ ಕಾಲಕ್ಕೆ ಸರಿಯಾಗಿ ನಡೆಯಲು ಅವಕಾಶವೂ ಸಿಕ್ಕುವಂತಾಗುತ್ತದೆ.

ಆದರ ಸ್ವೀಕಾರ.

ಪತ್ರಿಕೆಗಳು.

ಹುಬ್ಬಳ್ಳಿ—ಜಯ, ಭೋಧಾಮೃತ.
ಬೆಂಗಳೂರು—ಪ್ರಬುದ್ಧಕರ್ನಾಟಕ. ಮಕ್ಕಳ ಪುಸ್ತಕ.
ಬ್ರಹ್ಮಚರ್ಯ (ಇಂಗ್ಲೀಷ್)
ಶಿವಮೊಗ್ಗ— ಅರುಣ.
ಶೃಂಗೇರಿ—ಧನ್ವಂತರಿ.
ಪಾಸನ—Lotus.
ಮಡಕೇರಿ—ಕೊಡಗು.
ಮೈಸೂರು—ಶ್ರೀ ಕೃಷ್ಣ.

ವಿನಂತಿ.

ನಮ್ಮ ಪತ್ರಿಕೆಗೆ ಯಾವ ತಿಂಗಳಲ್ಲಿ ಬೇಕಾದರೂ ಚಂದಾದಾರರಾಗಬಹುದು. ಆದರೆ ಇಂತಹ ತಿಂಗಳಿಂದ ಚಂದಾ ಲೆಬ್ಬವನ್ನು ಹಾಕಿಕೊಳ್ಳಬೇಕೆಂದು ನಮಗೆ ತಿಳಿಸಬೇಕು. ಇಲ್ಲದಿದ್ದಲ್ಲಿ ನಾವು ಆ ವರ್ಷದ ಹಿಂದಿನ ಸಂಚಿಕೆಗಳನ್ನು ಕಳುಹಿಸಿ ಆ ವರ್ಷಕ್ಕೆ ಪೂರ್ತಾ ಚಂದಾದಾರರೆಂದು ಭಾವಿಸುತ್ತೇವೆ. ಸಂಪಾದಕರು.

ಕಬ್ಬಿಗಳು ಕಲಿಯಬೇಕಾದುದು.

ಆರೋಗ್ಯಸಾಧನೆ ; ಆಟವೇ ಅದರ ಉಪಾಯ.

ಮಗೂ—ಮೊದಲನೆಯದರ್ಜೆಯ ವಿಷಯಗಳಲ್ಲಿ ಕಬ್ಬಿಗಳು, ಕೆಲವು ಆಟಗಳನ್ನು ಕಲಿಯಲೇಬೇಕೆಂದು ಹಿರಿಯರು ನಿರ್ಧರಿಸಿರುತ್ತಾರೆ. ಅದೇತಕ್ಕೆಂದರೆ, ನಿನ್ನ ರಕ್ತವು ಶುದ್ಧಿಯಾಗಿ ನೀನು ಆರೋಗ್ಯವಂತ ನಾಗಬೇಕಾದರೆ ನೀನು ಆಟಗಳನ್ನೇ ಆಡಬೇಕು. ಇದರ ವಿಚಾರವಾಗಿ ನಿನ್ನ ಹರಟೆಯಲ್ಲಿ ಮತ್ತೊಮ್ಮೆ ಹೇಳುತ್ತೇನೆ.

ಹಗ್ಗದಿಂದ ಕುಣಿಯುವುದು—(Skipping)

ಹಗ್ಗವನ್ನು ಮುಂದಿನಿಂದ ತಂದು ಕುಣಿಯುವುದು ಸುಲಭವಾದುದಲ್ಲ. ಆದರಿಂದ ಒಳ್ಳೆಯದೂ ಆಗುವುದಿಲ್ಲ. ಕೆಡಕಾಗುವ ಸಂಭವವಿದೆ. ಹಗ್ಗವನ್ನು ಹಿಂದಿನಿಂದ ತಂದು ಕುಣಿಯಬೇಕು. ಇದುವರೆಗೂ, ನೀನು ಅದರ ಅಭ್ಯಾಸಮಾಡದಿದ್ದಲ್ಲಿ ಇನ್ನು ನುಂಗಾದರೂ ಮಾಡು. ಪ್ರಯತ್ನ ಪಟ್ಟಾಗ್ಯೂ ನಿನಗೆ ಒದಿದ್ದಲ್ಲಿ, ಇಬ್ಬರು ಸ್ನೇಹಿತರು ಹಗ್ಗವನ್ನು ಹಿಡಿದಿರುವಾಗ ನೀನು ಅದರ ಮೇಲೆ ಹಾರುವುದಕ್ಕೆ ಪ್ರಯತ್ನಪಡು. ಒಂದೆರಡು ದಿವಸಗಳಲ್ಲಿ ನಿನಗೆ ಒಂದು ಬಡುತ್ತವೆ. ಆ ಮೇಲೆ ನೀನೇ ಹಗ್ಗವನ್ನು ತಿರಿಗಿಸುತ್ತಾ ಪ್ರಯತ್ನಮಾಡು. ಕುಣಿಯುವಾಗ ಕಾಲುಗಳನ್ನು ಜೋಡಿಸಿರಬೇಕು. ಶಬ್ದವಾಗುವಂತೆ ನೆಲದಮೇಲೆ ಕಾಲುಗಳನ್ನು ಒಡಿಯಬೇಡ. ಹಿಂದಿನಿಂದ ಮೂವತ್ತೈದಲ, ಮುಂದಿನಿಂದ ಮೂವತ್ತೈದಲ ಹಗ್ಗವನ್ನು ಹಾಸಿ ಕುಣಿಯಬೇಕು.

ಕುಪ್ಪಳಿಸುವುದು—ಪಲ್ಟೀ ಹೊಡೆಯುವುದು. (Leaf Frog and Somer saults)

ಪ್ರಾರಂಭದಲ್ಲಿ ಬಾಲಕನು ತನಗಿಂತಲೂ ಎತ್ತರದಲ್ಲಿ ಚಿಕ್ಕದಾಗಿರುವಪನ ನೋಲೆ ಕುಪ್ಪಳಿಸುವುದನ್ನು ಕಲಿಯಬೇಕು. ನಂತರ ತನ್ನ ಎತ್ತರನಪನ ಮೇಲೆ, ನಂತರ ತನಗಿಂತ ಸ್ವಲ್ಪ ಎತ್ತರವಾಗಿರುವಪನ ಮೇಲೆ ಕುಪ್ಪಳಿಸುವುದನ್ನು ಅಭ್ಯಾಸವಾಡಬೇಕು. ಬಾಲಕನು ಕುಪ್ಪಳಿಸುವಾಗ ಅವನ ಮುಂದಿನಪನು ಇವನಿಗೆ ಅಡ್ಡಲಾಗಿಸಿಂತು ಬಗ್ಗಿಕೊಂಡು ತನ್ನ ತಲೆಯನ್ನು ಬಾಗದೆ ಬಗ್ಗಿಸಿರಬೇಕು. ಅಲ್ಲದೇ ತನ್ನ ಕೈಗಳಿಂದ ತನ್ನ ಕಾಲುಗಳನ್ನು ಬಲವಾಗಿ ಹಿಡಿದುಕೊಂಡಿರಬೇಕು. ಕುಪ್ಪಳಿಸುವಾಗ ಕೈಕ್ಷಗಳನ್ನು ಅಲಾಪಿಸದೇ ಇದ್ದು ಸೋತುಪವರಿಗೆ ಎಕಾರವಾಗಿ ಕಾಯಬೇಕು. ಹಾರುವಾಗ ಬಹಳ ಎತ್ತರದ ಮೇಲೆ ಸ್ವಲ್ಪ ದೂರವನ್ನು ಹಾರಬೇಕು.

ಇಲ್ಲಿ ಹೇಳಿರುವಂತೆ ಯಾವುದಾದರೊಂದು ರೀತಿಯ ಸಣ್ಣ ಹೊಡೆತವನ್ನು ಎಕಾರವಾಗಿ ಮಾಡಿದರೆ ಪ್ರಯೋಜನವಿಲ್ಲ. ತಲೆ ಸೋತು ಸಣ್ಣ ಹೊಡೆತವಾಗಿ ಕೈಗಳು ಉಪಯೋಗಿಸುವಷ್ಟರಲ್ಲಿ ಸೋಲಲ್ಕೇಳಬೇಕು.

ಪುಸ್ತಕಗಳ ವಿಮರ್ಶೆ.

ಶಿಶುಸಂರಕ್ಷಣೆ—ಬಟ್ಟಿಯಾಗಿ ಹೊಂಚಲ್ಪಡುತ್ತಿದೆ. ಲೆ|. ಜಿ. ಎಸ್‌ಶೇಷಾದ್ರಿ ಹೆಲ್ತ್ ಆಫೀಸರ್. ಮೈಸೂರು. ಶಿಶುಗಳಪಾಲನೆ, ಶಿಶುಗಳ ಅಭಿವೃದ್ಧಿಗೆ ತಕ್ಕ ವಿಷಯಗಳನ್ನು ತಾಯಂದಿರಿಗೆ ತಿಳಿಸಿರುತ್ತಾರೆ. ವರ್ಷದೊಳಗೆಯೇ ಅನೇಕ ಮಕ್ಕಳು ಸಾಯುತ್ತಿವೆ. ಅದಕ್ಕೆ ಕಾರಣ ನಮ್ಮ ಅಜ್ಞಾನ. ನಮ್ಮ ಅಜ್ಞಾನವನ್ನು ಹೋಗಲಾಡಿಸಲು ಈ ಪುಸ್ತಕವು ಒಳಮಟ್ಟಿಗೆ ಸಹಕಾರಿಯಾಗಿರುತ್ತದೆ.

ಆತಂಕನಿಗ್ರಹಫಲ್ಮಿಸಿಯವರ ಚಿತ್ರಮಾಲೆ—ಈ ಕಂಪನಿಯವರು 48 ವರ್ಷಕಾಲದಲ್ಲಿ ಮಾಡಿರುವ ವ್ಯಾಪಾರದಲ್ಲಿನ ಮುಖ್ಯ ವಿಚಾರಗಳನ್ನೂ, ಇವರ ಕೆಲಸವಾಗುವ ಕಾರ್ಖಾನೆಯ ಮತ್ತು ಇತರ ಅನೇಕ ಠಾವುಗಳ ಚಿತ್ರಗಳನ್ನೂ ಮಾಲೀಕರುಗಳನ್ನೂ ಒಳಗೊಂಡಿರುವ ಚಿತ್ರಪುಸ್ತಕವನ್ನು ಕಳುಹಿಸಿರುತ್ತಾರೆ. ನಮ್ಮ ದೇಶದಲ್ಲಿ ವಾಣಿಜ್ಯವು ದಿನದಿನಕ್ಕೆ ಅಭಿವೃದ್ಧಿಯಾಗುತ್ತಿದೆ. ಎಂಬುದಕ್ಕೆ, ಒಂದಲ್ಲ, ಸುಮಾರು 20 ಆಂಗಡಿಗಳನ್ನು ದೇಶದ ಎಲ್ಲಾ ಭಾಗಗಳಲ್ಲಿ ಇಟ್ಟು ಇಪರು ವ್ಯಾಪಾರಮಾಡುತ್ತಿರುವುದೇ ಸಾಕ್ಷಿ. ಇವರಿಗೆ ಬಂದ ಲಾಭದಲ್ಲಿ ಸರ್ವರಿಗೂ ಉಪಯೋಗವಾಗುವ ಧರ್ಮದ ಕೆಲಸಗಳನ್ನೂ ಮಾಡಿರುವುದು ಸ್ತುತ್ಯ.

ನಗಬೇಕು.

ವಕೀಲ—ಇದು ನಿನ್ನ ಬರಹವಲ್ಲವೆಂದು ಪ್ರಮಾಣಮಾಡಿ ಹೇಳುವೆಯಾ?

ಕಾಳಪ್ಪ—ಹೌದು. ನಿಜವಾಗಿಯೂ ಅದು ಬರೆದುದಲ್ಲ.

ವಕೀಲ—ನಿನ್ನ ಒರಹಕ್ಕೆ ಇದು ಹೋಲುವುದೋ?

ಕಾಳಪ್ಪ—ಎಂದಿಗೂ ಇಲ್ಲ.

ವಕೀಲ—ಅದಕ್ಕೆ ಪ್ರಮಾಣಮಾಡಿ ಹೇಳುವೆಯಾ?

ಕಾಳಪ್ಪ—ಅಗತ್ಯವಾಗಿ.

ವಕೀಲ—ಅದು ಯಾವ ಆಧಾರದಮೇಲೆ ಹೇಳುತ್ತಿ?

ಕಾಳಪ್ಪ—ನನಗೆ ಒರೆಯುವುದಕ್ಕೆ ಬರುವುದೇ ಇಲ್ಲ.

ದಸರಾಹಬ್ಬಕ್ಕಾಗಿ ನಾರಾಯಣನು ತನ್ನ ಊರಿಗೆ ಹೋಗುತ್ತಿದ್ದನು. ಮದ್ದೂರಿನಲ್ಲಿ ಬಹಳ ಚಾಯಾರಿಕೆಯಾಯಿತು. ರೈಲುಹೊರಡುವುದಕ್ಕೆ ಸ್ವಲ್ಪವೇ ಹೊತ್ತು ಇದ್ದಿತು. ಅದಕ್ಕಾಗಿ ಗಾರ್ಡಿನ ಕೂಡೆ "ನಾನಿನ್ನು ಕಾಫಿ ಕುಡಿದು ಬರಬಹುದಷ್ಟೆ" ಎಂದನು.

ಗಾರ್ಡ್—ಸೈರ್ಯಕ್ಕಾಗಿ ನನನ್ನೂ ನಿನ್ನೊಡನೆ ಕರೆದು ಕೊಂಡು ಹೋಗಬಹುದಲ್ಲ.

ಅಧಿಕಾರಿ—ಎಲಾ, ನೀನು ತಪ್ಪುಗಾರನೆಂದು ನಿನಗೆ ಶಿಕ್ಷೆಯನ್ನು ಯಾತಕ್ಕೆ ವಿಧಿಸಬಾರದು?

ಉತ್ತರ ತಮಗೆ ಬುದ್ಧಿ ಇರುವುದರಿಂದ!

ಒಂದು ಉತ್ತಮವಾದ ಸ್ಕೌಟು ದಳ; ಅದು ಹೇಗಿರಬಹುದು ?

(ಲಾರ್ಡ್ ಹ್ಯಾಂಪ್ಟನ್‌ರವರ ಪುಸ್ತಕದಿಂದ ಕದ್ದದ್ದು)

ಅನೇಕಾವೃತ್ತಿ ರ್‍ಯಾಲಿಯಲ್ಲಿ ನೋಡಿದ್ದೇನೆ—ನಾಲ್ಕು ನಾಲ್ಕು ಜನರು ಒಂದೊಂದು ನಾಲಿಗೆಯ ಧ್ವಜಸ್ತಂಭದ ಬಳಿಯಲ್ಲಿ ಹಾದು ಹೋಗುತ್ತಿರುತ್ತಾರೆ. ಕೆಲವರು ದಳದವರು ಸೊಗಸಾದ ರೇಶ್ಮೆಯ ಒಟ್ಟಿಗಳನ್ನು ತೊಟ್ಟುಕೊಂಡು ತಮ್ಮ ಮುಂದೆ ಸೊಗಸಾದ ಸಗಾರಿ ಬಾಜಾ ಮಾಡಿಕೊಂಡು ಸಿಪಾಯಿಗಳನ್ನು ಮೂರಿಸುವಂತೆ ಹೆಜ್ಜೆಹಾಕುತ್ತಾ ಹಾಸಿಹೋಗುತ್ತಿರುತ್ತಾರೆ. ಕೆಲವರು ಬಿಳಿ ಷರ್ಟುಗಳನ್ನು ತೊಟ್ಟುಕೊಂಡು ಕೆಂಪು ಕೊರಳುಪಟ್ಟಿಯನ್ನು ಕಟ್ಟಿಕೊಂಡು ನೀಲಿನಿಕ್ಕರುಗಳನ್ನು ಹಾಕಿಕೊಂಡು, ನಾಲದುದಕ್ಕೆ ಹಳದಿ ರುಮಾಲುಗಳನ್ನು ಸುತ್ತಿಕೊಂಡು ಬರುತ್ತಿರುತ್ತಾರೆ. ಇವರಿಗೆ ಬೇರೆ ರಂಗುಗಳೇ ಸಿಗಲಿಲ್ಲವೇನೋ ?

ಕೆಲವು ಸಲ 'ನೋಡಿ, ಸರ್, ಈ ದಳ ಬಹಳ ಸೊಗಸಾದುದು. ಇವರಲ್ಲಿರುವಂತಹ ಫುಟ್‌ಬಾಲ್ ಗುಂಪು ಇನ್ಯಾರಲ್ಲೂ ಇಲ್ಲ.' ಎಂತ ಕೆಲವರು ಹೇಳಿದ್ದಾರೆ. ಕೆಲವು ಸ್ಕೌಟುಮಾಸ್ಟರುಗಳು 'ನಮ್ಮ ಹುಡುಗರನ್ನು ನೋಡಿ, ಎಲ್ಲಾ ವಂಧ್ಯಗಳಲ್ಲೂ ಗೆಲ್ಲುತ್ತಾರೆ. ಅವರಲ್ಲೊಬ್ಬರು ಸಂಪಾದಿಸಿರುವ ಪ್ರವೀಣತೆಯ ಪದಕಗಳನ್ನೆಲ್ಲಾ ಜೋಡಿಸುವುದಕ್ಕೆ ಎರಡು ಕೋಳೂ ಸಾಕಾಗುವುದಿಲ್ಲ' ಎಂದು ಹೇಳುತ್ತಾರೆ. ಇನ್ನೊಂದು ಗುಂಪು ನೋಡಿದರಂತೂ ಹತ್ತಿರದಲ್ಲಿದ್ದವರಿಗೆ ಗಾಭರಿಯಾಗುತ್ತದೆ. ಯಾಕಂದರೆ ಆ ಗುಂಪಿನ ಮುಂದುಗಡೆಬರುತ್ತಿರುವ ಬಾಜಾದವರಲ್ಲಿ ಆ ಮದಲಯನ್ನು ಬಡಿಯುವವನು ಕೈಯಲ್ಲಿ ಸುತ್ತಿಗೆಯನ್ನಿಟ್ಟುಕೊಂಡು ಕೈಯನ್ನು ಆ ಕಡೆಗೂ ಈ ಕಡೆಗೂ ಬೀಸುತ್ತಿರುವನು. ನಿಜಗೇನೋ ಗಾಬರಿಯೇ ಸರಿ ಆಹಾ ! ಈ ಗುಂಪೋ ? ದೇವರೇ ಗತಿ—ಕೆಲವರಿಗೆ ಪ್ರೋಷಾಕು ಸರಿಯಾಗಿದೆ ಕೆಲವರು ಪಂಚೆಯನ್ನುಟ್ಟು ತರ್ಟುಸುತ್ತ ಮಾತ್ರ ಮಾಡಿದಾರೆ ಕೆಲವರು ನಿಕ್ಕರು ಹಾಕಿಕೊಂಡು, ಯಾವುದೋ ಕೋಟು ಹಾಕಿಕೊಂಡು ಏನಾದರೂ ತೊಡಿಗಿಯೋ—ದಸರಾದಲ್ಲಿ ಗೊಂಬೆ ಸಾಲುವುದಕ್ಕೆ ಬರುತ್ತಾರಲ್ಲ—ಆಗಲಾಗ

[illegible] ಸಲ ನನಗೆ ಅನ್ನಿಸುತ್ತೆ ಸಗಾಯಿತ್ತ ಹಾಗೇ ನನಗೆ ಅನ್ನಿಸುತ್ತೆ ಯೋಚನೆ ಮಾಡಿ ಪ್ರತಿಯೊಬ್ಬರಲ್ಲಿ ಈ ಎಲ್ಲಾದರ ಅಡಂಬರ, ತಪಸಿಗಲ್ಲ ಮೂಲ ಹೂಯಿತೆ ? ಅಥವಾ ಸ್ಕೌಟಿಂಗೇ ಹೀಗೇನೆ ? ಸ್ಕೌಟಿಂಗ ಹಿಗಲ್ಲ ಏನೆಲ್ಲಾ ಸೇವೆಗಳು—ಸುಣ್ಣತೊಡೆದಿರುವ ಬಾಗಿ ಸ್ವಲ ಕೆಲಪಂಡದೆ ಬಳಗಾರಿಯ ಸಿಬಸ್ಥಿತಿ ಗೊತ್ತಾಗುತ್ತೆ. ಎಲ್ಲಾ ಹಾಗೆ ಸುಣ್ಣವ ಬಣ್ಣವೂ ಬೇಕು—ಇರಬೇಕು. ಸ್ವಲ್ಪ ಬಣ್ಣ, ಸ್ವಲ್ಪ ರಂಗು—ಆಡಂಬರವೂ ಬೇಕು—ಹುಡುಗರ ಮನಸ್ಸನ್ನು ಸಲ ಸೆಳೆಯುವುದಕ್ಕೂ ಸಾಮಾನ್ಯ ಜನತೆಯನ್ನು ರಂಜಿಸುವುದಕ್ಕೂ ಬೇಕು.—ಆದರೆ ಆದರಡಿಯಲ್ಲಿ ನಿಜವಾದ ಸ್ಕೌಟುಧ್ಯೇಯವು ಮೂರ್ತಿಮತ್ತಾಗಿರಬೇಕು.

ಈಗ 10 ವರ್ಷದ ಹಿಂದಿನಮಾತು—ಆ ಸ್ಕೌಟುಗುಂಪಿನವರಿಗೆ ಸುಣ್ಣವೇ ತೊಡದಿರಲಿಲ್ಲ. ಸುಮಾರು 10-15 ಹುಡುಗರು, ಅವರ ಸ್ಕೌಟುಮಾಸ್ಟರೂ ಹುಡುಗನೇ ! ಅವರ 'ಗುಂಪಿನಗಮಿ' ಯೋ ಆ ಹಳ್ಳಿಯಲ್ಲಿದ್ದ ಒಂದು ಪಣತ (ಕಣಜದ ಮನೆ). ಹೀಗಿದ್ದಿದ್ದೂ ಆ ಹುಡುಗರು ಎಂತಹವರು? ಒಬ್ಬಬ್ಬನೂ ಒಬ್ಬ ರಣಧೀರ. ಜಗ್ಗಲಿಲ್ಲ—ಬಗ್ಗಲಿಲ್ಲ ಅನುನೆ ಸರಿಮಾಡಿಕೊಂಡರು—ನಾಲ್ಕೈದು ಪುಸ್ತಕಸಂಪಾದಿಸಿದರು, ಊರ ಶ್ಯಾನುಭೋಗರನ್ನು ಹಿಡಿದು ದಳಕ್ಕೆ ಅಧ್ಯಕ್ಷರನ್ನಾಗಿ ಮಾಡಿಕೊಂಡರು. ಆದರೆ ಪಾಪ ! ಹಳ್ಳಿ—ಬೇರೆ ಸ್ಕೌಟುದಳದವರ ದರ್ಶನವೇ ಇರುತ್ತಿರಲಿಲ್ಲ. ಆವಾಗ ದಸರಾರ್‍ಯಾಲಿಯಲ್ಲಿ ಮೈಸೂರಿಗೆ ಬಂದರು. ಸ್ವಲ್ಪ ಹಳ್ಳಿಯವರು ನೋಡಿ, ಎಷ್ಟಾದರೂ ! ಎಲ್ಲರೂ ನಗುವರೇ !! ಆದರೆ ಸೇತುವೆ ಕಟ್ಟುವುದರಲ್ಲಿಯೂ, ಗುಡಾರಹಾಕುವುದರಲ್ಲಿಯೂ ಇವರಿಗೆ ಮೊದಲನೆಯ ಬಹುಮಾನವು ದೊರೆಯಿತೆಂಬುದನ್ನು ಕೇಳಿ ಎಲ್ಲರೂ ಸುಮ್ಮನಾದರು. ಆದರಲ್ಲಂತೂ, ಬಹುಮಾನವನ್ನು ಹಂಚುವಾಗ ನಮ್ಮ ನಾಯಕರು ಶ್ರೀಮದ್ಯುವರಾಜರು ಆ ದಳದ ಮುಖಂಡನಿಗೆ ಹಸ್ತಲಾಘವವನ್ನು ಕೊಟ್ಟಾಗ ಆ ಹಳ್ಳಿ ಹುಡುಗರಿಗೆ ಎಷ್ಟು ಹೆಮ್ಮೆಯಾಗಿರಬಹುದೆಂಬುದನ್ನು ನಾನು ಬೇರೆ ಹೇಳಲಾರೆ.

ಮೈಸೂರಿನಿಂದ ಊರಿಗೆ ಬಂದಾಗ ಹೇಗಾದರೂಮಾಡಿ ಒಂದು ಬಾಜಾ ಸಂಪಾದಿಸಬೇಕೆಂದು ಆ ಹುಡುಗರಿಗೆ ಮನಸ್ಸಾಯಿತು ಆ ಸ್ಕೌಟುಮಾಸ್ಟರು ಬಹಳ ಬುದ್ಧಿವಂತ. ಮೂರು ರಾಗಮಾಲು ತರಿಸಿದ. ಅವರ ಮನೆಯದೇ ಒಂದು ಜೊತೆ ತಾಳ, ಬಿದಿರದ್ದು ಎರಡು ಕೊಳಲು, ಎಲ್ಲಾ ಸೇರಿಸಿ ಒಂದು ಬಾಜಾಮಾಡಿಸಿದ.

ಆ ದಳದವರಲ್ಲಿ ಬಹಳ ಧೈರ್ಯವಿತ್ತು—ಸ್ಥೈರ್ಯವಿತ್ತು. ಒಲ್ಲಕ್ಕೆ ಮುಖ್ಯವಾಗಿ ಧ್ಯೇಯವಿತ್ತು. ಆಂತಹ ದಳಗಳೇಕೋ ಅತಿ ವಿರಳವಾಗುತ್ತಿವೆಯಲ್ಲ ?

ಸ್ಕೌಟು ವಾರ್ಷಿಕ ಸಂಚಿಕೆ.

ಮೈಸೂರು ಸ್ಕೌಟು ಮಂಡಳಿಯವರು ಮುದ್ರಿಸಿರುವ ಸ್ಕೌಟು ವಾರ್ಷಿಕ ಸಂಚಿಕೆಯು ಈಗ ಹೊರಟಿದೆ ಪ್ರಾರಂಭದಲ್ಲಿ ನಾಲ್ಕು ಬಣ್ಣಗಳಲ್ಲಿ ನಮ್ಮ ಪ್ರಭುಗಳ ಚಿತ್ರವಿದೆ. ಇತರ ಚಿತ್ರಗಳು ನಮ್ಮ ನಾಯಕರು ಅವರ ಕುಮಾರರೂ, ದಿವಾನರವರೇ ಮುಂತಾದ ಪ್ರಮುಖರವರದೂ ಆಗಿದೆ. ಇದರಲ್ಲಿ ಸ್ಕೌಟುಮಂಡಳಿಯು ಈ ಹತ್ತು ವರ್ಷಗಳಲ್ಲಿ ನಡೆಸಿದ ಮುಖ್ಯ ಕಾರ್ಯಗಳು ಇವೆ ಇದು ನಮ್ಮ ಭರತ ಮಂಡಲದ ಎಲ್ಲಾ ಭಾಗಗಳ ಮಂಡಳಿಗಳ ವರದಿಗಳನ್ನೂ ಅಲ್ಲಿಯ ಪ್ರಮುಖರ ಚಿತ್ರಗಳನ್ನೂ ಒಳಗೊಂಡಿದೆ.

ಸುಮಾರು ೨೦೦ ಪೇಜುಗಳನ್ನೊಳಗೊಂಡಿರುವ ಈ ಪುಸ್ತಕಕ್ಕೆ ಇಟ್ಟಿರುವ ಬೆಲೆಯು ಒಂದು ರೂಪಾಯಿಯು ತೀರ ಕಡಿಮೆ ಎನ್ನಬೇಕು.

ಗೃಹಶಿಕ್ಷಣ.

"ಗೃಹವೇ ಶಿಶುವಿಗೆ ಪ್ರಥಮ ಪಾಠಶಾಲೆ"—ಫ್ರೋಬೆಲ್.

(ಅಮೇರಿಕಾ ದೇಶದ ಕಿಂಡರ್ ಗಾರ್ಟನ್ ಸಂಘದವರ ಅನುಮತಿಯಿಂದ)

ಅಂಕ ೫.

ಮಕ್ಕಳೇನು ಮಂಗಗಳೇ ?

"ಪೊನ್ನೆ ಸರ್ಕಸ್ಸಿಗೆ ಏಕೆ ಬರಲಿಲ್ಲ. ಸಾಕಮ್ಮನವರೇ ? ನಾನು ಹೋಗಿದ್ದೆ ಆಜೇಕೇರಿಯಿಂದ ನಮ್ಮ ನಾದಿನಿ ಬಂದಿದ್ದಳು. ಬಹಳ ಚನ್ನಾಗಿತ್ತು. ಅಂದ್ರೆ, ಅದನ್ನಲ್ಲಂತೂ ಆ ಮಂಗಗಳು ಬಹಳ ಚನ್ನಾಗಿದ್ದವು ನೋಡಿ, ಒಂದು ರಾಮ, ಒಂದು ಸೀತೆ. ಇವೆರಡೇನೋ ಸುಮಾರಾಗಿದ್ದವು. ಆದರೆ ಆ ಹನುಮಂತ ಎಂತ ಒಂದು ಬಂದಿತ್ತು. ನೋಡಿ. ಎಷ್ಟು ಚನ್ನಾಗಿ ಇದು ಮಾಡಿತು ಅಂತೀರಿ" ಎಂದರು ಸಾವಿತ್ರಮ್ಮನವರು. "ಚನ್ನಾಯಿತು ಬಿಡಿ, ಸಾವಿತ್ರಮ್ಮನವರೇ ನಾನು ಕೂಗಿ ಕೂಗಿ ಸಾಕಾಯಿತು. ನಿಮಗೆಲ್ಲ ಕಿವಿಯೇ ಕೇಳಿಸಲಿಲ್ಲವೇನೋ ? ಹೌದು, ಮಂಗಗಳು ಚನ್ನಾಗಿದ್ದವು. ಆದರೆ ಮನೆಗೆ ಬರುವಾಗ ನನಗೆ ಯೋಚನೆಯಾಯ್ತು ನೋಡಿ. ಏನು ಪ್ರಯೋಜನ ಇದರಿಂದ ನಾಲ್ಕು ದಿನ ಆ ಆಟದವನು ಅನುಗಳನ್ನು ತಯಾರಿಸದೆ ಬಿಟ್ಟರೆ ಎಲ್ಲಾ ಮರೆತು ಕೂಂಡು ಯಥಾಪ್ರಕಾರ ಜೇವಿ ಮಂಗಗಳ ಹಾಗೆ ಆಗುತ್ತವೆ ಅಲ್ಲವೆ, ಎಂದುಕೊಂಡೆ ಆ ಮೇಲೆ ಮನೆಗೆ ಒಂದಮೇಲೆ, ಎಲ್ಲರೂ ಊಟಕ್ಕೆ ಕುಳಿತರು. ನಮ್ಮ ಮಗು—ಮಕ್ಕಳಿಗೇನು ಗೊತ್ತು ಅಂದ್ರೆ—ಎಲ್ಲರೂ ಕುಳಿತುಕೊಳ್ಳುವುದರೊಳಗೆ ಅನ್ನಕ್ಕೆ ಕೈ ಹಾಕಿತು. "ಮುಟ್ಟಬೇಡ" ಎಂತ ಇವರು (ಅಂದರೆ ಅವರಗಂಡ) ಹೆದರಿಸಿದರು. ಸುಮ್ಮನೆ ಗಂಭೀರವಾಗಿ ಕುಳಿತುಕೊಂಡಿತು. ಆಗ ನನಗೆ ಅನ್ನಿಸಿತು. "ಇವರಿಗೂ ಆ ಮಂಗನಸ್ಸನ್ನು ಸಾಕಮ್ಮನವರಿಗೂ ಏನು ? ವ್ಯತ್ಯಾಸ ಅವನು ಮಂಗಗೆ ಕಲಿಸುವಾಗ ಇವರು ಮಗುವಿಗೆ ಕಲಿಸುತ್ತಾರೆಅಷ್ಟೆ" ಎಂದರು ಸೀತಮ್ಮನವರು.

"ಸರಿ, ಬಿಡಿ, ಏನು ಹಾಗೆಂದರೆ ಮಕ್ಕಳೇನು ಮಂಗಗಳೇ ? ಏನಯ್ಯ ನಿನ್ನೇ ನೋಡಿ; ಮಂಗನಿಗೆ ಏನೇ ಹೇಳಿಕೊಟ್ಟರೂ ಮಂಗ. ಆಟಗಾರ ಮಾಡುವ ಕೆಲವು ಸಂಜ್ಞೆಗಳಿಗೆ ಇನ್ನೂ ಕೂಡ ಒಂದು ಸಲಾಂ ಮಾಡುತ್ತೆ. ಮಂಗನಿಗೆ ಯೋಚನೆಮಾಡುವುದಕ್ಕೆ ಆಗುವುದಿಲ್ಲ (ಏನನ್ನು ನಾವ್ರ ಸಂಬಂಧವಿಲ್ಲ.—ಸಂ.) ಒಂದು ಅರ್ಥದಲ್ಲಿ ನಡೆಯು ಜೇಕಂದು ಸಂಕಲ್ಪಿಸುವುದು ಅದಕ್ಕೆ ಆಗುವುದಿಲ್ಲ.

ಆದರೆ ಮಕ್ಕಳ ವಿಚಾರ ಬೇರೆ. ನಡೆನುಡಿಗಳಲ್ಲಿ ನಿಯಮವಾಗಿ ದ್ದಲ್ಲಿ ಒಳ್ಳೆ ಚನ್ನಾಗಿಯೂ ಗಂಭೀರವಾಗಿಯೂ ಇರುತ್ತದೆಂಬುದನ್ನು ತಿಳಿದುಕೊಳ್ಳುವಂತೆ ಮಕ್ಕಳನ್ನು ತಿದ್ದಬಹುದು. ಹಾಗೆ ಮಾಡಿದರೆಂದರೆ ಪ್ರತಿಯೊಂದು ಸಣ್ಣತನವನ್ನೂ ಮಕ್ಕಳು ನೋಡಿ ಕಲಿತುಕೊಳ್ಳುತ್ತವೆ. ಕೆಲವರೇನೋ ಮಕ್ಕಳನ್ನು ಒಂದು ವಿಧವಾಗಿ ತಯಾರಿಸಿರುತ್ತಾರೆ ನಿಜ. 'ಹಂ' ಎಂದರೆ ಒಂದು ತರಹ, 'ಹುಂ' ಎಂದರೆ ಒಂದು ತರಹ ಮಕ್ಕಳು ಆಡುತ್ತಿರುತ್ತವೆ. ಅದೇನು ಪ್ರಯೋಜನ. ಯೋಗ್ಯವಾದ ನಡೆನುಡಿಗಳು ಚನ್ನಾಗಿರುತ್ತವೆಂಬುದನ್ನು ಮಕ್ಕಳೇ ತಿಳಿದುಕೊಳ್ಳಬೇಕು.

ಘನತೆಯ ರೀತಿಯ ಪೇಳ್ವೊಡೆ, ಆದು |
ಮೃದಕರ ರೀತಿಯೊಳ್, ಗಂಭೀರತೆಯ ತೋರ್ಪುದಲ್ತೆ, ಜಗದೊಳಾ ||

"ಅಲ್ಲದೆ, ನಾನೂ ಕೂಡ, ಮಕ್ಕಳಿಗೆ ಹಾಗೆ ಮಾಡಬಾರದು, ಹಾಗೆ ಮಾಡದಿರುವುದಕ್ಕೆ ಇವೇ ಕಾರಣಗಳು ಎಂದು ಹೇಳುತ್ತಿದ್ದೆ. ಆ ಮೇಲೆ ಅದು ಹುಚ್ಚುತನವೆಂದು ಗೊತ್ತಾಯಿತು. ಮಕ್ಕಳಿಗೆ ಬೇರೆಯವರು ಅದರಲ್ಲೂ ಬೇರೆ ಮಕ್ಕಳು ತಮ್ಮ ವಿಚಾರವಾಗಿ ಬೇರೊಂದು ವಿಧವಾಗಿ ತಿಳಿದುಕೊಂಡು ನಗುತ್ತಾರೆಂದು ಗೊತ್ತಾದರೆ ಅಂತಹ ದನ್ನು ಯಾವಾಗಲೂ ಮಾಡುವುದಿಲ್ಲ. ಈಗ ನೋಡಿ, ಸ್ಕೂಲಿಗೆ ಎಲ್ಲರೂ ಸರಿಯಾದ ಹೊತ್ತಿಗೆ ಹೋಗಿರುತ್ತಾರೆ. ಒಂದು ಮಗುವು ಮಾತ್ರ ಹೊತ್ತಾಗಿ ಹೋದರೆ ಎಲ್ಲರೂ ನಗುತ್ತಾರೆಂದು ಗೊತ್ತಾದರೆ ಯಾವ ಮಗುವೂ ತಾನಾಗಿ ಹೊತ್ತಾಗಿ ಹೋಗುವುದಕ್ಕೆ ಒಡಂಬಡುವುದಿಲ್ಲ. ಮಕ್ಕಳಿಗೆ ಹೊಗಳಿಕೆಯಲ್ಲಿ ಬಹಳ ಇಷ್ಟ. ಅದರಲ್ಲೂ ಸಮವಯಸ್ಕರಾದ ಇತರ ಬಾಲಕರ ಹೊಗಳಿಕೆಯಲ್ಲಂತೂ ಹೆಮ್ಮೆ ಬಹಳ ಇದೇ ಗುಟ್ಟು ಸೀತಮ್ಮನವರೇ ಮಕ್ಕಳ ಶಿಕ್ಷಣದಲ್ಲಿ ಮಕ್ಕಳ ಮನಸ್ಸನ್ನು ಅನುವರ್ತಿಸಿ ನಡೆದಷ್ಟೂ ಒಳ್ಳೆಯದು" ಎಂದರು ಸಾವಿತ್ರಮ್ಮನವರು.

"ಸರಿಯಮ್ಮ ನೀವೇನೋ ವಿದ್ಯಾವಂತರು. ಸ್ಕೂಲಿನಲ್ಲಿ ಓದಿದವರು ನಿಮಗೆ ಗೊತ್ತಿದೆ. ನನಗೇನು ಗೊತ್ತಾಗಬೇಕು ?" ಎಂದರು ಸೀತಮ್ಮನವರು.

"ಸಾಕು, ಬಿಡ್ರಿ ನೀವೇನು ಕಡಿಮೆ ? ನಿಮಗೇನು ಓದುವುದಕ್ಕೆ ಒರುವುದಿಲ್ಲವೋ ? ನನಗೆ ಮಾತ್ರ ಬರುತ್ತಿರುವುದೇನು ನಿಮಗೆ ಒರದೇ ಇರುವುದೇನು ? ಅದಲ್ಲದೆ ಇನ್ನೊಂದು ವಿಚಾರ ಇಲ್ಲಿ ಒನ್ನಿ ಕಿವಿಯಲ್ಲಿ ಹೇಳುತ್ತೇನೆ ನಿಮ್ಮ ಮನೆಯವರನ್ನು ಕೇಳಿ. ನನಗೂ ಈ ವಿಚಾರವೆಲ್ಲಾ ಮುಕ್ತಾಳಲು ವಾಸಿಯಲ್ಲಾ "ಅವರಿಂದ" ತಿಳಿದಿದ್ದೇ ತಗಿಸಿ. ನೀವೂ ಹಾಗೆ ಮಾಡಿ" ಎಂದರು ಸಾವಿತ್ರಮ್ಮನವರು.

ಮಕ್ಕಳ ಮನಸ್ಸನ್ನು ಅನುವರ್ತಿಸಿ ಶಿಕ್ಷಣ ಕೊಡಿ. ಮಕ್ಕಳು ಮಂಗಗಳಲ್ಲ.

ಹಿರಿಯಣ್ಣಂದಿರಲ್ಲೊಂದು ಘಂಟ್ಯ

ಕಜಾನಿಯಮು ಮತ್ತು ವಾಗ್ದಾನಗಳನ್ನು ಉದಹರಿಸುವ ನಾಲ್ಕು ರೂಪವಾದ ದೃಶ್ಯಗಳನ್ನು ಸಂಪಾದಕರಿಗೆ ನವೆಂಬರ್ 30 ನೇ ತಾರೀ ವಿನಲ್ಲಿ ಕಳುಹಿಸಿಕೊಡಬೇಕು. ಯೋಗ್ಯವಾದುವುಗಳಿಗೆ ಬಹುಮಾನಗಳುಂಟು. ದೃಶ್ಯವು ೧೦ ನಿಮಿಷಗಳಲ್ಲಿ ಮುಗಿಯುವಂತಿರಬೇಕು. ಭಾಷೆಯು ಮಕ್ಕಳಿಗೆ ತಿಳಿಯುವಂತಿರಬೇಕು.

ಬರವಣಿಗೆಯನ್ನು ಕಾಗದದ ಒಂದೇ ಬಾಗದಲ್ಲಿ ಒರೆಯಬೇಕು. ಈ ಸಂದರ್ಭದಲ್ಲಿ ಶಿಬಿರಾಗ್ನಿ ಎಂಬ 9 ನೇ ಪುಟದಲ್ಲಿರುವ ಲೇಖನವನ್ನು ಓದಬೇಕು. —ಸಂಪಾದಕರು.

ಸ್ಕೌಟುಸುದ್ದಿಗಳು.

ವ್ಯಾಯಾಮವಿದ್ಯಾಪರಿಷತ್ತು

ಪುದುಚೆಯಲ್ಲಿ ನಡೆದ ವ್ಯಾಯಾಮವಿದ್ಯಾಪರಿಷತ್ತಿನಲ್ಲಿ ಅಲ್ಲಿಯ ಸ್ಕೌಟುಕಮಿಷನರವರು ಒಂದು ಉಪನ್ಯಾಸವನ್ನು ಮಾಡಿದರು. ಶಾಲಾ ಮುಖ್ಯೋಪಾಧ್ಯಾಯರು ತಮ್ಮ ಸಹಾಯವನ್ನು ಕೋರಿದ್ದೇ ಆದಲ್ಲಿ ಸ್ಕೌಟುಗುಂಪುಗಳನ್ನು ಸ್ಥಾಪಿಸಲು ತಮ್ಮ ಜಿಲ್ಲೆಯಲ್ಲಿ ತಲಪುನ ಮೇಲೆ ನೇಮಕಮಾಡಲ್ಪಟ್ಟ ಒಬ್ಬ ಚತುರನಾದ ಸ್ಕೌಟುಮಾಸ್ಟರೊಬ್ಬರನ್ನು ತಾತ್ಕಾಲಿಕಕ್ಕೆ ಸಹಾಯಕ್ಕಾಗಿ ಕಳುಹಿಸಿಕೊಡಲು ಒಪ್ಪಿರುತ್ತಾರೆ. ಈ ರೀತಿಯಾಗಿ ಜಿಲ್ಲಾಬೋರ್ಡುಗಳು ತಮ್ಮ ಜಿಲ್ಲೆಯಲ್ಲಿನ ಸ್ಕೌಟುಕೆಲಸಗಳಿಗಾಗಿ ಒಬ್ಬನನ್ನು ನೇಮಕಮಾಡಿರುವುದು ಶ್ಲಾಘನೀಯವಾದುದು.

ಸ್ಕೌಟರುಗಳ ಪರಿಷತ್ತು — ಮದ್ರಾಸ್.

ಮದ್ರಾಸಿನಲ್ಲಿ ಒಂದು ಹಿರಿಯಣ್ಣಂದಿರ ಪರಿಷತ್ತು ಹೋದ ತಿಂಗಳಲ್ಲಿ ನಡೆಯಿತು. ಹಿರಿಯಣ್ಣಂದಿರಿಗೆ ಸ್ವಾಗತವನ್ನು ಬಯಸಿದವರು. ಸರ್ ಸಿ. ಪಿ. ರಾಮಸ್ವಾಮಿಅಯ್ಯರನವರು. ಸಭೆಗೆ ಅಧ್ಯಕ್ಷರು ಡಾ|| ಆನಿಬೆಸಂಟರು.

ಸರ್ ಸಿ. ಪಿ. ರಾಮಸ್ವಾಮಿಅಯ್ಯರವರ ಭಾಷಣದಲ್ಲಿ ಕೆಲವು ಮುಖ್ಯಅಂಶಗಳನ್ನು ನಮ್ಮ ಹಿರಿಯಣ್ಣಂದಿರೂ ಯೋಚಿಸಬೇಕಾಗಿರುವುದು

ಸ್ಕೌಟುಕೆಲಸವನ್ನು ಕನಿಷ್ಠಪಕ್ಷ ಭಾಗಶಃ ತಿಳಿದು, ಬರೀ ಕನಿಷ್ಠಪಕ್ಷಗಳಲ್ಲಿ ಕಾಲವನ್ನು ಕಳೆಯುವುದು ತಪ್ಪು. ಸ್ಕೌಟು ಕೆಲಸವನ್ನು ವೃತ್ತಾಪ್ತಿಲಾ ಮಾಸ್ಟರುಗರ ಕೈಲಿ ಬಿಡುವುದು ತಪ್ಪು.

ಸರ್ಕಾರದ ಮುಖ್ಯಸ್ಥರ ಓವಾಟದಿಂದ ಇದು ಸರ್ಕಾರದವರ ಮಂಡಿ ಎಂಬ ಜನರು ಕ್ಲಬ್ಬಿಟ್ಟಿರುತ್ತಾರೆ. ಈ ಭಾವನೆಯೂ ತಪ್ಪು. ಈಗ ಸರ್ಕಾರದ ಹಿಂದೆ ಬಂಡವಾಳವನ್ನು ಈಗ ಜನಗಳಲ್ಲಿಲ್ಲ. ಈ ಮಂಡಲಿಯೂ ಜನಗಳದ್ದು ಎಂದು ಮಾಡಿ ಹಿಂದಿನ ಬಂಡವಾಳವನ್ನು ತೊಲಗಿಸಬೇಕು.

ಹಿರಿಯಣ್ಣಂದಿರೊಬ್ಬರು ಇಂಗ್ಲೆಂಡಿಗೆ ಪ್ರಯಾಣ ಬೆಳಸಿದರು.

ಈಗ್ಗೆ ಸುಮಾರು ತಿಂಗಳುಗಳಿಂದೆ ಹೆಚ್ಚಿನ ಕೆಲಸಕ್ಕೆ ತುಮಕೂರಿಗೆ ವರ್ಗಾಯಿಸಲ್ಪಟ್ಟ ಶ್ರೀ ಕೆ. ಜಿ. ವೆಂಕಟ ಸುಬ್ಬಾಶಾಸ್ತ್ರಿ ಎಂ. ಎ. ಯವರು ನಮ್ಮ ಹಿರಿಯಣ್ಣಂದಿರ ಗುಂಪಿನಲ್ಲಿ ಅರೇಳು ವರುಷಗಳಿಂದ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಹೆಚ್ಚಿನ ವಿದ್ಯಾವ್ಯಾಸಂಗಕ್ಕೆ ಇವರು ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿರುತ್ತಾರೆ. ಇಂಗ್ಲೆಂಡಿಗೆ ಹೊರಡುವ ಪೂರ್ವ ಇಲ್ಲಿಯ ಹಿರಿಯಣ್ಣಂದಿರ ಸಂಘದವರು ಇವರನ್ನು ಕರೆಸಿ ಸತ್ಕರಿಸಿ ಕಳುಹಿಸಿದರು. ಇಂಗ್ಲೆಂಡಿನಲ್ಲಿರುವ ಗಿಲ್ಟ್‌ಲಾ ಪಾರ್ಕ್ ಸ್ಕೌಟು ವಿಶ್ವವಿದ್ಯಾ ನಿಲಯದಲ್ಲಿಯೂ ಇವರು ಸ್ಕೌಟು ವಿದ್ಯೆಯನ್ನು ಕಲಿತು ಬರುತ್ತಾರೆಂದು ನಂಬುತ್ತೇವೆ. ಅಲ್ಲದೆ ಅಲ್ಲಿಯ ಸೌಟು ಗುಂಪುಗಳ ಕೆಲಸಗಳನ್ನು ನಮಗೆ ಆ ಗಾಗ್ಗೆ ತಿಳಿಸುತ್ತಿರ ಬೇಕೆಂದು ಕೇಳಿಕೊಂಡಿರುತ್ತೇವೆ. ಭಗವಂತನು ಇವರಿಗೆ ಮಂಗಳವನ್ನುಂಟುಮಾಡಲೆಂದು ಹಾರೈಸುತ್ತೇನೆ.

ಸ್ಕೌಟು ಪ್ರದರ್ಶನ

ಅಕ್ಟೋಬರ್ 28 ನೇ ತಾರೀಖು ದಸರಾಪ್ರದರ್ಶನಾಲಯದಲ್ಲಿ ಕಬ್, ಸ್ಕೌಟು, ಮತ್ತು ರೋವರುಗಳ ಆಟಪಾಟಗಳು ನಡೆಯುತ್ತವೆ.

ಪಂಥ್ಯಗಳು

ಆಗಷ್ಟು ತಿಂಗಳ ಸಂಚಿಕೆಯಲ್ಲಿ ಒಗಟಿಗೆಳಿಗೆ ಉತ್ತರವನ್ನು ಕಳುಹಿಸಿದವರ ಹೆಸರುಗಳನ್ನು ಕ್ರಮದಲ್ಲಿ ಬರೆದಿರುತ್ತೇವೆ.

ಕುಮಾರಿ|| ಎಲ್. ಪದ್ಮಾವತಿಬಾಯಿ, ಹೈದರಾಬಾದ್.
ಕುಮಾರಿ|| ಆಶಾ, ರೋಷಾ ಬ್ಲೂ ಬರ್ಡ್, ಗದಗ್.
ಕಬ್ ಚಾವಸ ಕಾಶೀರಾಮು, ಕಬ್‌ಲೀಡರ್, ಗದಗ್.
ಸ್ಕೌಟ್ ಕೆ. ಶ್ರೀಕಂಠಯ್ಯ ಶ್ರೀರಾಮಮಂದಿರ, ಚಾಮನೂರು.
ಮು|| ಬಿ. ಎಸ್. ವೆಂಕಟರಾಮಯ್ಯ, ಕಬ್‌ಮಾಸ್ಟರ್, ಮೈಸೂರು.
ಕಬ್. ಎಂ. ಶ್ರೀಕಂಠಯ್ಯ, ಮಳವಳ್ಳಿ.
ಕಬ್. ಕೆ. ಆರ್. ವಿದ್ಯಾಶಂಕರ, ಮೈಸೂರು.
ಕಬ್ ಕೆ. ಎಸ್. ನಾಗೇಶರಾವ್, ಮಳವಳ್ಳಿ.
ಕಬ್ ಜಿ. ಆರ್. ಶೇಷಗಿರಿರಾವ್, ಮಳವಳ್ಳಿ.
ಕಬ್ ಯು. ಡಿ. ಗೋಪಾಲರಾವ್ ಮೈಸೂರು.
ಕಬ್ ಕೆ. ಪಿ. ಚಂದ್ರಶೇಖರಪ್ಪ, ಬೆಂಗಳೂರು.

ಹೊತ್ತಾಗಿ ಕಳುಹಿಸಿದವರು.

ಜಿ. ಎಲ್. ವೆಂಕಟೇಶ್, ಹುಣಸೂರು.
ಪಿ. ಎಲ್. ಸುಬ್ಬರಾವ್, ,,
ಕೆ ಪಿ ರಾವ್. ,,
ಅನಂತರಾವ್ ,,

ಮೈಸೂರು ಸ್ಕೌಟು ಹಿರಿಯಣ್ಣಂದಿರ ಸಭೆ—

ಬೇಡರಹಳ್ಳಿಯಲ್ಲಿ ನಡೆಯಬೇಕಾಗಿದ್ದ ಸ್ಕೌಟು ಹಿರಿಯಣ್ಣಂದಿರ ಸಭೆಯು ಶ್ರೀರಂಗಪಟ್ಟಣಕ್ಕೆ ವರ್ಗಾಯಿಸಲ್ಪಟ್ಟಿತು. ಅಲ್ಲಿ ಸ್ಕೌಟುಹಿರಿಯಣ್ಣಂದಿರು ತಮ್ಮ ತಮ್ಮ ಅನುಭವಗಳನ್ನು ಕುರಿತು ಮಾತನಾಡಲು ಸಮಯವನ್ನು ಹುಡುಕಿಕೊಂಡಿದ್ದಾರೆ. ಈ ತಿಂಗಳು 19 ನೇ ತಾ|| ಈ ಸಭೆಯು ಪ್ರಾರಂಭಮಹೋತ್ಸವವನ್ನು ಸ್ಕೌಟುಕಮಿಷನರವರಿಂದ ನಡೆಸಲ್ಪಟ್ಟಿತು. ಅಲ್ಲಿ ಚರ್ಚೆಗೆ ಬರುವ ಸಂಗತಿಗಳು ಸುಮಾರು ಆರವತ್ತು. ಈ ಸಭೆಯ ತರಾವುಗಳು ಮಂಡಳಿಯವರಿಗೆ ಸಾಧಕವಾಗಿರುವುದರಲ್ಲಿ ಸಂದೇಹವಿಲ್ಲ.

ಸುಲಭಬೆಲೆ! ಅತ್ಯುತ್ತಮತರಹ ಫೌಂಟೆನ್ ಪೆನ್‌ಗಳು!! ತರಿಸಿ ಪರೀಕ್ಷಿಸಿರಿ!!!

1. ವರ್ಲ್ಡ್‌ವಂಡರ್ ಫೌಂಟೆನ್ ಪೆನ್ 1 ಕ್ಕೆ 3-0-0
2. ಡಿಟೋಸಮೂನೆ ಸ್ಕ್ರೂ ಕ್ಯಾಪಿರುವ ಪೆನ್ 1 ಕ್ಕೆ 3-8-0
3. ಹಾರ್ಡ್‌ವೇರ್ ಫೌಂಟೆನ್ ಪೆನ್ 1 ಕ್ಕೆ 3-0-0
4. "ಸ್ಪಾರ್ಟ್" ಫೌಂಟೆನ್ ಪೆನ್ 1 ಕ್ಕೆ 7-0-0
5. ಬ್ಲಾಕ್‌ಬರ್ಡ್ ಫೌಂಟೆನ್ ಪೆನ್ 1ಕ್ಕೆ 3-8-0 ಮತ್ತು 3-12-0
6. "ವಾಟರ್‌ಮನ್" ಫೌಂಟೆನ್ ಪೆನ್ 1 ಕ್ಕೆ 8-8-0
7. "ವಾಟರ್‌ಮನ್" ಸೆಲ್ಫ್‌ಫಿಲಿಂಗ್ ಫೌಂಟೆನ್ ಪೆನ್ 1 ಕ್ಕೆ 12-0-0
8. "ವಾಟರ್‌ಮನ್" ಸೇಫ್ಟಿ ಫೌಂಟೆನ್ ಪೆನ್ 1 ಕ್ಕೆ 11-0-0

ಇನ್ನೂ ಅನೇಕತರಹ ಕಡಮೆಕ್ರಯದ ಪೆನ್‌ಗಳು ನಮ್ಮಲ್ಲಿ ದೊರೆಯುತ್ತವೆ. 6ಪೈ ಸ್ಟಾಂಪು ರವಾನಿಸಿ ನಮ್ಮ ಕ್ಯಾಟಲಾಗ್ ತರಿಸಿನೋಡಿರಿ.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಫಾರ್ಮೋನಿಯಂ ಮತ್ತು ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು, ಮೈಸೂರು.

THE MYSORE SCOUT

THE OFFICIAL ORGAN OF THE BOY SCOUT OF MYSORE
A TEN YEAR OLD SCOUT MAGAZINE

SUBSCRIPTION RATES

To Students and Scouts, by Post — Re. 1 per annum.
To Patrons, Reaning Rooms, ect, — Rs. 2 per anuum.

THE MANAGER,
Tippu Sultan's Palace Fort Bangalore City.

MY SCINTIFIC SYSTEM OF GRADUATED PHYSICAL CULTURE

6th Edition, Revised & Enlarged.

It is free—This will show you some of my remarkable achievements in Health—building exercises, many pages with nice photographs of myself and a number of my pupils. Read what they say about my system. All I ask is the price of postage 2 annas. Remember this does not obligate you in any way. So don't delay one minute. Order for a copy at once—now while it is in your mind—Prof. M. V. Krishna Rao, Post Basavangudi Bangalore City.

ಸಚಿತ್ರ] ಸುಬೋಧ [ಮಾಸಪತ್ರಿಕೆ

ಮೂರನೆಯ ಸಂಪುಟವು ೧೯೨೭ ಅಕ್ಟೋಬರ್ ತಿಂಗಳಿಂದ ಪ್ರಾರಂಭ.

ಇದರಲ್ಲಿ ಧಾರ್ಮಿಕ, ನೈತಿಕ, ಸಾಮಾಜಿಕ, ವಿದ್ಯಾವಿಷಯಕ ಮತ್ತು ಇತರ ಬೋಧಪರ ಲೇಖಿಗಳು, ಸುಲಭವೂ ಮನೋಹರವೂ ಆದ ತಿಳಿಗನ್ನಡದಲ್ಲಿ ಕರ್ಣಾಟಕದ ಸುಪ್ರಸಿದ್ಧ ಲೇಖಕರಿಂದ ಬರೆಯಲ್ಪಟ್ಟು ಪ್ರಕಟವಾಗುವುವು. ಅಲ್ಲದೆ ಆರ್ಷೇಯ ಕರ್ಣಾಟಕದ ರಾಜ್ಯವಾದ ಹಳೇಬೀಡು ದ್ವಾರಸಮುದ್ರಗಳ ಚರಿತ್ರಾಂಶಗಳನ್ನು ವರ್ಣಿಸುವ 'ಶಾಂತಳಾ' ಎಂಬೊಂದು ಸುಮನೋಹರ ಕರ್ಣಾಟಕ ನಾಟಕವೂ ಕ್ರಮಶಃ ಪ್ರಕಟವಾಗುತ್ತಿದೆ.

ಸ್ಯೂಪಾರ್ಕೆಟ್, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ರೂ. ೧—೮—೦ (ಅಂಚೆವೆಚ್ಚ ಉಚಿತ)

ಕರ್ನಾಟಕ ಸ್ಕೌಟ್ ಮಾಸಪತ್ರಿಕೆ.

ವಾರ್ಷಿಕ ಚಂದಾ ೧—೮—೦.
ಪೋಷಕರಿಗೆ ,, ೩—೦—೦.

ವ್ಯಾಪಾರಸ್ಥರ ಜಾಹೀರಾತುಗಳ ದರಗಳ ವಿವರವನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬೇಕು.

ಮ್ಯಾನೇಜರ್
ಕರ್ನಾಟಕ ಸ್ಕೌಟ್, ಧಾರವಾಡ.

ನಮ್ಮಲ್ಲಿ :—

ಎಲ್ಲಾ ತರಗತಿಗಳ ಪುಸ್ತಕಗಳೂ ಮತ್ತು ಸಮಸ್ತ ಸ್ಟೇಷನರಿ ಸಾಮಾನುಗಳೂ ಯಾವಾಗಲೂ ದೊರೆಯುತ್ತವೆ.

ಅಲ್ಲದೆ :—ಬೆಂಗಳೂರು ಪ್ರೆಸ್ಸಿನ ಸಾಮಾನುಗಳು ನಮ್ಮಲ್ಲಿವೆ.

ಚಾರಪ್ಪನವರ ಪುಸ್ತಕಗಳು ನಮ್ಮಲ್ಲಿವೆ.

ಮೈಸೂರು ಮಕ್ಕಳು ಮಾಸಪತ್ರಿಕೆಗೆ ಏಜಂಟರಾಗಿದ್ದೇವೆ.

ಕೆ. ವಿ. ರಾಮಶೆಟ್ಟಿ ಅಂಡ್‌ಕೊ,
ಮೈಸೂರು.

'ಮೈಸೂರು ಮಕ್ಕಳು' ಚಿತ್ರಮಾಲೆ
(Mysore Makkalu Pictorial)
1927-1928

ನುಣುಪಾದ ಕಾಗದದ ಮೇಲೆ ಎರಡು ರಂಗುಗಳಲ್ಲಿ ಮೈಸೂರು ಮಕ್ಕಳ ಚಿತ್ರಗಳನ್ನು ಮುದ್ರಿಸಿ ಪುಸ್ತಕರೂಪದಲ್ಲಿ ಹೊರಡಿಸಲಾಗಿದೆ.

ದಸರಾ ಕಾಲದಲ್ಲಿ ಮಕ್ಕಳಿಗೆ ಈ ಪುಸ್ತಕಗಳನ್ನು ಉಡುಗೆರೆಯಾಗಿ ಕೊಡಲು ಅನುಕೂಲವಾಗಿದೆ. ತಮ್ಮ ದೇಶ, ತಮ್ಮ ಜನವೆಂಬ ಸ್ವಾಭಿಮಾನವು ಮಕ್ಕಳಿಗಿರಬೇಕಾದರೆ ಇದೇ ಉಪಾಯ.

ನಮ್ಮ ಚಂದಾದಾರರಿಗೆ ಮಾತ್ರ ೦-೬-೦, ಇತರರಿಗೆ ೦-೮-೦
ವಿ.ಪಿ. ಖರ್ಚು ಪ್ರತ್ಯೇಕ. ವಿ.ಪಿ. ಆಪೇಕ್ಷಿಸುವವರು ೩ ಆಣೆ ಸ್ಟಾಂಪನ್ನು ಕಳುಹಿಸಬೇಕು.

ಮೈಸೂರುಮಕ್ಕಳು ಆಫೀಸು, ಮೈಸೂರು.

ಜೀವನಾಧಾರ ಡಿಪೋ ೫ವರ ಮೂಲು ರತ್ನಗಳು

ಜೀವನಾಧಾರ

ಸಣ್ಣ ಬಾಟ್ಲಿ 0—12—0 ದೊಡ್ಡ ಬಾಟ್ಲಿ 1—8—0 ಏ. ಪಿ. ಚಾರ್ಜ್ ಪ್ರತ್ಯೇಕ.

೨೬-೧೦-೨೭ ಭೂಮ್ಮಗಟ್ಟ.

ನಾನು ನಿಮ್ಮ ಜೀವನಾಧಾರವೆಂಬ ಔಷಧವನ್ನು ಅನೇಕ ವ್ಯಾಧಿಗಳಿಗೆ ಉಪಯೋಗಿಸಿದ್ದೇನೆ. ಮತ್ತು ಅದು ಗುಣಕೊಡುವ ವಿಷಯದಲ್ಲಿ ತುಂಬಾ ತೃಪ್ತಿಹೊಂದಿದ್ದೇನೆ. ನಿಜವಾಗಿ ಅದು ಉತ್ಕೃಷ್ಟ ಔಷಧವಿರುತ್ತದೆ. ಮತ್ತು ಅದು ಜಗತ್ತಿಗೆ ಒಂದು ಲಾಭವೇ ಆಗಿರುತ್ತದೆ. ಮೈಸೂರು ಪ್ರದರ್ಶನದಲ್ಲಿ ಜೀವನಾಧಾರವು ಬಹುಮಾನದ ಇನಾಮನ್ನು ಹೊಂದಿದ್ದನ್ನು ತಿಳಿಸಲು ಅತ್ಯಂತ ಸಂತೋಷಪಡುತ್ತೇನೆ. ಜೀವನಾಧಾರದ ಒಂದು ಸೀಸೆಯು ಪ್ರತಿಯೊಂದು ಮನೆಯಲ್ಲಿ ಇಡುವುದಕ್ಕೆ ನಾನು ಉಪದೇಶಮಾಡುವೆನು. ಕಠಿಣ ಪ್ರಸಂಗದಲ್ಲಿ ಒಬ್ಬ ಡಾಕ್ಟರನಂತೆ ಉಪಯೋಗಬೀಳುತ್ತದೆ.

ಬಿ. ಎಸ್. ರಾಮಚಂದ್ರರಾವ್,
ಜೇರಮನ್, ಗ್ರಾಮಪಂಚಾಯಿತಿ.

ನನ್ನ ಕುದುರೆಯು ಮೈಗೀ ಎಂಬ ತ್ವಚರೋಗದಿಂದ ಪೀಡಿತವಾಗಿತ್ತು. ನಾನು ನಿಮ್ಮ ಜೀವನಾಧಾರವೆಂಬ ಔಷಧವನ್ನು ಕಳೆದ ೧೫ ದಿವಸಗಳಿಂದ ಉಪಯೋಗಿಸುತ್ತಿರುವೆನು. ಮತ್ತು ಬಹಳೇ ಗುಣಕೊಟ್ಟಿರುವುದು.

೨-೧೧-೨೭,
ಮೈಸೂರು.

ಸಿದ್ಧರಾಜ ಅರಸು.
ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೋಲೀಸ್.

---

೨. ಗಜಕರ್ಣದ ತೈಲ.

ಬಾಟ್ಲಿಗೆ ೧ ಕ್ಕೆ 0 12 0 ಪ್ಯಾಕಿಂಗ್ ಪೋಸ್ಟೇಜ್ ಪ್ರತ್ಯೇಕ.

ಧಾರವಾಡ, ೧೦-೨-೨೮.

ನಾನು ನಿಮ್ಮ ಗಜಕರ್ಣದ ತೈಲವನ್ನು ತಲೆಯಲ್ಲಿ ಕೂದಲುಗಳು ಉದುರಿರುವದಕ್ಕೆ (Pach of baldness) ಉಪಯೋಗಿಸುತ್ತಿದ್ದೇನೆ. ಅದು ಈಗಾಗಲೇ ಬಹಳ ಗುಣಕೊಟ್ಟಿರುವುದು. ಕಾರಣ ಈ ಪತ್ರಮುಟ್ಟಿದ ಕೂಡ್ಲೆ 2 ಬಾಟ್ಲಿ ಗಜಕರ್ಣದ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

ರಾಮರಾವ್ ಎನ್. ದೇಸಾಯಿ.

ಅನೇಕರು ಅನುಭವಿಸುತ್ತಿರುವ ನವೆ, ಗಜಕರ್ಣ, ಹುಳಕಡ್ಡಿ, ಕಜ್ಜಿ, ಉಗುರುಸುತ್ತು; ಹಳೇ ಇಸಬು, ಕತ್ತಿ ಘಾಯ, ಮತ್ತು ಎಲ್ಲಾ ತರಹದ ಚರ್ಮವ್ಯಾಧಿಗಳಿಗೆ ಗಜಕರ್ಣದ ತೈಲವನ್ನು ಹಚ್ಚಿದ 2-3 ದಿನಗಳಲ್ಲಿ ಗುಣಮಾಡಿಕೊಳ್ಳಬಹುದು, ಇದರಲ್ಲಿ ಮುಖ್ಯವಾದ ಗುಣವೇನೆಂದರೆ, ಗಾಯ ಅಥವಾ ಹುಣ್ಣಿನಿಂದ ಬರುವ ಕಲೆಗಳನ್ನು ತೆಗೆದುಹಾಕಿ ಪುನಃ ಮೊದಲಿನ ಚರ್ಮದ ಬಣ್ಣಕ್ಕೆ ತರುವುದು.

೩. ಶತಮೂಲಿಕಾ ಸಮ್ಮೇಳನ ಭೃಂಗಾಮಲಕ ತೈಲ.

ಬಾಟ್ಲಿ 1ಕ್ಕೆ 0 8 0. ಪ್ಯಾಕಿಂಗ್ ಪೋಸ್ಟೇಜು ಪ್ರತ್ಯೇಕ.

ಈ ತೈಲವು ಆಯುರ್ವೇದ ಶಾಸ್ತ್ರೋಕ್ತವಾದ ಶತಮೂಲಿಕಾಸಂಗ್ರಹವನ್ನು ಪಾಶ್ಚಾತ್ಯ ರಸಾಯನಶಾಸ್ತ್ರ ರೀತ್ಯಾ (Latest scientific Process) ಶುದ್ಧಿಯಾದ ತೈಲದಲ್ಲಿ ಪಕ್ವಮಾಡಿ ವನಸ್ಪತಿ ದ್ರವ್ಯಗಳ ಪ್ರತಿಯೊಂದು ಗುಣಾಂಶವನ್ನೂ ಭಾವನೆಮಾಡಿ ತಯಾರಿಸಿದೆ. ಇದನ್ನು ಪ್ರತಿದಿನವೂ ತಲೆಗೆ ಲೇಪಿಸುವುದರಿಂದ ಜ್ಞಾಪಕಶಕ್ತಿಯು ಅಭಿವೃದ್ಧಿಯಾಗಿ ಬುದ್ಧಿಭ್ರಮೆಯು ನಾಶವಾಗುತ್ತದೆ. ನೇತ್ರವ್ಯಾಧಿಗಳು ಗುಣವಾಗಿ ಕಣ್ಣುಗಳಿಗೂ, ಮುಖಕ್ಕೂ ಕಾಂತಿಯು ಬರುವುದು.

ಮೈಸೂರು ಬ್ರಾಂಚ್—ಇಲವಾಲ ರೋಡು.

ಜೀವನಾಧಾರ ಡಿಪೋ, ಹುಬ್ಬಳ್ಳಿ.

ರಿ. ನಂ.—M. 2377.

ಮೈಸೂರು ಸ್ಕೌಟಿನ ಕನ್ನಡಭಾಗವು ಇದರೊಡನೆ ಸಮಾವಿಷವಾಗಿದೆ.

ಮೈಸೂರು ಮಕ್ಕಳು

॥ ಓದುವ ಹೆಣ್ಗಳು ಗಂಡುಗಳುಲಿವರು, ಹರುಷವಬೀರುತ ಓಡ್ಯಾಡಿ ॥
॥ ನಾಲ್ಮಡಿ ಕೃಷ್ಣನ ಕೊಂಡಾಡಿ ॥

೨ನೆಯ ವರ್ಷ.] ವಿಭವ ಸಂ॥ ದ ಆಶ್ವಯುಜದ ಹುಣ್ಣಿವೆ—ಅಕ್ಟೋಬರ್ ೧೯೨೮ [೧೧ನೆಯ ಹೆಜ್ಜೆ.

ಮೈಸೂರು ಸ್ಕೌಟುಮಂಡಳಿಯ ಕನ್ನಡ ಮಾಸಪತ್ರಿಕೆ.

ಒಕ್ಕಣೆಯ ವಿಭೇದ.

೧ ಮೈಸೂರು ಮಕ್ಕಳ ಚಿತ್ರಪರಿಚಯ—
ಶ್ರೀ॥ ಚಾಮರಾಜಒಡೆಯರವರಧರು
೨ ಮೈಸೂರು ಮಕ್ಕಳ ಜೀವನಚರಿತ್ರೆ—
ಶ್ರೀ॥ ಚಾಮರಾಜಒಡೆಯರವರದು
೩ ನಮ್ಮ ನಾಯಕರ ಸಂದೇಶ
೪ ಕಥೆಗಳ ಕಟ್ಟು—ದೇವದೂತ ಕಚ
೫ ಅಜನ ಕನ್ನಡಕ—ಒಂದು ಕಥೆ
ಎನ್ ಎಸ್ ನಾಗರಾಜ ಬರೆದಿದ್ದು
ಆಟಪಾಟ್ಯಲು
೬ ಕಬ್‌ಗಳೊಡನೆ ನಮ್ಮದೊಂದು ಹರಟೆ,
೭ ಹಿರಿಯಣ್ಣಂದಿರಿಗಾಗಿ, ಸ್ವೀಕಾರಗಳು
೮ ಕಬ್‌ಗಳು ಕಲಿಯಬೇಕಾದುದು ವಿಮರ್ಶೆಗಳು
೯ ಶಿಬಿರಾಗ್ನಿ (ಕ್ಯಾಂಪ್ ಫೈರ್)
೧೦ ಆದರ್ಶಪ್ರಾಯವಾದ ಒಂದು ಸ್ಕೌಟು ದಳ
೧೧ ಗೃಹಶಿಕ್ಷಣ—ಅಂಕ ೫
೧೨ ಸ್ಕೌಟು ಸುದ್ದಿಗಳು

ಅಲ್ಲಲ್ಲಿ ಕೆಲಕೆಲವು

ಸಲಸಂಪಾದಕರು
[illegible]

ಚಂದಾಕಟ್ಟಬೇಕಾದವರು ೧—೦—೦
(ಅಂಚೆಕೂಲಿಯು ಬಿಡಿ)
ಸಮಸ್ತ ಸ್ಕೌಟ್ಸು ಸಹೋದರಸಹೋದರಿಯರು
[illegible]

ಮೈಸೂರು ಮಕ್ಕಳು ಆಫೀಸು,
ಮೈಸೂರು.

ದೇವಭೂಜ.

ಈ ಮಾಸಪತ್ರಿಕೆಯಲ್ಲಿ ಪೌರಾಣಿಕ, ಐತಿಹಾಸಿಕ, ಕಾದಂಬರಿಗಳೂ, ಚಿಕ್ಕ ಕಥೆಗಳೂ, ವೈದ್ಯಭಾಗ, ಗೃಹಶಾಸ್ತ್ರ ಮುಂತಾದ ವಿಷಯಗಳೂ, ಉತ್ತಮ ಲೇಖಗಳೂ, ವರ್ತಮಾನಸಂಗ್ರಹವೂ, ಪ್ರತಿ ತಿಂಗಳದ ಕನ್ನಡ ಕ್ಯಾಲೆಂಡರವೂ ಕ್ರಮಶಃ ಪ್ರಕಟವಾಗುವವು.

ವಾರ್ಷಿಕಚಂದಾ—ಮುಂಗಡ ೧-೪-೦, ವಿ ಪಿಯಿಂದ ೧-೮-೦.

ವಿಳಾಸ:—"ದೇವಭೂಜ" ಆಫೀಸ,
ಪೋಸ್ಟ ರೋಣ, ಡಿ|| ಧಾರವಾಡ.

ಕಥೆ! ಕಾದಂಬರಿ! ನಾಟಕ!
ಕವಿತೆ! ಲೇಖನ! ಹಾಸ್ಯ!

ದೊಡ್ಡ ಆಕಾರದ ೨೪ ಪುಟಗಳು!

ಸ
ರ್ವಾ
ಂ
ಗ
ಸು
ಂ
ದ
ರ!

ಉದಯ ಭಾರತ

ವರ್ಷಾಂತ್ಯಕ್ಕೆ ವಿಶೇಷಾಂಕ!!

ಸ
ಚಿ
ತ್ರ
ಮಾ
ಸ
ಪ
ತ್ರಿ
ಕೆ!!

ವಿಶೇಷಾಂಕ ರಹಿತ ೧-೪-೦

ವಿಶೇಷಾಂಕ ಸಹಿತ ೨-೦-೦

ಉದಯ ಭಾರತ ಕಾರ್ಯಾಲಯ,
ಕೊಡಿಯಾಲ್‌ಬೈಲ್

THE SCHOOL FLOK

(A BRIGHT LIVELY ENLIGHTENING MONTHLY FOR YOUNG AND OLD)

10th YEAR BEGINS FROM JUNE 1928.

SUBSCRIPTION :

Rupee 1—8—0 only per Year.

Apply to :—

THE MANAGER,
SCHOOL FOLK,
TUMKUR.

THE BOY SCOUT YEAR BOOK

The First of its Kind published in India

A very **Intersting, Instructive** and **Useful** Book For all Scouts and Scouters—Contains a History of Scouting in India during the last decade, information about Youth Movements, Enjoyable Stories, Popular Scientific articles, discussion of problems on Scouting, Progress in the Provinces and States of India, How to make things at Home—**AND,**

—MANY OTHER FEATURES.

Our contributors are among the most emminent People at Home and Abroad.

YES, YOU WILL LIKE THE BOOK.
ITS SUCCESS AND POPULARITY ARE GUARANTEED

A Hundred Pictures and One or Two colour plates. All for Re. 1, (One Rupee) only—Postage extra. It is worth at least 10 times its value.

AN IDEAL DASARA, CHRISTMAS OR NEW YEAR PRESENTATION BOOK.

Make Sure of Your Copy :

Book your orders to-day, with,
The Organising Commissioner,
The Boy Scouts of Mysore,
Fort, Bangalore City.

ಕರ್ನಾಟಕ ಟಾಯಿಮ್ಸ್

ವಾರಪತ್ರಿಕೆ

ಹಿಂದುಳಿದ ಜಾತಿಯವರ ಉನ್ನತಿಯು ಎಲ್ಲ ಬಗೆಯಿಂದಲೂ ಆಗಬೇಕೆಂದು ಹವಣಿಸುವ ಪತ್ರಿಕೆಯು ಕರ್ನಾಟಕದಲ್ಲಿ ಇದೇ ಒಂದು.

—ಸಂಪಾದಕರು—
ಶ್ರೀ|| ಎಚ್. ಎಸ್. ಶಿವಲಿಂಗಶಾಸ್ತ್ರಿಗಳು.

ವಾರ್ಷಿಕ ಚಂದಾ ೩—೮—೦. ವಿ. ಪಿ. ಯಿಂದ ೩—೧೨—೦.

—ವ್ಯವಸ್ಥಾಪಕರು—
ಕರ್ನಾಟಕ ಟಾಯಿಮ್ಸ್, ಧಾರವಾಡ.